“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

**28ನೇ ಮಾರ್ಚ್ 2022**
**ಸೋಮವಾರ**

## ವಿಷಯಾನುಕ್ರಮಣಿಕೆ (INDEX)

**01. ಪ್ರಶ್ನೋತ್ತರ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**2724– ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೂಲಸೌಲಭ್ಯಗಳ ಕೊರತೆ ಬಗ್ಗೆ**

– ಶ್ರೀ ಸಲೀಂ ಅಹಮದ್

– ಡಾ: ಅಶ್ವಥ್ ನಾರಾಯಣ ಸಿ.ಎನ್.(ಉನ್ನತ ಶಿಕ್ಷಣ, ವಿದ್ಯುನ್ಮಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**2745 – ಗೌರವ ಶಿಕ್ಷಕರ ಸೇವೆಯನ್ನು ಮುಂದುವರೆಸುವ ಬಗ್ಗೆ**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**2735 – ಕೌಶಲ್ಯ ತರಬೇತಿಯ ಅನುದಾನದ ಬಗ್ಗೆ**

– ಶ್ರೀ ಪ್ರದೀಪ್ ಶೆಟ್ಟರ್

– ಡಾ: ಅಶ್ವಥ್ ನಾರಾಯಣ ಸಿ.ಎನ್.(ಉನ್ನತ ಶಿಕ್ಷಣ, ವಿದ್ಯುನ್ಮಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**2768 – ಪಿ.ಯು.ಸಿ. ಪರೀಕ್ಷೆಯಲ್ಲಿ ಅಸಮರ್ಪಕ ಮೌಲ್ಯಮಾಪನ ಬಗ್ಗೆ**

– ಶ್ರೀ ಎಸ್.ವ್ಹಿ.ಸಂಕನೂರ(ಶ್ರೀ ಎನ್.ರವಿಕುಮಾರ್‌ರವರ ಪರವಾಗಿ)

– ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**2787 – ಕೊಡಗು ಜಿಲ್ಲೆಯಲ್ಲಿ ನಿರ್ಮಾಣಗೊಳ್ಳುತ್ತಿರುವ "ಕೊಡವ ಹೆರಿಟೇಜ್" ಕೇಂದ್ರದ ಬಗ್ಗೆ.**

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

– ಶ್ರೀ ವಿ.ಸುಶೀಲ್ ಕುಮಾರ್(ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು) (ಪ್ರವಾಸೋದ್ಯಮ, ಜೀವಿಶಾಸ್ತ್ರ ಹಾಗೂ ಪರಿಸರ ಖಾತೆ ಸಚಿವರ ಪರವಾಗಿ)

**2749 – ಟ್ಯಾಂಕರುಗಳಲ್ಲಿ ಬೇಬಿ ಟ್ಯಾಂಕ್ ಅಳವಡಿಸಿಕೊಂಡು ಅವ್ಯವಹಾರ ನಡೆಸುತ್ತಿರುವ ಬಗ್ಗೆ**

– ಶ್ರೀ ಮರಿತಿಬ್ಬೇಗೌಡ

– ಶ್ರೀ ಉಮೇಶ್ ಕತ್ತಿ(ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು)

**2744 – ವೈದ್ಯಕೀಯ ಶಿಕ್ಷಣದ ಸೀಟುಗಳ ಲಭ್ಯತೆ ಬಗ್ಗೆ**

– ಶ್ರೀ ಚಿದಾನಂದ್ ಎಂ.ಗೌಡ

– ಡಾ:ಸುಧಾಕರ್(ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**2765 – ರಾಜ್ಯದ ಬಿ.ಎಡ್. ಕಾಲೇಜುಗಳ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

– ಶ್ರೀ ಎಸ್.ಎಲ್. ಭೋಜೇಗೌಡ

– ಡಾ:ಅಶ್ವಥ್ ನಾರಾಯಣ ಸಿ.ಎನ್.(ಉನ್ನತ ಶಿಕ್ಷಣ, ಐ.ಟಿ.–ಬಿ.ಟಿ,

ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**2754 – ಮೂಲ ವಿಜ್ಞಾನ ಮತ್ತು ಗಣಿತ ಕಲಿಸುವಲ್ಲಿ ಶಿಕ್ಷಕರ ಕಾರ್ಯ ವೈಖರಿ ಬಗ್ಗೆ**

– ಶ್ರೀಮತಿ ಭಾರತಿ ಶೆಟ್ಟಿ

– ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**2740 – ಪೆಟ್ರೋಲ್, ಡೀಸೆಲ್, ಕಬ್ಬಿಣ, ಅಡುಗೆ ಎಣ್ಣೆಗಳ ಬೆಲೆ ಏರಿಕೆಯಾಗಿರುವ ಬಗ್ಗೆ**

– ಶ್ರೀ ಎಸ್.ರವಿ

– ಶ್ರೀ ಉಮೇಶ್ ವಿ.ಕತ್ತಿ(ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು)

**2780 – ಅನುದಾನ ರಹಿತ ಶಾಲೆಗಳ ಮಾನ್ಯತೆ ಬಗ್ಗೆ**

– ಶ್ರೀ ಅರುಣ ಶಹಾಪುರ

– ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**2791 – ರಾಜ್ಯದಲ್ಲಿ ಹೊಸ ಬಿ.ಪಿ.ಎಲ್. ಕಾರ್ಡ್‌ಗೆ ಅರ್ಜಿ ಸಲ್ಲಿಸಿರುವ ಬಗ್ಗೆ**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಉಮೇಶ್ ವಿ.ಕತ್ತಿ(ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು)

ತಡೆಹಿಡಿಯಲಾದ ಪ್ರಶ್ನೆ

ಸಂಖ್ಯೆ **1781 – ರಾಜ್ಯದಲ್ಲಿ ಪದವೀಧರರ ಯೋಜನೆಗಳ ಬಗ್ಗೆ.**

– ಶ್ರೀ ಆಯನೂರು ಮಂಜುನಾಥ್

– – ಡಾ:ಅಶ್ವಥ್ ನಾರಾಯಣ ಸಿ.ಎನ್.(ಉನ್ನತ ಶಿಕ್ಷಣ, ಐ.ಟಿ.–ಬಿ.ಟಿ,

– ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦2. ಕಾರ್ಯದರ್ಶಿಯವರ ವರದಿ**

**೦3. ಪ್ರಕಟಣೆ**

**–ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳ ಹಾಗೂ ಅಧಿಕಾರಿಗಳ ಕುರಿತು**

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) **ಫಲಿತಾಂಶದ ವಿಳಂಬ ಅವಧಿಯನ್ನು ಕೋವಿಡ್‌–19 ಅವಧಿಯೆಂದು ಪರಿಗಣಿಸಿ ಅನುಕಂಪ ನೇಮಕಾತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡುವ ಬಗ್ಗೆ**

– ಶ್ರೀ ಮರಿತಿಬ್ಬೇಗೌಡ

– ಡಾ: ಅಶ್ವಥ್ ನಾರಾಯಣ ಸಿ.ಎನ್.(ಉನ್ನತ ಶಿಕ್ಷಣ, ವಿದ್ಯುನ್ಮಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**ಆ) ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನ್ಯ ಕಾರ್ಯಗಳಿಂದ ಮುಕ್ತಗೊಳಿಸಿ ಬೋಧನೆಗೆ ಹೆಚ್ಚಿನ ಪ್ರಾಶಸ್ತ್ಯದ ಬಗ್ಗೆ**

– ಡಾ: ತಳವಾರ ಸಾಬಣ್ಣ

– ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಇ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಶುದ್ಧ ಕ್ರಯ ಪತ್ರ ನೀಡುವ ಕುರಿತು**

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ,

ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)

**ಈ) ಪಡಿತರ ಚೀಟಿದಾರರಿಗೆ ಧಾನ್ಯಗಳ ವಿತರಣೆ ನಿಗದಿತ ಪ್ರಮಾಣದಲ್ಲಿ ಇಲ್ಲದಿರುವ ಬಗ್ಗೆ.**

– ಶ್ರೀ ಕೆ.ಹರೀಶ್ ಕುಮಾರ್

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)

**ಉ) ಜನಸಂಖ್ಯೆ ನಿಯಂತ್ರಿಸುವ ಕುರಿತು**

– ಶ್ರೀಮತಿ ಭಾರತಿ ಶೆಟ್ಟಿ

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)

**ಊ) ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳ ಒಟ್ಟಾರೆ ಆಸ್ತಿ ಬಂಡವಾಳದ ಮೇಲೆ ಕನ್ಸೆಂಟ್ ಶುಲ್ಕ ವಿಧಿಸುತ್ತಿರುವ ಬಗ್ಗೆ.**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)

**ಋ) ಸಾರ್ವಜನಿಕ ಶಿಕ್ಷಣ ಇಲಾಖೆಯ ಬಿ.ಆರ್.ಸಿ. ಕೇಂದ್ರಕ್ಕೆ ನೇಮಕಾತಿ ಕುರಿತು**

– ಶ್ರೀ ಚಿದಾನಂದ್ ಎಂ.ಗೌಡ

– ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಎ) 6-8ನೇ ತರಗತಿ ಶಿಕ್ಷಕರ ನೇಮಕಾತಿ ಪ್ರವೇಶ ಪರೀಕ್ಷೆ ನಡೆಸಲು ಹೆಚ್ಚಿನ ಕಾಲಾವಕಾಶ ಕೋರಿಕೆ ಬಗ್ಗೆ**

- ಶ್ರೀ ಶಶೀಲ್ ಜಿ. ನಮೋಶಿ
- ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಏ) ಪರೀಕ್ಷಾ ಸಮಯದಲ್ಲಿ ಸಮವಸ್ತ್ರ ಕಡ್ಡಾಯ ಕೈಬಿಡುವ ಬಗ್ಗೆ**

- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ಹಾಗೂ ಸಕಾಲ ಸಚಿವರು)

**೦5. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ**

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2022**

- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ಎಸ್.ರವಿ
- ಶ್ರೀ ಪಿ.ಆರ್.ರಮೇಶ್
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ)
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಮರಿತಿಬ್ಬೇಗೌಡ
- ಶ್ರೀ ಎಸ್.ಎಲ್.ಭೋಜೇಗೌಡ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**೦6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು:**

**ಅ) ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಗ್ರಾಮ ಪಂಚಾಯಿತಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ಇ-ಸ್ವತ್ತು ತಂತ್ರಾಂಶದ ಲಾಗಿನ್ ಅನ್ನು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ಶ್ರೀ ಹೆಚ್.ಎಸ್.ಗೋಪೀನಾಥ್‌ರವರು ದಿನಾಂಕ 14-3-2022ರಂದು ಪ್ರಸ್ತಾಪಿಸಿದ ವಿಷಯ**

ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ)

**ಆ) ಕೋವಿಡ್-19 ಉಲ್ಬಣಗೊಳ್ಳುವ ಸಾಧ್ಯತೆಗಳಿರುವುದರಿಂದ ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಶ್ರೀ ಶಶೀಲ್ ಜಿ.ನಮೋಶಿಯವರು ದಿನಾಂಕ 21-3-2022ರಂದು ಪ್ರಸ್ತಾಪಿಸಿದ ವಿಷಯ**

-ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವರ ಪರವಾಗಿ)

**ಇ) ಟಮೋಟೋ ಬೆಲೆ ಕುಸಿತದಿಂದ ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದಿರುವ ಬಗ್ಗೆ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ದಿನಾಂಕ 23-3-2022ರಂದು ಪ್ರಸ್ತಾಪಿಸಿದ ವಿಷಯ**

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು

ನಗರ ಯೋಜನೆ ಹೊರತು)(ಸಹಕಾರ ಸಚಿವರ ಪರವಾಗಿ)

**ಈ) ಐಟಿಐ ಮತ್ತು ಡಯಟ್‌ಗಳಲ್ಲಿನ ಇಎಲ್‌ಟಿಸಿ ಬೋಧಕ ಹುದ್ದೆಗಳನ್ನು ರದ್ದುಪಡಿಸಿ ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ ಶ್ರೀ ಮರಿತಿಬ್ಬೇಗೌಡರವರು ದಿನಾಂಕ 24-3-2022ರಂದು ಪ್ರಸ್ತಾಪಿಸಿದ ವಿಷಯ**

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

**ಉ) ಬೀದರ್ ಜಿಲ್ಲೆಯಲ್ಲಿ ಪಾಪನಾಶಲಿಂಗ ದೇವಸ್ಥಾನ ಕಟ್ಟಡ ಶಿಥಿಲಾವಸ್ಥೆಯಲ್ಲಿರುವ ಬಗ್ಗೆ ಶ್ರೀ ಅರವಿಂದ ಕುಮಾರ್ ಅರಳಿಯವರು ದಿನಾಂಕ 24-3-2022ರಂದು ಪ್ರಸ್ತಾಪಿಸಿದ ವಿಷಯ**

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ)

**ಊ) ದಕ್ಷಿಣ ಕನ್ನಡ ಜಿಲ್ಲೆ ದೇವಸ್ಥಾನಗಳ ಜಾತ್ರೋತ್ಸವದಲ್ಲಿ ಹಿಂದುಗಳೇತರರಿಗೆ ಜಾತ್ರಾ ವ್ಯಾಪಾರಕ್ಕೆ ಅವಕಾಶ ಇಲ್ಲದಿರುವ ಬಗ್ಗೆ ಶ್ರೀ ಸಿ.ಎ.ಇಬ್ರಾಹಿಂರವರು ದಿನಾಂಕ 24-3-2022ರಂದು ಪ್ರಸ್ತಾಪಿಸಿದ ವಿಷಯ**

ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಋ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ದೇವರಾಯಸಮುದ್ರ ಗ್ರಾಮದಲ್ಲಿನ ವೃಷಬಾದ್ರಿ ಬೆಟ್ಟದ ಬಳಿ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ ಶ್ರೀ ಗೋವಿಂದರಾಜುರವರು ದಿನಾಂಕ 24-3-2022ರಂದು ಪ್ರಸ್ತಾಪಿಸಿದ ವಿಷಯ**

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)(ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ)

**ಎ) ಗದಗ ಜಿಲ್ಲೆಯ ಶಿರಹಟ್ಟಿ ಗ್ರಾಮದ ಭಾರತಿ ಶಿಕ್ಷಣ ಸಮಿತಿಯ ಎಸ್.ಎಸ್.ಕೆ. ಅನುದಾನಿತ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಎಸ್.ಕೆ.ಅಂಗಡಿರವರನ್ನು ಸೇವೆಯಿಂದ ವಜಾ ಮಾಡಿರುವ ಬಗ್ಗೆ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ದಿನಾಂಕ 25-3-2022ರಂದು ಪ್ರಸ್ತಾಪಿಸಿದ ವಿಷಯ**

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

**ಏ) ಸಮಾಜ ಕಲ್ಯಾಣ ಇಲಾಖೆಯ ಕರ್ನಾಟಕ ವಸತಿ ಶಿಕ್ಷಣ ಸಂಘದ ವಸತಿ ಶಾಲೆಗಳಿಗೆ 230 ಹುದ್ದೆಗಳ ನೇಮಕಾತಿ ಬಗ್ಗೆ ಶ್ರೀ ಅರವಿಂದ ಕುಮಾರ್ ಅರಳಿಯವರು ದಿನಾಂಕ 25-3-2022ರಂದು ಪ್ರಸ್ತಾಪಿಸಿದ ವಿಷಯ**

– ಶ್ರೀ ಬಿ.ಎ.ಬಸವರಾಜ್(ನಗರಾಭಿವೃದ್ಧಿ ಇಲಾಖೆ ಸಚಿವರು, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು(ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ. ಬಿಡಿಎ. ಬಿಡಬ್ಲ್ಯೂಎಸ್‌ಎಸ್‌ಬಿ. ಬಿಎಂಆರ್‌ಡಿ. ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು) (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)

**೦7. <u>ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330ರ ಮೇರೆಗೆ</u>**

**ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಕ್ತಿತ್ವ ಪರೀಕ್ಷೆ ಅಂಕಗಳನ್ನು ಕಡಿತಗೊಳಿಸಿರುವ ಬಗ್ಗೆ.**

**ಆ) ಕರ್ನಾಟಕ ನಾಗರೀಕ ಸೇವಾ ನಿಯಮ 2021ಕ್ಕೆ ತಿದ್ದುಪಡಿ ತರಲು ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸದೇ ಕರಡು ಅಧಿಸೂಚನೆಯನ್ನು ಹೊರಡಿಸಿರುವುದರ ಬಗ್ಗೆ.**

- ಶ್ರೀ ಎಸ್.ರುದ್ರೇಗೌಡ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಪಿ.ಆರ್.ರಮೇಶ್
- ಶ್ರೀ ಕೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

**೦8. ಖಾಸಗಿ ಸದಸ್ಯರ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ**

**ವಿಷಯ: ದೇಸೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಬಗ್ಗೆ.**

- **ಶ್ರೀ ಯು.ಬಿ.ವೆಂಕಟೇಶ್**
- ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎಸ್.ರುದ್ರೇಗೌಡ
- ಶ್ರೀ ಎಸ್.ಎಲ್.ಭೋಜೇಗೌಡ

**(ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಖಾಸಗೀ ಸದಸ್ಯರ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡರು)**

**೦೯. ಗಮನ ಸೆಳೆಯುವ ಸೂಚನೆ**

**ಅ) ಬೆಂಗಳೂರು ದೇವರಚಿಕ್ಕನಹಳ್ಳಿಯ ವಾರ್ಡ್ ನಂ.೧೮೮ ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಹಂಚಿಕೆಯಾಗಿದ್ದ ಸಿ.ಎ.ನಿವೇಶನವನ್ನು ಭೂಗಳ್ಳರು ಅತಿಕ್ರಮಿಸಿರುವ ಬಗ್ಗೆ.**

- ಮರಿತಿಬ್ಬೇಗೌಡ
- ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)
- ಶ್ರೀ ಪಿ.ಆರ್.ರಮೇಶ್

**ಆ) ವಿಜಯಪುರ ಜಿಲ್ಲೆಯಲ್ಲಿ ನೀರಿನ ಅಭಾವವು ಹೆಚ್ಚಾಗಿದ್ದು ಕೃಷ್ಣಾ ನದಿಯಿಂದ ನೀರು ಸರಬರಾಜು ಮಾಡುವ ಮುಖಾಂತರ ಜನರ ಕುಡಿಯುವ ನೀರಿನ ಬವಣೆಯನ್ನು ನಿವಾರಿಸುವ ಬಗ್ಗೆ.**

- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)
- ಶ್ರೀ ಅರುಣ್ ಶಹಾಪುರ
- ಶ್ರೀ ಸುನೀಲ್ ವಲ್ಯಾಪುರ್

---

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(644)/28-3-2022/11-10/ಎಲ್‌ಎಂ/ವಿಕೆ

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 28ನೇ ಮಾರ್ಚ್ 2022**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 2724**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಗಳೆ, ಬೆಂಗಳೂರಿನ ಪ್ರತಿಷ್ಠಿತ ವಿಶ್ವೇಶ್ವರಯ್ಯ ಇಂಜಿನೀಯರಿಂಗ್ ಕಾಲೇಜು ನೂರು ವರ್ಷ ಪೂರೈಸಿದ್ದು, ಈ ಕಾಲೇಜಿನಲ್ಲಿ ಮೂಲಭೂತ ಸೌಲಭ್ಯಗಳ ಹಾಗೂ ಸಿಬ್ಬಂದಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ಎನ್ನುವ ನನ್ನ ಪ್ರಶ್ನೆಗೆ ಸರ್ಕಾರ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದೆ, NBA (National Board of Accreditation) permission ಕೂಡಾ ಸಿಕ್ಕಿರುವುದಿಲ್ಲ. ಈ ಕಾಲೇಜಿಗೆ 100 ವರ್ಷ ತುಂಬಿದರೂ ಏಕೆ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ, ಈ ವಿಳಂಬ ನೀತಿ ಏಕೆ ಎನ್ನುವುದನ್ನು ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

**ಡಾ: ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿಗೆ ಮತ್ತು ಒಂದು ಪಾಲಿಟೆಕ್ನಿಕ ಕಾಲೇಜಿಗೂ ಸಹ NBA Accreditation ಇಲ್ಲ, NAAC (National Assessment and Accreditation Council) ಇಲ್ಲ NAAC ಎನ್ನುವುದು University ಗೆ ಸಿಕ್ಕಿರುವುದು. ಇದು ಬೆಂಗಳೂರು ವಿಶ್ವವಿದ್ಯಾನಿಲಯದ ಅಡಿಯಲ್ಲಿರುವುದರಿಂದ NAAC Accreditation ಸಿಕ್ಕಿದೆ. ಒಂದು ದು:ಖಕರವಾದ ಸಂಗತಿ ಎಂದರೆ, ನಮ್ಮ ರಾಜ್ಯದಲ್ಲಿ ಇಷ್ಟೊಂದು ಸರ್ಕಾರಿ ಕಾಲೇಜುಗಳನ್ನು

ಸ್ಥಾಪನೆ ಮಾಡಿದರೂ ಕೂಡಾ ಒಂದಕ್ಕೂ NBA Accreditation ದೊರಕಿರುವುದಿಲ್ಲ, ಹಾಗೆಯೇ ಕಾರ್ಯನಿರ್ವಹಿಸಲಾಗುತ್ತಿದೆ. ಈಗ ನಮ್ಮ ಸರ್ಕಾರ ಬಂದಮೇಲೆ NBA Accreditation ನ್ನು ಸರ್ಕಾರಿ ಕಾಲೇಜುಗಳಗೆ ಪಡೆದುಕೊಳ್ಳಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿ ಅರ್ಜಿಯನ್ನು ಸಲ್ಲಿಸಲಾಗಿದೆ. ಈ ಹಿಂದೆ ಈ ಪ್ರಯತ್ನವನ್ನು ಕೂಡಾ ಮಾಡಿರಲಿಲ್ಲ. NBA Accreditation ಸಿಗುತ್ತದೆ ಎಂದು ನಮಗೆ ವಿಶ್ವಾಸವಿದೆ. ಇದನ್ನು ಕಾಲೇಜಿಗೆ ಕೊಡುವುದಿಲ್ಲ branch wise ಕೊಡುತ್ತಾರೆ. ಹಂತ-ಹಂತವಾಗಿ branch wise ಪಡೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ವಿಶ್ವೇಶ್ವರಯ್ಯ ಇಂಜಿನೀಯರಿಂಗ್ ಕಾಲೇಜ್ ಸ್ಥಾಪನೆಯಾಗಿ ಸುಮಾರು 104 ವರ್ಷಗಳಾಗಿವೆ. ಬಾಂಬೆ, ಪೂನಾ ಬಿಟ್ಟರೆ ನಮ್ಮ ಕರ್ನಾಟಕದಲ್ಲಿ ಇದೇ ಪ್ರಥಮ ಇಂಜಿನೀಯರಿಂಗ್ ಕಾಲೇಜ್ ಆಗಿದೆ. 104 ವರ್ಷಗಳನ್ನು ಪೂರೈಸಿದ ಈ UVCE (*University Visvesvaraya College of Engineering*) ಕಾಲೇಜ್ ಯಾವ ಮಟ್ಟದಲ್ಲಿ ಇರಬೇಕಿತ್ತು ಆ ಮಟ್ಟದಲ್ಲಿ ಇಲ್ಲ. ಈಗ ವಿದ್ಯಾರ್ಥಿಗಳು ಮೊದಲು ಖಾಸಗಿ ಕಾಲೇಜುಗಳನ್ನು ಆರಿಸಿಕೊಂಡು, ನಂತರ ಈ ಕಾಲೇಜನ್ನು ಆರಿಸಿಕೊಳ್ಳುತ್ತಿದ್ದಾರೆ. ಈ ಕಾಲೇಜ್‌ನ್ನು ಸುಧಾರಿಸಲು ಆಡಳಿತ ಮಂಡಳಿಯಲ್ಲಿ ಬದಲಾವಣೆ, ಏನೇನು ಬೇಕು ಆ ಸೌಲಭ್ಯಗಳನ್ನು ಒದಗಿಸಲಾಗುವುದು, ನೇಮಕಾತಿ ಮಾಡಿಕೊಳ್ಳಲು ಮತ್ತು ಆರ್ಥಿಕವಾಗಿ ಎಲ್ಲಾ ಸುಧಾರಣೆಗಳನ್ನು ಮಾಡಲಾಗುವುದು. UVCE ಈ ಕಾಲೇಜನ್ನು Unitary University ಮಾಡುವ ಸಲುವಾಗಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗಿದೆ. NEP ಆಧಾರಿತವಾಗಿ model institution ಎಂದು ಏನು ಕರೆಯುತ್ತೇವೆ IIM, IIT ಗಳಿಗಿಂತ ಹೆಚ್ಚಿನ ಸ್ವಾಯತ್ತತೆಯನ್ನು ಕೊಡಲು ಪ್ರಯತ್ನ ಮಾಡುತ್ತಿದ್ದೇವೆ. Technology ಯಲ್ಲಿ ಬೆಂಗಳೂರು ವಿಶ್ವಮಟ್ಟದಲ್ಲಿ ಹೆಸರನ್ನು ಪಡೆದುಕೊಂಡಿದೆ.

ಆವಿಷ್ಕಾರ, ತಂತ್ರಜ್ಞಾನ, Startup and Information Technology ನಲ್ಲಿ ದೊಡ್ಡ ಸ್ಥಾನವನ್ನು ಕರ್ನಾಟಕ ರಾಜ್ಯ ಹೊಂದಿದೆ. ಇನ್ನು ಹೆಚ್ಚಿನ ಮಟ್ಟದಲ್ಲಿ ಬೆಳಸಬೇಕು ಎಂದರೆ ಗುಣಮಟ್ಟವನ್ನು ಹೆಚ್ಚಿಸಬೇಕು, ನಮಗೆ ಬರುವುದೇ catchment area, feeding area ಸಂಸ್ಥೆಯಲ್ಲಿ. ಇಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಎಲ್ಲ ಕ್ರಮಗಳನ್ನು ವಹಿಸಲಾಗುತ್ತಿದೆ. ಇದಕ್ಕೆ ಬೇಕಾದಂತಹ ಕಾಯಿದೆಯನ್ನು ತರಲಾಗುತ್ತದೆ. ಇದಕ್ಕೆ ಅವಶ್ಯಕ ನೇಮಕಾತಿ ಮಾಡಿಕೊಳ್ಳುತ್ತೇವೆ. ಈ ಕಾಲೇಜಿಗೆ ಸ್ವಾಯತ್ತತೆಯನ್ನು ಕೊಡಲು 85 ಕೋಟಿ ರೂಪಾಯಿಗಳ administrative sanction ಕೊಡಲಾಗಿದೆ. ಟೆಂಡರ್ ಕಾಲ್ ಮಾಡಲಾಗುತ್ತಿದೆ. ಈ ಎಲ್ಲಾ ಸುಧಾರಣೆಗಳನ್ನು ಕೈಗೊಂಡು UVCE ನ್ನು ಗತಕಾಲದ ವೈಭವಕ್ಕೆ ತರಲು ಮತ್ತು NBA Accreditation ಪಡೆಯಲು ಬೇಕಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳುತ್ತೇವೆ ಎಂದು ಹೇಳಬಯಸುತ್ತೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಗಳೆ, 130 ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕಾಗಿತ್ತು. ಆದರೆ 83 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಉಳಿದ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ?

**ಡಾ: ಅಶ್ವಥ್ ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಗಳೆ, ಹುದ್ದೆಗಳ ಭರ್ತಿಗೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಪಡೆದುಕೊಂಡು ತಕ್ಷಣ ಕ್ರಮ ತೆಗೆದುಕೊಳ್ಳಲಾಗುತ್ತದೆ.

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**<u>ಪ್ರಶ್ನೆ ಸಂಖ್ಯೆ:2745</u>**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಶಿಕ್ಷಣ ವ್ಯವಸ್ಥೆಯಲ್ಲಿ ಖಾಸಗಿ ಶಾಲೆಯವರು ಒಂದನೇ ತರಗತಿಯ ಪೂರ್ವದಲ್ಲಿ ನರ್ಸರಿ, ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಪ್ರಾರಂಭ ಮಾಡಿದಾಗ ಸರ್ಕಾರಿ ಶಾಲೆಗಳ ಕಡೆಗೆ ಮಕ್ಕಳು ಬರುವುದು ಗಣನೀಯವಾಗಿ ಕಡಿಮೆಯಾಯಿತು. ಹಾಗಾಗಿ ಮಂಡ್ಯ ಜಿಲ್ಲೆಯಲ್ಲಿ ಎಲ್ಲಾ ಸರ್ಕಾರಿ ಶಾಲೆಗಳ ಅಭಿವೃದ್ಧಿ ಮಂಡಳಿಯವರು ಒಂದು ಹೊಸ ನಿಯಮವನ್ನು ಜಾರಿಗೆ ತಂದರು. ಮಂಡ್ಯ ಜಿಲ್ಲೆಯ ಸುಮಾರು 350 ಸರ್ಕಾರಿ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮಂಡಳಿಯವರು, ಪೋಷಕರ ಮತ್ತು ದಾನಿಗಳ ಸಹಾಯದಿಂದ ಖಾಸಗಿ ಶಾಲೆಯವರಂತೆಯೇ ಸರ್ಕಾರಿ ಶಾಲೆಯಲ್ಲಿ ನರ್ಸರಿ, ಎಲ್‌ಕೆಜಿ, ಯುಕೆಜಿ ತರಗತಿಗಳನ್ನು "ಮಕ್ಕಳ ಮನೆ" ಎನ್ನುವ ಹೆಸರಿನಲ್ಲಿ ಪ್ರಾರಂಭ ಮಾಡಿದ್ದಾರೆ. ಇಲ್ಲಿ ಕನ್ನಡ ಭಾಷೆಯ ಜೊತೆಗೆ ಇಂಗ್ಲೀಷ್, ಹಿಂದಿ ಭಾಷೆಯನ್ನು 3 ರಿಂದ 6 ವರ್ಷಗಳ ಮಕ್ಕಳಿಗೆ ಕಲಿಸಲು ಪ್ರಾರಂಭ ಮಾಡಿದರು. ಇದಕ್ಕೆ 350 ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದಾರೆ. ಸರ್ಕಾರದಿಂದ 2016ರಲ್ಲಿ ಪ್ರಾರಂಭ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ 2010 ರಿಂದಲೇ ಪ್ರಾರಂಭ ಮಾಡಲಾಗಿದೆ. ಬೇರೆ-ಬೇರೆ ಜಿಲ್ಲೆಗಳಲ್ಲಿಯು ಈ ರೀತಿ ಮಾಡಿದ್ದಾರೆ. ಈಗ ಆ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದು. ಗುಣಮಟ್ಟದ ಶಿಕ್ಷಣವನ್ನು ಸಹ ಕೊಡುತ್ತಿದ್ದಾರೆ. ನನ್ನ ಪ್ರಶ್ನೆ ಎಂದರೆ, ಸರ್ಕಾರ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುತ್ತಿದೆ. ನರ್ಸರಿ ಶಾಲೆಗೆ 3 ವರ್ಷದ ಮಗು ಬರುತ್ತದೆ. ಕಳೆದ

10-15 ವರ್ಷಗಳಿಂದ ಡಯಟ್‌ನಲ್ಲಿ ತರಬೇತಿಯನ್ನು ಪಡೆದುಕೊಂಡವರು ಇದ್ದಾರೆ, ಅರ್ಹತೆ ಇದೆ, ಸಮರ್ಥರಿದ್ದಾರೆ, ಅವರನ್ನು ಸರ್ಕಾರ ಉಳಿಸಿಕೊಳ್ಳಬೇಕು.

(**ಮುಂದು**)

**(645)28-03-2022(11-20)bsd-bns**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಮುಂದು)**

ಅವರುಗಳು ತರಬೇತಿ ಪಡೆದಿದ್ದು, ಅರ್ಹತೆಯನ್ನು ಹೊಂದಿದ್ದು, ಸರ್ಮರ್ಥರಿದ್ದು ಅವರನ್ನು ಉಳಿಸಿಕೊಳ್ಳಬೇಕು. ಅವರು 10 ವರ್ಷ ಮುಂಚೆ advance ಆಗಿ ಬೋಧನೆ ಮಾಡುತ್ತಿದ್ದು, ಹೊಸ ಶಿಕ್ಷಣ ನೀತಿ ಜಾರಿಗೆ ತರುವಾಗ ಅವರನ್ನು ಉಳಿಸಿಕೊಳ್ಳಬೇಕು. ಈ ರೀತಿ ಇಡೀ ರಾಜ್ಯದಲ್ಲಿ ಸುಮಾರು 650 ಜನ ಶಿಕ್ಷಕರಿದ್ದು, ಅವರಿಗೆ ಆದ್ಯತೆ ನೀಡಬೇಕು, ಅವರು ಯಾವರೀತಿ merge ಮಾಡುತ್ತಾರೋ, ಗೊತ್ತಿಲ್ಲ. ಅವರು ಅಂಗನವಾಡಿಗೆ ಮಾಡುತ್ತಾರೋ, ಬೇರೆಯದ್ದಕ್ಕೆ ಮಾಡುತ್ತಾರೋ, ಗೊತ್ತಿಲ್ಲ. ಆದ್ದರಿಂದ ಇವರನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಮಾತು ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಮಂಡ್ಯದಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಒಳ್ಳೆಯ ಪ್ರಯತ್ನವಾಗಿದ್ದು, ಇದನ್ನು ಸರ್ಕಾರದಿಂದ ಮಾಡಿಲ್ಲ. ಅಲ್ಲಿನ SDMC (School Development and Monitoring Committee) ರವರು, ಪೋಷಕರು ಮತ್ತೊಬ್ಬರು ಸೇರಿ ಸ್ವಯಂಪ್ರೇರಿತರಾಗಿ ಮಾಡಿದ್ದಾರೆ. ಸರ್ಕಾರದ ವತಿಯಿಂದ KPS ಶಾಲೆಗಳನ್ನು ಮಾಡಿದ್ದು, 30 ಮಕ್ಕಳಿಗೆ ಮಾತ್ರ ಅವಕಾಶ ಇದೆ. ಅಲ್ಲಿಯೂ SDMC ಯಲ್ಲಿ ಜಾಸ್ತಿ ಮಕ್ಕಳಾದರು ಎಂದು ಪೋಷಕರು, ದಾನಿಗಳನ್ನು ಇಟ್ಟುಕೊಂಡು

ಹೆಚ್ಚಿನ ಸಂಖ್ಯೆಯಲ್ಲಿ ಮಾಡಿಕೊಂಡಿರುವುದು ಇದೆ. ಇತ್ತೀಚಿನ ಈ experiment ನಡೆದು, ಪತ್ರಿಕೆಗಳಲ್ಲಿ ಮತ್ತು ಪೋಷಕರಿಂದ ಒಳ್ಳೆಯ ಪ್ರತಿಕ್ರಿಯೆಗಳು ಬಂದ ನಂತರ ಅಂಗನವಾಡಿಯವರನ್ನು ಶಾಲಾ ವಾತಾವರಣದಲ್ಲಿಯೇ shift ಮಾಡಬೇಕೆಂದು ಸುಮಾರು 4 ಸಾವಿರ ಅಂಗನವಾಡಿಗಳನ್ನು ಶಾಲೆ ಒಳಗೆ ತೆಗೆದುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಅಂಗನವಾಡಿಯವರೂ ಕೇಳಿದ್ದು, ಈ ಬಗ್ಗೆ ನಾವು meeting ಮಾಡಿದಾಗ, ಯಾವುದೇ ಅಂಗನವಾಡಿಗಳನ್ನು ಶಾಲಾ ಜಾಗ ಲಭ್ಯವಿದ್ದಾಗ ಅದರೊಳಗೆ ತರಬೇಕು ಎಂದುಕೊಂಡಿದ್ದೇವೆ. ಮುಂದೆ New Education Policy introduce ಆದಮೇಲೆ 3ನೇ ವಯಸ್ಸಿಯಲ್ಲಿಯೇ LKG, UKG ನವರು school complex ನಲ್ಲಿ ಬರಬೇಕು ಎಂದಾಗ ಆಗ ಹಾಕುವ ನಿಯಮಗಳೊಳಗೆ ಇವರುಗಳು ಬರುವುದಾದರೆ, ಅವರಿಗೆ ಒಂದಷ್ಟು ಗೌರವ ಧನವನ್ನು ಕೊಟ್ಟು ಉಳಿಸಿಕೊಳ್ಳುವುದಕ್ಕೆ ಆಗುತ್ತದೆಯೇ ಎಂದು ಮುಂದಿನ ದಿನಗಳಲ್ಲಿ ಯೋಚನೆ ಮಾಡುತ್ತೇನೆ. ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ 2735**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಸಾಕಷ್ಟು ವಿವರವಾಗಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದು, ಇದೊಂದು ಮಾನ್ಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಮತ್ತು ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಾಗಿದೆ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿಷ್ಠಿತ ಯೋಜನೆಯಾಗಿದೆ. ಈ ಯೋಜನೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂ ಉದ್ಯೋಗಕ್ಕಾಗಿ ಮಾಡಿದ ಯೋಜನೆಯಾಗಿದ್ದು, ಅವರಿಗೆ training ಅಥವಾ ವಸತಿಸಹಿತ training ಇರಬಹುದು, ಈ ರೀತಿಯ ಕೌಶಲ್ಯ ಅಭಿವೃದ್ಧಿ ಯೋಜನೆಯಿಂದ ಗ್ರಾಮೀಣ ಪ್ರದೇಶದ ಯುವಕ-ಯುವತಿಯರಿಗಾಗಿ ಮಾಡಿದ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸಾಕಷ್ಟು ಹಣವನ್ನು ಕೊಡಬೇಕು ಹಾಗು ಹೆಚ್ಚು payment ಗಳನ್ನು release ಮಾಡಬೇಕೆಂದು ವಿನಂತಿಸುತ್ತೇನೆ.

**ಡಾ: ಸಿ.ಎಸ್. ಅಶ್ವಥ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಪ್ರಸ್ತುತವಾದ ಪ್ರಶ್ನೆಯನ್ನು ಕೇಳಿದ್ದು, ಎಲ್ಲರಿಗೂ ಕೌಶಲ್ಯತೆಗಳನ್ನು ನೀಡಿ, ಉದ್ಯೋಗಗಳನ್ನು ಪಡೆಯಲು ಹಾಗೂ employable ಆಗಲು, employer ಆಗಬೇಕು ಎನ್ನುವ ದೃಷ್ಟಿಯಲ್ಲಿ ಶಿಕ್ಷಣ ಮತ್ತು ಕೌಶಲ್ಯತೆಗೆ ಸಾಕಷ್ಟು ಒತ್ತು ಕೊಟ್ಟು ಕಲಿಸುವುದು ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ 270 ಸರ್ಕಾರದ ITI ಗಳಿದ್ದು, ಇವುಗಳಲ್ಲಿ 150 ಅನ್ನು upgrade ಮಾಡುವ ಮೂಲಕ ವ್ಯವಸ್ಥೆಗಳನ್ನು ನಿರ್ಮಾಣ ಮಾಡುವುದಾಗಿದೆ. ಇದರ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳಿಗೆ short term, mid

term, long term ಕೌಶಲ್ಯತೆಗಳನ್ನು ಹಾಗೂ ಈ ಕಾಲಕ್ಕೆ ಪ್ರಸ್ತುತವಾಗಿರುವ Industry 4.0 ಗೆ ಕಲಿಕೆಗೆ ಅವಕಾಶವಾಗುತ್ತಿರುವುದು. ITI ಸಂಸ್ಥೆಗಳು ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭವಾಗಿದ್ದು, ಬಹಳ ಚೆನ್ನಾಗಿ ನಡೆಯುತ್ತಿದ್ದು, ಕಾಲಕ್ರಮೇಣ ಬೇಡಿಕೆಗಳು ಕಡಿಮೆಯಾಗುತ್ತಾ ಬಂತು. ಇವುಗಳಿಗೆ ಹೆಚ್ಚು ಬೇಡಿಕೆ ಬರುವಂತೆ ಕ್ರಮ ವಹಿಸಿರುವುದು ಇದೆ. ಅದೇರೀತಿ Polytechnic ಗಳಲ್ಲಿ 70 ಸಾವಿರ admissions ಇದ್ದು, ಸರ್ಕಾರಿ ಮತ್ತು ಖಾಸಗಿ ಸೇರಿದರೂ 25 ಸಾವಿರ ಆಗುತ್ತಿರಲಿಲ್ಲ. ಆದರೆ, ಈ ಬಾರಿ ಮನೆಮನೆಗೆ ತೆರಳಿ Polytechnic education ಅನ್ನು complete revise ಮಾಡಿ revamp ಮಾಡಿದ್ದೇವೆ. 2020ರ ಕೋವಿಡ್ ಸಮಯದಲ್ಲಿ industry ಗೆ relevant ಆಗಿರುವ ರೀತಿಯಲ್ಲಿ syllabus ಗಳನ್ನು revamp ಮಾಡಿ first year ನಿಂದಲೇ branch out ಆಗುವ ರೀತಿ ಮಾಡಿದ್ದೇವೆ. ಅದರಲ್ಲಿ ಯಾವ ಯಾವ combination ಗಳನ್ನು ತರಬೇಕು, 41 specialisation pathway ಗಳನ್ನು ತಂದು, industries ಜೊತೆಗೆ ಸಮಾಲೋಚನೆ ಮಾಡಿ, consultation ಮಾಡಿ ಸಾಕಷ್ಟು ಬದಲಾವಣೆ ಮತ್ತು ಸುಧಾರಣೆಗಳನ್ನು ಮಾಡಿದ್ದೇವೆ. ಈ Polytechnic ಗೂ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ tab ಕೊಡುವ ಕೆಲಸ ಮಾಡುತ್ತಿದ್ದೇವೆ. ಈ tab ಗಳನ್ನು ಮೂರು ವರ್ಷದವರಿಗೂ ಕೊಟ್ಟು ಇವತ್ತು ಅವರಿಗಾಗಿ smart class room ಗಳನ್ನು ಮಾಡಿ learning management system ಕೊಟ್ಟು ಕಲಿಕೆಯಲ್ಲಿ ದೊಡ್ಡ ಸುಧಾರಣೆ ಮಾಡುತ್ತಿದ್ದೇವೆ. AICTE syllabus ಅನ್ನು ಹೊರತುಪಡಿಸಿ ಸಂಪೂರ್ಣವಾಗಿ ಪ್ರಸ್ತುತವಾದ syllabus ಅನ್ನು ಕೊಟ್ಟಿದ್ದೇವೆ. ಇದು ನಿಜಕ್ಕೂ ಬಹಳ ಚೆನ್ನಾಗಿ ನಡೆಯುತ್ತಿದೆ. ಈ ವರ್ಷ 80% seats fill up ಆಗಿದೆ. ಅದೇರೀತಿ ಪ್ರತಿಯೊಂದು ಜಿಲ್ಲೆಗಳಲ್ಲಿ GTTC (Government Tool

Room and Training Centre) ಮಾಡಿದ್ದು, ಅಲ್ಲಿಯೂ short term course ಗಳಲ್ಲಿ ೫೦೦ ರಿಂದ ೧೦೦೦ ಜನರು GTTC ಸಂಸ್ಥೆಗಳಲ್ಲಿ ಕಲಿಯುತ್ತಿದ್ದಾರೆ. ೧೧ KGTTI (Karnataka German Technical Training Institute) ಸಂಸ್ಥೆಗಳಿದ್ದು, ಅಲ್ಲಿಯೂ ಉತ್ತಮವಾಗಿ ಕಲಿಯುತ್ತಿದ್ದು, ಒಟ್ಟಾರೆ ಕಲಿಯಲು ಬಹಳಷ್ಟು ಒಳ್ಳೆಯ ವ್ಯವಸ್ಥೆಗಳನ್ನು ಮಾಡುತ್ತಿದ್ದೇವೆ. ಅವರು ಮುಂದುವರೆದು convergence, ಕೃಷಿ ಇಲಾಖೆಯಲ್ಲಿ ಸಾಕಷ್ಟು short term programme ಗಳಲ್ಲಿ ರೈತ ಮಕ್ಕಳಿಗೆ ಕಲಿಯಲು ಅವಕಾಶ ಕಲ್ಪಿಸಿದ್ದೇವೆ. ಇದೇರೀತಿ ತೋಟಗಾರಿಕೆ, ಹೈನುಗಾರಿಕೆಯಲ್ಲಿಯೂ ಕಲಿಯಲು ಅವಕಾಶ ಕಲ್ಪಿಸಲಾಗಿದೆ. ಇದಲ್ಲದೇ ಗುಡಿಗಾರಿಕೆಯಲ್ಲಿಯೂ National Rural Livelihood Mission ನಲ್ಲಿ ತರಬೇತಿ ಕೊಡುವುದು ನಡೆಯುತ್ತಿದೆ.

**ಸಭಾಪತಿಯವರು:–** ಅವರು ಅನುದಾನದ ಬಗ್ಗೆ ಕೇಳಿದ್ದಾರೆ.

**ಡಾ: ಸಿ.ಎಸ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಅಮೃತ ಯೋಜನೆಯಲ್ಲಿ 2.5 ಲಕ್ಷ ಜನರಿಗೆ ಹೆಚ್ಚಿನ ಜನರಿಗೆ ತರಬೇತಿ ಕೊಡಬೇಕೆಂಬ ಗುರಿಯನ್ನು ಬಜೆಟ್‌ನಲ್ಲಿ ಕೊಟ್ಟಿದ್ದು, ಇದು ಕಳೆದ ಬಾರಿ 75 ಸಾವಿರ ಜನರಿಗೆ ಮಾತ್ರ ಇತ್ತು. ಈ ಗುರಿಯನ್ನು ತಲುಪಲು ಮಾಡುತ್ತಿದ್ದು, ಇದಲ್ಲದೇ talent acceleration programme ಎಂದು ತೆಗೆದುಕೊಂಡಿದ್ದೇವೆ. ಎಷ್ಟೋ engineering college ಗಳಲ್ಲಿ campus ನಲ್ಲಿಯೇ recruitment ಆಗಿಬಿಡುತ್ತಾರೆ. ಇದೇರೀತಿ campus ನಲ್ಲಿ recruitment ಆಗದೇ ಇರುವವರು ಇದ್ದು, ಅವರಿಗೆ programming ಬರುವುದಿಲ್ಲ, ಒಳ್ಳೆಯ skill ಅನ್ನು ಕಲಿತಿರುವುದಿಲ್ಲ. ಅವರು below average ಇರುವ student ಗಳಾಗಿರುತ್ತಾರೆ. ಅವರಿಗೂ ಕೂಡ

specialized programme ಮಾಡಿ, talent accelerate ಆಗುವುದಕ್ಕೆ ಮಾಡಿದ್ದೇವೆ. ಇದಲ್ಲದೇ industry ಗಳ ಜೊತೆ tie-up ಮಾಡಿ, institute ಗಳು training ಕೊಡಲು ಮಾಡಿದ್ದೇವೆ. Skill connect ಎಂದು ಮಾಡುತ್ತಿದ್ದೇವೆ. New Education Policy ಯಲ್ಲಿ ಬಿ.ಎ., ಬಿ.ಕಾಂ., student ಗಳು future ನಲ್ಲಿ skills ಕಲಿಯಲು ಅವಕಾಶವಾಗುವಂತೆ syllabus ನಲ್ಲಿ integrate ಮಾಡುವ ಕೆಲಸ ಮಾಡಿದ್ದೇವೆ. ಒಟ್ಟಾರೆ ಎಲ್ಲರಿಗೂ ಉದ್ಯೋಗ ಪಡೆಯುವ ದಿಸೆಯಲ್ಲಿ ಅವಶ್ಯಕವಿರುವ ತರಬೇತಿ ಕೊಡಲು ಮತ್ತು ನಮ್ಮ ಕರ್ನಾಟಕ ಹಾಗೂ ನಮ್ಮ ಬೆಂಗಳೂರಿನಲ್ಲಿ ಉದ್ಯೋಗಕ್ಕೆ ಯಾವುದೇ ಕೊರತೆ ಇಲ್ಲ ಎಂದು ನನಗೆ ಗೊತ್ತಿರುವಂತೆ ಹೇಳುತ್ತೇನೆ. ಇಡೀ ವಿಶ್ವ ಮತ್ತು ನಮ್ಮ ದೇಶದವರು ಇಲ್ಲಿ ಉದ್ಯೋಗ ಪಡೆಯುವ ಕೆಲಸ ಮಾಡುತ್ತಿದ್ದಾರೆ. ಏಕೆಂದರೆ ಇಲ್ಲಿ demand ಇದ್ದು, ಆ supply ಕೊಡಲು ನಮ್ಮ ಕಡೆಯಿಂದಲೂ ಆಗಬೇಕು. ಖಂಡಿತ ಈ supply ಅನ್ನು ಪೂರೈಸುವ ಹಾಗೂ ಎಲ್ಲರನ್ನು ಉದ್ಯೋಗಸ್ಥರನ್ನಾಗಿ ಮಾಡಿ, ಸರ್ವರಿಗೂ ಉದ್ಯೋಗ ಸಿಗುವ ರೀತಿಯಲ್ಲಿ ಕೌಶಲ್ಯ ತರಬೇತಿಯನ್ನು ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 2768**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಎಸ್.ವಿ. ಸಂಕನೂರ (ಪದವೀಧರ ಕ್ಷೇತ್ರ) (ಶ್ರೀ ಎನ್. ರವಿಕುಮಾರ್ ರವರ ಪರವಾಗಿ):-**

ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್ ರವರು ಪಿಯುಸಿ ಪರೀಕ್ಷೆಯಲ್ಲಿ recounting, revaluation ನಲ್ಲಿ ಅಸಮರ್ಪಕ ಮೌಲ್ಯಮಾಪನ ಆಗುತ್ತಿರುವ ಬಗ್ಗೆ ಕಳೆದ 3 ವರ್ಷಗಳ ದಾಖಲೆಗಳನ್ನು ಕೇಳಿದ್ದಾರೆ. 3 ವರ್ಷಗಳಲ್ಲಿ ಎಷ್ಟು ಅಸಮರ್ಪಕವಾಗಿ ಆಗಿವೆ, ಆಗದಿದ್ದಲ್ಲಿ valuator ಗಳಿಗೆ ದಂಡ ಏನು ಹಾಕಲಾಗಿದೆ ಎಂಬ ಪ್ರಶ್ನೆಗೆ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ಈ ಉತ್ತರವನ್ನು ಪರಿಶೀಲನೆ ಮಾಡಿದಾಗ ಅಧಿಕಾರಿಗಳು ಸಚಿವರ ಮೂಲಕ ತಪ್ಪು ಉತ್ತರವನ್ನು ಕೊಡಿಸಿದ್ದಾರೆ ಎನ್ನುವುದು ನನ್ನ ಭಾವನೆಯಾಗಿದೆ. ಏಕೆಂದರೆ ಕಳೆದ 3 ವರ್ಷಗಳ ಅವಧಿಯಲ್ಲಿ 2018-19 ರಲ್ಲಿ ಅಸಮರ್ಪಕ ಮೌಲ್ಯಮಾಪನ ಮಾಡಿದ ಮೌಲ್ಯಮಾಪಕರಿಂದ ಯಾವುದೇ ದಂಡ ವಸೂಲಿ ಮಾಡಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. 2019-20 ರಲ್ಲಿ 4 ಜನರಿಂದ ರೂ.400 ದಂಡ ವಸೂಲು ಮಾಡಿರುವ ಬಗ್ಗೆ ಹೇಳಿದ್ದಾರೆ. 2020-21 ರಲ್ಲಿ ಇಲ್ಲ ಎಂದು ಹೇಳಿದ್ದಾರೆ. ಆದರೆ ಯಾವ ಯಾವ ವರ್ಷ ಅಸಮರ್ಪಕವಾಗಿದೆ ಎಂಬ ಬಗ್ಗೆ detail ಗಳನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, 2019 ರಲ್ಲಿ ವ್ಯತ್ಯಾಸದಿಂದ ಎಷ್ಟು ಹುಡುಗರಿಗೆ ಅನ್ಯಾಯವಾಗಿದೆ ಎಂದು ಕೇಳಿರುವುದಕ್ಕೆ 1,008 ಜನ ಎಂದು ಹೇಳಿದ್ದಾರೆ. ಅಂದರೆ 6 mark ಗಳಿಗಿಂತ ಹೆಚ್ಚು ಬಂದಿರುವ ವಿದ್ಯಾರ್ಥಿಗಳಾಗಿದ್ದಾರೆ.

**(ಮುಂದು)**

**(646) 28.03.20222 11.30 hv.ks**

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು)–**

ಸನ್ಮಾನ್ಯ ಸಭಾಪತಿಯವರೇ, 2019ನೇ ಸಾಲಿನಲ್ಲಿ ಮರು ಮೌಲ್ಯಮಾಪನದಲ್ಲಿ 6ಕ್ಕಿಂತ ಹೆಚ್ಚಿನ ಅಂಕಗಳ ವ್ಯತ್ಯಾಸ ಬಂದಿರುವ ಪ್ರಕರಣಗಳು 1008 ಹಾಗೂ 6ಕ್ಕಿಂತ ಕಡಿಮೆ ಅಂಕಗಳ ವ್ಯತ್ಯಾಸ ಬಂದಿರುವ ಪ್ರಕರಣಗಳು 66 ಆಗಿದೆ. 2020ನೇ ಇಸವಿಯಲ್ಲಿ ಮರು ಮೌಲ್ಯಮಾಪನದಲ್ಲಿ 6ಕ್ಕಿಂತ ಹೆಚ್ಚಿನ ಅಂಕಗಳ ವ್ಯತ್ಯಾಸ ಬಂದಿರುವ ಪ್ರಕರಣಗಳ ಸಂಖ್ಯೆ 1540 ಆಗಿವೆ; 6ಕ್ಕಿಂತ ಕಡಿಮೆ ಅಂಕಗಳು ಬಂದಿರುವ ಪ್ರಕರಣಗಳು 124 ಆಗಿವೆ. ಈ ಅಂಕಿಸಂಖ್ಯೆಗಳನ್ನು ನೋಡಿದರೆ, ಅಸಮರ್ಪಕ ಮೌಲ್ಯಮಾಪನವಾಗಿರುವ ಪ್ರಕರಣಗಳ ಸಂಖ್ಯೆ ಸಾವಿರಕ್ಕಿಂತ ಹೆಚ್ಚಾಗಿವೆ ಎನ್ನುವುದು ತಿಳಿದು ಬರುತ್ತದೆ.

"2019–20ನೇ ಸಾಲಿನಲ್ಲಿ ಅಸಮಪರ್ಕ ಮೌಲ್ಯಮಾಪನ ಮಾಡಿರುವ ನಾಲ್ಕು ಮಂದಿ ಮೌಲ್ಯಮಾಪಕರಿಂದ ಒಟ್ಟು 400 ರೂಪಾಯಿಗಳ ದಂಡವನ್ನು ವಸೂಲಿ ಮಾಡಲಾಗಿದೆ" ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಇದು ತಪ್ಪು ಮಾಹಿತಿಯಾಗಿದೆ. ನಾನು ಸಹ ಉಪನ್ಯಾಸಕನಾಗಿ ಮತ್ತು ಪ್ರಿನ್ಸಿಪಾಲ್ ಆಗಿ ಕೆಲಸ ಮಾಡಿ ಇಲ್ಲಿಗೆ ಬಂದಿದ್ದೇನೆ. ಯಾವ ಲೋಪದೋಷಗಳಿಗೆ ಎಷ್ಟು ದಂಡ ಹಾಕಬೇಕು ಎನ್ನುವುದರ ಬಗ್ಗೆ ನನಗೆ ಮಾಹಿತಿ ಇದೆ.

ಒಟ್ಟಾರೆಯಾಗಿ 2018–19ನೇ ಸಾಲಿನಿಂದ 2020–21ನೇ ಸಾಲಿನವರೆಗೆ ಒಟ್ಟು 400 ರೂಪಾಯಿಗಳ ದಂಡವನ್ನು ವಿಧಿಸಲಾಗಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಿಗೆ ಅಧಿಕಾರಿಗಳು ಹೇಳಿದ್ದಾರೆ; ಅವರು ಬಂದು ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಈ ಉತ್ತರ ಸರಿಯಾಗಿಲ್ಲವೆನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಬಿ.ಸಿ.ನಾಗೇಶ್:–** ಸನ್ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ 1800 ಮಕ್ಕಳಿಗೆ ತೊಂದರೆಯಾಗಿರುವುದು ನಿಜ. ಅಸಮರ್ಪಕ ಮೌಲ್ಯಮಾಪಕರಿಂದ ಇಲಾಖೆ ದಂಡ ವಸೂಲಿ ಮಾಡಿಲ್ಲ. ದಂಡ ವಸೂಲಿ ಮಾಡದೇ ಇರುವುದು ತಪ್ಪು. ಅದನ್ನು ಯಾವ ರೀತಿಯಲ್ಲಿ ವಸೂಲಿ

ಮಾಡಬೇಕು ಎನ್ನುವುದರ ಬಗ್ಗೆ ತಮ್ಮ ಜೊತೆಗೆ ಕುಳಿತುಕೊಂಡು ಮಾತನಾಡಿ ಅದನ್ನು ಬಗೆಹರಿಸುತ್ತೇವೆ. ಹಿಂದೆ ಮಕ್ಕಳಿಗೆ ತೊಂದರೆಯಾಗುತ್ತಿರುವ ನಿಯಮವನ್ನು ಏತಕ್ಕೋಸ್ಕರ ರೂಪಿಸಿಕೊಂಡಿದ್ದಾರೆನ್ನುವುದು ನನಗೆ ಗೊತ್ತಿಲ್ಲ. +6 ಅಂಕಗಳಿಗಿಂತ ಹೆಚ್ಚಿನ ಅಂಕಗಳ ವ್ಯತ್ಯಾಸ ಬಂದರೆ, ಅದನ್ನು ವಿದ್ಯಾರ್ಥಿಯ ಅಂಕಪಟ್ಟಿಗೆ ಸೇರಿಸಲಾಗುತ್ತದೆ. ಅದಕ್ಕಿಂತ ಕಡಿಮೆ ಬಂದರೆ ಸೇರಿಸುವುದಿಲ್ಲ ಎನ್ನುವ ನಿಯಮವನ್ನು ಮಾಡಿಕೊಂಡಿದ್ದಾರೆ. ಇದರಿಂದ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಶೇಕಡಾ .1 ಅಂಕಗಳ ವ್ಯತ್ಯಾಸದಲ್ಲಿ rank ಹೆಚ್ಚು ಕಡಿಮೆಯಾಗುತ್ತದೆ. ಇದರ ಬಗ್ಗೆ ಪರಿಶೀಲಿಸಿ, ಸರಿಪಡಿಸುವಂತಹ ಕೆಲಸ ಮಾಡಲಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ದ್ವಿತೀಯ ವರ್ಷದ ಪಿ.ಯು.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಬಹಳ ಕಷ್ಟಪಟ್ಟು ಓದಿರುತ್ತಾರೆ. ಪೋಷಕರು ಸಹ ಕಷ್ಟಪಟ್ಟು ತಮ್ಮ ಮಕ್ಕಳನ್ನು ಓದಿಸಿರುತ್ತಾರೆ. ಪಾಸ್ ಆಗುವಂತಹ ವಿದ್ಯಾರ್ಥಿ ಫೇಲ್ ಆದರೆ ಅವರು ಆತ್ಮಹತ್ಯೆಗೆ ಪ್ರಯತ್ನಿಸುವುದನ್ನು ನಾವುಗಳು ಪತ್ರಿಕೆಗಳಲ್ಲಿ ಓದಿದ್ದೇವೆ ಮತ್ತು ದೂರದರ್ಶನದಲ್ಲಿ ನೋಡಿದ್ದೇವೆ. ಅಷ್ಟೊಂದು ಅಹಿತಕರ ಘಟನೆಗಳು ನಡೆಯುತ್ತವೆ. ಉದಾಹರಣೆಗೆ ಹೇಳಬೇಕಾದರೆ, ಒಬ್ಬ ವಿದ್ಯಾರ್ಥಿ ಪಾಸ್ ಆಗಿರುತ್ತಾನೆ. ಆದರೆ, ಅಂಕಗಳು ಕಡಿಮೆ ಬಂದಿವೆಯೆಂದು ಮರು ಮೌಲ್ಯಮಾಪನಕ್ಕೆ ಹಾಕಿಕೊಳ್ಳುತ್ತಾನೆ. ಆಗ ಅವನು ಫೇಲ್ ಆಗುತ್ತಾನೆ. ಒಬ್ಬ ವಿದ್ಯಾರ್ಥಿ ಒಂದು ವಿಷಯದಲ್ಲಿ 30 ಅಂಕಗಳನ್ನು ಪಡೆದುಕೊಂಡಿರುತ್ತಾನೆ. ಆ ವಿದ್ಯಾರ್ಥಿಯ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮರುಮೌಲ್ಯಮಾಪನಕ್ಕೆ ಹಾಕಿಕೊಂಡಾಗ –15 ಅಂಕಗಳು ಬರುತ್ತವೆ. ನಾನು ಮೌಲ್ಯಮಾಪನ ಮಾಡಿದರೆ, ಮತ್ತೊಬ್ಬರು ಮೌಲ್ಯಮಾಪನ ಮಾಡಿದರೆ ಗರಿಷ್ಠ 4 ರಿಂದ 5 ಚೆನ್ನಾಗಿ ಬರೆದಿರುತ್ತಾನೆ. ಈಗ ಬಂದಿರುವುದಕ್ಕಿಂತ ಹೆಚ್ಚಿನ ಅಂಕ ಬರಬೇಕಾಗಿತ್ತು ಎನ್ನುವ ಆತ್ಮವಿಶ್ವಾಸ ಆತನಿಗೆ ಇರುತ್ತದೆ. ಆ ಹಿನ್ನೆಲೆಯಲ್ಲಿ ಮರು ಅಂಕಗಳಷ್ಟು ವ್ಯತ್ಯಾಸ ಬರಬಹುದು. ಆದರೆ, –15 ಅಂಕಗಳು ವ್ಯತ್ಯಾಸವಾಗುವುದಕ್ಕೆ ಹೇಗೆ ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ. ವಿದ್ಯಾರ್ಥಿ ಪರೀಕ್ಷೆ ಮೌಲ್ಯಮಾಪನಕ್ಕೆ ಹಾಕಿದರೆ, ಮೊದಲು ಬಂದಿದ್ದ ಅಂಕದಲ್ಲಿ –15 ಅಂಕಗಳನ್ನು ಕಳೆಯಲಾಗಿರುತ್ತದೆ. ಪಾಸ್ ಆಗಿದ್ದ ವಿದ್ಯಾರ್ಥಿ ಫೇಲ್ ಆಗಿರುತ್ತಾನೆ.

ಅದೇ ರೀತಿಯಲ್ಲಿ ಫೇಲ್ ಆಗಿರುವ ವಿದ್ಯಾರ್ಥಿ ಪಾಸ್ ಆಗಿರುವಂತಹ ಉದಾಹರಣೆಗಳು ಇವೆ. ನನ್ನ ಕಳಕಳಿಯ ಮನವಿ ಏನೆಂದರೆ, ಮೊದಲು ಮೌಲ್ಯಮಾಪನ ಮಾಡಿದಾಗ ಬಂದಿರುವ ಅಂಕ ಮತ್ತು ಮರು ಮೌಲ್ಯಮಾಪನ ಮಾಡಿದಾಗ ಬಂದಿರುವ ಅಂಕಗಳಲ್ಲಿ ಗರಿಷ್ಠ 4–5 ಅಂಕಗಳ ವ್ಯತ್ಯಾಸ ಬರಬಹುದು. ಆದರೆ, 10, 15 ಮತ್ತು 19 ಅಂಕಗಳು ವ್ಯತ್ಯಾಸ ಬಂದಿರುವಂತಹ ಉದಾಹರಣೆಗಳು ಇವೆ. ಕೆಲವೊಮ್ಮೆ ಹೆಚ್ಚು ಅಂಕಗಳು ಬಂದಿದ್ದರೆ; ಕೆಲವೊಮ್ಮೆ ಕಡಿಮೆ ಅಂಕಗಳು ಬಂದಿವೆ. ನಾನು ಒಬ್ಬ ಉಪನ್ಯಾಸಕನಾಗಿ ಮಾನ್ಯ ಎನ್.ರವಿಕುಮಾರ್‌ರವರ ಪರವಾಗಿ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಸಭಾಪತಿಯವರು:– ಮಾನ್ಯ ಸಂಕನೂರ್‌ರವರೇ, ಈಗ ಸರ್ಕಾರದಿಂದ ಏನಾಗಬೇಕು ಅದನ್ನು ಕೇಳಿ. ಭಾಷಣ ಮಾಡಬೇಡಿ.

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಮರು ಮೌಲ್ಯಮಾಪನದಲ್ಲಿ 4–5 ಅಂಕಗಳ ವ್ಯತ್ಯಾಸ ಬಂದರೆ, ಮೌಲ್ಯಪಾಪಕರಿಗೆ ದಂಡ ವಿಧಿಸಬೇಕೆಂದು ಇದೆ. ಒಂದು ಪ್ರಕರಣದಲ್ಲಿ ಮರು ಮೌಲ್ಯಮಾಪನದಲ್ಲಿ 19 ಅಂಕಗಳ ವ್ಯತ್ಯಾಸ ಬಂದಿದೆ. ಪಾಸ್ ಆಗಿರುವ ವಿದ್ಯಾರ್ಥಿ ಫೇಲ್ ಆಗಿದ್ದಾನೆ. ಫೇಲ್ ಆಗಿರುವ ವಿದ್ಯಾರ್ಥಿ ಪಾಸ್ ಆಗಿದ್ದಾನೆ. ಈ ರೀತಿ ಆದರೆ ಹೇಗೆ? ಈ ನಿಟ್ಟಿನಲ್ಲಿ ಸರ್ಕಾರ ಒಂದು ಬೆಂಚ್ ಮಾರ್ಕ್ ಮಾಡಿ, ಮರು ಮೌಲ್ಯಮಾಪನದಲ್ಲಿ 10 ಅಥವಾ 15 ಅಂಕಗಳ ವ್ಯತ್ಯಾಸ ಬಂದರೆ, ಅಂತಹ ಮೌಲ್ಯಮಾಪಕರನ್ನು ಬ್ಲಾಕ್ ಲಿಸ್ಟ್‌ನಲ್ಲಿಡುವಂತಹ ವ್ಯವಸ್ಥೆ ಜಾರಿಗೊಳಿಸಬೇಕಾಗುತ್ತದೆ. 1 ರಿಂದ 6 ಅಂಕಗಳು ವ್ಯತ್ಯಾಸ ಬಂದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 10, 15 ಮತ್ತು 19 ಅಂಕಗಳಿಗಿಂತ ಹೆಚ್ಚಿನ ಅಂಕಗಳ ವ್ಯತ್ಯಾಸ ಕಂಡುಬಂದರೆ, ಅಂತಹ ಮೌಲ್ಯಮಾಪಕರನ್ನು ಬ್ಲಾಕ್ ಲಿಸ್ಟ್‌ನಲ್ಲಿಡುವಂತಹ ಅವಕಾಶ ನಿಯಮಗಳಲ್ಲಿ ಇದೆಯೇ/ಇಲ್ಲವೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ಬಿ.ಸಿ.ನಾಗೇಶ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಲ್ಲೇಖ ಮಾಡುತ್ತಿರುವ ರೀತಿಯಲ್ಲಿ ತಪ್ಪುಗಳು ಆಗಿವೆ. ಅಸಮರ್ಪಕ ಮೌಲ್ಯಮಾಪಕರಿಂದ ದಂಡ ವಸೂಲಿ

ಮಾಡುವಂತಹ ಕ್ರಮ ಜಾರಿಯಲ್ಲಿದೆ. ಆದರೆ, ವಸೂಲಿ ಮಾಡುತ್ತಿರುವ 100 ರೂಪಾಯಿಗಳ ದಂಡ ಇವತ್ತಿಗೆ ಅಸಮರ್ಪಕವೆಂದು; ಮಕ್ಕಳ ಭವಿಷ್ಯಕ್ಕೆ ಹೋಲಿಕೆ ಮಾಡಿ ನೋಡಿದಾಗ ಇದು ಸಮರ್ಪಕ ಮೊತ್ತವಲ್ಲವೆಂದು ಅನಿಸಬಹುದು. 10 ಅಂಕಗಳಿಗಿಂತ ಕಡಿಮೆ ವ್ಯತ್ಯಾಸ ಕಂಡು ಬಂದರೆ ಅಂತಹ ಮೌಲ್ಯಮಾಪಕರನ್ನು 5 ವರ್ಷಗಳ ಕಾಲ ಪರೀಕ್ಷಾ ಕಾರ್ಯದಿಂದ ಕೈ ಬಿಡುವಂತಹ ನಿಯಮವೂ ಇದೆ. ದಂಡ ವಿಧಿಸುವುದರ ಬಗ್ಗೆ ಸಂಬಂಧಪಟ್ಟ ಎಲ್ಲ ಶಾಸಕರನ್ನು ಕರೆದು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಈ ರೀತಿ ಆಗುತ್ತಿರುವುದು ತಪ್ಪು, ಇದರಿಂದ ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಒಂದೇ ಒಂದು ಅಂಕವು ಹೆಚ್ಚುಕಡಿಮೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಸರಿಯಾದ ಅಂಕಗಳನ್ನೇ ಕೊಡಬೇಕಾಗುತ್ತದೆ. ಭಾಷಾ ವಿಷಯಗಳಲ್ಲಿ ಮತ್ತು ಸಮಾಜಶಾಸ್ತ್ರ ವಿಷಯದಲ್ಲಿ ಒಂದೆರಡು ಅಂಕಗಳ ವ್ಯತ್ಯಾಸ ಬರಬಹುದು. ಇದು ಮೌಲ್ಯಮಾಪಕರ ಕಲ್ಪನೆಯ ಮೇರೆಗೆ ಆಗಬಹುದು. ಆದರೆ, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅಂಕಗಳು ಹೆಚ್ಚು ಕಡಿಮೆ ಬರುವುದಕ್ಕೆ ಸಾಧ್ಯವೇ ಇಲ್ಲ. ಮೌಲ್ಯಮಾಪನದಲ್ಲಿ ಆಗುತ್ತಿರುವ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವ ನಿಟ್ಟಿನಲ್ಲಿ ಮಾನ್ಯ ಸದಸ್ಯರುಗಳ ಜೊತೆಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಸನ್ಮಾನ್ಯ ಸಭಾಪತಿಯವರೇ, ಮೌಲ್ಯಮಾಪನದಲ್ಲಿ ಬಹಳಷ್ಟು ಲೋಪದೋಷಗಳಾಗಿವೆ. ಈ ರೀತಿಯಾಗುವುದಕ್ಕೆ ಕಾರಣವೇನು? ನನಗೆ ತಿಳಿದ ಮಟ್ಟಿಗೆ ಮೌಲ್ಯಮಾಪಕರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಕನಿಷ್ಠ ಮೂರು ವರ್ಷಗಳಷ್ಟು ಸೇವಾವಧಿಯನ್ನು ಪೂರ್ಣಗೊಳಿಸಿದ ಶಿಕ್ಷಕರನ್ನು ಪರಿಗಣಿಸಬೇಕಾಗುತ್ತದೆ. ಆದರೆ, ಸರ್ಕಾರ ಮೂರು ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವವರನ್ನು ಮೌಲ್ಯಮಾಪಕರನ್ನಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ. ಅದರಿಂದಾಗಿಯೇ ಇಂತಹ ಲೋಪದೋಷಗಳಾಗಿವೆ ಎನ್ನುವುದು ನನ್ನ ಭಾವನೆ. ಆದ್ದರಿಂದ ಕನಿಷ್ಠ ಮೂರು ವರ್ಷಗಳ ಸೇವೆ ಸಲ್ಲಿಸಿದವರನ್ನು ಮಾತ್ರ ಮೌಲ್ಯಮಾಪಕರ ಹುದ್ದೆಗಳಿಗೆ ನೇಮಕ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಈ ಬಗ್ಗೆ ನಿಯಮವೂ ಇದೆ.

ಇದನ್ನು ಕಡ್ಡಾಯವಾಗಿ ಪಾಲಿಸಬೇಕಾಗಿದೆ. ಯಾವುದೋ ಕಾರಣದ ಹಿನ್ನೆಲೆಯಲ್ಲಿ ನಿರೀಕ್ಷಿತ ಸಂಖ್ಯೆಯಲ್ಲಿ ಮೌಲ್ಯಮಾಪಕರು ಬರಲಿಲ್ಲ ಎನ್ನುವ ಹಿನ್ನೆಲೆಯಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿದವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇದರಿಂದಾಗಿ ಇಂತಹ ಅವಘಡಗಳಾಗುತ್ತಿವೆ. ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಬಿ.ಸಿ.ನಾಗೇಶ್:–** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚಿಂತನೆ ನಡೆಸಿ ಮುಂದಿನ ದಿನಗಳಲ್ಲಿ ಸರಿಪಡಿಸುವಂತಹ ಕೆಲಸವನ್ನು ಮಾಡಲಾಗುತ್ತದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಸನ್ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ಶಿಕ್ಷಕರ ಕ್ಷೇತ್ರದಿಂದ 7 ಜನ ಸದಸ್ಯರು ಪದವೀಧರರ ಕ್ಷೇತ್ರದಿಂದ 7 ಜನ ಸದಸ್ಯರು ಆಯ್ಕೆಗೊಂಡು ಬರುತ್ತಾರೆ. ಆ ಕಡೆ 7 ಜನ, ಈ ಕಡೆ 7 ಜನ ಸೇರಿಕೊಂಡು ಒಂದು ರೀತಿಯಲ್ಲಿ ಕಬ್ಬಡಿ ಆಟ ಆಡುತ್ತಿದ್ದಾರೆ. ಅವರೊಮ್ಮೆ ಆ ಕಡೆಯಿಂದ ಬರುತ್ತಾರೆ, ಇವರೊಮ್ಮೆ ಈ ಕಡೆಯಿಂದ ಬರುತ್ತಾರೆ. ಅವರು ಹಿಡಿದಂತೆ ಮಾಡುತ್ತಾರೆ. ಇವರು ಬಿಟ್ಟಂತೆ ಮಾಡುತ್ತಾರೆ. ಇದೇ ತಪ್ಪನ್ನು ಯಾರಾದರು ಸರ್ಕಾರಿ ನೌಕರರು ಮಾಡಿದ್ದರೆ, "ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು, ಆವನನ್ನು ಸಸ್ಪೆಂಡ್ ಮಾಡಬೇಕು" ಎಂದು ಈ 14 ಜನರೂ ಕೂಗಿಕೊಳ್ಳುತ್ತಿದ್ದರು. ಆದರೆ, ಈ ಪ್ರಕರಣದಲ್ಲಿ ಮಾನ್ಯ ಸಂಕನೂರ್‌ರವರು ಎಷ್ಟು ಮೃದುವಾಗಿ ಮಾತನಾಡಿದ್ದಾರೆಂದರೆ, ತಪ್ಪು ಮಾಡಿದವರಿಗೆ ಏನೂ ನೋವು ಆಗಬಾರದು ಅಷ್ಟು ಮೃದುವಾಗಿ ಮಾತನಾಡುತ್ತಿದ್ದಾರೆ. ಏಕೆಂದರೆ, ಅವರೆಲ್ಲರೂ ಇವರಿಗೆ ಓಟು ಹಾಕುತ್ತಾರೆ. ಡಾ||ವೈ.ಎ.ನಾರಾಯಣಸ್ವಾಮಿಯವರು, "ಬೇಗ ಈ ವಿಚಾರ ಮುಕ್ತಾಯ ಮಾಡು" ಎಂದು ಮಾನ್ಯ ಸಂಕನೂರ್ ಅವರಿಗೆ ಹೇಳುತ್ತಿದ್ದಾರೆ. ತಾವು "ಸಾಕು ಬಿಡಪ್ಪ" ಎಂದು ಹೇಳುತ್ತಿದ್ದೀರಿ, ಸಂಕನೂರ್‌ರವರ ಪಕ್ಕದಲ್ಲಿ ಕುಳಿತಿರುವ ಮಾನ್ಯ ಅರುಣ್ ಶಹಾಪುರ್‌ರವರು, "ಎಷ್ಟು ಉದ್ದಕ್ಕೆ ಎಳೆಯುತ್ತಿರುವೆ ಸಾಕು ಮಾಡು" ಎಂದು ಹೇಳುತ್ತಿದ್ದಾರೆ. ಈ ರೀತಿ ಇವರೆಲ್ಲರೂ ಶಿಕ್ಷಕರನ್ನು ರಕ್ಷಣೆಗೆ ಮಾಡುವುದಕ್ಕೆ ಹೊರಟಿದ್ದಾರೆ. ತೊಂದರೆಗೆ ಒಳಗಾದ ವಿದ್ಯಾರ್ಥಿಗಳು ಮತ್ತು ಅವರ ತಂದೆತಾಯಿ ಬಗ್ಗೆ ಯಾರು ಮಾತನಾಡಬೇಕು? ಮಾನ್ಯ ಮರಿತಿಬ್ಬೇಗೌಡರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಎರಡು ಲೋಟ ನೀರು ಕುಡಿಯುತ್ತಾರೆ. ಆದರೂ ತಮ್ಮ ಮಾತುಗಳನ್ನು ಮುಕ್ತಾಯ ಮಾಡುವುದಿಲ್ಲ.

ಮರು ಮೌಲ್ಯಮಾಪನದಲ್ಲಿ ಅನ್ಯಾಯವಾಗಿ ಫೇಲ್ ಆಗಿರುವ ವಿದ್ಯಾರ್ಥಿಗಳ ಬಗ್ಗೆ ಯಾರು ಮಾತನಾಡುತ್ತಾರೆ? ಸರ್ಕಾರ ಅವರಿಗೆ ನ್ಯಾಯ ಒದಗಿಸಿಕೊಡಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಶಿಕ್ಷಣ ಸಚಿವರೇ, ಕೇವಲ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಮಾತ್ರವಲ್ಲ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಶಾಲಾ ಕಾಲೇಜುಗಳ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಕರೆದು ಅವರಿಗೆ ಈ ಬಗ್ಗೆ ನಿರ್ದೇಶನಗಳನ್ನು ನೀಡಿ.

**ಶ್ರೀ ಬಿ.ಸಿ.ನಾಗೇಶ್:–** ಸನ್ಮಾನ್ಯ ಸಭಾಪತಿಯವರೇ, ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

**(ಮುಂದು)**

(647) 28.03.2022 11.40 PK(LL)-KS

**ಪ್ರಶ್ನೆ ಸಂಖ್ಯೆ: 2787**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಶ್ರೀಮತಿ ವೀಣಾ ಅಚ್ಚಯ್ಯನವರೇ, ತಾವು ಕೊಡಗು ಜಿಲ್ಲೆಯ ವಿಷಯ ಬಿಟ್ಟು ಬೇರೆ ವಿಷಯಗಳ ಬಗ್ಗೆ ಒಂದು ಬಾರಿಯಾದರೂ ಪ್ರಶ್ನೆ ಕೇಳುತ್ತೀರಾ ಎಂದು ಕಾಯುತ್ತಿದ್ದೇನೆ. ಆದರೆ, ತಾವು ಕೊಡಗು ಜಿಲ್ಲೆ ಬಿಟ್ಟು ಬೇರೆ ಪ್ರಶ್ನೆ ಕೇಳುತ್ತಿಲ್ಲ.

**ಶ್ರೀ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, "ಕೊಡಗು ಜಿಲ್ಲೆಯ ಬಗ್ಗೆ ಮಾತ್ರ ಪ್ರಶ್ನೆ ಕೇಳುತ್ತೇನೆ" ಎಂದು ತಾವು ಹೇಳಿರುತ್ತೀರಿ. ಹೌದು, ನಾನು ಕೊಡಗು ಜಿಲ್ಲೆಯ ಬಗ್ಗೆ ಪ್ರಶ್ನೆ ಕೇಳಲೇಬೇಕಾಗುತ್ತದೆ. ಏಕೆಂದರೆ, ಕಳೆದ ಮೂರು ವರ್ಷಗಳ ಹಿಂದೆ ಇದೇ ಪ್ರಶ್ನೆಯನ್ನು ಕೇಳಿದ್ದೆನು. ಆ ಬಗ್ಗೆ ನಾನು ದಾಖಲಾತಿಯನ್ನು ಕೊಡುತ್ತೇನೆ. ಆದರೆ, ಆ ಪ್ರಶ್ನೆಗೆ ಅಧಿಕಾರಿಗಳು ಅದೇ ಉತ್ತರವನ್ನು ನೀಡಿರುತ್ತಾರೆ. 2004ರಲ್ಲಿ ಕೇಂದ್ರ ಸರ್ಕಾರದಿಂದ "ಕೊಡವ ಹೆರಿಟೇಜ್ ಸೆಂಟರ್" ಗೆ ಮಂಜೂರಾತಿ ದೊರೆತಿರುತ್ತದೆ. 2013ರಿಂದ ಅಲ್ಲಿ ಕಾಮಗಾರಿ ಪ್ರಾರಂಭ ಮಾಡಲಾಗಿರುತ್ತದೆ. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ 268 ಲಕ್ಷ ರೂಪಾಯಿಗಳಿಗೆ ಕ್ರಿಯಾ ಯೋಜನೆಯನ್ನು ಮಾಡಿ, ಕುಶಾಲನಗರದ ಗುತ್ತಿಗೆದಾರರಿಗೆ ಆ ಕಾಮಗಾರಿಯನ್ನು ಕೊಟ್ಟು, 171 ಲಕ್ಷ ರೂಪಾಯಿ ಹಣವನ್ನು ಸಹ ಅವರಿಗೆ ಪಾವತಿ ಮಾಡಲಾಗಿರುತ್ತದೆ. ಅಂದರೂ, ಕಾಮಗಾರಿಯಲ್ಲಿ ಅರ್ಧದಷ್ಟು ಕೆಲಸ ಸಹ ಆಗಿರುವುದಿಲ್ಲ. ಆದರೆ, ನನ್ನ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ, ಬಹಳ ಉದ್ದದ ಉತ್ತರ ನೀಡಿರುತ್ತಾರೆ. ನಾನು ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಸದರಿ ಕಾಮಗಾರಿಯಲ್ಲಿ 96 ಲಕ್ಷ ರೂಪಾಯಿ ಮಾತ್ರ ಉಳಿದಿರುತ್ತದೆ. ಆ ಹಣದಲ್ಲಿ ಕಾಮಗಾರಿ ಖಂಡಿತವಾಗಿಯೂ ಆಗುವುದಿಲ್ಲ.

ಇಲ್ಲಿ ಏನಾಗಿದೆಯೆಂದರೆ, ಹಳೆಯ ಗುತ್ತಿಗೆದಾರರು ಸರಿಯಾಗಿ ಕಾಮಗಾರಿ ನಿರ್ವಹಿಸದೇ ಇರುವುದರಿಂದ, ಅವರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿರುತ್ತದೆ. ಸದರಿ ಗುತ್ತಿಗೆದಾರರಿಂದ ಹಣವನ್ನು

ಮರುಸಂದಾಯ ಮಾಡಬೇಕೆಂದು ಸ್ಥಳೀಯ ಶಾಸಕರು ಕೇಳಿರುತ್ತಾರೆ. ಅದು ಏನಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ನಂತರ, ಪುನಃ 97 ಲಕ್ಷ ರೂಪಾಯಿಯ ಕಾಮಗಾರಿಗೆ ಯೋಜನೆ ರೂಪಿಸಿ, ಗುತ್ತಿಗೆ ನೀಡಿದ್ದರೂ ಸಹ, ಇದುವರೆವಿಗೂ ಕೆಲಸ ಪ್ರಾರಂಭವಾಗಿರುವುದಿಲ್ಲ. ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಕೊಡವ ಹೆರಿಟೇಜ್ ಸೆಂಟರ್‌ಗೆ ಮಂಜೂರಾದ ಹಣದಲ್ಲಿ ಅಂದಾಜು 2 ಕೋಟಿ ರೂಪಾಯಿಯಷ್ಟು ಹಣ ವ್ಯರ್ಥವಾಗಿರುತ್ತದೆ. ಇದು ಏತಕ್ಕೆ ಆಗುತ್ತಿದೆ ಎಂದು ನನಗೂ ಸಹ ಅರ್ಥವಾಗುತ್ತಿಲ್ಲ.

ನಾನು ಈ ವಿಷಯದ ಬಗ್ಗೆ ಕಳೆದ 2-3 ವರ್ಷದ ಹಿಂದೆ ಪ್ರಶ್ನೆ ಕೇಳಿದಾಗ, 1 ವಾರದ ಅಂತರದಲ್ಲಿ ಮಾತ್ರ ಕೆಲಸ ಪ್ರಾರಂಭ ಮಾಡಿದ್ದು ನಂತರ ಆ ಕಾಮಗಾರಿಯನ್ನು ಸಂಪೂರ್ಣವಾಗಿ ನಿಲ್ಲಿಸಿರುತ್ತಾರೆ. ಮಾನ್ಯ ಪ್ರವಾಸೋದ್ಯಮ ಸಚಿವರು ಕೊಡಗು ಜಿಲ್ಲೆಗೆ ಬಂದಾಗ, ಆ ಜಾಗ ಯಾವರೀತಿ ಇದೆಯೆಂದು ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಅಲ್ಲಿ ಸುಮಾರು 5 ಎಕರೆ ವಿಸ್ತಾರವಾದ ಜಾಗದಲ್ಲಿ "ಕೊಡವ ಹೆರಿಟೇಜ್ ಸೆಂಟರ್" ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸದರಿ ಕಾಮಗಾರಿಗೆ ಎಷ್ಟು ಹಣ ಪೋಲು ಮಾಡಿದ್ದಾರೆ ಎಂಬುದನ್ನು ಮಾನ್ಯ ಸಚಿವರು ಪರಿಶೀಲಿಸಬೇಕು. ಏಕೆಂದರೆ, ಇತಿಹಾಸ ಪ್ರಸಿದ್ಧ ಕಂಬಗಳು ಅಲ್ಲಿ ಕೆಳಗಡೆ ಬಿದ್ದು ಕಾಡು ಸೇರಿರುತ್ತದೆ. ಆ ರೀತಿಯ ಪರಿಸ್ಥಿತಿ ಕೊಡಗು ಜಿಲ್ಲೆಯಲ್ಲಿರುತ್ತದೆ. ಈ ವಿಷಯದ ಬಗ್ಗೆ ನಾನು ಸದನದಲ್ಲಿ ಪ್ರಶ್ನೆ ಕೇಳದೇ ಹೋದರೆ, ಕೊಡಗಿನ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಏಕೆಂದರೆ, ನಮ್ಮ ಕೊಡಗು ಜಿಲ್ಲೆಗೆ ಬರುವಂತಹ ಅನುದಾನ ತೀರಾ ಕಡಿಮೆ. ಕೊಡಗು ಪುಟ್ಟ ಜಿಲ್ಲೆ ಎಂದು ಯಾವುದೇ ಸರ್ಕಾರಗಳು ನಮಗೆ ಹೆಚ್ಚಿನ ಅನುದಾನ ಕೊಟ್ಟಿರುವುದಿಲ್ಲ. ಆದರೆ, ನಾನು ಕೆಲವು ಕಾಮಗಾರಿಗಳಿಗೆ ಅನುದಾನ ಕೇಳಿ, ಬಿಡುಗಡೆಯಾದಂತಹ ಅನುದಾನ ಸಂಪೂರ್ಣವಾಗಿ ವಿನಿಯೋಗವಾಗುವುದಿಲ್ಲ ಮತ್ತು ಇದರಿಂದಾಗಿ ಕೊಡಗಿನ ಜನರಿಗೆ ಉಪಯೋಗವಾಗುವುದಿಲ್ಲ. ಆ ನಿಟ್ಟಿನಲ್ಲಿ ಮಾನ್ಯ ಸಚಿವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ವಿ. ಸುನೀಲ್ ಕುಮಾರ್(ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು)(ಪ್ರವಾಸೋದ್ಯಮ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ

ಮಡಿಕೇರಿ ತಾಲ್ಲೂಕಿನ ಕೆ. ಬಾಡಗ ಗ್ರಾಮಕ್ಕೆ ಸಂಬಂಧಪಟ್ಟಂತೆ, "ಕೊಡವ ಹೆರಿಟೇಜ್ ಸೆಂಟರ್"ನ್ನು ನಿರ್ಮಾಣ ಮಾಡಬೇಕೆಂದು 2004ರಲ್ಲಿ ಕೇಂದ್ರ ಸರ್ಕಾರದಿಂದ ಒಪ್ಪಿಗೆ ನೀಡಲಾಗಿರುತ್ತದೆ. ಬೇರೆ ಬೇರೆ ಕಾರಣಗಳ ಹಿನ್ನೆಲೆಯಲ್ಲಿ ಸದರಿ ಕಾಮಗಾರಿ ವಿಳಂಬವಾಗಿದೆ ಎನ್ನುವುದನ್ನು ನಾನು ಸಹ ಒಪ್ಪುತ್ತೇನೆ. ಈ ವಿಷಯದಲ್ಲಿ ಮಾನ್ಯ ಸದಸ್ಯರ ಯಾವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ನನ್ನ ಸಹಮತವಿದೆ. ಸದರಿ ಕಾಮಗಾರಿಗೆ 2004ರಲ್ಲಿ ಮಂಜೂರಾತಿ ನೀಡಿದ್ದರೂ ಸಹ ಆ ಕಾಮಗಾರಿಗೆ ಜಾಗ ಸಿಕ್ಕಿರುವುದಿಲ್ಲ. ತದನಂತರ, 2010ರಲ್ಲಿ 05 ಎಕರೆ ಜಮೀನನ್ನು ಮಂಜೂರಾತಿ ಮಾಡಲಾಗಿರುತ್ತದೆ. ಅಂದರೆ, 2004ರಲ್ಲಿ ಕಾಮಗಾರಿಗೆ ಮಂಜೂರಾತಿ ನೀಡಿದ್ದರೂ ಸಹ, ಆ ಕಾಮಗಾರಿಗೆ ಜಾಗ ಸಿಕ್ಕಿದ್ದು 2010ರಲ್ಲಿ. ಅದಾದ ನಂತರ, ಸದರಿ ಯೋಜನೆಗೆ ನೀಡಿರುವಂತಹ ಹಣ ಸಾಕಾಗುವುದಿಲ್ಲವೆಂದಾಗ, 2014ರಲ್ಲಿ ಪರಿಷ್ಕೃತ ಅಂದಾಜು ಮಾಡಲಾಗಿರುತ್ತದೆ. ಸದರಿ ಕಾಮಗಾರಿಯಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗಲಿಲ್ಲವೆಂದಾಗ, ಆ ಗುತ್ತಿಗೆಯನ್ನು ರದ್ದು ಮಾಡಿ, ಹೊಸ ಟೆಂಡರು ಪ್ರಕ್ರಿಯೆ ನಡೆಸಿ, ಬೇರೆ ಗುತ್ತಿಗೆದಾರರಿಗೆ ಕಾಮಗಾರಿ ನೀಡಲಾಗಿರುತ್ತದೆ. ಈ ಹಿಂದೆ ಗುತ್ತಿಗೆ ಪಡೆದಿದ್ದ ಟೆಂಡರುದಾರರನ್ನು 2018ರಲ್ಲಿ ಕಪ್ಪು ಪಟ್ಟಿಗೆ ಸೇರಿಸಲಾಗಿರುತ್ತದೆ.

ಈಗ ನಾನು ಈ ಸದನದ ಮುಖಾಂತರ ಮಾನ್ಯ ಸದಸ್ಯರಿಗೆ ವಿಶ್ವಾಸ ವ್ಯಕ್ತಪಡಿಸುವುದೇನೆಂದರೆ, ಕೊಡಗು ಜಿಲ್ಲೆಯ ಬಗ್ಗೆ ನಮಗೆ ಅಪಾರವಾದಂತಹ ಗೌರವ ಇದೆ. "ಕೊಡವ ಹೆರಿಟೇಜ್ ಸೆಂಟರ್" ಬಹಳ ಚೆನ್ನಾಗಿ ಆಗಬೇಕು ಮತ್ತು ಅದೊಂದು ಪ್ರವಾಸಿ ತಾಣವಾಗಬೇಕು. ದೇಶದ ಎಲ್ಲಾ ಜನರು ಕೊಡಗು ಜಿಲ್ಲೆಗೆ ಬರುವಂತಾಗಬೇಕು. ಕೊಡಗು ಜಿಲ್ಲೆಯಲ್ಲಿರುವಂತಹ ಹಾಕಿ ಆಟಗಾರರು ಮತ್ತು ಸೈನಿಕರ ಬಗ್ಗೆ ನಮ್ಮ ಸರ್ಕಾರಕ್ಕೆ ಅಪಾರವಾದಂತಹ ಗೌರವ ಇದೆ. ನಾನು ಈ ವಿಷಯಕ್ಕೆ ಸಂಬಂಧಪಟ್ಟಂತೆ, ಈ ದಿನ ಬೆಳಗ್ಗೆ ಒಂದು ಸಭೆ ನಡೆಸಿರುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರಿಗೂ ಸಹ ಆ ವಿಷಯವನ್ನು ತಿಳಿಸಿರುತ್ತೇನೆ. ಬರುವ ಜುಲೈ ತಿಂಗಳ ಹೊತ್ತಿಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಎಲ್ಲಾ ಸಚಿವರು ಇದೇ ರೀತಿಯ ಉತ್ತರ ನೀಡುತ್ತಾರೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಆದರೆ, ಯಾರು ಸಹ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲವೆಂದು ಹೇಳಿರುತ್ತಾರೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಬರುವ ಜುಲೈ ತಿಂಗಳಿನಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ. ಏಕೆಂದರೆ, ಈಗಾಗಲೇ ನಮ್ಮ ಕೊಡಗು ಜಿಲ್ಲೆಯಲ್ಲಿ ಮಳೆ ಪ್ರಾರಂಭವಾಗಿರುತ್ತದೆ. ಹಾಗಾಗಿ, ಮಾನ್ಯ ಸಚಿವರು ಈ ರೀತಿ ಉತ್ತರ ನೀಡದೇ, ಒಂದು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸುತ್ತೇನೆಂದು ಉತ್ತರ ನೀಡಲಿ.

**ಶ್ರೀ ವಿ. ಸುನೀಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ಇಲ್ಲ ಒಂದು ವರ್ಷ ಸಮಯ ಬೇಕು ಎಂದು ಹೇಳುವುದಿಲ್ಲ. ಬರುವ ಜುಲೈ ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಳಿಸಿ, ಅದರ ಉದ್ಘಾಟನೆಗೆ ಮಾನ್ಯ ಸದಸ್ಯರನ್ನು ಸಹ ಆಹ್ವಾನಿಸುತ್ತೇವೆ.

**ಪ್ರಶ್ನೆ ಸಂಖ್ಯೆ: 2749**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ, ಕೆಲವು ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುವ ರೀತಿ ಈ ಉತ್ತರ ಇರುತ್ತದೆ. ಇಲ್ಲಿ ಏನಾಗಿದೆಯೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ದೇವನಗೊಂದಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಇರುತ್ತದೆ. ಸದರಿ ದಾಸ್ತಾನಿಂದ ಟ್ಯಾಂಕರ್ ಮೂಲಕ ಡೀಲರ್‌ಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಸರಬರಾಜು ಆಗುತ್ತದೆ. ಈ ಟ್ಯಾಂಕರ್ ಒಳಗಡೆ ಬೇಬಿ ಟ್ಯಾಂಕರ್ ಅಳವಡಿಸಿರುತ್ತಾರೆ. ಅಂದರೆ, ಸದರಿ ಟ್ಯಾಂಕರ್ 12 ಲೀಟರ್ ಸಾಮರ್ಥ್ಯದ ಟ್ಯಾಂಕರ್ ಆಗಿದ್ದು, ಅದರಲ್ಲಿ 4 ಭಾಗಗಳನ್ನು ಮಾಡಿದ್ದು, ಒಂದು ಭಾಗದಲ್ಲಿ ಪೆಟ್ರೋಲ್, ಮತ್ತೊಂದು ಭಾಗದಲ್ಲಿ ಡೀಸೆಲ್ ಈ ರೀತಿ ಸಂಗ್ರಹಿಸಿ ಅದನ್ನು ಡೀಲರ್‌ಗಳಿಗೆ ಸರಬರಾಜು ಮಾಡುತ್ತಾರೆ. ಈ ಪೆಟ್ರೋಲ್ ಟ್ಯಾಂಕ್ ಏನಿರುತ್ತದೆ, ಅದರಲ್ಲಿ ಒಳಗಡೆ ಒಂದು ಬೇಬಿ ಟ್ಯಾಂಕರ್ ರಚನೆ ಮಾಡಿ, ಅಲ್ಲಿ ಸುಮಾರು ೮೦ ರಿಂದ 100 ಲೀಟರ್ ಪೆಟ್ರೋಲ್ ಆ ಬೇಬಿ ಟ್ಯಾಂಕರ್ ಒಳಗಡೆಯೇ ಇರುವಂತೆ ರಚನೆ ಮಾಡಲಾಗಿರುತ್ತದೆ. ಅಲ್ಲದೇ, ಆ ಟ್ಯಾಂಕರ್‌ನ ಮೂಲಕ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಡೀಲರ್‌ಗಳಿಗೆ ಸರಬರಾಜು ಮಾಡಿದಾಗ, ಆ ಬೇಬಿ ಟ್ಯಾಂಕರ್ ಒಳಗಡೆ ಸಂಗ್ರಹಿಸಿರುವ ಪೆಟ್ರೋಲ್ ಅಲ್ಲಿಯೇ ಉಳಿಯುತ್ತದೆ. ಅದು ಪೆಟ್ರೋಲ್ ಬಂಕ್ ಮಾಲೀಕರಿಗೆ ಅಥವಾ ಡೀಲರ್‌ಗಳಿಗೆ ತಲುಪುವುದೇ ಇಲ್ಲ. ಈ ರೀತಿ ಕದಿಯುವ ಪೆಟ್ರೋಲ್ ಕಳ್ಳಸಾಗಾಣಿಕೆಯಾಗಿದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ.

ಈ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ಈ ರೀತಿ ಕಳ್ಳಸಾಗಾಣಿಕೆಯನ್ನು ಇಲಾಖಾಧಿಕಾರಿಗಳು ಪತ್ತೆ ಹಚ್ಚಿರುವುದಿಲ್ಲ. ಈ ರೀತಿ ಕಳ್ಳಸಾಗಾಣಿಕೆ ನಡೆಯುತ್ತಿದೆ ಎಂದು ಎಷ್ಟೋ ಬಾರಿ ದೂರು ಬಂದರೂ ಸಹ ಯಾವುದೇ ಇಲಾಖಾಧಿಕಾರಿಗಳು ಅದನ್ನು ಪತ್ತೆ ಹಚ್ಚಿರುವುದಿಲ್ಲ. ಆದರೆ, ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷರು 3ನೇ ತಾರೀಖಿನಂದು ಪತ್ರ ಬರೆದು, "ಪೆಟ್ರೋಲ್ ಮತ್ತು

ಡೀಸೆಲ್ ಸರಬರಾಜು ಮಾಡುವಂತಹ ಇಂತಹ ಲಾರಿಯ ಟ್ಯಾಂಕರ್‌ನಲ್ಲಿ, ಬೇಬಿ ಟ್ಯಾಂಕರ್ ಅಳವಡಿಸಿ ಪೆಟ್ರೋಲ್ ಕದಿಯುತ್ತಿರುವುದರಿಂದ ಡೀಲರ್ಸ್‌ಗಳಿಗೆ ಅನ್ಯಾಯ ಆಗುತ್ತಿದೆ. ಆದುದರಿಂದ, ಇಂತಹ ಲಾರಿಗಳನ್ನು ದಯಮಾಡಿ ಪರಿಶೀಲಿಸಬೇಕೆಂದು" ಇಲಾಖಾಧಿಕಾರಿಗಳಿಗೆ ಅಧಿಕೃತವಾದಂತಹ ಪತ್ರ ಬರೆಯುತ್ತಾರೆ. ಆದರೆ, 12ನೇ ತಾರೀಖು ಆದರೂ ಸಹ ಆ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಹಾಗೂ ಆ ಬಗ್ಗೆ ಒಂದು ಪ್ರಕರಣ ಸಹ ದಾಖಲಿಸುವುದಿಲ್ಲ. ತದನಂತರ, 12ನೇ ತಾರೀಖಿನಂದು ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷರು ಮತ್ತೊಂದು ಪತ್ರ ಬರೆದು, "ಬೇಬಿ ಟ್ಯಾಂಕರ್ ಮುಖಾಂತರ ಪೆಟ್ರೋಲ್ ಕಳ್ಳಸಾಗಾಣಿಕೆ ಮಾಡುತ್ತಿರುವುದನ್ನು ಸ್ವತಃ ನಾವೇ ಹಿಡಿದು ಕೊಟ್ಟರೂ ಸಹ, ತಾವು ಅವರ ವಿರುದ್ಧ ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು" ಕೇಳಿರುತ್ತಾರೆ. ತದನಂತರ, ಇಲಾಖಾಧಿಕಾರಿಗಳು ಸಂಬಂಧಪಟ್ಟಂತಹ ಪೊಲೀಸ್ ಸ್ಟೇಷನ್‌ಗೆ ಒಂದು ದೂರು ಕೊಟ್ಟು, ಒಂದು ಎಫ್.ಐ.ಆರ್. ದಾಖಲಿಸುವುದು ಹಾಗೂ ಆ ವಾಹನವನ್ನು ಮುಟ್ಟುಗೋಲು ಹಾಕಿಸುವಂತಹ ಕ್ರಮ ಮಾತ್ರ ತೆಗೆದುಕೊಂಡಿದ್ದು, ಬೇರೆ ಏನು ಕ್ರಮ ತೆಗೆದುಕೊಂಡಿರುವುದಿಲ್ಲ.

ಈ ವಿಷಯದಲ್ಲಿ ಏನಾಗಿದೆಯೆಂದರೆ, ಇಲಾಖಾಧಿಕಾರಿಗಳು ವರ್ಷಕ್ಕೊಂದು ಬಾರಿ ಸ್ಟಾಂಪಿಂಗ್ ಮಾಡುತ್ತಾರೆ. ಆ ಸಂದರ್ಭದಲ್ಲಿ ಲಾರಿ ಟ್ಯಾಂಕರ್‌ನಲ್ಲಿ ಬೇಬಿ ಟ್ಯಾಂಕರ್ ಅಳವಡಿಸಿರುವುದನ್ನು ನೋಡುವುದೇ ಇಲ್ಲ. ಬದಲಾಗಿ, ಆ ಲಾರಿ ಮಾಲೀಕರಿಂದ ಹಣ ಪಡೆದು ಸ್ಟಾಂಪಿಂಗ್ ಮಾಡುತ್ತಾರೆ. ಆದರೆ, ಇಂತಹ ಬೇಬಿ ಟ್ಯಾಂಕರ್‌ಗಳಿಂದ ಪೆಟ್ರೋಲ್ ಕಳ್ಳಸಾಗಾಣಿಕೆ ಮಾಡುತ್ತಿರುವುದರಿಂದ ಇಡೀ ರಾಜ್ಯದಲ್ಲಿರುವಂತಹ ಡೀಲರ್ಸ್ ಮತ್ತು ಪೆಟ್ರೋಲ್ ಬಂಕ್ ಮಾಲೀಕರಿಗೆ ಬಹಳ ಅನ್ಯಾಯವಾಗುತ್ತಿದೆ. ಹಾಸನ ವಿಭಾಗದಲ್ಲಿ ಬಹಳ ದೊಡ್ಡ ಮಟ್ಟದ ದಂಧೆ ನಡೆದಿರುತ್ತದೆ. ಈ ವಿಷಯದಲ್ಲಿ ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷರು ಶ್ರೀ ಕುಮಾರ್ ಎನ್ನುವ ಅಧಿಕಾರಿಯನ್ನು ಮೂರು ಬಾರಿ ಭೇಟಿ ಮಾಡಿ, "ಬೇಬಿ ಟ್ಯಾಂಕರ್ ಮೂಲಕ ಪೆಟ್ರೋಲ್ ಕಳ್ಳತನ ಮಾಡುತ್ತಿರುವುದನ್ನು ಸ್ವತಃ ನಾವೇ ಹಿಡಿದುಕೊಟ್ಟರೂ ಸಹ, ತಾವು ಅವರ ವಿರುದ್ಧ ಯಾವುದೇ ಕ್ರಮ ಮಾಡಿರುವುದಿಲ್ಲ ಅಥವಾ ಅವರ ವಿರುದ್ಧ ಎಫ್.ಐ.ಆರ್. ಮಾಡಿರುವುದಿಲ್ಲ" ಎಂದು ಕೇಳುತ್ತಾರೆ. ಅದಕ್ಕೆ ಆ ಅಧಿಕಾರಿ, "ನಾವು ಆ ಬಗ್ಗೆ ಕ್ರಮ ಮಾಡುತ್ತೇವೆಂದು" ಉತ್ತರ ನೀಡುತ್ತಾರೆ. ತದನಂತರ, ಎರಡು ವಾರಗಳ ನಂತರ

ಸಂಬಂಧಪಟ್ಟವರ ವಿರುದ್ಧ ಒಂದು ಪ್ರಕರಣ ದಾಖಲಿಸುತ್ತಾರೆ. ಆದರೆ, ಈ ಪ್ರಕರಣದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳದೇ ಇರುವಂತಹ ಶ್ರೀ ಕುಮಾರ್ ಎನ್ನುವ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಂಡಿದ್ದೇವೆಂದು" ಮಾನ್ಯ ಸಚಿವರು ಉತ್ತರ ನೀಡುತ್ತಾರೆಂದು ನಾನು ಭಾವಿಸಿದ್ದೆನು. ಆದರೆ, ಆ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ. ಅದರ ಬದಲಾಗಿ, ಈ ರೀತಿಯ ಘಟನೆ ನಡೆದಿರುವ ಬಗ್ಗೆ ದೂರು ಬಂದಿದೆ, ಅದರ ಮೇಲೆ ಎಫ್.ಐ.ಆರ್. ಹಾಕಿದ್ದಾರೆಂದು ಉತ್ತರ ನೀಡಿದ್ದಾರೆ. ದಯಮಾಡಿ, ಶ್ರೀ ಕುಮಾರ್ ಎನ್ನುವ ಅಧಿಕಾರಿಯ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತಾರೆಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ. ಜೊತೆಗೆ, ಮತ್ತೊಂದು ಉಪ ಪ್ರಶ್ನೆಯನ್ನು ನಂತರ ಕೇಳುತ್ತೇನೆ.

**ಶ್ರೀ ಉಮೇಶ್ ವಿ. ಕತ್ತಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೋಸಕೋಟೆ ತಾಲ್ಲೂಕಿನ ದೇವನಗೊಂದಿಯಲ್ಲಿ ಹೆಚ್.ಪಿ.ಸಿ.ಎಲ್.(Hindustan Petroleum Corporation Ltd.) ಆಯಿಲ್ ಟರ್ಮಿನಲ್ ಇರುತ್ತದೆ. ಅಲ್ಲಿಂದ ಟ್ಯಾಂಕರ್‌ಗಳಿಗೆ ಆಯಿಲ್ ಲೋಡ್ ಆಗುತ್ತದೆ. ಸದರಿ ಹೆಚ್.ಪಿ.ಸಿ.ಎಲ್. ಗುತ್ತಿಗೆ ನೀಡಿರುವ ಟ್ಯಾಂಕರ್‌ಗಳಲ್ಲಿಯೇ ತೈಲವನ್ನು ತುಂಬಿಸಲಾಗುತ್ತಿದ್ದು, ಆ ಟ್ಯಾಂಕರ್‌ಗಳ ಮುಖಾಂತರವೇ ತೈಲ ಡೀಲರ್ಸ್‌ಗಳಿಗೆ ಸರಬರಾಜು ಆಗುತ್ತದೆ. ಹಾಗಾಗಿ, ಹೆಚ್.ಪಿ.ಸಿ.ಎಲ್. ಜವಾಬ್ದಾರಿ ಕೂಡ ಅಷ್ಟೆ ಇರುತ್ತದೆ. ಆದಾಗ್ಯೂ, ಇಂತಹ ಕಳ್ಳಸಾಗಾಣಿಕೆಯನ್ನು ಸದರಿ ಹೆಚ್.ಪಿ.ಸಿ.ಎಲ್.ನವರು ನೋಡಬೇಕಾಗಿತ್ತು, ಆದರೆ ಅವರು ನೋಡಿರುವುದಿಲ್ಲ. ಸದರಿ ಕಳ್ಳಸಾಗಾಣಿಕೆಯ ಬಗ್ಗೆ ನಮಗೆ ದೂರು ಬಂದಾಗ, ನಮ್ಮ ಇಲಾಖೆಯ ಅಧಿಕಾರಿಗಳು ಅದನ್ನು ಪರಿಶೀಲಿಸಿ, ಸಂಬಂಧಪಟ್ಟವರ ವಿರುದ್ಧ ಎಫ್.ಐ.ಆರ್. ದಾಖಲಿಸಿದ್ದು, ವಿಚಾರಣೆ ನಡೆಯುತ್ತಿದೆ. ಈ ಪ್ರಕರಣದಲ್ಲಿ ಯಾರು ತಪ್ಪಿತಸ್ಥರಿದ್ದಾರೆ, ಅವರಲ್ಲಿ ಯಾರನ್ನೂ ಬಿಡುವುದಿಲ್ಲ. ಎಲ್ಲರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ವಿಚಾರಣೆ ಮಾಡುತ್ತೇವೆಂದು ಉತ್ತರದಲ್ಲಿ ಹೇಳಿರುವುದಿಲ್ಲ.

**ಶ್ರೀ ಉಮೇಶ್ ವಿ. ಕತ್ತಿ:-** ಮಾನ್ಯ ಸಭಾಪತಿಯವರೇ, ಸದರಿ ವಿಚಾರಣೆಯನ್ನು ನಾವು ಮಾಡುವುದಿಲ್ಲ. ಅದನ್ನು ಪೊಲೀಸ್ ಇಲಾಖೆಯವರು ಮಾಡುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಪೊಲೀಸ್ ಇಲಾಖೆಯವರು ವಿಚಾರಣೆ ಮಾಡುವ ಬಗ್ಗೆ ನಾನು ಹೇಳುತ್ತಿಲ್ಲ. ಬದಲಾಗಿ, ಈ ಪ್ರಕರಣದಲ್ಲಿ ತಪ್ಪು ಮಾಡಿದಂತಹ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ.

**(ಮುಂದು)**

**(648) ದಿನಾಂಕ:28-03-2022 11.50 ಡಿಎಸ್-ಕೆಎಸ್**

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯರೇ, ನಮ್ಮ ಗಮನಕ್ಕೆ ಬಂದ ಮೇಲೆ ನಾವು ಎಫ್.ಐ.ಆರ್. ಮಾಡಿದ್ದೇವೆ. ಪೊಲೀಸ್ ತನಿಖೆ ನಡೆಯುತ್ತಿದೆ. ಅವರಿಂದ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದೂರು ಕೊಟ್ಟು ಎರಡು ವಾರವಾದರೂ ಕೂಡ ಅವರ ಅಧಿಕಾರಿಗಳು ಏಕೆ ಎಫ್.ಐ.ಆರ್. ಹಾಕಲಿಲ್ಲ? ಇಂತಹ ಪ್ರಕರಣಗಳನ್ನು ಎರಡು ವಾರ ಹೇಗೆ ಇಟ್ಟುಕೊಂಡರು? ಮೂರು ಬಾರಿ ಹಿಡಿದು ಕೊಟ್ಟಂಥವರೇ ಅಸೋಸಿಯೇಷನ್ ಪ್ರೆಸಿಡೆಂಟ್, ಪದಾಧಿಕಾರಿಗಳು ಬಂದು ಒತ್ತಾಯ ಮಾಡಿದರೂ ಕೂಡ ಎರಡು ವಾರ ಅವರ ಇಲಾಖಾಧಿಕಾರಿಗಳು ಎಫ್.ಐ.ಆರ್ ಹಾಕಿಸುವುದಕ್ಕೆ ಮೀನಾಮೇಷ ಎಣಿಸಿದರು? ಇಲಾಖಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದರ ಮೇಲೆ ಮಾನ್ಯ ಸಚಿವರು ತನಿಖೆ ಮಾಡುತ್ತಾರೆಯೇ? ನನ್ನ ಎರಡನೆಯ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರು ಉತ್ತರವನ್ನು ಓದಿಲ್ಲ, ಸುಮ್ಮನೆ ಉತ್ತರಕ್ಕೆ ಸಹಿ ಹಾಕಿದ್ದಾರೆ. ಕಾನೂನು ಮಾಪನ ಇಲಾಖಾ/ಅಧಿಕಾರಿಗಳು PESO (Petroleum & Explosives Safety Organisation) ಮಾನ್ಯತೆ ಪಡೆಯದ ನೂರಾರು ವಾಟರ್ ಟ್ಯಾಂಕರುಗಳಿಗೆ ಸ್ಟ್ಯಾಂಪಿಂಗ್ ಮಾಡಿ, ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕಾನೂನು ಬಾಹಿರವಾಗಿ ಸಾರ್ವಜನಿಕರ

ಸುರಕ್ಷತೆಯನ್ನು ಲೆಕ್ಕಿಸದೆ ಡೀಸೆಲ್ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಮೊದಲ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ ಅದನ್ನೇ ಎರಡನೇ ಪ್ರಶ್ನೆಗೂ ಉತ್ತರ ಕೊಟ್ಟಿದ್ದಾರೆ. ನಾನು ಗಾಡಿಗಳ ನಂಬರ್ ಇರುವ ಸಮೇತ ಫೋಟೋಗಳನ್ನು ಕೊಡುತ್ತೇನೆ. ನೀರು ಸರಬರಾಜು ಮಾಡತಕ್ಕಂಥ ವಾಟರ್ ಟ್ಯಾಂಕರ್‌ಗಳಿಗೆ ಸರ್ಕಾರ ಪರವಾನಗಿಯನ್ನು ಕೊಟ್ಟು PESO ಅನುಮತಿ ಇಲ್ಲದಿದ್ದರೂ ಕೂಡ ಕಾರುಗಳಿಗೆ, ಶಾಲಾ ಬಸ್‌ಗಳಿಗೆ ರಸ್ತೆಗಳಲ್ಲಿ ಡೀಸೆಲ್ ಹಾಕುತ್ತಿದ್ದಾರೆ.

(ಈ ಹಂತದಲ್ಲಿ ವಾಟರ್ ಟ್ಯಾಂಕರ್‌ಗಳಲ್ಲಿ ಗಾಡಿಗಳಿಗೆ ಡೀಸೆಲ್ ಹಾಕುತ್ತಿರುವಂತಹ ಫೋಟೋಗಳನ್ನು ಸದನದಲ್ಲಿ ತೋರಿಸಿದರು)

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯರೇ, HPCL (Hindustan Petroleum Corporation Ltd.) ನವರು ಟೆಂಡರ್ ಕರೆದು transportation ಗೆ fix ಮಾಡುತ್ತಾರೆ. ವಾಟರ್ ಟ್ಯಾಂಕರ್ ಮುಖಾಂತರ ಡೀಸೆಲ್ ಹಾಕುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಶಾಲಾ ಬಸ್‌ಗೆ ರಸ್ತೆಯಲ್ಲಿ ನಿಲ್ಲಿಸಿಕೊಂಡು fill ಮಾಡುತ್ತಿರುವಂಥದ್ದು. ಈ ವಾಹನಕ್ಕೆ PESO ಅನುಮತಿ ಇದೆಯೇ? ಶಾಲೆಯ ಒಳಗಡೆ ಲಾರಿಯನ್ನು ತೆಗೆದುಕೊಂಡು ಹೋಗಿ ಡಂಪ್ ಮಾಡುತ್ತಿರುವಂಥದ್ದು. ಬಸ್‌ಗೆ ರಸ್ತೆಯಲ್ಲಿ ನಿಂತುಕೊಂಡು ಹಾಕುತ್ತಿರುವಂಥದ್ದು.

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯರೇ, ನೀರಿನ ಟ್ಯಾಂಕರ್ ಬೇರೆ, ಡೀಸೆಲ್, ಪೆಟ್ರೋಲ್ ಟ್ಯಾಂಕರ್ ಬೇರೆ. PESO ಅಡಿ ಬರುವ…

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರೇ, ಇದರ ಬಗ್ಗೆ ತನಿಖೆಯನ್ನು ಮಾಡಿಸಿ.

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯರೇ, ಯಾವುದೇ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾರನ್ನು ಬಿಡುವುದಿಲ್ಲ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ಏನು ಮಾಡಬೇಕು ಎಂಬುದನ್ನು ಹೇಳಿ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಹಡಗಿಗೆ ಹಾಕತಕ್ಕಂಥ ಡೀಸಲ್‌ನ್ನು ಕಾಳಸಂತೆಯಲ್ಲಿ ತೆಗೆದುಕೊಂಡು ಬಂದು ಕಡಿಮೆ ದರಕ್ಕೆ ಇವರು ಡೀಸೆಲ್‌ನ್ನು ಮಾರಾಟ ಮಾಡುತ್ತಿದ್ದಾರೆ. ತಮಿಳುನಾಡು, ಆಂಧ್ರ, ಇಂತಹ ಕಡೆಯಿಂದ ಡೀಸೆಲ್‌ನ್ನು ತೆಗೆದುಕೊಂಡು ಬಂದು ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗುತ್ತಿದೆ. PESO ಅನುಮತಿ ಇಲ್ಲದಿರುವಂತಹ ಲಾರಿಗಳಿಗೆ ಸ್ಟ್ಯಾಂಪಿಂಗ್ ಮಾಡುವುದಕ್ಕೆ ಇಲಾಖಾಧಿಕಾರಿಗಳಿಗೆ ಅಧಿಕಾರವಿಲ್ಲ. ಪ್ರತಿ ವರ್ಷದಲ್ಲೂ ಎಲ್ಲಾ ವಾಹನಗಳಿಗೂ ತಪಾಸಣೆ ಮಾಡಿ ಇಲಾಖಾಧಿಕಾರಿಗಳು ಸ್ಟ್ಯಾಂಪಿಂಗ್ ಮಾಡುತ್ತಾರೆ. ಇವೆಲ್ಲದಕ್ಕೂ ಸ್ಟ್ಯಾಂಪಿಂಗ್ ಮಾಡಿದ್ದಾರೆ. ಅದಕ್ಕೆ PESO ಅನುಮತಿ ಇದೆಯೇ? ಇದು ಸ್ಫೋಟಕ ವಸ್ತು. ಶಾಲೆಗಳ ಹತ್ತಿರ, ರಸ್ತೆಯಲ್ಲಿ, ಮನೆಗಳ ಪಕ್ಕದಲ್ಲಿ ವಾಟರ್ ಟ್ಯಾಂಕರುಗಳಲ್ಲಿ ಡೀಸೆಲ್ ತೆಗೆದುಕೊಂಡು ಬಂದು ಗಾಡಿಗಳಿಗೆ fill ಮಾಡುತ್ತಿದ್ದಾರೆ. ಇದು ಕಾಳಸಂತೆಯಲ್ಲಿ ಕೊಡತಕ್ಕಂಥ ಡೀಸೆಲ್. ಇಡೀ ರಾಜ್ಯದಲ್ಲಿ ಇದು ಅವ್ಯಾಹತವಾಗಿ ನಡೆಯುತ್ತಿದೆ. ಇದರ ಬಗ್ಗೆ ತನಿಖೆಯನ್ನು ಮಾಡಿಸಿ. ಇದರ ಬಗ್ಗೆ ಪತ್ರಿಕೆಗಳಲ್ಲಿ ಬಹಳಷ್ಟು ಬರುತ್ತಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ರೆವಿನ್ಯೂ ಬಹಳ ನಷ್ಟವಾಗುತ್ತಿದೆ. ಇಲಾಖಾಧಿಕಾರಿಗಳು ಸ್ಟ್ಯಾಂಪಿಂಗ್ ಒತ್ತುತ್ತಿದ್ದಾರೆ. ಇದು ಸ್ಫೋಟಕ ವಸ್ತು. ಅವರು ಹಿರಿಯ ಸಚಿವರಾಗಿ ಈ ರೀತಿ ಉತ್ತರ ಕೊಟ್ಟಿರುವುದು ಸರಿಯೇ?

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯರೇ, ಸ್ಟ್ಯಾಂಪಿಂಗ್ ಮಾಡುವುದು ನಮ್ಮ ಕರ್ತವ್ಯ. ನೀರಿನ ಟ್ಯಾಂಕರ್‌ಗೆ ಸ್ಟ್ಯಾಂಪಿಂಗ್ ಮಾಡುತ್ತೇವೆ. ಪೆಟ್ರೋಲ್, ಡೀಸೆಲ್‌ಗೂ ಸ್ಟ್ಯಾಂಪಿಂಗ್ ಮಾಡುತ್ತೇವೆ. ಕೇಂದ್ರ ಸರ್ಕಾರದ PESO ನ ಕಾರ್ಯಕ್ರಮವಿದೆ. ನೀರಿನ ಟ್ಯಾಂಕರ್‌ನಲ್ಲಿ ನೀರು ಸರಿಯಾಗಿ ಬರುತ್ತಿಲ್ಲವೆಂದು ಹಾಹಾಕಾರವಿದೆ. ಅದಕ್ಕೂ ಸ್ಟ್ಯಾಂಪಿಂಗ್ ಮಾಡುತ್ತೇವೆ. ಡೀಸೆಲ್,

ಪೆಟ್ರೋಲ್‌ಗೂ ಸ್ಟ್ಯಾಂಪಿಂಗ್ ಮಾಡುತ್ತೇವೆ. ಬರತಕ್ಕಂಥ ಎಲ್ಲಾ ಟ್ಯಾಂಕರ್‌ಗಳಿಗೂ ನಾವು ಸ್ಟ್ಯಾಂಪಿಂಗ್ ಮಾಡಲೇಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಮರಿತಿಬ್ಬೇಗೌಡರವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ತನಿಖೆಯನ್ನು ಮಾಡಿಸಿ.

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯರೇ, ತನಿಖೆಯನ್ನು ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾವುದೇ ತಪ್ಪಿತಸ್ಥ ಅಧಿಕಾರಿಯನ್ನು ಬಿಡುವುದಿಲ್ಲ. ಮಾನ್ಯ ಮರಿತಿಬ್ಬೇಗೌಡರವರ ಹತ್ತಿರ ಇರುವ ಎಲ್ಲಾ ಮಾಹಿತಿಗಳನ್ನು ನಮಗೆ ಕೊಡಲಿ. ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಮಾಹಿತಿಗಳನ್ನು ಕೊಡುತ್ತೇನೆ. ದೂರು ಕೊಟ್ಟ ಮೇಲೆ ಎರಡು ವಾರ ವಿಳಂಬ ಮಾಡಿದ್ದಾರಲ್ಲಾ ಅವರ ಇಲಾಖಾಧಿಕಾರಿಗಳ ಮೇಲೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಇದರ ಬಗ್ಗೆ ಮಾನ್ಯ ಸಚಿವರು ತನಿಖೆಯನ್ನು ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಿ. ಈ ರೀತಿ ಆಗುತ್ತಿರುವುದನ್ನು ಬಿಗಿಗೊಳಿಸಿ. ರಾಜ್ಯಕ್ಕೆ ಬರತಕ್ಕಂಥ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಅವರ ಇಲಾಖಾಧಿಕಾರಿಗಳಲ್ಲಿ ಕೆಲವು ಭ್ರಷ್ಟ ಅಧಿಕಾರಿಗಳಿದ್ದಾರೆ. ಇಷ್ಟೆಲ್ಲಾ ದಾಖಲೆಗಳನ್ನು ಕೊಟ್ಟರೂ ಕೂಡ ಏನೂ ಆಗಿಲ್ಲ ಎನ್ನುವ ಹಾಗೆ ಉತ್ತರ ಕೊಡುತ್ತಾರಲ್ಲಾ ನಾಚಿಕೆಯಾಗಬೇಕು. ಇದು ಅವ್ಯಾಹತವಾಗಿ ನಡೆಯುತ್ತಿದೆ. ಇಲಾಖಾಧಿಕಾರಿಗಳ ಮೇಲೆ ತನಿಖೆ ಮಾಡಿ ಯಾರು ಎರಡು ವಾರವಾದರೂ ಕಂಪ್ಲೇಂಟ್ ರಿಜಿಸ್ಟರ್ ಮಾಡಲಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಬೇಕು. ಇದರಿಂದ ಮಾನ್ಯ ಸಚಿವರಿಗೇನು ಆಗಬೇಕು? ರಾಜ್ಯಕ್ಕೆ ಇಷ್ಟೆಲ್ಲಾ ಅನ್ಯಾಯವಾಗುತ್ತಿದೆ. ಕಾಳಸಂತೆಯಲ್ಲಿ ಪೆಟ್ರೋಲ್, ಡೀಸೆಲ್ ತೆಗೆದುಕೊಂಡು ಬಂದು ಯಾರಾದರೂ ರಸ್ತೆಗಳಲ್ಲಿ ಹಾಕುತ್ತಾರೆಯೇ? ಹಾಗಾದರೆ ಪೆಟ್ರೋಲ್ ಬಂಕ್‌ಗಳನ್ನೆಲ್ಲಾ ಮುಚ್ಚಿಬಿಡಿ. ಪೆಟ್ರೋಲ್ ಬಂಕ್

ಡೀಲರ್ಸ್ ಎಲ್ಲಾ ಹಾಳಾಗುತ್ತಿದ್ದಾರಲ್ಲಾ? ಅವರ ಪೆಟ್ರೋಲ್ ಬಂಕ್‌ಗಳನ್ನೆಲ್ಲಾ ಮುಚ್ಚಿ ರಸ್ತೆಗಳಲ್ಲೇ ಪೆಟ್ರೋಲ್ ಹಾಕಿಸಿಬಿಡಿ.

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯರೇ, ಮಾನ್ಯ ಸದಸ್ಯರಿಗೆ ಇದು ಪ್ರಶ್ನೋತ್ತರ ಅವಧಿ ಎಂಬುದನ್ನು ಹೇಳಿ.

(ಗೊಂದಲ)

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯರೇ, ಎಲ್ಲಾ ರೀತಿಯ ತನಿಖೆಯನ್ನು ಮಾಡಿಸಿ ಅದರಲ್ಲಿ ಅಧಿಕಾರಿಗಳಿದ್ದರೆ ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ. HPCL ಕರೆದು ಅವರ ಜೊತೆಯಲ್ಲಿ ಸಭೆ ಮಾಡುತ್ತೇವೆ. ಇಂತಹ ದಂಧೆಗಳನ್ನು ನಡೆಸುವವರ ಮೇಲೆ ಶಿಸ್ತಿನ ಕ್ರಮವನ್ನು ಜರುಗಿಸುತ್ತೇವೆ. ಮಾನ್ಯ ಮರಿತಿಬ್ಬೇಗೌಡರವರು ನೀರಿನ ಟ್ಯಾಂಕರ್‌ಗೆ ಸ್ಟ್ಯಾಂಪಿಂಗ್ ಮಾಡಬಾರದು ಎಂದು ಹೇಳುತ್ತಿದ್ದಾರೆ. ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ, ನೀರಿನ ಟ್ಯಾಂಕರ್‌ನಲ್ಲಿ ಬೆಂಗಳೂರಿನ ತುಂಬಾ ಬೇಸಿಗೆ ಕಾಲದಲ್ಲಿ ನೀರನ್ನು ಹಾಕುತ್ತಾರೆ. ಅಂಥವುಗಳಿಗೂ ಬೇಸಿಗೆ ಕಾಲದಲ್ಲಿ ನಾವು ಸ್ಟ್ಯಾಂಪಿಂಗ್ ಮಾಡುತ್ತೇವೆ. ಅದು ಬೇರೆ, ಪೆಟ್ರೋಲ್, ಡೀಸೆಲ್ ಬೇರೆ. ಈ ರೀತಿ ನಮ್ಮ ಗಮನಕ್ಕೆ ಬಂದಿರುವುದನ್ನು ಪೂರ್ಣವಾಗಿ ತನಿಖೆ ಮಾಡಿ ಅಧಿಕಾರಿಗಳು ಯಾರೇ ಇರಲಿ ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 2744**

**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಚಿದಾನಂದ್ ಎಂ.ಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ನೀಟ್ ಪರೀಕ್ಷೆ ವೈದ್ಯಕೀಯ ಸೀಟುಗಳಿಗೆ ಸಂಬಂಧಿಸಿದಂತೆ ಸಂಪೂರ್ಣವಾದ ವಿವರವನ್ನು ಮಾನ್ಯ ಸಚಿವರು ಒದಗಿಸಿದ್ದಾರೆ. ಕಳೆದ 5 ವರ್ಷಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಮೆರಿಟ್, ಮ್ಯಾನೇಜ್‌ಮೆಂಟ್, ಎನ್.ಆರ್.ಐ. ಕೋಟಾದಡಿ ಭರ್ತಿಯಾಗದೇ ಉಳಿಕೆಯಾದ ಸೀಟುಗಳು ಎಷ್ಟು? ಮತ್ತೊಂದು ಆಘಾತಕಾರಿ ವಿಚಾರವೇನೆಂದರೆ, ಮಾನ್ಯ ಸಚಿವರು ಬಹಳ ಸಮರ್ಥರಿದ್ದಾರೆ, ಅತ್ಯಂತ ಪ್ರಭಾವಿ ಸಚಿವರಾಗಿದ್ದಾರೆ. ನಮ್ಮ ಮೂರು ಜನ ಶಿಕ್ಷಣ ಸಚಿವರು ಇವತ್ತು ಸದನದಲ್ಲಿದ್ದಾರೆ. ಡಾ॥ಸಿ.ಎಸ್.ಅಶ್ವತ್ ನಾರಾಯಣರವರು ಉನ್ನತ ಶಿಕ್ಷಣ ಸಚಿವರು, ಡಾ॥ಕೆ.ಸುಧಾಕರ್‌ರವರು ಮತ್ತು ಮಾನ್ಯ ಬಿ.ಸಿ.ನಾಗೇಶ್‌ರವರು, ಈ ಮೂರು ಜನ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಂಥ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಪಿ.ಯು.ಸಿ. ಹಂತದವರಿಗೆ ಮಾನ್ಯ ನಾಗೇಶ್‌ರವರಿಗೆ ಸಂಬಂಧಪಟ್ಟಿರುವಂಥದ್ದು. KEA (Karnataka Examination Authority) ಯ ಪರೀಕ್ಷೆಯನ್ನು ಡಾ॥ಅಶ್ವತ್ ನಾರಾಯಣರವರು ಕಂಡೆಕ್ಟ್ ಮಾಡುತ್ತಾರೆ. ಸೀಟುಗಳನ್ನು ಡಾ॥ಸುಧಾಕರ್‌ರವರಿಗೆ ಕೊಡುತ್ತಾರೆ. ಹೀಗಿರುವಾಗ ಎಷ್ಟು ಸೀಟುಗಳು ಭರ್ತಿಯಾಗದೆ ಉಳಿದಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಉಕ್ರೇನ್ ಯುದ್ಧದ ಸಮಯದಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳು ಬಹಳಷ್ಟು ಸಂಖ್ಯೆಯಲ್ಲಿರುವುದನ್ನು ನಾವು ನೋಡಿದ್ದೇವೆ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಎನ್.ಆರ್.ಐ. ಹಾಗೂ ಮ್ಯಾನೇಜ್‌ಮೆಂಟ್ ಕೋಟಾದಡಿ 2017 ರಲ್ಲಿ 803 ಸೀಟುಗಳಿವೆ, ಭರ್ತಿಯಾಗದೆ 648 ಸೀಟುಗಳು ಉಳಿದಿವೆ. 2019 ರಲ್ಲಿ 782 ಸೀಟುಗಳಿರುತ್ತವೆ. ಭರ್ತಿಯಾಗದೆ ಉಳಿದಿರುವುದು 527 ಸೀಟುಗಳು. 2020 ರಲ್ಲಿ ಸುಮಾರು 837 ಸೀಟುಗಳಿರುತ್ತವೆ. ಅದರಲ್ಲಿ 697 ಸೀಟುಗಳು ಭರ್ತಿಯಾಗಿಲ್ಲ. ಈ ಮಾಹಿತಿ ಪ್ರಕಾರ ಶೇಕಡ 10-15 ರಷ್ಟು ಸೀಟುಗಳು ಭರ್ತಿಯಾಗಿಲ್ಲ. ಹಾಗಾದರೆ ಈ ಉಳಿದಿರುವ ಸೀಟುಗಳನ್ನು ರಾಜ್ಯ ಸರ್ಕಾರ ಮತ್ತೆ ವಾಪಸ್ ತೆಗೆದುಕೊಂಡು ಬಡ ಮಕ್ಕಳಿಗೆ ಸರ್ಕಾರಿ ಕೋಟಾದಡಿ ಏಕೆ ಹಂಚಬಾರದು? ಸರ್ಕಾರಿ ಸೀಟುಗಳು ಉಳಿದಾಗ ಅದನ್ನು ಮ್ಯಾನೇಜ್‌ಮೆಂಟ್ ಕೋಟಾಕ್ಕೆ ಕೊಟ್ಟಿರುತ್ತೇವೆ.

**(ಮುಂದು)**

**(649) 28/03/2022 /12:00/ ಎಸ್‌ಪಿಆರ್/ಜಿಆರ್**

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಸರ್ಕಾರಿ, ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳೆಲ್ಲವೂ ಸಹ ಸೇರಿ ಒಟ್ಟು 67 ವೈದ್ಯಕೀಯ ಕಾಲೇಜುಗಳಿವೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸೀಟುಗಳು ಲಭ್ಯ ಇವೆ. ಸೀಟುಗಳ ಹಂಚಿಕೆಗಾಗಿ ಒಂದು ಮತ್ತು ಎರಡನೇ ಸುತ್ತುಗಳು ಕೌನ್ಸಲಿಂಗ್‌ಗಳಾಗುತ್ತವೆ. ಈ ಎರಡೂ ಸುತ್ತುಗಳು ಮುಗಿದ ಬಳಿಕ "ಮಾಪ್-ಅಪ್ ಸುತ್ತು" ಎಂಬುದಾಗಿರುತ್ತದೆ. ಈ ಸುತ್ತು ಆದಮೇಲೆ ಖಾಸಗಿ ಮತ್ತು ಎನ್.ಆರ್.ಐ., ಕೋಟಾದಡಿ ಖಾಲಿಯಿರುವ ಸೀಟುಗಳನ್ನು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಭರ್ತಿ ಮಾಡಲಾಗುತ್ತದೆ. ಮಾಪ್-ಅಪ್ ಸುತ್ತು ಆದಮೇಲೆ ಭರ್ತಿ ಮಾಡದೇ ಇರುವ ಸೀಟುಗಳನ್ನು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ 1 : 10 ರ ಅನುಪಾತದಲ್ಲಿ ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ. ಇದಕ್ಕಾಗಿ ಅರ್ಹರಿರುವ ಎಲ್ಲಾ ವಿದ್ಯಾರ್ಥಿಗಳು ಪಟ್ಟಿಯನ್ನು ಆಯಾಯಾ ಕಾಲೇಜುಗಳಿಗೆ ಕಳುಹಿಸಲಾಗುತ್ತದೆ. ಸರ್ಕಾರಿ ಅಥವಾ ಖಾಸಗಿ ಕಾಲೇಜುಗಳಲ್ಲಿ ನಿಗದಿಪಡಿಸಿದ ಯಾವುದೇ ಸರ್ಕಾರಿ ವೈದ್ಯಕೀಯ ಸೀಟು ಅಂದರೆ ಒಂದೇ ಒಂದು ಸರ್ಕಾರಿ ವೈದ್ಯಕೀಯ ಸೀಟು ಇಲ್ಲಿಯವರೆಗೂ ಲ್ಯಾಪ್ಸ್ ಆಗಿಲ್ಲ. ಇವತ್ತಿನ ದಿವಸ ಕಾಲಕಾಲಕ್ಕೆ ಖಾಸಗಿ ಕಾಲೇಜುಗಳಲ್ಲಿನ ಆಡಳಿತ ಮಂಡಳಿಯ ಮತ್ತು ಎನ್.ಆರ್.ಐ., ಕೋಟಾದಡಿಯಲ್ಲಿರುವ ಭರ್ತಿ ಮಾಡದೇ ಇರುವ ಸೀಟುಗಳನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ, ಮೇರಿಟ್ ಆಧಾರದ ಮೇಲೆ 1:10 ರ ಅನುಪಾತದಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ನೀಡಲಾಗುತ್ತದೆ. ಈ ಪ್ರಕ್ರಿಯೆಯ ಮುಖಾಂತರ ಖಾಲಿ ಸೀಟುಗಳನ್ನು ಭರ್ತಿ ಮಾಡಲಾಗುತ್ತದೆ. ಹೀಗೆ ಮಾಡದಿದ್ದಲ್ಲಿ ಒಂದು ವರ್ಷಕ್ಕೆ ನಮಗೆ ಸುಮಾರು 300-400 ಸೀಟುಗಳು ವ್ಯರ್ಥವಾಗುತ್ತದೆ. ಇದು ಖಾಸಗಿ ಕಾಲೇಜಿನವರ ಸೀಟೂ ಆಗಿರಬಹುದು. ವರ್ಷವಾರು ವೈದ್ಯಕೀಯ ಸೀಟುಗಳು ವ್ಯರ್ಥವಾಗಬಾರದು ಎನ್ನುವ ಉದ್ದೇಶದಿಂದ ನಾವು ಈ ರೀತಿಯಾಗಿ ವೈದ್ಯಕೀಯ ಸೀಟುಗಳನ್ನು ಭರ್ತಿ ಮಾಡುತ್ತಿದ್ದೇವೆ. ಈ ರೀತಿಯ ಸೀಟುಗಳ ಭರ್ತಿ ಪ್ರಕ್ರಿಯೆಯು ನಮ್ಮ ನಿಯಮಾವಳಿಗಳನ್ವಯ ಮಾಡುತ್ತಿಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ

ಸರ್ವೋಚ್ಚ ನ್ಯಾಯಾಲಯವು Jerusalem ಪ್ರಕರಣದಲ್ಲಿ ತೀರ್ಪನ್ನು ನೀಡಿದೆ. ಇದರನ್ವಯ ನಾವು ಮಾಡುತ್ತಿದ್ದೇವೆ.

**ಶ್ರೀ ಚಿದಾನಂದ್ ಎಂ.ಗೌಡ:-** ಮಾನ್ಯ ಸಭಾಪತಿಯವರೇ, ಸಚಿವರಲ್ಲಿ ನನ್ನ ಮೂಲಭೂತ ಪ್ರಶ್ನೆ ಏನೆಂದರೆ, ಸುಮಾರು 600-700 ವೈದ್ಯಕೀಯ ಸೀಟುಗಳನ್ನು ಖಾಲಿ ಇಟ್ಟುಕೊಂಡು..., ಕಳೆದ 5 ವರ್ಷಗಳಿಂದ ಖಾಸಗಿ ಕಾಲೇಜುಗಳಲ್ಲಿನ ಆಡಳಿತ ಮಂಡಳಿಯ ಹಾಗೂ ಎನ್.ಆರ್.ಐ., ಕೋಟಾದಡಿ ಕೇವಲ ಶೇಕಡಾ 25 ರಷ್ಟು ಸೀಟುಗಳು ಮಾತ್ರವೇ ಭರ್ತಿಯಾಗಿವೆ. ನಮ್ಮ ರಾಜ್ಯದ ವಿದ್ಯಾರ್ಥಿಗಳು ಬೇರೆ ದೇಶಗಳಿಗೆ ಹೋಗಿ ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಪ್ರತಿವರ್ಷವೂ ಇಷ್ಟು ಪ್ರಮಾಣದಲ್ಲಿ ಸೀಟುಗಳು ಉಳಿಕೆಯಾಗಿದೆ. ಸರ್ಕಾರವು ಈ ವಿಷಯದ ಬಗ್ಗೆ ಗಮನಹರಿಸಿ, ಉಳಿಕೆ ಸೀಟುಗಳನ್ನು ಹಿಂಪಡೆದು ಅವುಗಳನ್ನು ಸರ್ಕಾರಿ ಕೋಟಾದಡಿ ಭರ್ತಿ ಮಾಡುವ ಕೆಲಸಗಳನ್ನು ಮಾಡಬಹುದಿತ್ತು. ಆದರೆ, ಈ ರೀತಿಯ ಕೆಲಸಗಳು ಆಗಿಲ್ಲ. ಹೀಗಾಗಿ ಈ ಬಗ್ಗೆ ದಯಮಾಡಿ ಮಾನ್ಯ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಸದಸ್ಯರಿಗೆ ಈ ವಿಷಯದ ಬಗ್ಗೆ ಮಾಹಿತಿಯ ಕೊರತೆ ಇರುವುದು ನನಗೆ ಕಾಣಿಸುತ್ತಿದೆ. ಸದಸ್ಯರು ಪ್ರಸ್ತಾಪಿಸಿದಂತೆ, 500-600 ಸೀಟುಗಳಲ್ಲ ನಮ್ಮ ರಾಜ್ಯದಲ್ಲಿ ಒಂದೇ ಒಂದು ವೈದ್ಯಕೀಯ ಸೀಟೂ ಸಹ ಲ್ಯಾಪ್ಸ್ ಆಗುವುದಿಲ್ಲ. ಈ ಸೀಟುಗಳನ್ನು ಹೇಗೆ ಭರ್ತಿ ಮಾಡಲಾಗುತ್ತದೆ ಎನ್ನುವುದನ್ನು ನಾನು ಈಗಾಗಲೇ ತಿಳಿಸಿದ್ದೇನೆ. ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ, ಮಾಪ್-ಅಪ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೂ ಬಾಕಿ ಇರುವ ಸೀಟುಗಳನ್ನು ಕೆಲವರು ಡಿ.ಎಂ.ಇ., ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರಗಳ ಮುಖಾಂತರ ಹಸ್ತಾಂತರಿಸಿರುತ್ತಾರೆ. ಇಂತಹ ಸೀಟುಗಳನ್ನು 1 : 10 ರ ಅನುಪಾತದಲ್ಲಿ ಮೇರಿಟ್ ಆಧಾರದ ಮೇಲೆ ನಾವು ಆಯಾ ಸಂಸ್ಥೆಗಳಿಗೆ ಕೊಡುತ್ತೇವೆ. ಆಯಾ ಕಾಲೇಜಿನವರು ಮೆರಿಟ್ ಆಧಾರದ ಮೇಲೆಯೇ ಸೀಟುಗಳನ್ನು ಹಂಚಿಕೆ ಮಾಡಬೇಕು. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸೀಟುಗಳನ್ನು ಅಲ್ಪಸಂಖ್ಯಾತರಿಗೆ ಹಾಗೂ ಲಿಂಗ್ವಿಸ್ಟಿಕ್ ಶಿಕ್ಷಣ ಸಂಸ್ಥೆಗಳು ಆಯಾ ಲಿಂಗ್ವಿಸ್ಟಿಕ್

ವಿದ್ಯಾರ್ಥಿಗಳಿಗೆ ಸೀಟುಗಳನ್ನು ಹಂಚಿಕೆ ಮಾಡಬೇಕಾಗುತ್ತದೆ. ಈ ರೀತಿಯಾಗಿ ಉಳಿಕೆ ಸೀಟುಗಳನ್ನು ಭರ್ತಿ ಮಾಡಲಾಗುತ್ತದೆ. ಹೀಗಾಗಿ ನಮ್ಮ ರಾಜ್ಯದಲ್ಲಿ ಒಂದೇ ಒಂದು ಸೀಟೂ ಸಹ ಖಾಲಿ ಇರುವುದಿಲ್ಲ. ಪ್ರೀ- ಕ್ಲಿನಿಕಲ್ ಮತ್ತು ಪ್ಯಾರಾ ಕ್ಲಿನಿಕಲ್ ಸೀಟುಗಳನ್ನು ಹೊರತುಪಡಿಸಿ ಯಾವುದೇ ಕ್ಲಿನಿಕಲ್ ವಿಷಯಗಳು ಸ್ನಾತಕೋತ್ತರ ವಿಭಾಗದಡಿ ಬರುವುದಿಲ್ಲ. ಪದವಿಯ ವಿಭಾಗದಲ್ಲಿ ಯಾವುದೇ ಸೀಟುಗಳು ಖಾಲಿ ಉಳಿಯುವುದಿಲ್ಲ.

**ಶ್ರೀ ಚಿದಾನಂದ ಎಂ.ಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ನೀಡಿರುವ ಉತ್ತರದನ್ವಯ ಖಾಲಿ ಇರುವ ಸೀಟುಗಳು ....

**ಸಭಾಪತಿಯವರು:-** ಶ್ರೀ ಚಿದಾನಂದ ಗೌಡರೇ, ಒಂದು ನಿಮಿಷ ಕುಳಿತುಕೊಳ್ಳಿ.

**ಡಾ॥ ವೈ.ಎ.ನಾರಾಯಣಸ್ವಾಮಿ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಸದನದಲ್ಲಿ ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರುಗಳಿಬ್ಬರೂ ಉಪಸ್ಥಿತರಿದ್ದಾರೆ. ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಉಕ್ರೇನ್ ದೇಶಕ್ಕೆ ವಿದ್ಯಾರ್ಥಿಗಳು ಹೋದ ತಕ್ಷಣವೇ ಅಲ್ಲಿ ಯುದ್ಧ ಪ್ರಾರಂಭವಾಯಿತು. ಹೀಗಾಗಿ ನಮ್ಮ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಲ್ಲಿಂದ ವಿದ್ಯಾರ್ಥಿಗಳನ್ನು ನಮ್ಮ ದೇಶಕ್ಕೆ ವಾಪಸ್ಸು ಕರೆದುಕೊಂಡು ಬಂದಿದ್ದಾರೆ. ಇಂತಹ ವಿದ್ಯಾರ್ಥಿಗಳು ಮಾಪ್-ಅಪ್ ಸುತ್ತಿನ ಸೀಟು ಹಂಚಿಕೆ ಅರ್ಹರಾಗಿದ್ದಾರೆ. ನಮ್ಮ ದೇಶಕ್ಕೆ ಹಿಂದಿರುಗುವ ಸಂದರ್ಭದಲ್ಲಿ ಈ ವಿದ್ಯಾರ್ಥಿಗಳು ತಮ್ಮ ಮೂಲ ಅಂಕಪಟ್ಟಿ ಹಾಗೂ ಶೈಕ್ಷಣಿಕ ಕೆಲವು ದಾಖಲಾತಿಗಳನ್ನು ಕಳೆದುಕೊಂಡಿದ್ದಾರೆ. ಈ ಪೈಕಿ, ನಿನ್ನೆಯ ದಿನ ವಿದ್ಯಾರ್ಥಿನಿಯೊಬ್ಬಳು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಇಂತಹ ಪ್ರಕರಣಗಳು ಇದ್ದರೆ, ಮಾಪ್-ಅಪ್ ಸುತ್ತಿನಲ್ಲಿ ಯಾವ ವಿದ್ಯಾರ್ಥಿಗಳ ಬಳಿ ಅವರ ಅಂಕಪಟ್ಟಿ ಹಾಗೂ ಶೈಕ್ಷಣಿಕ ದಾಖಲಾತಿಗಳ ನಕಲು ಪ್ರತಿಗಳು ಲಭ್ಯವಿದೆಯೋ, ಅಂತಹ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವ ಬಗ್ಗೆ ಇಬ್ಬರು ಸಚಿವರು ನಿರ್ಧಾರ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಚಿದಾನಂದ ಎಂ.ಗೌಡ:–** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಕೇಳಿರುವ ಮತ್ತೊಂದು ಪ್ರಶ್ನೆಯು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿ ಹೋಗಿದೆ. ಪ್ರಶ್ನಿತ ವಿಷಯದಲ್ಲಿನ ನನ್ನ ಮೂಲಭೂತ ಕಳಕಳಿ ಏನೆಂದರೆ, ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಂದರೆ, ಕೇವಲ ಶೇಕಡಾ 2–3 ರಷ್ಟು ವಿದ್ಯಾರ್ಥಿಗಳಿಗೆ..., K.R.E.I.S. (Karnataka Residential Educational Institutions Society) ವಿಭಾಗದಡಿ ಬರುವ ಶಾಲೆಗಳನ್ನು ಹೊರತುಪಡಿಸಿ,.... ಬೇರೆ ಸರ್ಕಾರಿ ಕಾಲೇಜುಗಳಲ್ಲಿ ವಿಜ್ಞಾನ ವಿಷಯವನ್ನು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಾರಿಗೂ ಸಹ ವೈದ್ಯಕೀಯ ಶಿಕ್ಷಣಕ್ಕಾಗಿ ಅವಕಾಶ ದೊರೆಯುತ್ತಿಲ್ಲ. ಏಕೆಂದರೆ, ನೀಟ್(N.E.E.T.)ನಂತಹ ಸ್ಪರ್ಧಾತ್ಮಕ ಪರೀಕ್ಷೆಗಾಗಿ ಆ ಕಾಲೇಜುಗಳಲ್ಲಿ ಯಾವುದೇ ರೀತಿಯಾದ ಪ್ರತ್ಯೇಕವಾದ ತರಬೇತಿಗಳು ದೊರೆಯುತ್ತಿಲ್ಲ. ಹೀಗಾಗಿ ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸದರಿ ಕಾಲೇಜಿನ ಬೋಧಕರು ಸಮರ್ಥರಾಗಿದ್ದಾರೆ. ಅಲ್ಲಿನ ಬೋಧಕರೆಲ್ಲರಿಗೂ ಸಹ ಸಿ.ಇ.ಟಿ., ಮತ್ತು ನೀಟ್‌ಗಳಂತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವಷ್ಟು ಎಲ್ಲಾ ರೀತಿಯ ಅವಕಾಶಗಳಿವೆ. ಹೀಗಾಗಿ ಆಯಾಯಾ ಸರ್ಕಾರಿ ಕಾಲೇಜುಗಳಲ್ಲಿ ಅಲ್ಲಿನ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ವ್ಯವಸ್ಥೆಗಳಾಗಬೇಕು.

**ಡಾ॥ ಸಿ.ಎಸ್.ಅಶ್ವಥ ನಾರಾಯಣ:–** ಮಾನ್ಯ ಸಭಾಪತಿಯವರೇ, ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯ ಸಂದರ್ಭದಲ್ಲಿ ಸಿ.ಇ.ಟಿ., ನೀಟ್ ಮತ್ತು ಜೆ.ಇ.ಇ. ಸ್ಪರ್ಧಾತ್ಮಕ ಪರೀಕ್ಷೆಗಳಗಾಗಿ ನಮ್ಮ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಬೇತಿ ನೀಡಲಾಗಿತ್ತು. ನಮ್ಮ ರಾಜ್ಯದ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಉತ್ತಮವಾದ ಮುಖ್ಯಾಂಶಗಳು, ಅಣಕು ಪರೀಕ್ಷೆ ಹಾಗೂ ಅಣಕು ಟೆಸ್ಟ್‌ಗಳನ್ನು ನೀಡಲಾಗಿತ್ತು. ಇವರುಗಳು ಬಹಳ ಉತ್ತಮ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವುದಕ್ಕೋಸ್ಕರವಾಗಿ ನೀಡಿದ ತರಬೇತಿಯ ಆಧಾರಿತವಾಗಿ, ಹಾಗೂ ಅಂಕಿ–ಅಂಶಗಳ ಆಧಾರದ ಮೇಲೆ ನೋಡಿದಾಗ, ನಮ್ಮ ರಾಜ್ಯದ ಪ್ರದರ್ಶನವು ಬಹಳ ಚೆನ್ನಾಗಿ ಸುಧಾರಣೆಯಾಗುತ್ತಿದೆ. ನಾವು 2019 ನೇ ಸಾಲಿನಿಂದ ಈ ರೀತಿಯ ತರಬೇತಿಯನ್ನು ಪ್ರಾರಂಭಿಸಿದ್ದೇವೆ. ಇದರಿಂದಾಗಿ ನಮ್ಮ

ರಾಜ್ಯದ ವಿದ್ಯಾರ್ಥಿಗಳ ಪ್ರದರ್ಶನವು ಉತ್ತಮವಾಗಿ ಸುಧಾರಿಸಿದೆ. ಈ ರೀತಿಯ ತರಬೇತಿಯನ್ನು ಎಲ್ಲರಿಗೂ ಸಹ ನೀಡಲಾಗುತ್ತಿದೆ. ಯಾವ ರೀತಿಯಾಗಿ ಅರ್ಜಿಗಳನ್ನು ಭರ್ತಿ ಮಾಡಬೇಕು ಎನ್ನುವುದರ ಬಗ್ಗೆಯೂ ಸಹ ತರಬೇತಿಗಳನ್ನು ನೀಡಲಾಗುತ್ತಿದೆ. ಕಾಲೇಜುಗಳಲ್ಲಿ ಮತ್ತು ಆನ್‌ಲೈನ್ ಮುಖಾಂತರ ಒಟ್ಟಾರೆಯಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸುವುದಕ್ಕೆ ತರಬೇತಿಗಳನ್ನು ನೀಡಲಾಗುತ್ತಿದೆ. ಕೇವಲ ರಾಜ್ಯ ಮಟ್ಟದಲ್ಲಿ ಮಾತ್ರವಲ್ಲದೇ ರಾಷ್ಟ್ರ ಮಟ್ಟದಲ್ಲಿಯೂ ಸಹ ನಮ್ಮ ರಾಜ್ಯದ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಬೇಕು ಹಾಗೂ ಹೆಚ್ಚು ಅಂಕಗಳನ್ನು ಗಳಿಸಬೇಕು ಎನ್ನುವ ಕಾರಣಕ್ಕಾಗಿ ಪಿ.ಯು.ಸಿ., ಘಟದಲ್ಲಿಯೇ ಅವರುಗಳಿಗೆ ಅವಶ್ಯಕವಾದ ತರಬೇತಿಗಳನ್ನು ಶಾಲೆಗಳಲ್ಲಿ ಮತ್ತು ಆನ್‌ಲೈನ್ ಮುಖಾಂತರ ನೀಡುವ ಕೆಲಸಗಳಾಗುತ್ತಿವೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 2765**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಕ್ರಮ ಸಂಖ್ಯೆ (ಅ) ರಲ್ಲಿ ಕೇಳಿರುವ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬಂದಿರುವುದಿಲ್ಲ. ಮುಂದುವರೆದು, ಕ್ರಮ ಸಂಖ್ಯೆ (ಇ) ರಲ್ಲಿ ಕೇಳಿರುವ ಪ್ರಶ್ನೆಗೆ, ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರಿಸಿರುತ್ತಾರೆ. ಈ ವಿಚಾರದಲ್ಲಿ ಸರ್ಕಾರವು ತೆಗೆದುಕೊಳ್ಳುವ ಕ್ರಮದ ಬಗ್ಗೆಯೂ ಸಹ ನಾನೇ ತಿಳಿಸಬೇಕೇ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಸರ್ಕಾರವು ನಿರ್ದಿಷ್ಟವಾಗಿ ಇಂತಹ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ತಿಳಿಸಬೇಕಲ್ಲವೇ? ಬಿ.ಎಡ್., ಕೋರ್ಸ್ ಎಂದು ಹೇಳಿದರೆ, ಇದನ್ನು ಕಡ್ಡಾಯಗೊಳಿಸಲಾಗಿದೆ. ಬಿ.ಎಡ್. ಕಾಲೇಜುಗಳಲ್ಲಿ ಪಾಠ ಮಾಡುವ ಶಿಕ್ಷಕರು ಭಾವಿ ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಾರೆ. ಆದರೆ, ಇಂತಹ ಬಿ.ಎಡ್., ಕಾಲೇಜುಗಳಲ್ಲಿಯೇ ಬೋಧಕರು ಇಲ್ಲವೆಂದು ಹೇಳಿದರೆ, ನಾವು ಗುಣಮಟ್ಟದ ಶಿಕ್ಷಣವನ್ನು ಹೇಗೆ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಕೇಳಬಯಸುತ್ತೇನೆ. ಬಿ.ಎಡ್., ಕಾಲೇಜುಗಳಲ್ಲಿಯೇ ವಿದ್ಯಾರ್ಥಿಗಳಿಗೆ ಈ ರೀತಿಯ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿಸುತ್ತಾರೆ. ಇದರ ಜೊತೆಗೆ, ಬಿ.ಎಡ್., ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರದಲ್ಲಿ ಸರ್ಕಾರ ಕ್ರಮಕೈಗೊಳ್ಳಬೇಕು. ಇದನ್ನು "ಅಗತ್ಯ ಸೇವೆ" ಎಂಬುದಾಗಿ ಮಾಡಬೇಕು. ಹೀಗಾಗಿ ಯಾವಾಗ ಹುದ್ದೆಗಳು ಖಾಲಿಯಾಗುತ್ತವೆಯೋ ತಕ್ಷಣವೇ ಅವುಗಳನ್ನು ಭರ್ತಿ ಮಾಡುವ ಕೆಲಸಗಳಾಗಬೇಕು. ಅನುದಾನಿತ ಶಿಕ್ಷಣ ಸಂಸ್ಥೆಗಳು ಬಹಳ ವರ್ಷಗಳಿಂದ ನಡೆದುಕೊಂಡು ಬರುತ್ತಿವೆ. ಕೆಲವೊಂದು ಅನುದಾನಿತ ಬಿ.ಎಡ್., ಕಾಲೇಜುಗಳಲ್ಲಿ ಬೋಧಕರೇ ಇಲ್ಲ. ಈ ರೀತಿಯಾಗಿ ಕೇವಲ ಒಂದೆರೆಡು ಕಾಲೇಜುಗಳಲ್ಲಿ ಮಾತ್ರವಲ್ಲದೇ ರಾಜ್ಯದ ಎಲ್ಲಾ ಕಾಲೇಜುಗಳಲ್ಲಾಗಿದೆ. ಸರ್ಕಾರಿ ಬಿ.ಎಡ್., ಕಾಲೇಜುಗಳಲ್ಲಿ ತಕ್ಷಣವೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ತಿಳಿಸುತ್ತಾರೆ. ಆದರೆ, ಅನುದಾನಿತ ಕಾಲೇಜಿನ ಆಡಳಿತ ಮಂಡಳಿಯವರು ಈಗಗಾಲೇ ಬಹಳಷ್ಟು ಹುದ್ದೆಗಳಿಗೆ ಮನವಿಗಳನ್ನು ಸಲ್ಲಿಸಿದ್ದಾರೆ. ಪ್ರಸ್ತುತ ಅನುದಾನಿತ ಬಿ.ಎಡ್., ಕಾಲೇಜುಗಳಲ್ಲಿ ಸಾಕಷ್ಟು ಹುದ್ದೆಗಳು

ಖಾಲಿ ಇದ್ದು, ಈ ಬಗ್ಗೆ ಅವರು ಮನವಿಗಳನ್ನು ಸಲ್ಲಿಸಿದ್ದು, ಇವುಗಳು ಸರ್ಕಾರದ ಬಳಿ ಇವೆ. ಹೀಗಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ನಾನು ಪ್ರಶ್ನಿಸುತ್ತೇನೆ. ವಾಣಿಜ್ಯ ವಿಷಯವನ್ನು ವ್ಯಾಸಂಗ ಮಾಡಿದ ಪದವೀಧರ ವಿದ್ಯಾರ್ಥಿಗಳಿಗೆ ಬಿ.ಎಡ್., ಕೋರ್ಸ್‌ಗಳನ್ನು ವ್ಯಾಸಂಗ ಮಾಡಲು ಅವಕಾಶವನ್ನು ನೀಡಬೇಕು. ಆದರೆ, ಅಲ್ಲಿ ವಾಣಿಜ್ಯ ವಿಷಯಗಳನ್ನು ಇಟ್ಟಿದ್ದಾರೆ. ಈ ವಿಚಾರಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿಲ್ಲ. ಆದರೂ ಸಹ ದಯಮಾಡಿ ಸರ್ಕಾರವು ಇದರ ಬಗ್ಗೆ ಉತ್ತರಿಸಬೇಕು. ಈ ವಿಚಾರವು ಬಹಳ ಗಂಭೀರವಾಗಿದೆ. ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಬೇಕಾಗಿದೆ. ಆದರೆ, ಬಿ.ಎಡ್., ಕಾಲೇಜುಗಳಲ್ಲಿಯೇ ಬೋಧಕರು ಇಲ್ಲವೆಂದು ಹೇಳಿದರೆ, ತುಂಬಾ ಕಷ್ಟವಾಗುತ್ತದೆ. ದಯಮಾಡಿ ಈ ವಿಚಾರದಲ್ಲಿ ಸರ್ಕಾರವು ಸೂಕ್ತ ಕ್ರಮ ವಹಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

**ಡಾ॥ ಸಿ.ಎಸ್.ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಬಿ.ಎಡ್., ಕಾಲೇಜುಗಳು 2014 ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಿಂದ ಉನ್ನತ ಶಿಕ್ಷಣಕ್ಕೆ ಹಸ್ತಾಂತರಗೊಳ್ಳುತ್ತವೆ. ಕಾಲೇಜು ಶಿಕ್ಷಣದಡಿ ಬರುವ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 2015 ನೇ ಸಾಲಿನವರೆಗೂ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಇವತ್ತಿನ ದಿವಸ ಅವಕಾಶ ನೀಡಲಾಗಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಯಾವುದೇ ಬೋಧಕ ಸಿಬ್ಬಂದಿಗಳನ್ನು ನೀಡಿಲ್ಲವೆಂದಿಲ್ಲ. ಒಟ್ಟಾರೆಯಾಗಿ ಅಲ್ಲಿ 553 ಹುದ್ದೆಗಳು ಮಂಜೂರಾಗಿದ್ದು, ಹಾಲಿ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳು 317 ಆಗಿರುತ್ತದೆ. ಹೀಗಾಗಿ 236 ಹುದ್ದೆಗಳು ಖಾಲಿ ಇವೆ. ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತಕ್ಷಣವೇ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಬಿ.ಎಡ್., ಕಾಲೇಜುಗಳಲ್ಲಿ ಪಂಚವಾರ್ಷಿಕ ಕಾರ್ಯಕ್ರಮಗಳು ಆಗಬೇಕಾಗಿತ್ತು.

(ಮುಂದು)

650/28-3-2022/12-10/**bkp-gr**

**ಡಾ॥ ಸಿ.ಎಸ್. ಅಶ್ವಥ್ ನಾರಾಯಣ (ಮುಂದು)**

ಹೀಗಾಗಿ ಇವತ್ತು ಈ ಒಂದು B.Ed., programme ಈ ಮಾಡಲ್‌ನಲ್ಲಿಯೇ ಇರಬೇಕಾ, revamp ಆಗಿ integrate ಆಗುವಂತಹದ್ದಾಗುತ್ತದೆ. ಹೀಗಾಗಿ ಇಂದಿನ ಒಂದು ವ್ಯವಸ್ಥೆಯಿಂದ ಆ ಕಾಲೇಜುಗಳು ಎಷ್ಟು ಪ್ರಸ್ತುತವಾಗಿವೆ ಎಂದು ಗೊತ್ತಾಗುತ್ತದೆ. ಇವತ್ತು ಹೇಗೆ ವ್ಯವಸ್ಥೆ ನಡೆಯುತ್ತಿದೆ ಎನ್ನುವುದು ಸಹ ಗೊತ್ತಿದೆ. ಅದು ಬದಲಾವಣೆಯಾಗಬೇಕಾಗಿದೆ. ಕಳೆದ 3-4 ವರ್ಷಗಳಿಂದಲೂ completely revise ಆಗಿ revamp ಆಗಬೇಕಾಗುತ್ತದೆ. ಅದು revamp ಆಗುವುದಕ್ಕೂ ಪ್ರಯತ್ನ ಆಗುತ್ತಿದೆ. ಅದನ್ನು ನೋಡಿಕೊಂಡು ಅದರ ಜೊತೆಯಲ್ಲಿಯೇ ಖಾಲಿಯಿರುವಂತಹದ್ದನ್ನು ಭರ್ತಿ ಮಾಡುವಂತಹದ್ದಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದಯಮಾಡಿ ತಮ್ಮ ಅನುಭವವನ್ನು ಶಿಕ್ಷಣ ಸಚಿವರ ಜೊತೆ ಹಂಚಿಕೊಳ್ಳಬೇಕಾಗುತ್ತದೆ. ತಾವು ಇಷ್ಟೊಂದು ಮೌನವಾಗಿದ್ದರೆ ಹೇಗೆ? ವಿಚಾರ ನಮಗೆಲ್ಲಾ ಗೊತ್ತಿದೆ. 40% ಗಿಂತ ಹೆಚ್ಚು ಖಾಲಿ ಇದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಇಡೀ ರಾಷ್ಟ್ರದಲ್ಲಿ ಮೊಟ್ಟ ಮೊದಲ ಬಾರಿಗೆ New Education Policy ತರುತ್ತಿದ್ದೇವೆಂದು ಹೇಳಿದ್ದಾರೆ. ನಾವು ಅದಕ್ಕೆ ಪೂರ್ಣ ಸಹಕಾರವನ್ನು ಕೊಟ್ಟಿದ್ದೇವೆ. ಮತ್ತೆ, ಇಡೀ ರಾಷ್ಟ್ರದಲ್ಲಿ ತಮಗೆ ಹೆಸರು ಬರುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಮೌನ ವಹಿಸಿದರೆ ಹೇಗೆ? ತಾವು ಮೌನ ವಹಿಸಬಾರದು. ನಮ್ಮ ಕೈಯಲ್ಲಿ ಆಗದಿದ್ದಾಗ ತಾವು ಸರ್ಕಾರದ ಕಣ್ಣನ್ನು ತೆರೆಸಬೇಕಾಗುತ್ತದೆ. ನೀವು ಯಾವ ರೀತಿಯಲ್ಲಾದರೂ ಹೇಳಿ ಪ್ರಚೋದನೆ ಮಾಡುವುದರ ಮೂಲಕವಾದರೂ ಸರ್ಕಾರದ ಕಣ್ಣನ್ನು ತೆರೆಯಿರಿ.

**ಡಾ|| ಸಿ.ಎಸ್. ಅಶ್ವಥ್ ನಾರಾಯಣ:** ಮಾನ್ಯ ಸಭಾಪತಿಯವರೆ, ಭರ್ತಿ ಮಾಡುವಲ್ಲಿ ಕ್ರಮ ವಹಿಸುತ್ತೇವೆಂದು ಈಗಾಗಲೇ ಹೇಳಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಮುಂದೆ ನಮ್ಮ ಅರ್ಜಿಗಳೆಲ್ಲವೂ ಇದೆ. ಅಧಿಕಾರಿ ವರ್ಗದವರೂ ಸಹ ಇಲ್ಲಿಯೇ ಕುಳಿತಿದ್ದಾರೆ. ಅವರು ಸಹ ಕೇಳಿಸಿಕೊಳ್ಳುತ್ತಾರೆ. ಈಗ ತಾವು ಹೇಳಬೇಕು.

**ಡಾ|| ಅಶ್ವಥ್ ನಾರಾಯಣ:** ಮಾನ್ಯ ಸಭಾಪತಿಯವರೆ, ಭರ್ತಿ ಮಾಡುವಲ್ಲಿ ಕ್ರಮ ವಹಿಸುತ್ತೇವೆಂದು ಹೇಳುತ್ತಲೇ ಇದ್ದೇವೆ.

**ಶ್ರೀ ಎಸ್.ಎಲ್.ಬೋಜೇಗೌಡ:–** ಮಾನ್ಯ ಸಭಾಪತಿಯವರೆ, ಅಧಿಕಾರಿಗಳು ನಾವು ಹೇಳುವುದನ್ನು ಕೇಳಿಸಿಕೊಳ್ಳುತ್ತಿದ್ದಾರೆ. ಮಾನ್ಯ ಸಚಿವರು ಹೇಳುವುದನ್ನೂ ಸಹ ಕೇಳಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ, ಮುಂದಿನ ತಿಂಗಳ ಒಳಗಾಗಿ ಮುಗಿಸುತ್ತೇವೆಂದು ಮಾನ್ಯ ಸಚಿವರು ಹೇಳಬೇಕು.

**ಸಭಾಪತಿಯವರು:–** ಹುದ್ದೆಗಳನ್ನು ಬೇಗನೆ ತುಂಬುವುದಕ್ಕೆ ಸಚಿವರು ವ್ಯವಸ್ಥೆ ಮಾಡಬೇಕು.

**ಪ್ರಶ್ನೆ ಸಂಖ್ಯೆ 2754**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಾನು ಪ್ರಶ್ನೆ ಕೇಳಬೇಕಾಗಿರುವುದು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ. ಆದರೆ, ನನ್ನ ಈ ಪ್ರಶ್ನೆಯನ್ನು ಹೇಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಕೊಟ್ಟಿದ್ದಾರೆ? ನನಗೆ ಗೊತ್ತಿಲ್ಲ.

**ಸಭಾಪತಿಯವರು:–** ತಾವು ಮೊದಲು ಪ್ರಶ್ನೆಯನ್ನು ಕೇಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಾನು ಈ ಪ್ರಶ್ನೆಯನ್ನು ಸಚಿವರಲ್ಲಿ ಕೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ತಾವು ಯಾವ ಸಚಿವರಿಗೆ ಕೇಳುತ್ತಿದ್ದೀರಿ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೆ, ಯಾವ ಸಚಿವರು ಎಂದು ನಾನು ಹೇಗೆ ಹೇಳಲಿ, ನನ್ನ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವರು ಉತ್ತರ ನೀಡಬೇಕು, ತಾವು ಈ ಪ್ರಶ್ನೆಯನ್ನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಸಚಿವರಿಗೆ ಕಳುಹಿಸಿದ್ದೀರಿ.

**ಸಭಾಪತಿಯವರು:–** ಆಯಿತು, ಸಚಿವರು ಇದಕ್ಕೆ ಉತ್ತರ ನೀಡಬೇಕು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಈ ನನ್ನ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ತಂತ್ರಜ್ಞಾನ ಸಚಿವರು ಉತ್ತರಿಸಬೇಕು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಾನು ಈ ಪ್ರಶ್ನೆಯನ್ನು ಈ ಹಿಂದೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾಗಿದ್ದ ಮಾನ್ಯ ಸುರೇಶ್ ಕುಮಾರ್‌ರವರಿಗೂ ಕೂಡ ಕೇಳಿದ್ದೆ. ಆದರೂ ಕೂಡ ಅದರಲ್ಲಿ ಏನೂ ಬದಲಾವಣೆಯಾಗಲಿಲ್ಲ. ನನಗೆ ಶಿಕ್ಷಕರನ್ನು ಉತ್ಪತ್ತಿ ಮಾಡುವುದು ಉನ್ನತ ಶಿಕ್ಷಣ ಸಚಿವರೋ ಅಥವಾ ಪ್ರಾಥಮಿಕ ಹಾಗೂ

ಪ್ರೌಢ ಶಿಕ್ಷಣ ಸಚಿವರೋ ಎಂದು ಹೇಳಬೇಕು. ಪ್ರಾಥಮಿಕ ಶಿಕ್ಷಣದಲ್ಲಿ ಕಲಿಸುವಂತಹ ಶಿಕ್ಷಕರನ್ನು ನಿರ್ಮಾಣ ಮಾಡುವುದು ಉನ್ನತ ಶಿಕ್ಷಣ ಸಚಿವರು. ಆದ್ದರಿಂದ, ನನ್ನ ಪ್ರಶ್ನೆ ಇವರಿಗೆ ಹೇಗೆ ಬರುತ್ತದೆ? ಅವರಿಗೆ ಹೋಗಬೇಕಲ್ಲವೇ? ನಾನು ಶಿಕ್ಷಕರನ್ನು ನಿರ್ಮಾಣ ಮಾಡುವುದರ ಬಗ್ಗೆ ಕೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಏನು ಕೇಳುತ್ತಿದ್ದಾರೆಂದರೆ, B.Ed., ಆದವರಿಗೆ, ಡಿಗ್ರಿ ಆದವರ ಬಗ್ಗೆ ಕೇಳುತ್ತಿದ್ದಾರೆ.

**ಡಾ|| ಸಿ.ಎಸ್. ಅಶ್ವಥ್ ನಾರಾಯಣ:–** ಸಭಾಪತಿಯವರೆ, ಇದರಲ್ಲಿ ಟಿ.ಸಿ.ಹೆಚ್., ಮಾಡಿದವರು ಸಹ ಇದ್ದಾರೆ. ಇದರಲ್ಲಿ ಹೆಚ್ಚು ಕಡಿಮೆ....

**ಸಭಾಪತಿಯವರು:–** ಮಾನ್ಯ ಸದಸ್ಯರು ಯಾವ ಶಿಕ್ಷಕರು ಎಂದು ಕೇಳಿಲ್ಲ ಹೈಸ್ಕೂಲ್ ಅಥವಾ ಪ್ರೈಮರಿ ಸ್ಕೂಲ್ ಶಿಕ್ಷಕರು ಎಂದು ಕೇಳಬೇಕು. B.Ed., ಪ್ರೈಮರಿಗೆ ಬರುತ್ತದೆ.

**ಡಾ|| ಸಿ.ಎಸ್. ಅಶ್ವಥ್ ನಾರಾಯಣ:–** ಸಭಾಪತಿಯವರೆ, ತಾವು ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುವ ತಮಗೆ ಎಲ್ಲವೂ ಗೊತ್ತಿದೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಮಾನ್ಯ ಸದಸ್ಯರು ಬಹಳ ಯೋಗ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೂ ಮುಂಚೆ ಮಾನ್ಯ ಎಸ್. ಎಲ್.ಭೋಜೇಗೌಡರು ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಇಬ್ಬರು ಸಚಿವರು ಸಹ ಉಪಸ್ಥಿತರಿದ್ದಾರೆ. ನಾನು ವಿನಂತಿ ಮಾಡುವುದೇನೆಂದರೆ, ಹೇಗೆ ಇದ್ದರೂ ಸಹ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿ ಮಾಡುತ್ತಿದ್ದೀರಿ. 4 ವರ್ಷದ B.Ed., ಆಗಬೇಕೆನ್ನುವುದಾದರೆ ಕರ್ನಾಟಕ ರಾಜ್ಯದ ಮಟ್ಟಿಗೆ ತೊಂದರೆ ಏನಾಗಿದೆ ಎಂದರೆ, ಈ ಶಾಲಾ ಶಿಕ್ಷಣದಲ್ಲಿ ಶಿಕ್ಷಕರ ಶೈಕ್ಷಣಿಕ ವಿದ್ಯಾರ್ಹತೆ B.Ed., ಇರಬೇಕು, ಇದು ಸರ್ಕಾರಿ ವ್ಯವಸ್ಥೆಯಲ್ಲಿ ಪ್ರಾಥಮಿಕ

ಹಾಗೂ ಪ್ರೌಢ ಶಿಕ್ಷಣ ಸಚಿವರ ಕೈಯಲ್ಲಿ ಇದೆ, ಅನುದಾನಿತ ವ್ಯವಸ್ಥೆಯಲ್ಲಿ ಉನ್ನತ ಶಿಕ್ಷಣ ಸಚಿವರ ಕೈಯಲ್ಲಿ ಇದೆ. ಈ ಶಿಕ್ಷಕರ ತರಬೇತಿ D.I.E.T.,( District Institutions of Education and Training) ಗಳು ಮತ್ತು C.E.T., (Collaborators for Transforming Education Programme) ಮಾಡುತ್ತದೆ. ಅವರಿಗೆ ಕೊಡಬೇಕಾಗಿರುವ ಕೆಲಸವನ್ನು ಯೂನಿವರ್ಸಿಟಿ ಮಾಡುತ್ತದೆ. ಕರ್ನಾಟಕದಲ್ಲಿ ಶಿಕ್ಷಕರ ಶಿಕ್ಷಣವನ್ನು streamline ಮಾಡುವ ಅಗತ್ಯ ಇದೆ. ಇಬ್ಬರು ಸಚಿವರು ಅದರ ಬಗ್ಗೆ ಮನಸ್ಸು ಮಾಡಿ ಶಿಕ್ಷಕರ ಶಿಕ್ಷಣವನ್ನು ಒಂದು ಸೂರಿನಡಿಯಲ್ಲಿ ತಂದು ಅದಕ್ಕೆ ಕಾಯಕಲ್ಪ ಕೊಡುವಂತಹ ಕೆಲಸ ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಇಬ್ಬರು ಸಚಿವರೂ ಕೂಡ ಇಲ್ಲಿಯೇ ಇದ್ದಾರೆ. ಒಳ್ಳೆಯ ಶಿಕ್ಷಕರನ್ನು ಉತ್ಪತ್ತಿ ಮಾಡಬೇಕಾಗಿರುವುದು ಉನ್ನತ ಶಿಕ್ಷಣ ಸಚಿವರ ಜವಾಬ್ದಾರಿ. ಬಹುಶಃ ಮಾನ್ಯ ಉನ್ನತ ಶಿಕ್ಷಣ ಸಚಿವರು ಬಹಳಷ್ಟು ಉತ್ತರವನ್ನು ಕೊಡುವಾಗ ಏನು ಹೇಳಿದರು ಎಂದರೆ, ಇದು ಸ್ಪರ್ಧಾತ್ಮಕ ಯುಗ ಅಲ್ಲವೇ? ಆ ಪರೀಕ್ಷೆ ಸ್ಪರ್ಧಾತ್ಮಕವಾಗಿರುತ್ತದೆ. ಆದರೆ, ಆ ಶಿಕ್ಷಕರು ಹೇಗೆ ಇರುತ್ತಾರೆಂದರೆ ನಾನು ಪಿ.ಯು.ಸಿ., ಯಲ್ಲಿ ಗಣಿತವನ್ನು ಓದುವಾಗ ಗಣಿತ ಪುಸ್ತಕ ಬರೆದವರು ಅಂದರೆ, ಇಲ್ಲಿ ಅವರ ಹೆಸರನ್ನು ಹೇಳುವುದಿಲ್ಲ. ಇವತ್ತು ಅವರದ್ದೇ ಪುಸ್ತಕವನ್ನು ಇಡೀ ನಮ್ಮ ಕರ್ನಾಟಕ ರಾಜ್ಯದ ಪಿ.ಯು.ಸಿ., ಯಲ್ಲಿ ಮಕ್ಕಳು ಓದುತ್ತಿದ್ದಾರೆ. ನನಗೆ ಆ ಪಾಠವನ್ನು ಮಾಡಲಿಕ್ಕೆ ಅವರೇ ನನಗೆ ಉಪನ್ಯಾಸಕರಾಗಿ ಬಂದರು. ಅವರ ಸ್ಥಿತಿ ಹೇಗಿತ್ತು ಎಂದು ಹೇಳಿದರೆ ಅಷ್ಟು ದೊಡ್ಡ ಪುಸ್ತಕವನ್ನು ಬರೆದವರೆ ನಮಗೆ ಪಾಠ ಮಾಡಲಿಕ್ಕೆ ಬರುತ್ತಾರೆಂದು ನಮಗೆ ಹೆಮ್ಮೆ. ಆದರೆ, ಅವರು ಪಾಠ ಮಾಡಿದ್ದು, ಯಾವುದೂ ಸಹ ನಮಗೆ ಅರ್ಥವಾಗುತ್ತಿರಲಿಲ್ಲ. ಯಾವ ವಿದ್ಯಾರ್ಥಿಗಳಿಗೂ ಅರ್ಥವಾಗುವುದಿಲ್ಲ. ಅವರು ೯೦, ೮೦ ಅಂಕಗಳನ್ನು ತೆಗೆದುಕೊಂಡು ಬಂದು ಉಪನ್ಯಾಸಕರಾಗುತ್ತಾರೆ. ಆದರೆ, ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಪಾಠ

ಮಾಡುವಂತಹ ಒಂದು ತಾnders ಅಥವಾ Unders ನ್ಯಾಕು ಅವರಿಗೆ ಇರಲಿಲ್ಲ. ಮತ್ತೆ, ಇಂಗ್ಲೀಷ್‌ನಲ್ಲಿ 'Understood?" ಎಂದು ಕೇಳುತ್ತಿದ್ದರು, ಆಗ ನನಗೆ understood ಆಗಲೂ ಇಲ್ಲ, ಏನೂ ಇಲ್ಲ. ಮತ್ತೆ ಕನ್ನಡದಲ್ಲಿ ತಿಳಿಯಿತೇ ಎಂದು ಕೇಳುತ್ತಿದ್ದರು. ನನಗೆ ತಿಳಿಯುವುದೇ ಇಲ್ಲ, ಮಾನ್ಯ ಸಭಾಪತಿಯವರೆ, ಪಟ್ಟಣದಲ್ಲಿ, ನಗರ ಪ್ರದೇಶದಲ್ಲಿ ನಾವು ಏನು ಮಾಡುತ್ತೇವೆ ಅಂದರೆ, ಟ್ಯೂಷನ್‌ಗೆ ಹೋಗುತ್ತೇವೆ. ಅಲ್ಲಿ ಕಲಿತುಕೊಂಡು ಬರುತ್ತೇವೆ. ಆದರೆ, ಗ್ರಾಮೀಣ ಪ್ರದೇಶದ ಮಕ್ಕಳ ಗತಿ ಏನು ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾವು ಚಿಂತನೆ ಮಾಡಬೇಕು. ಅದಕ್ಕೋಸ್ಕರ ನಾನು ಏನೂ ಹೇಳುವುದಿಲ್ಲ. ಆದ್ದರಿಂದ, ನೋಡಿ ತಿಳಿ, ಮಾಡಿ ಕಲಿ, ಇದೇ ವಿಜ್ಞಾನ. ಮಾನ್ಯ ಸಚಿವರು ಉತ್ತರವನ್ನು ಚೆನ್ನಾಗಿ ಕೊಟ್ಟಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಪ್ರಯತ್ನವನ್ನು ಮಾಡಿದ್ದೀರಿ. ಗುರು ಚೇತನದ ಪ್ರಾಥಮಿಕ ಶಿಕ್ಷಣವನ್ನು ಅವರು ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಕೊರತೆಯಿಂದ ಮಕ್ಕಳು ಸದರಿ ಶಿಕ್ಷಣದ ಆಸಕ್ತಿ ಕಳೆದುಕೊಳ್ಳಬಾರದು ಎಂದು ಹೇಳಿ ...

**ಸಭಾಪತಿಯವರು:–** ಸಚಿವರು ಉತ್ತರವನ್ನು ಹೇಳಬೇಕು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಮತ್ತೊಂದು ಪ್ರಶ್ನೆ ಇದೆ. ಪ್ರೌಢಶಾಲೆ ವಿಜ್ಞಾನ ಪ್ರಯೋಗಾಲಯ ಎಂದು ಹೇಳಿದ್ದಾರೆ. ನಮ್ಮ ನಗರದ ವಿಜ್ಞಾನ ಪ್ರಯೋಗಾಲಯ ಚೆನ್ನಾಗಿದೆ. ಆದರೆ, ಗ್ರಾಮೀಣ ಪ್ರದೇಶದ ವಿಜ್ಞಾನ ಪ್ರಯೋಗಾಲಯ ಚೆನ್ನಾಗಿಲ್ಲ. ಅನುದಾನವನ್ನು ಕೊಡುತ್ತೇವೆಂದು ಹೇಳಿದ್ದೀರಿ. ನೀವು ಗ್ರಾಮೀಣ ಪ್ರದೇಶದ ಎಲ್ಲಾ ಸರ್ಕಾರಿ ವಿಜ್ಞಾನ ಶಾಲೆಗಳಿಗೆ ಬಂದರೆ, ಆ ಲ್ಯಾಬ್‌ಗಳಲ್ಲಿ ಏನೂ ಇರುವುದಿಲ್ಲ. ಹೀಗಿದ್ದರೆ, ಮಕ್ಕಳಿಗೆ ಕಲಿಯಲಿಕ್ಕೆ ಎಲ್ಲಿಂದ ಆಸಕ್ತಿ ಬರುತ್ತದೆ? ಮಕ್ಕಳಿಗೆ ಆಸಕ್ತಿ ಬರುವ ರೀತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತರಬೇತಿ ಕೊಡಬೇಕು. ನಾನು ಉನ್ನತ ಶಿಕ್ಷಣ ಸಚಿವರಲ್ಲಿ ನಾನು ಕೇಳ ಬಯಸುವುದೇನೆಂದರೆ, ಏನು ಹೊಸ ಶಿಕ್ಷಣ ನೀತಿಯನ್ನು ನೀವು ಮಾಡಿದ್ದೀರಿ. ಅದರಲ್ಲಿ ಕಲಿಸುವಂತಹ ಸಿಲಬಸ್ ಇರಬೇಕು. ಅಂತಹ ಒಂಧು ಸಿಲಬಸ್ ಏನಾದರೂ

ಇದ್ದರೆ, ಕೇವಲ ಬಿ.ಎಸ್ಸಿಯಲ್ಲಿ ಪಾಠ ಮಾಡುವಂತಹದ್ದು ಮಾತ್ರ ಇರುತ್ತದೆ. ಇದಕ್ಕೆ ಪ್ರತ್ಯೇಕ ಸಿಲಬಸ್ ಏನಾದರೂ ಇದೆಯೇ?

**ಶ್ರೀ. ಬಿ.ಸಿ. ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಉತ್ತರದಲ್ಲಿ ಸಾಕಷ್ಟು ವಿಜ್ಞಾನದ ಮತ್ತು ಗಣಿತ ವಿಷಯದ ಕ್ವಾಲಿಟಿಯನ್ನು ಹೆಚ್ಚು ಮಾಡುವುದಕ್ಕೆ ನಮ್ಮ ಪ್ರೈಮರಿ ಮತ್ತು ಸೆಕೆಂಡರಿ ಬೋರ್ಡ್‌ನಿಂದ ಏನೇನು ಮಾಡಿದ್ದೇವೆ, ಎನ್ನುವುದರ ಬಗ್ಗೆ ಹೇಳಿದ್ದೇವೆ. ಅದಕ್ಕೋಸ್ಕರವೇ ರಾಜ್ಯದಲ್ಲಿ ಈ ಕ್ವಾಲಿಟಿಯನ್ನು ಹೆಚ್ಚಿಸಬೇಕೆಂದು ಮೇಸ್ಟರ್‌ಗಳನ್ನು ತೆಗೆದುಕೊಳ್ಳುವಾಗಲೂ ಸಹಿತ T.E.T., introudce ಮಾಡಿ, ಡಿಗ್ರಿಯಲ್ಲೂ ಸಹಿತ ಇಷ್ಟು ಅಂಕಗಳನ್ನು ತೆಗೆದುಕೊಂಡಿರಬೇಕು, ಆ ರೀತಿಯಲ್ಲಿಯೇ ಇರುವವರನ್ನು ಮಾಡಬೇಕೆಂದು ಮಾಡಿ, ಆದಾದಮೇಲೆ ಸಿಇ.ಟಿ., ಪರೀಕ್ಷೆಯನ್ನು ಮಾಡಿ ಸಿ.ಇ.ಟಿ., ಯಲ್ಲೂ ಕನಿಷ್ಟ ಅಂಕಗಳನ್ನು ನಿಗದಿಪಡಿಸಿ, ಆ ಅಂಕಗಳ ಆಧಾರದಲ್ಲಿ ಮೆರಿಟ್ ಮೇಲೆ ಶಿಕ್ಷಕರುಗಳನ್ನು ತೆಗೆದುಕೊಳ್ಳುವಂತಹ ಪ್ರಯತ್ನ ಆಗುತ್ತಿದೆ. ಮತ್ತೆ ಆ ಟೀಚರ್ಸ್‌ಗಳಿಗೆ ಬೇರೆ ಬೇರೆ ತರಬೇತಿಯನ್ನು ಕೊಡುವಂತಹದ್ದಾಗುತ್ತದೆ. ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಕೇಂದ್ರ ಸರ್ಕಾರದ ಪ್ರೇರಣೆಯಿಂದಲೇ Atal Tinkering Labs (ATL) ಸಹಿತ ಮಾಡುತ್ತಿದ್ದೇವೆ. ಏಕೆಂದರೆ, ಅಲ್ಲಿ ಮಕ್ಕಳಿಗೆ ಆಸಕ್ತಿ ಬರಲಿ ಎನ್ನುವ ಉದ್ದೇಶದಿಂದ ಮಾಡುತ್ತಿದ್ದೇವೆ. ಅ ಲ್ಯಾಬ್‌ಗಳಲ್ಲಿ ಏನೋ ವಿಜ್ಞಾನಿಗಳನ್ನು ಮಾಡುತ್ತೇವೆಂದಲ್ಲ. ವಿಜ್ಞಾನದಲ್ಲಿ ಆಸಕ್ತಿ ಬರಲಿ ಎನ್ನುವ ಕಾರಣಕ್ಕೋಸ್ಕರ ಅಲ್ಲಿ ಮಾಡಲಾಗುತ್ತಿದೆ. INSPIRE (Innovation in Science Pursuit for Inspired Research) Award ಗಳನ್ನು ಕೊಡುವಂತಹ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಖಂಡಿತವಾಗಿಯೂ ಸಹ ನಮ್ಮಲ್ಲಿ ಕ್ವಾಲಿಟಿ ಟೀಚರ್ಸ್‌ನ ಕೊರತೆ ಇದೆ. ಆ ಕ್ವಾಲಿಟಿ ಟೀಚರ್‌ಗಳನ್ನು ತೆಗೆದುಕೊಳ್ಳುವಲ್ಲಿ ಸ್ವಲ್ಪ ಟೀಚರ್‌ಗಳನ್ನು ಕೊಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಅದನ್ನು ಸರಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 2740**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳರುವಂತಹ ಪ್ರಶ್ನೆ ಜನಸಾಮಾನ್ಯರು ಬಳಸತಕ್ಕಂತಹ ಪೆಟ್ರೋಲ್, ಡೀಸಲ್, ಕಬ್ಬಿಣ, ಅಡುಗೆ ಎಣ್ಣೆ, ಬೇಳೆ ಮತ್ತು ಇತರ ದಿನಬಳಕೆ ವಸ್ತುಗಳ ಬೆಲೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಂದು ಪ್ರಶ್ನೆ ಕೇಳರುವುದಕ್ಕೆ ಬಂದಿದೆ ಎಂದು ಹೇಳದ್ದಾರೆ. ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಕೇಳರುವುದಕ್ಕೆ ಚಿಲ್ಲರೆ,ಸಗಟು ವ್ಯಾಪಾರಿಗಳು ಮತ್ತು ದೊಡ್ಡ ಮಟ್ಟದ ಗ್ರಾಹಕರುಗಳಗೆಗ ದಾಸ್ತಾನು ಮಿತಿಯನ್ನು ನಿಗಧಿಪಡಿಸಿ ಆದೇಶಿಸಲಾಗಿದೆ ಎಂದು ಹೇಳದ್ದಾರೆ. ಇದರೊಂದಿಗೆ ಪೆಟ್ರೋಲ್ ಮತ್ತು ಡೀಸಲ್ ಪಂಪ್‌ಗಳನ್ನು ಸಹ ಇಲಾಖೆ ವತಿಯಿಂದ ತಪಾಸಣಶೆ ನಡೆಸಿ ಸುಗಮ ಹಾಗೂ ನಿಖರ ಪ್ರಮಾಣದಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳದ್ದಾರೆ. ಆದರೆ, ಸಮಸ್ಯೆಗೆ ಎಲ್ಲಿಯೂ ಪರಿಹಾರ ಮಾಡುವ ದಿಕ್ಕಿನಲ್ಲಿ ಉತ್ತರ ಇರುವುದಿಲ್ಲ. ಉಕ್ರೇನ್ ಯುದ್ಧದ ದೃಷ್ಟಿಯಲ್ಲಿ ಈ ಬೆಲೆಗಳು ಏರಿಕೆಯಾಗಿವೆ. ವಿಶೇಷವಾಗಿ ಸೂರ್ಯಕಾಂತ್ ಎಣ್ಣೆ ಇವತ್ತು ಲೀಟರ್‌ಗೆ ೫೦ರಿಂದ ೬೦ ರೂಪಾಯಿಗಳಗೆ ಏರಿದೆ.

**(ಮುಂದು)**

**(651) 28.03.2022 12.20 ಎಸ್‌ವಿ-ಎಂಡಿ** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ರವಿ (ಮುಂದು):-**

ಅದಕ್ಕೆ ಪರ್ಯಾಯವಾಗಿ ಏನು ಮಾಡಿದ್ದೀರಿ? ದಾಸ್ತಾನು ಮಿತಿಗೊಳಸಿರುವುದು ನಿಜ. ಬೇಡಿಕೆಗೆ ತಕ್ಕಂತೆ ಪೂರೈಸಲು ಏನು ಮಾಡಿದ್ದೀರಿ ಎಂದು ಹೇಳರುವುದಿಲ್ಲ. ವಿಶೇಷವಾಗಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾದರೆ ಅದರ ಹಿಂದೆಯೇ ಎಲ್ಲಾ ಅಗತ್ಯ ವಸ್ತುಗಳ ಬೆಲೆಯೂ

ಏರಿಕೆಯಾಗುತ್ತದೆ. ಅದು ಒಂದು ರೀತಿ ಇಂಜಿನ್ ಇದ್ದಂತೆ. ಇತರೆ ವಸ್ತುಗಳು ಅದರ ಹಿಂದಿನ ಬೋಗಿಗಳಿದ್ದಂತೆ. ಡೀಸೆಲ್ ಮತ್ತು ಪೆಟ್ರೋಲ್ ದರ ಹೆಚ್ಚಳದಿಂದ ಸಾಗಾಣಿಕೆ ದರವೂ ಹೆಚ್ಚಾಗುತ್ತದೆ. ಯಾರಿಗೂ ಕಣ್ಣಿಗೆ ಕಾಣದಂತೆ ಮಧ್ಯರಾತ್ರಿಯಲ್ಲಿ ದಿನನಿತ್ಯವೂ ಬೆಲೆ ಏರಿಕೆಯಾಗುತ್ತಿದೆ. ಆದ್ದರಿಂದ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಇಳಿಕೆ ಮಾಡಲು ರಾಜ್ಯ ಸರ್ಕಾರ ವಿಧಿಸುತ್ತಿರುವ ಸೆಸ್ ಅನ್ನು ಕಡಿಮೆ ಮಾಡಲಾಗುತ್ತದೆಯೇ? ಅದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ? ದಯಮಾಡಿ ತಾವು ಅದನ್ನು ಸ್ಪಷ್ಟವಾಗಿ ಹೇಳಬೇಕು. ಎಣ್ಣೆ ಮತ್ತು ಬೇಳೆಕಾಳುಗಳ ಬೆಲೆ ಹೆಚ್ಚಳಕ್ಕೆ ದಾಸ್ತಾನು ಮಿತಿಗೊಳಿಸುವ ಮೂಲಕ ಕ್ರಮವನ್ನು ಕೈಗೊಳ್ಳುವುದಲ್ಲ. ಅದಕ್ಕೆ ಪರ್ಯಾಯವಾಗಿ ಜನರ ಬೇಡಿಕೆಗನುಗುಣವಾಗಿ ಬೇರೆ ಕಡೆಯಿಂದ ತರಿಸಿಕೊಳ್ಳಲಾಗುತ್ತಿದೆಯೇ? ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್‌ನ cess ಅನ್ನು ಕಡಿಮೆ ಮಾಡುತ್ತದೆಯೇ? ಇದನ್ನು ಸ್ಪಷ್ಟಪಡಿಸಬೇಕು.

**ಶ್ರೀ ಉಮೇಶ್ ವಿ. ಕತ್ತಿ:-** ಮಾನ್ಯ ಸಭಾಪತಿಯವರೇ, ಉಕ್ರೇನ್ ಮತ್ತು ರಷ್ಯಾ ಯುದ್ಧ ಇಂದಿನಿಂದ ನಡೆಯುತ್ತಿಲ್ಲ, ಒಂದು ತಿಂಗಳಿಗೂ ಹೆಚ್ಚು ಸಮಯದಿಂದ ನಡೆಯುತ್ತಿದೆ. ಅದರಿಂದ ಬೆಲೆಗಳು ಹೆಚ್ಚಾಗುತ್ತಿಲ್ಲ. ಆದರೆ International Market ನಲ್ಲಿ ಪೆಟ್ರೋಲ್, ಡೀಸೆಲ್ ದರ ನಿಗದಿಯಾಗುತ್ತದೆ. ಖಾದ್ಯತೈಲಗಳ ಆಮದು ಈಗಾಗಲೇ ಕಡಿಮೆಯಾಗಿರುವುದರಿಂದ ಬೆಲೆಗಳು ಹೆಚ್ಚಾಗುತ್ತಿವೆ. ಬೇಸಿಗೆ ಕಾಲದಲ್ಲಿ ಬೆಲೆಗಳು ಹೆಚ್ಚಾಗೇ ಆಗುತ್ತವೆ. Palm oil ಅನ್ನು ತರುವ ಕಾರ್ಯಕ್ರಮ ಸರ್ಕಾರದ ಮುಂದಿದ್ದು, ಅದನ್ನು ಹೆಚ್ಚಿಗೆ ತರುವಂತಹ ಕೆಲಸ ಮಾಡುತ್ತಿದ್ದೇವೆ. ಪ್ರತಿನಿತ್ಯ ನಾವು monitor ಮಾಡುತ್ತೇವೆ. 4 ಲಕ್ಷ ಮೆಟ್ರಿಕ್ ಟನ್‌ಗಿಂತಲೂ ಹೆಚ್ಚು ಖಾದ್ಯ ತೈಲಗಳ ದಾಸ್ತಾನು ಇದೆ. International Market ನಲ್ಲಿ ದರಗಳು ಹೆಚ್ಚು ಕಡಿಮೆಯಾಗುತ್ತದೆ. ಸೆಸ್‌ನ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರನ್ನು ತಾವು ಕೇಳಬೇಕು. ಏಕೆಂದರೆ ಇದು ಆರ್ಥಿಕ ಇಲಾಖೆಗೆ ಸಂಬಂಧಿಸಿದ ವಿಚಾರ.

ಅಲ್ಲದೆ ಕಳೆದ 22ನೇ ತಾರೀಖು, ಪೆಟ್ರೋಲ್, ಡೀಸೆಲ್ ಮತ್ತು ಇತರ ಖಾದ್ಯ ತೈಲಗಳ ಕುರಿತು ಸಭೆಯನ್ನು ಮಾಡಿ ಎಲ್ಲಾ ದಾಸ್ತಾನುಗಳನ್ನು ಪರಿಶೀಲಿಸುವುದಕ್ಕೆ ಹೇಳಿದ್ದೇವೆ. ಕಳೆದ ವರ್ಷ

1368 ಸಭೆಗಳನ್ನು ಮಾಡಿ ದಾಸ್ತಾನುಗಳನ್ನು ಕಂಟ್ರೋಲ್ ಮಾಡುವ ಕೆಲಸವನ್ನು ಮಾಡಿದ್ದೇವೆ. ಈ ವರ್ಷವೂ ಇದಕ್ಕೆ ಚಾಲನೆಯನ್ನು ಕೊಟ್ಟು, ದಾಸ್ತಾನು ಮಿತಿಗೊಳಸುವ ಕೆಲಸವನ್ನು ಮಾಡುತ್ತೇವೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, cess ಕಡಿಮೆ ಮಾಡುವುದರ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟ ಉತ್ತರ ಬರಲಿಲ್ಲ. ಅಡುಗೆ ಎಣ್ಣೆಯ ಪೂರೈಕೆಗೆ ಪರ್ಯಾಯವಾಗಿ ಏನು ಮಾಡಲಾಗಿದೆ ಎಂದೂ ಹೇಳಲಿಲ್ಲ. ನಾವು ಪರಿಶೀಲಿಸುತ್ತೇವೆ, ನಿಯಂತ್ರಿಸುತ್ತೇವೆ ಎಂದಷ್ಟೇ ಹೇಳಿದರು. ಸರ್ಕಾರಕ್ಕೆ ಬೆಲೆ ಏರಿಕೆಯನ್ನು ತಡೆಯುವುದರಲ್ಲಿ ಯಾವುದೇ ಆಸಕ್ತಿ ಇಲ್ಲದೆ ವಿಫಲರಾಗಿದ್ದಾರೆ.

ಮಾನ್ಯ ಸಚಿವರೇ, ಮೂರನೆಯದಾಗಿ ನಾನು ಕಬ್ಬಿಣದ ಬಗ್ಗೆಯೂ ಕೇಳಿದ್ದೇನೆ. ಜನಸಾಮಾನ್ಯರು ಮನೆ ಕಟ್ಟಲಿಕ್ಕೆ ಬಳಸುವ ಕಬ್ಬಿಣದ ಬೆಲೆಯೂ ದಿನೇ ದಿನೇ ಗಗನದೆತ್ತರಕ್ಕೆ ಏರುತ್ತಿದೆ. ಕಬ್ಬಿಣದ ಬೆಲೆ ಏಕೆ ಹೀಗೆ ಏರಿಕೆಯಾಗಿದೆ? ಇದಕ್ಕೆ ಕಾರಣವೇನು? ಇದರ ನಿಯಂತ್ರಣಕ್ಕೆ ಏನು ಕ್ರಮ ಕೈಗೊಳ್ಳುವಿರಿ? ಅದನ್ನಾದರೂ ಸ್ಪಷ್ಟವಾಗಿ ಹೇಳಿ. ಅವರ ಉತ್ತರ ಬರೀ ಜಾರಿಕೊಳ್ಳುವಂತಹ ಉತ್ತರವಾಗಿದೆಯೇ ವಿನಃ ಸ್ಪಷ್ಟ ಉತ್ತರವಿಲ್ಲ.

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯವರೇ, ಕಬ್ಬಿಣದ ಬೆಲೆಯು ಪ್ರತಿದಿನ International Market ನಿಂದ ನಿಗದಿಯಾಗುತ್ತದೆ. ಪೆಟ್ರೋಲ್, ಡೀಸೆಲ್, ಕಬ್ಬಿಣ, ಸೂರ್ಯಕಾಂತಿ ಬೀಜ, palm oil ಎಲ್ಲದರ ದರವೂ International Market ನಲ್ಲಿ ಹೆಚ್ಚು ಕಡಿಮೆಯಾಗುತ್ತದೆ. 4 ಲಕ್ಷ ಮೆಟ್ರಿಕ್ ಟನ್ ದಾಸ್ತಾನು ಪ್ರತಿ ದಿನ portal ಗೆ ಬರುತ್ತಿದೆ. ಯಾರಾದರೂ ಹೆಚ್ಚಿನ ದರಕ್ಕೆ ಮಾರುತ್ತಿದ್ದರೆ, ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರೆ ಅದರ ಮಾಹಿತಿಯು ನಮಗೆ ಬಂದ ತಕ್ಷಣ ಕ್ರಮವನ್ನು ಕೈಗೊಳ್ಳುತ್ತೇವೆ. ಇದರ ಹೊರತಾಗಿ ನಾವು ಹೆಚ್ಚಿನ ನಿಯಂತ್ರಣವನ್ನು ಮಾಡಲಿಕ್ಕಾಗುವುದಿಲ್ಲ. ಉಕ್ರೇನ್ ಮತ್ತು ರಷ್ಯಾ ಯುದ್ಧದಿಂದ ದರ ಹೆಚ್ಚಳವಾಗಿರುವುದಲ್ಲ. ಹಡಗಿನಲ್ಲಿ ದಾಸ್ತಾನು ಬರುವುದು ಮತ್ತು ಹೋಗುವುದರ ಮೇಲೆ depend on ಆಗುತ್ತದೆ. ಇದರ ಹೊರತಾಗಿ ನಾವೇನು ಮಾಡಲಾಗುವುದಿಲ್ಲ. Market is market.

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 2780**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಮಾನ್ಯತೆ ನವೀಕರಣದ ಕುರಿತು ಇತ್ತೀಚೆಗೆ ಒಂದು ಕೋರ್ಟ್ ಆದೇಶ ಬಂದಿದೆ. ಆ ಕೋರ್ಟ್ ಆದೇಶದ ಪ್ರಕಾರ ಬದಲಾವಣೆಯನ್ನು ಮಾಡಲಾಗುವುದೇ ಎನ್ನುವುದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ದಿನಾಂಕ 14.01.2022 ರಂದು ಐದು ವರ್ಷಗಳ ಕಾಲ ಮಾನ್ಯತೆಯ ನವೀಕರಣವನ್ನು ಮಾಡಿಕೊಳ್ಳುವ ಅಗತ್ಯವಿಲ್ಲವೆನ್ನುವ ಆದೇಶವನ್ನು ಹೊರಡಿಸಿದ್ದಾರೆ. ಅದಕ್ಕಾಗಿ ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದರಲ್ಲಿ ಎರಡು ಮಾತಿಲ್ಲ.

ಆದರೆ ಗಮನಿಸಬೇಕಾದ ಒಂದು ಅಂಶವನ್ನು ನಾನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರಬಯಸುತ್ತೇನೆ. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 30ರ ಅಡಿಯಲ್ಲಿ ಖಾಸಗಿ ಶಾಲೆಗಳನ್ನು ನೋಂದಾಯಿಸಿದ್ದು, 10 ವರ್ಷಕ್ಕೆ ಮಾನ್ಯತೆ ನವೀಕರಿಸಲು ನಿಯಮಗಳನ್ನು ರೂಪಿಸಲಾಗಿದೆ. ಆದರೆ ಇದಕ್ಕೆ contradictory ಆಗಿ Right to Education Act ನಲ್ಲಿ 5 ವರ್ಷಕ್ಕೆ ಎಂದು ಮಾಡಿಕೊಳ್ಳಲಾಗಿದೆ. ಈ ಗೊಂದಲವನ್ನು ಪರಿಹರಿಸಲಿಕ್ಕೆ ಹೈಕೋರ್ಟ್‌ನ ಆದೇಶವೂ ಬಂದಿದೆ. ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಒಂದು ವಿನಂತಿ ಮಾಡುತ್ತೇನೆ. ಇಲ್ಲಿಯವರೆಗೆ ಕರ್ನಾಟಕದಲ್ಲಿ ಬಂದಿರುವಂತಹ ಶಿಕ್ಷಣ ಸಚಿವರೆಲ್ಲ ಪ್ರಾಮಾಣಿಕರಾಗಿದ್ದು, ಒಂದು integrity ಯನ್ನು ಇಟ್ಟುಕೊಂಡವರಾಗಿದ್ದಾರೆ. ಆದರೆ ಮಾನ್ಯತೆ ನವೀಕರಣ ಎನ್ನುವುದು ಅತ್ಯಂತ ಹೆಚ್ಚು ಭ್ರಷ್ಟಾಚಾರದ ಮೂಲವಾಗಿದೆ ಎನ್ನುವುದು ಅಷ್ಟೇ ಕಠೋರ ವಾಸ್ತವ. ಬೆಂಗಳೂರಿನ ಖಾಸಗಿ ಶಾಲೆಗಳು commercialization ಆಗಿದ್ದು, ಅವುಗಳ ಒಂದು ಪಾಲು ಕೊಡುವಂತಹ ವ್ಯವಸ್ಥೆಯೇ ಈ ಮಾನ್ಯತೆ ನವೀಕರಣ. 10 ವರ್ಷಕ್ಕೆ ನವೀಕರಣ ಮಾಡಬೇಕು ಎಂದು ಮಾಡಿ, ಎಲ್ಲಿ ಬಿಗಿ

ಮಾಡಬೇಕು ಮತ್ತು ಹೇಗೆ ಶಿಕ್ಷಣ ವ್ಯವಸ್ಥೆಯನ್ನು ಸರಿ ಮಾಡಬೇಕು ಎಂಬುದಕ್ಕೆ ಅದಷ್ಟು ಬೇಗ ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ನ್ಯಾಯಾಲಯದ ಆದೇಶವನ್ನು ಎಲ್ಲದಕ್ಕೂ implement ಮಾಡಿಬಿಡಿ.

**ಶ್ರೀ ಬಿ.ಸಿ.ನಾಗೇಶ್:–** ಮಾನ್ಯ ಸಭಾಪತಿಯವರೇ, ನ್ಯಾಯಾಲಯದ ಆದೇಶದ ಕಡೆಯ ಸಾಲನ್ನು ಓದುತ್ತೇನೆ. ಅದು ನಮ್ಮನ್ನು ಹೇಗೆ ಮುಜುಗರಕ್ಕೀಡು ಮಾಡುತ್ತದೆ ಎನ್ನುವುದನ್ನು ಹೇಳುತ್ತೇನೆ.

*"…..it is explicitly stated so, it is necessary to take note of the additional responsibility cast on the respondents in light of the directions issued by the Hon'ble Supreme Court in Avinash Mehrotra's case (supra) to ensure compliance with fire safety norms, National Building Code of India, etc."*

ಇದರಿಂದ ನಮಗೆ ಸಮಸ್ಯೆಯಾಗುತ್ತಿದೆ. Otherwise, 10 ವರ್ಷಗಳಿಗೆ renewal ಮಾಡುವುದು ಸರಿ. Fire Act ನಲ್ಲಿ ಹೇಳಿರುವಂತೆ ಆ fire extinguisher ರಾಸಾಯನಿಕದ life ಇರುವುದು ಒಂದೇ ವರ್ಷ. ಅದು ಒಂದು ವರ್ಷ ಎಂದ ಮೇಲೆ ನಾವು ಐದು ವರ್ಷಗಳಿಗೆ ಕೊಡುವುದಕ್ಕೆ ಬರುವುದಿಲ್ಲ. ಪ್ರತಿ ವರ್ಷ ಹೋಗಿ ಪರಿಶೀಲನೆಯನ್ನು ನಡೆಸಿ ಅದರ ಪ್ರಮಾಣಪತ್ರವನ್ನು ನೀಡಬೇಕು. ಪ್ರತಿವರ್ಷ ಆ ರಾಸಾಯನಿಕವನ್ನು ಬದಲಾವಣೆ ಮಾಡಲೇಬೇಕು. ಬದಲಾವಣೆ ಮಾಡದಿದ್ದರೆ ಪ್ರಮಾಣಪತ್ರ ಕೊಡುವುದಕ್ಕೆ ಬರುವುದಿಲ್ಲ ಎಂದು Fire Department ನವರು ಹೇಳುತ್ತಾರೆ. ಈ ಹಿಂದೆ ಲೋಕೋಪಯೋಗಿ ಇಲಾಖೆಯೊಂದಿಗೆ ನಡೆಸಿದಂತಹ ಸಭೆಯಲ್ಲಿ ತಾವೂ ಸಹ ಭಾಗವಹಿಸಿದ್ದಿರಿ. ಸುಪ್ರೀಂ ಕೋರ್ಟ್‌ನ ಅಂತಿಮ ಆದೇಶದ ಆಧಾರದ ಮೇಲೆ ಮಾಡಬಹುದು. Life

of the building ಮೇಲೆ ಪ್ರಮಾಣ ಪತ್ರವನ್ನು ಕೊಡಬಹುದು ಎನ್ನುತ್ತಾರೆ. ಅದನ್ನೇನಾದರೂ ಸ್ವಲ್ಪ ಪರಿಹರಿಸಬಹುದು. ಆದರೆ ಪ್ರತಿ ವರ್ಷ fire extinguisher ಎಂದಾಗ renewal ನೋಡದೆ ಹೇಗೆ ಪ್ರತಿ ವರ್ಷ ಪ್ರಮಾಣಪತ್ರವನ್ನು ಕೊಡುವುದು ಎನ್ನುವ ಸಮಸ್ಯೆ ಎದುರಾಗುತ್ತದೆ. ನಾವೆಲ್ಲರೂ ಕುಳಿತು ಈ ಸಮಸ್ಯೆಯನ್ನು ಬಗೆಹರಿಸಬೇಕೆ ವಿನಃ ಶಿಕ್ಷಣ ಇಲಾಖೆಯು ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ಪಾಲಿಸದೆ ಕೇವಲ ಅಧಿಕಾರಿಗಳನ್ನು ದೂರಿದರೆ ಆಗುವುದಿಲ್ಲ. ಇದಕ್ಕೆ ಏನಾದರೂ ಒಂದು solution ತರಬೇಕು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರು ಹೇಳುತ್ತಿರುವುದರಲ್ಲಿ ಅರ್ಥವಿದೆ. ಒಂದು ಕಡೆ National Building Code of India ಅನ್ನು ಒಪ್ಪಿಕೊಂಡಿದ್ದೇವೆ. ಇನ್ನೊಂದು ಕಡೆ fire ನ ವಿಷಯ ಇದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಯವರೇ ಮನಸ್ಸು ಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಷಯ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿದ್ದು, ಎಲ್ಲವನ್ನೂ ಸೇರಿಸಿ ಒಂದು ಸಭೆಯನ್ನು ಮಾಡಬೇಕು. National Building Code of India ಅನ್ನು ಪಾಲನೆ ಮಾಡಬೇಕೆಂದರೆ 75,000ಕ್ಕೂ ಹೆಚ್ಚು ಶಾಲೆಗಳು ರಾಜ್ಯದಲ್ಲಿವೆ. ಈ 75,000 ಶಾಲೆಗಳಿಗೆ National Building Code of India ಅಳವಡಿಸಿಕೊಂಡು ಪ್ರಮಾಣಪತ್ರವನ್ನು ಪಡೆದುಕೊಳ್ಳಬೇಕೆಂದರೆ ಎಷ್ಟು ಸಮಯ ಬೇಕು? ಎಷ್ಟು ಸಿಬ್ಬಂದಿ ಬೇಕು? ಎಷ್ಟು manpower ಬೇಕು? ಎರಡನೆಯದಾಗಿ fire safety ದು ಕೂಡ ಅದಕ್ಕಿಂತಲೂ ದೊಡ್ಡ ಸಮಸ್ಯೆ ಇದೆ. ಈಗ ಖಾಸಗಿ ಶಾಲೆಗಳಿಗಷ್ಟೇ ಮಾಡುತ್ತಿರುವುದರಿಂದ ಈ ಸಮಸ್ಯೆ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ. ಒಂದು ಬಾರಿ ಸರ್ಕಾರಿ ವ್ಯವಸ್ಥೆಗೂ ಸುಪ್ರೀಂ ಕೋರ್ಟ್ ಆದೇಶ ಅನ್ವಯವಾಗಬೇಕು. ನನ್ನ ಕ್ಷೇತ್ರದ ಯಮಕನಮರಡಿ ಎನ್ನುವ ಊರಿನಲ್ಲಿ ಸರ್ಕಾರಿ ಶಾಲಾ ಕಟ್ಟಡ ಬಿದ್ದು ಮಕ್ಕಳು ಮೃತ ಪಟ್ಟಿರುವ ಘಟನೆಯಾಗಿದೆ. ಖಾಸಗಿ ಶಾಲೆಗಳಲ್ಲಿ ಆಗಿಲ್ಲ, ಸರ್ಕಾರಿ ಶಾಲೆಯಲ್ಲಿ ಆಗಿದೆ. ಕಳೆದ ವಾರ ಸಿಂಧಗಿ ತಾಲ್ಲೂಕಿನ ಒಂದು ಸರ್ಕಾರಿ ಶಾಲೆಯ ಮೇಲ್ಛಾವಣಿ ಕುಸಿದು ಮೂರು ಮಕ್ಕಳು ಗಾಯಾಳುಗಳಾಗಿದ್ದಾರೆ. National Building Code of India ಅನ್ನು ಸರ್ಕಾರಿ ಶಾಲೆಗೂ ಅನ್ವಯ ಮಾಡಬೇಕಾದಂತಹ ಪ್ರಸಂಗ ಬರುತ್ತದೆ. ಇದು ಬಹಳ

ಗಂಭೀರವಾದ ಸಮಸ್ಯೆಯಾಗಿದೆ. Inter-department ನ issue ಆಗಿರುವುದರಿಂದ ಒಂದು ಪರಿಹಾರವನ್ನು ಆದಷ್ಟು ಬೇಗ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ತಮ್ಮ ಹಾಗೂ ಮಾನ್ಯ ಮುಖ್ಯಂತ್ರಿಯವರ ನೇತೃತ್ವದಲ್ಲಿ ಸಭೆಯನ್ನು ಮಾಡಲಾಗಿತ್ತು. ಆ ಸಭೆಯಲ್ಲಿ ಒಂದಷ್ಟು ನಿರ್ಣಯ ಕೈಗೊಂಡ ಮೇಲೆ ನನ್ನ ನೇತೃತ್ವದಲ್ಲಿ ಎಲ್ಲಾ ಅಧಿಕಾರಿಗಳನ್ನು ಕರೆದು ಒಂದು ಸಭೆಯನ್ನು ನಡೆಸಲಾಗಿತ್ತು. ನಂತರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಎಲ್ಲಾ ಕಾರ್ಯದರ್ಶಿಯವರನ್ನು ಕರೆದು ಇದನ್ನು ಹೇಗೆ ಸರಳಗೊಳಸಬಹುದು ಎನ್ನುವ ಪ್ರಯತ್ನವನ್ನು ನಡೆಸಲಾಗುತ್ತಿದೆ. ಅದೇ ಸಭೆಯಲ್ಲಿ Fire Department ನವರು ಈ ಸಮಸ್ಯೆಯನ್ನು ಎತ್ತಿದ್ದಾರೆ. ಯಾವುದೇ ರಾಸಾಯನಿಕದ life ಒಂದು ವರ್ಷಕ್ಕಿಂತಲೂ ಹೆಚ್ಚು ಇರುವುದಿಲ್ಲ. ಈ ನಿಟ್ಟಿನಲ್ಲಿ ಏನು ಮಾಡಬಹುದೋ ಆ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಗುವುದು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(652) 28-03-2022 (12.30) ಕೆಜಿ-ಎಂಡಿ**

**ಪ್ರಶ್ನೆ ಸಂಖ್ಯೆ 2791**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಮೊದಲನೆಯದಾಗಿ, ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸ ಬಿ.ಪಿ.ಎಲ್., ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ಹಾಗೂ ಅದರಲ್ಲಿ ಎಷ್ಟು ಅರ್ಜಿಗಳನ್ನು ಪರಿಶೀಲನೆ ಮಾಡಿ ಬಿ.ಪಿ.ಎಲ್ ರೇಷನ್ ಕಾರ್ಡ್‌ಗಳನ್ನು ವಿತರಿಸಲಾಗಿದೆ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) ಎಂಬ ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ ಮಾನ್ಯ ಸಚಿವರು ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಡಿತರ ಚೀಟಿಯನ್ನು ಕೋರಿ ಒಟ್ಟು 15,53,745 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಈ ಪೈಕಿ 8,03,782 ಅರ್ಹ ಅರ್ಜಿದಾರರಿಗೆ ಆದ್ಯತೆಯ ಮೇರೆಗೆ ಪಡಿತರ ಚೀಟಿಯನ್ನು ವಿತರಿಸಲಾಗಿದೆ ಹಾಗೂ ಜಿಲ್ಲಾವಾರು ಅರ್ಜಿಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ ಹಾಗೂ 3,24,000/- ಅರ್ಜಿಗಳು reject ಆಗಿವೆ ಎಂದು ತಿಳಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಬಹಳ ಸರಳವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಎಷ್ಟು ಜನರು ಬಿಪಿಎಲ್ ಕಾರ್ಡ್‌ಗಳಿಗಾಗಿ ಅರ್ಜಿಗಳನ್ನು ಸಲ್ಲಿಸಿದ್ದಾರೆ ಎನ್ನುವ ಪ್ರಶ್ನೆಗೆ, ಮಾನ್ಯ ಸಚಿವರು ಒಟ್ಟು 15,53,745 ಅರ್ಜಿಗಳು ಸ್ವೀಕೃತವಾಗಿವೆ ಎಂದು ತಿಳಿಸಿದ್ದಾರೆ. ಅದೇರೀತಿ ಇವರಲ್ಲಿ ಎಷ್ಟು ಜನರಿಗೆ ಬಿಪಿಎಲ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂಬುದಕ್ಕೆ ಒಟ್ಟು 8,03,782 ಜನರಿಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ, ಮಾನ್ಯ ಸಚಿವರು ನೀಡಿರುವಂತಹ ಅನುಬಂಧ-1 ರಲ್ಲಿ ಈ ವರ್ಷದಲ್ಲಿ ಎಷ್ಟು ಜನರಿಗೆ ಬಿಪಿಎಲ್ ಕಾರ್ಡ್‌ಗಳನ್ನು ಹೊಸದಾಗಿ ನೀಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ನಾನು ಮೊನ್ನೆ ದಿವಸ ರಾತ್ರಿ ಈ ಇಲಾಖೆಯ website ನಲ್ಲಿ ಜಿಲ್ಲಾವಾರು ಮಾಹಿತಿಯನ್ನು ನೋಡಿದ್ದೇನೆ. ಒಂದೊಂದು ಜಿಲ್ಲೆಗೆ 1-2 ಅಥವಾ 3 ಬಿಪಿಎಲ್ ಕಾರ್ಡ್‌ಗಳನ್ನು ನೀಡಿರುವುದು ಕಂಡುಬಂತು. ಇಂದು ಬೆಳಗ್ಗೆ ಆ website lock ಆಗಿದೆ. ಮಾನ್ಯ ಸಚಿವರು ಸುಮಾರು 4 ಲಕ್ಷ ಅರ್ಜಿಗಳು ಬಾಕಿ ಇವೆ ಎಂದು ಉತ್ತರ ನೀಡಿದ್ದಾರೆ. ಈ ವರ್ಷದಲ್ಲಿ ಇಡೀ ರಾಜ್ಯದಲ್ಲಿ ಕೇವಲ 1,717 ಬಿಪಿಎಲ್ ಕಾರ್ಡ್‌ಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ರೀತಿ ಕೊಟ್ಟರೆ,

ಬಡವರು ಯಾವ ರೀತಿ ಬದುಕಬೇಕು. ಸರ್ಕಾರಕ್ಕೆ BPL card holders ಗಳ ಮೇಲೆ ಕನಿಕರ ಇರಬೇಕಲ್ಲವೇ; ಮಾನ್ಯ ಸಚಿವರ ಜಿಲ್ಲೆಯಲ್ಲಿಯೇ ಕೇವಲ ಮೂರು ಜನರಿಗೆ ಮಾತ್ರ ಬಿಪಿಎಲ್ ಕಾರ್ಡ್‌ಗಳನ್ನು ಕೊಟ್ಟಿದ್ದಾರೆ. ಅವರ ಜಿಲ್ಲೆಯಲ್ಲಿ ಸುಮಾರು 28 ಸಾವಿರ ಅರ್ಜಿಗಳು ಬಾಕಿ ಇವೆ. ಈ ಇಲಾಖೆಯಲ್ಲಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಈ ವರ್ಷ ಕೇವಲ ಇಡೀ ರಾಜ್ಯದಲ್ಲಿ ಒಟ್ಟು 1717 ಜನರಿಗೆ ಮಾತ್ರ ಬಿಪಿಎಲ್ ಕಾರ್ಡ್‌ಗಳನ್ನು ನೀಡಿದ್ದಾರೆ. ಸರ್ಕಾರ ಬಿಪಿಎಲ್ ಕಾರ್ಡ್‌ದಾರರಿಗೆ ಕೋವಿಡ್–19ರ ಸಂದರ್ಭದಲ್ಲಿ ಸಹಾಯ ಮಾಡಲಿಲ್ಲವೆಂದರೆ, ಇನ್ಯಾವ ಸಂದರ್ಭದಲ್ಲಿ ಸಹಾಯ ಮಾಡುತ್ತದೆ? ಮಾನ್ಯ ಸಚಿವರು ಅಧಿಕಾರಿಗಳ ಮೇಲೆ ಏಕೆ ಕ್ರಮತೆಗೆದುಕೊಳ್ಳುವುದಿಲ್ಲ? ಇಷ್ಟು ಅರ್ಜಿಗಳು ಏಕೆ ಬಾಕಿ ಇವೆ? ಈ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು. ನಂತರ ಉಳಿದ ಮಾಹಿತಿಯನ್ನು ಕೇಳುತ್ತೇನೆ.

**ಶ್ರೀ ಉಮೇಶ ವಿ.ಕತ್ತಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಒಟ್ಟು 8,03,782 ಬಿಪಿಎಲ್ ಕಾರ್ಡ್‌ಗಳನ್ನು ನೀಡಲಾಗಿದೆ. ಕಳೆದ ಮೂರು ವರ್ಷಗಳಿಂದ ಕೋವಿಡ್–19 ಕಾರಣದಿಂದಾಗಿ ಸರಿಯಾಗಿ ಸರ್ವೆ ಮಾಡುವುದಕ್ಕೆ ಆಗಲಿಲ್ಲ. ಒಂದು ಕುಟುಂಬದಲ್ಲಿ ಎಷ್ಟು ಜನ ಸದಸ್ಯರು ಇದ್ದಾರೆಂದು ಮನೆ, ಮನೆಗೆ ಹೋಗಿ ಸರ್ವೆ ಮಾಡಿ biometric ತೆಗೆದುಕೊಳ್ಳಬೇಕಾಗುತ್ತದೆ. ಈ ಕಾರಣದಿಂದಾಗಿ ಬಿಪಿಎಲ್ ಕಾರ್ಡ್‌ಗಳನ್ನು ವಿತರಣೆ ಮಾಡುವುದರಲ್ಲಿ ಸ್ವಲ್ಪ ತಡವಾಗಿರುವುದು ನಿಜ. ಸುಮಾರು 4 ಲಕ್ಷ ಅರ್ಜಿಗಳು ಬಾಕಿ ಇವೆ. ಇವುಗಳನ್ನು ಬರುವ ದಿವಸಗಳಲ್ಲಿ ಕೊಡುತ್ತೇವೆ. ಪ್ರತಿ ಜಿಲ್ಲೆಗಳಲ್ಲಿ ಎಷ್ಟು ಜನ ಶ್ರೀಮಂತರು ಬಿಪಿಎಲ್ ಕಾರ್ಡ್‌ಗಳನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ ಅದನ್ನು withdraw ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಸುಮಾರು 13 ಲಕ್ಷ ಜನರು income tax payers, ಸರ್ಕಾರಿ ನೌಕರರು ಮತ್ತು ಶ್ರೀಮಂತರು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿದ್ದರು. ಅವುಗಳನ್ನು withdraw ಮಾಡಿ ಅವುಗಳ ಬದಲಿಗೆ ಅಷ್ಟೇ ಕಾರ್ಡ್‌ಗಳನ್ನು ಹಂಚಿಕೆ ಮಾಡುತ್ತೇವೆ. ಹಾಗಾಗಿ, ಇನ್ನು 4 ಲಕ್ಷ ಕಾರ್ಡ್‌ಗಳನ್ನು ಕೊಡಬೇಕಾಗಿದೆ. ಮುಂಬರುವ ದಿವಸಗಳಲ್ಲಿ ಅದನ್ನು ಸರಿಯಾದ ರೀತಿಯಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, income tax payers, ಸರ್ಕಾರಿ ನೌಕರರ ಮತ್ತು ಶ್ರೀಮಂತರ ಬಿಪಿಎಲ್ ಕಾರ್ಡ್‌ಗಳನ್ನು ಸರ್ಕಾರ withdraw ಮಾಡಿಕೊಳ್ಳಲಿ ನಾವು ಅದಕ್ಕೆ ಅಡ್ಡ ಬರುತ್ತಿಲ್ಲ. ಇದು ಮುಖ್ಯವಾಗಿ ಬಡವರಿಗೆ ಮತ್ತು ನಿರ್ಗತಿಕರಿಗೆ ಬೇಕಾಗಿರುತ್ತದೆ. ಪ್ರತಿವರ್ಷ ಆಹಾರ ಧಾನ್ಯವನ್ನು ಉಚಿತವಾಗಿ ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಈ 4 ಲಕ್ಷ

ಜನರಿಗೆ ಇದುವರೆವಿಗೂ ಕೊಟ್ಟಿಲ್ಲ. ಬಾಗಲಕೋಟೆ ಜಿಲ್ಲೆಯ ಒಟ್ಟು 11,೮೦೦ ಅರ್ಜಿಗಳ ಪೈಕಿ ಕೇವಲ ೯ ಜನರಿಗೆ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಒಟ್ಟು 14 ಸಾವಿರ ಜನರ ಪೈಕಿ ೨೦ ಜನರಿಗೆ ಕೊಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ೨೪೪೮ ಜನರ ಪೈಕಿ ಒಬ್ಬರಿಗೆ ಕೊಟ್ಟಿದ್ದಾರೆ. ಈ ಮಾಹಿತಿ ಅವರ website ನಲ್ಲಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಪ್ರಶ್ನೆಯನ್ನು ಮಾತ್ರ ಕೇಳಿ.

**ಶ್ರೀ ಯು.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ಬಾಕಿ ಇರುವ ಸುಮಾರು 4 ಲಕ್ಷ ಜನರಿಗೆ ಎಷ್ಟು ದಿವಸಗಳಲ್ಲಿ ಬಿಪಿಎಲ್ ಕಾರ್ಡ್‌ಗಳನ್ನು ಕೊಡುತ್ತಾರೆಂದು ಸರ್ಕಾರ ಒಂದು ಟೈಮ್‌ನ್ನು ನಿಗಧಿ ಮಾಡಿಹೇಳಬೇಕು. ಮಾನ್ಯ ಸಚಿವರು ಸುಮ್ಮನೆ ಮುಂಬರುವ ದಿವಸಗಳಲ್ಲಿ ಕೊಡುತ್ತೇವೆಂದು ಆಗುವುದಿಲ್ಲ.

**ಶ್ರೀ ಉಮೇಶ್ ವಿ. ಕತ್ತಿ:-** ಮಾನ್ಯ ಸಭಾಪತಿಯವರೇ, ಕೋವಿಡ್-19 ಇದ್ದ ಕಾರಣದಿಂದಾಗಿ, ಸರಿಯಾಗಿ ಸರ್ವೆ ಕಾರ್ಯ ಮಾಡಲು ಆಗಲಿಲ್ಲ. ಮನೆ, ಮನೆಗೆ ಹೋಗಿ biometric ಮಾಡುವಂತಹ ಕಾರ್ಯಕ್ರಮ ನಿಂತು ಹೋಗಿದೆ. ಹಾಗಾಗಿ, ತೊಂದರೆಯಾಗಿದೆ. ಈಗ ಕೋವಿಡ್ - 19ರ ಕಾರ್ಯಕ್ರಮ ನಿಂತು ಹೋಗಿದೆ. ಅದನ್ನು ಕೇಂದ್ರ ಸರ್ಕಾರ withdraw ಮಾಡಿದೆ. ಹಾಗಾಗಿ, ಮುಂಬರುವ ಮೂರು ತಿಂಗಳಲ್ಲಿ ಸರ್ವೆ ಕಾರ್ಯವನ್ನು ಮಾಡಿ ಬಿಪಿಎಲ್ ಕಾರ್ಡ್‌ಗಳನ್ನು ವಿತ್ತರಿಸುತ್ತೇವೆ,

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ನಾನು ಸರ್ವೆ ಕಾರ್ಯ ಮಾಡಿರುವುದರ ಬಗ್ಗೆಯೇ ಕೇಳುತ್ತಿದ್ದೇನೆ. ಮಾನ್ಯ ಸಚಿವರು ನೀಡಿರುವಂತಹ ಅನುಬಂಧ -1 ರಲ್ಲಿ ಸುಮಾರು 4 ಲಕ್ಷ ಅರ್ಜಿಗಳು ಬಾಕಿ ಇವೆ ಎಂದು ಒಪ್ಪಿಕೊಂಡಿದ್ದಾರೆ. ಇದನ್ನು ಸರ್ವೆ ಮಾಡಿ ನೀಡಿದ್ದಾರೆ. ಈಗಾಗಲೇ ಸರ್ವೆ ಮಾಡಿರುವವರಿಗೆ ಕಾರ್ಡ್‌ಗಳನ್ನು ಕೊಡುವುದಕ್ಕೆ ಏಕೆ ತಡ ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಈಗಾಗಲೇ ಸರ್ವೆ ಮಾಡಿರುವುದರ ಬಗ್ಗೆ ಕೇಳುತ್ತಿದ್ದಾರೆ. ಅದಕ್ಕೆ ತಾವು ಉತ್ತರ ಹೇಳಿ.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಉಮೇಶ್ ವಿ.ಕತ್ತಿ:–** ಮಾನ್ಯ ಸಭಾಪತಿಯವರೇ, ಬಾಕಿ ಉಳಿದಿರುವ ಅರ್ಜಿದಾರರಿಗೆ ಮುಂಬರುವ ಮೂರು ತಿಂಗಳಲ್ಲಿ ಸರ್ವೆ ಮಾಡಿ ಅವರಿಗೆ ಹಂಚಿಕೆ ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರು ಒಂದು ತಿಂಗಳಲ್ಲಿ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ಮಾನ್ಯ ಸಚಿವರು ನೀಡಿರುವ ಉತ್ತರದ ಬಗ್ಗೆ ಉಪ ಪ್ರಶ್ನೆಯನ್ನು ಮಾಡುತ್ತಿದ್ದಾರೆ. ಮಾನ್ಯ ಸಚಿವರ ಉತ್ತರದಲ್ಲಿ 4 ಲಕ್ಷ ಜನರಿಗೆ ಸರ್ವೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಹಾಗಾಗಿ, ಇವರಿಗೆ ಏಕೆ ಇನ್ನೂ ಕೊಡುತ್ತಿಲ್ಲವೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಉಮೇಶ್ ವಿ. ಕತ್ತಿ:–** ಮಾನ್ಯ ಸಭಾಪತಿಯವರೇ, ಕೋವಿಡ್–19 ಕಾರಣದಿಂದಾಗಿ, ಸರಿಯಾಗಿ biometric ಅನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಹಾಗಾಗಿ, ಅಧಿಕಾರಿಗಳು ಸರ್ವೆ ಕಾರ್ಯಕ್ಕೆ ಹೋಗಲು ಆಗಲಿಲ್ಲ. ಆದ್ದರಿಂದ ಇದು ತಡವಾಗಿದೆ. ಇನ್ನು ಒಂದು ತಿಂಗಳಿನಲ್ಲಿ ಬಾಕಿ ಇರುವ ನಾಲ್ಕು ಲಕ್ಷ ಜನರ ಕಾರ್ಡ್‌ಗಳನ್ನು ಪೂರ್ಣಗೊಳಿಸುತ್ತೇವೆ. ಬರುವ ಮೂರು ತಿಂಗಳಿನಲ್ಲಿ ಬಾಕಿ ಇರುವ 4 ಲಕ್ಷ ಅರ್ಜಿಗಳನ್ನು ಪೂರ್ಣಗೊಳಿಸುತ್ತೇವೆ.

**ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ 1781**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನನಗೆ ಬಹಳ ಕಾಲಾವಕಾಶದ ನಂತರ ಒಂದಿಷ್ಟು ಮಾಹಿತಿ ಸಿಕ್ಕಿದೆ. ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ಎಷ್ಟು ಜನ ಪದವೀಧರರು ಇದ್ದಾರೆ, ಇವರಲ್ಲಿ ಎಷ್ಟು ಜನ ನಿರುದ್ಯೋಗಿಗಳಾಗಿದ್ದರೆ, ಇವರ ಉದ್ಯೋಗ ಅವಕಾಶಕ್ಕೆ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ ಎಂಬ ಮಾಹಿತಿಯನ್ನು ಕೇಳಿದ್ದೆ. Employment generate ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಪದವಿ ಶಿಕ್ಷಣದ ಬಳಿಕ ಸ್ವಯಂ ಉದ್ಯೋಗ, ವ್ಯಾಪಾರ ಮತ್ತು ಇತರ ಖಾಸಗಿ ಕ್ಷೇತ್ರಗಳಲ್ಲಿ ಪದವೀಧರರು ತಮ್ಮ ಆಸಕ್ತಿಗನುಗುಣವಾಗಿ ಉದ್ಯೋಗವನ್ನು ಕಂಡುಕೊಳ್ಳುವುದರಿಂದ ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ಯಾವುದೇ ತಂತ್ರಾಂಶ ನಿರ್ವಹಣಾ ವ್ಯವಸ್ಥೆ ಇರುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಎರಡನೆಯದಾಗಿ, ಸರ್ಕಾರವೇ ಹೇಳಿರುವ ರೀತಿ ಪ್ರತಿವರ್ಷ ಸುಮಾರು 2.5 ಲಕ್ಷ ಪದವೀಧರ ವಿದ್ಯಾರ್ಥಿಗಳು ಹೊರಗಡೆ ಬರುತ್ತಿದ್ದಾರೆ. ಆದರೆ, ಸ್ನಾತ್ತಕೋತ್ತರ ಪದವೀಧರರು ಹಾಗೂ ಪದವೀಧರರ ಉದ್ಯೋಗಕಾಂಕ್ಷಿಗಳು ಕೇವಲ 51 ಸಾವಿರ ಜನರು enrolment ಮಾಡಿಕೊಂಡಿದ್ದಾರೆ. ನಾವು ವ್ಯಾಸಂಗ ಮಾಡುತ್ತಿರುವ ಕಾಲದಿಂದಲೇ ಉದ್ಯೋಗ ವಿನಿಯಮ ಕಛೇರಿ ಇದೆ. ಈ ಕಛೇರಿಯ ಪಾತ್ರ ಏನೆಂದು ನಮಗೆ ಅರ್ಥವಾಗುತ್ತಿಲ್ಲ. ನಮಗೆ ಹಿಂದಿನ ದಿವಸಗಳಲ್ಲಿ ಆ ಕಛೇರಿಯಿಂದ ಇಂತಹ ಕಡೆಗಳಲ್ಲಿ ಉದ್ಯೋಗ ಖಾಲಿ ಇದೆ, ಅರ್ಜಿ ಹಾಕಿಕೊಳ್ಳಬಹುದು ಎಂಬ ಮಾಹಿತಿ ಬರುತ್ತಿತ್ತು. ಆಗ ನಮ್ಮ ವಿದ್ಯಾರ್ಹತೆಗೆ ತಕ್ಕಂತೆ ಮಾಹಿತಿಗಳು ಬರುತ್ತಿದ್ದವು. ಆದರೆ, ಇತ್ತೀಚಿನ ದಿವಸಗಳಲ್ಲಿ ಆ ಕಛೇರಿಯಿಂದ ಆ ರೀತಿಯ ಪತ್ರಗಳನ್ನು ಕಳುಹಿಸಿದ ಮಾಹಿತಿಗಳು ಬಂದಿಲ್ಲ. ಹಾಗಾಗಿ, ಆ ಇಲಾಖೆ ಇದೆಯೋ ಅಥವಾ ಬೇರೆ ಇಲಾಖೆಯೊಂದಿಗೆ ವಿಲೀನಗೊಂಡಿದೆಯೋ ಎನ್ನುವುದೊಂದು ಪ್ರಶ್ನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರೇ, ಈಗ ಆ ಇಲಾಖೆ ಇಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಬಸವರಾಜ ಬೊಮ್ಮಾಯಿರವರು ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ

ಅನುಕೂಲವಾಗಲಿ ಎಂದು "ರೈತರ ವಿದ್ಯಾನಿಧಿ ಸ್ಕೀಮ್" ಅನ್ನು ಜಾರಿಗೆ ತಂದರು. ಇದರಲ್ಲಿ ವಿದ್ಯಾರ್ಥಿಗಳು ಯಾವ ವ್ಯಾಸಂಗವನ್ನು ಮಾಡುತ್ತಾರೆಯೋ ಅದಕ್ಕೆ ತಕ್ಕಂತೆ, ಅವರಿಗೆ 5 ಸಾವಿರ, 10 ಸಾವಿರ ಹಾಗೂ 50 ಸಾವಿರ ರೂಪಾಯಿಗಳವರೆಗೆ ಸಹಾಯಧನ ಕೊಟ್ಟರು. ಈಗ ನನ್ನ ಪ್ರಶ್ನೆ ಸಹ ಅದೇ ಇದೆ. ಈಗಾಗಲೇ ರೈತರ ಬಹಳಷ್ಟು ಮಕ್ಕಳು ಉನ್ನತ ಶಿಕ್ಷಣಕ್ಕಾಗಿ ಬ್ಯಾಂಕ್‌ಗಳಲ್ಲಿ ಸಾಲವನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಸುಮಾರು 21 ಸಾವಿರ ವಿದ್ಯಾರ್ಥಿಗಳು ಸಾಲ ತೆಗೆದುಕೊಂಡಿದ್ದಾರೆ. ಅವರಿಗೆ ಸುಮಾರು ರೂ.7964 ಕೋಟಿ ರೂಪಾಯಿಗಳ ಸಾಲವನ್ನು ನೀಡಲಾಗಿದೆ. ಈ ಸಾಲವನ್ನು ಮನ್ನಾ ಮಾಡುವ ಪ್ರಶ್ನೆ ಸರ್ಕಾರದ ಮುಂದೆ ಇದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಇಲ್ಲವೆಂದು ಹೇಳಿದ್ದಾರೆ. ಒಂದು ವೇಳೆ ಈ ಸಾಲವನ್ನು ಮನ್ನಾ ಮಾಡುವುದಕ್ಕೆ ಆಗಿದಿದ್ದರೂ ಸಹ, "ರೈತರ ವಿದ್ಯಾ ನಿಧಿ ಯೋಜನೆ"ಯಲ್ಲಿ ಯಾವ ರೀತಿ ಹಣವನ್ನು ಕೊಡಲಾಗುತ್ತಿದೆಯೋ, ಅದೇ ಪ್ರಮಾಣದಲ್ಲಿ ಈಗಾಗಲೇ ಸಾಲ ತೆಗೆದುಕೊಂಡು ಉನ್ನತ ಶಿಕ್ಷಣವನ್ನು ಯಾರು ಮುಗಿಸಿದ್ದಾರೆ, ಅವರಿಗೆ ಕೆಲಸ ಸಿಕ್ಕಿಲ್ಲ, ಅವರು ನಿರುದ್ಯೋಗಿಗಳಾಗಿದ್ದಾರೆ, ಅವರಿಗೆ ಬ್ಯಾಂಕ್‌ಗಳಿಂದ ಒತ್ತಡ ಜಾಸ್ತಿಯಾಗಿದೆ. ಈ ರೀತಿ ಸಾಲ ಕೊಡುವಂತಹ ಸಂದರ್ಭದಲ್ಲಿ ಆ ವಿದ್ಯಾರ್ಥಿಗಳ ತಂದೆ-ತಾಯಿಯವರ ಆಸ್ತಿಗಳನ್ನು ಜಾಮೀನಾಗಿ ಪಡೆದುಕೊಂಡಿದ್ದಾರೆ. ಈಗ ಅದು auction ಗೆ ಬರುತ್ತಿದೆ. ಆ ಕಾರಣಕ್ಕಾಗಿ ರೈತರ ವಿದ್ಯಾನಿಧಿಯಲ್ಲಿ ಕೊಡುವಂತಹ ಸವಲತ್ತುಗಳನ್ನಾದರೂ ಸಹ ಇವರಿಗೆ ಕೊಟ್ಟರೆ, ಅವರಿಗೆ ಬಡ್ಡಿ ಮನ್ನಾ ಆಗುತ್ತದೆ. ಸರ್ಕಾರ ಸಾಲವನ್ನು ರೆಕವರಿ ಮಾಡಿಕೊಳ್ಳಲಿ. ಈ ಉಚಿತವಾದಂತಹ ಸಾಲದಿಂದ ಉನ್ನತ ಶಿಕ್ಷಣವನ್ನು ಗಳಿಸುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ, ಮಾನ್ಯ ಸಚಿವರು ಇದನ್ನಾದರೂ ಮಾಡುತ್ತಾರೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ.

**ಡಾ॥ ಅಶ್ವಥ್ ನಾರಾಯಣ ಸಿ.ಎಸ್:-** ಮಾನ್ಯ ಸಾಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಬಹಳ ಪ್ರಸುತ್ತವಾದ ಶಿಕ್ಷಣ ಮತ್ತು ಉದ್ಯೋಗದ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ಇದು ನಮ್ಮೆಲ್ಲರನ್ನು ಕಾಡುವಂತಹ ವಿಷಯಗಳು. ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು ಜ್ಞಾನವನ್ನು ಹೆಚ್ಚಿಸಿಕೊಂಡು, ಕೌಶಲ್ಯವನ್ನು ಪಡೆದುಕೊಂಡು ಉದ್ಯೋಗವನ್ನು ಪಡೆದುಕೊಳ್ಳಬೇಕು ಎನ್ನುವಂತಹ ಒಂದು ದೃಷ್ಟಿಯಲ್ಲಿರುತ್ತಾರೆ. ಈ ನಿಟ್ಟಿನಲ್ಲಿ ಈಗಾಗಲೇ ಬೇರೆ ಬೇರೆ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದೇನೆ. ನಮ್ಮ ರಾಜ್ಯದಲ್ಲಿ ಪ್ರತಿವರ್ಷ EPF (Employment Provident Fund) ನಲ್ಲಿ ನೊಂದಾಯಿಸಿಕೊಳ್ಳುವಂತಹವರ ಸಂಖ್ಯೆ formal sector ನಲ್ಲಿ ಕನಿಷ್ಠ ಪಕ್ಷ ಸುಮಾರು 5 ಲಕ್ಷ

ಜನರು ಇರುತ್ತಾರೆ. ಇದಲ್ಲದೇ, informal sector ನಲ್ಲಿಯೂ ಬಹಳ ದೊಡ್ಡ ಪ್ರಮಾಣದಲ್ಲಿ ಇರುತ್ತಾರೆ. ಈ ಒಂದು ವರ್ಗವನ್ನು ಹೊರತುಪಡಿಸಿ, ಇನ್ನೂ ಮೇಲಿನ income limit ಗಿಂತ ಹೆಚ್ಚು ನಮ್ಮ ಬೆಂಗಳೂರಿನಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಇರುವಂತಹದ್ದು ಇದೆ.

**(ಮುಂದು)**

**(653) 28-03-2022 (12.40) ಎಂ.ವಿ-ಎಕೆ**

**ಡಾ|| ಸಿ.ಎನ್.ಅಶ್ವಥ್ ನಾರಾಯಣ (ಮುಂದು):-**

ಏಕೆಂದರೆ, technology, skill ಮತ್ತು ಬೇರೆ ಬೇರೆ higher ranking position ಇರುವಂತಹ ಉದ್ಯೋಗಗಳು ಹೆಚ್ಚು ಇವೆ. ಇವತ್ತು ನಾಲ್ಕು ಲಕ್ಷಕಿಂತ ಹೆಚ್ಚು Information Technology ನಲ್ಲಿಯೇ ಬೇರೆ ಬೇರೆ G.C.C (Global Capability Centres), E.I.C.S (Engineering Interactive Computing Systems), R & D (Research and Development) ಗಳಲ್ಲಿ ಉದ್ಯೋಗಗಳು ಇರುವಂಥದ್ದು ಇದೆ. ಆದರೆ, ಇದಕ್ಕೆ ಬೇಕಾಗಿರುವಂತಹ qualified ತರಬೇತಿ ಮತ್ತು talented ಇರುವಂತಹ ಅಭ್ಯರ್ಥಿಗಳಿಗೆ ತುಂಬಾ ಬೇಡಿಕೆ ಇದೆ. ಅದೇ ರೀತಿ ಸರಬರಾಜು ಮಾಡುವುದು ಸಹ ತುಂಬಾ ದೊಡ್ಡ challenge ಆಗಿದೆ. ಹಾಗಾಗಿ ಈ ದಿಕ್ಕಿನಲ್ಲಿ ಬೇಕಾಗಿರುವಂತಹ ಎಲ್ಲಾ Talent Acceleration Programme ಗಳನ್ನು ನಾವು ಅಳವಡಿಸಿಕೊಳ್ಳುತ್ತಿದ್ದೇವೆ. ಕಲಿಕೆಯಲ್ಲಿ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತೆ ಬುಡಮಟ್ಟದ ಪ್ರಾಥಮಿಕ ಶಿಕ್ಷಣದಲ್ಲಿ ಗಣಿತವನ್ನು ಮಕ್ಕಳು ಯಾವುದೇ ಬ್ರಾಂಚ್‌ಗೆ ಹೋದರು ಸಹ ಗಣಿತ ಮತ್ತು ಭಾಷೆ ಕಲಿಕೆಯನ್ನು ಬಹಳ ಚೆನ್ನಾಗಿ ಕಲಿತುಕೊಂಡರೆ, probably, ಎಲ್ಲಾ ರೀತಿಯಾದಂತಹ ಉದ್ಯೋಗ ಸರದೂಗಿಸುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಇವತ್ತಿನ ಗುಣಮಟ್ಟವನ್ನು ಸರಿಪಡಿಸಿಕೊಳ್ಳುವುದಕ್ಕೆ ಮೊದಲು formal education 6ನೇ ವಯಸ್ಸಿನಿಂದ ಪ್ರಾರಂಭವಾಗುತ್ತಿತ್ತು. ಆದರೆ, ಮುಂದಿನ ದಿನಗಳಲ್ಲಿ 3ನೇ ವಯಸ್ಸಿನಿಂದ ಪ್ರಾರಂಭವಾಗುತ್ತಿದೆ. ಆ ರೀತಿ ಮಾಡುವ ಮೂಲಕ 3 ರಿಂದ 6ನೇ ವಯಸ್ಸಿನಲ್ಲಿ ಹೆಚ್ಚಿನ ಕಲಿಕೆಗೆ ಸಾಧ್ಯವಾಗುತ್ತದೆ.

ಆದುದರಿಂದ ಅದನ್ನೆಲ್ಲಾ ಸರಿಪಡಿಸಿಕೊಳ್ಳಬೇಕಿದೆ. ಏಕೆಂದರೆ, ಎಲ್ಲಿ ಸರಿಯಾಗಬೇಕಾಗಿದೆ ಎನ್ನುವುದನ್ನು ನೋಡಿದರೆ, ಇದು ಎಲ್ಲಾ ಕಡೆ ತುಂಬಾ ಹರಿದು ಹಂಚಿ ಹೋಗಿದೆ. ಅದೇ ರೀತಿ ಮಾನ್ಯ ಸದಸ್ಯರು ಉದ್ಯೋಗ ವಿನಿಮಯ ಕೇಂದ್ರಗಳ ಬಗ್ಗೆ ಮಾತನಾಡಿದರು. ಅದು ಇವತ್ತಿಗೂ ಸಹ ಕಡ್ಡಾಯವಿದೆ. ಪ್ರತಿಯೊಬ್ಬರು ಸಹ ಉದ್ಯೋಗ ಪಡೆದುಕೊಳ್ಳಬೇಕು. ಈಗ ಯಾವುದೇ ಕಂಪನಿಯಲ್ಲಿ ನೇಮಕ ಮಾಡಬೇಕಾದರೂ ಸಹ ಇವತ್ತಿಗೂ ಸಹ ಉದ್ಯೋಗ ವಿನಿಮಯ ಕೇಂದ್ರದ ಮೂಲಕವೇ ಹೋಗಬೇಕಾಗಿದೆ. ಆದರೆ, ಅವರು ಮಾಡಲಿಲ್ಲವೆಂದರೆ ಏನೆಂದು ಕೇಳಿದ್ದಾರೆ. ಅವರು ಮಾಡಲಿಲ್ಲವೆಂದರೆ ಅವರ ಮೇಲೆ ಏನು ಕ್ರಮವಿಲ್ಲ. ಆದರೆ, ಮೊದಲು ಕಡ್ಡಾಯವಿತ್ತು.

**ಸಭಾಪತಿಯವರು:–** ಮಾನ್ಯ ಸಚಿವರೆ, Employment Exchange ಗಳೇ ಇಲ್ಲ. ಇದ್ದರೆ ನನಗೆ ಅವುಗಳ ಲಿಸ್ಟ್ ನೀಡಿ.

**ಡಾ॥ ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಸಭಾಪತಿಯವರೇ, ಈಗಲೂ ಸಹ Employment Exchange ಗಳಿವೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, Employment Exchange ಗಳಿವೆ. ಆದರೆ, ಎಲ್ಲಾ ಜಿಲ್ಲೆಗಳಲ್ಲೂ ಇಲ್ಲ.

**ಡಾ॥ ಸಿ.ಎನ್.ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಎಲ್ಲಾ ಜಿಲ್ಲೆಗಳಲ್ಲೂ ಸಹ District Employment Officer ಗಳು ಮತ್ತು District Skill Officer ಗಳಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಸಹ Employment Exchange ಇದೆ. ಬಹಳ ಮುಖ್ಯವಾಗಿ ಅವರು ಕಡ್ಡಾಯವಾಗಿ ಅಲ್ಲಿಗೆ ಬರಬೇಕಾಗಿದೆ. ಆದರೆ, ಅವರು ಬರಲಿಲ್ಲವೆಂದರೆ ಏನೆಂದು ಇದೆ. ಮೊದಲು ಕಡ್ಡಾಯವಾಗಿ ಬರಲೇಬೇಕಾಗಿತ್ತು. ಆದರೆ, ಅಧಿಕಾರ ದುರುಪಯೋಗ ಮಾಡಿಕೊಂಡು ಕಂಪನಿ ಮತ್ತು ಸಂಸ್ಥೆಗಳಿಗೆ ಜಾಸ್ತಿ ಕಿರುಕುಳ ನೀಡುತ್ತಿದ್ದರು. ಹಾಗಾಗಿ ಅದನ್ನು ಬೇರೆ ಬೇರೆ ರೀತಿಯಲ್ಲಿ penalise ಮಾಡಿ, ಕ್ರಮ ಕೈಗೊಳ್ಳುವಂತಹ provision ಗಳನ್ನು ಈ ಹಿಂದೆ withdraw ಮಾಡಿರುವಂಥದ್ದು ಆಗಿದೆ. ಇವತ್ತು ಮುಂದುವರೆದು, ನಾವು ಅವರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕೆ ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಕಂಪನಿಗಳ ಜೊತೆ collaborate ಮಾಡಿಕೊಂಡು, ಅವರಿಗೆ ಯಾವ ರೀತಿಯ ಕೌಶಲ್ಯ ಹೊಂದಿದಂತಹವರು ಬೇಕಾಗಿದ್ದಾರೆಂದು ಕೇಳಿ. ಕಂಪನಿಯವರೇ

ತರಬೇತಿ ನೀಡಿದರೆ, ಕಂಪನಿಯವರಿಗೆ ಹಣ ಕೊಡುವುದಕ್ಕೆ ತಯಾರಿದ್ದೇವೆ. ನಾವೇ ತರಬೇತಿ ನೀಡಿ ಕೊಡಬೇಕು ಎಂದರೆ, ಅದನ್ನು ಸಹ ಮಾಡುತ್ತೇವೆ. ಈ demand and supply ಅನ್ನು match ಮಾಡುವುದಕ್ಕೋಸ್ಕರ, 'Skill Connect' ಅನ್ನುವುದನ್ನು ಪ್ರಾರಂಭ ಮಾಡಿದ್ದೇವೆ. ಯಾವ ರೀತಿಯ opportunities ಇದೆ ಎಂಬುದನ್ನು ತಿಳಿಸಿ, ಅವರನ್ನು ಬೇರೆ ಬೇರೆ ರೀತಿಯಲ್ಲಿ ಕೈ ಹಿಡಿದು, ಒಂದು ಒಳ್ಳೆಯ ಸಂಬಂಧಗಳನ್ನು ಮತ್ತೆ ನಮ್ಮನ್ನು ಎದುರು ನೋಡುವಂಥದ್ದಕ್ಕೆ ವಿಶ್ವಾಸ ಮೂಡಿಸುವ ರೀತಿಯಲ್ಲಿ ಎಲ್ಲಾ ಪ್ರಯತ್ನಗಳನ್ನು ಮಾಡುವಂಥದ್ದು ಆಗುತ್ತಿದೆ. ಮತ್ತೆ "ಮುದ್ರಾ ಯೋಜನೆ" ಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಲಕ್ಷಾಂತರ ಜನರಿಗೆ ಹಣ ನೀಡುವಂತಹ ವ್ಯವಸ್ಥೆ ಇದೆ. ಅದೇ ರೀತಿ "ರೋಜ್‌ಗಾರ್ ಯೋಜನೆ" ಯಲ್ಲೂ ನೀಡುವಂಥದ್ದು ಆಗುತ್ತಿದೆ.

ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ ಸಾಲಗಳನ್ನು ತೆಗೆದುಕೊಳ್ಳುತ್ತಿರುವುದು. ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಎಲ್ಲಾ ರೀತಿಯ ವಿದ್ಯಾರ್ಥಿ ವೇತನ ನೀಡುವಂಥದ್ದು ಆಗುತ್ತಿದೆ. ಅದೇ ರೀತಿ ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿ ವೇತನ ನೀಡುವಂಥದ್ದು ಆಗುತ್ತಿದೆ. ರೈತರ ಮಕ್ಕಳಿಗೂ ಸಹ ವಿದ್ಯಾರ್ಥಿ ವೇತನ ನೀಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಅದರ ಜೊತೆಗೆ education loan ಅನ್ನು ಸಹ ಬಹಳಷ್ಟು subsidized cost ನಲ್ಲಿ ಕೊಡುವಂಥದ್ದನ್ನು ಮಾಡಿ, ಒಟ್ಟಾರೆ ಉತ್ತಮವಾಗಿ ಅಭ್ಯಾಸ ಮಾಡುವುದಕ್ಕೆ ಮಾಡುತ್ತಿದ್ದೇವೆ. ಮೊದಲು syllabus ಗಳು competitive examination ಗೆ align ಆಗಿರಲಿಲ್ಲ. ಈಗ foreign studies ಗೂ ಅವಕಾಶವಿರುವಂಥದ್ದು ಇದೆ. Competitive examination ಗೂ ಸಹ syllabus ನಲ್ಲೇ integrate ಮಾಡಿ, ಮೊದಲು ಪಾಸ್ ಆದ ಮೇಲೆ competitive examination ಗೆ ತಯಾರಾಗುವಂಥದ್ದು ಇತ್ತು. ಇವತ್ತು ಏನು combination ಮಾಡಿಕೊಂಡಿದ್ದೇವೆ, ಈ combination ನಲ್ಲಿ subject, competitive examination ಗೂ ತಯಾರಾಗುವುದಕ್ಕೆ ಅವಕಾಶವಿರುವಂಥದ್ದು ಇದೆ. ಒಟ್ಟಾರೆಯಾಗಿ ಈ ರೀತಿಯಲ್ಲಿ ಸ್ಟಡಿ ಸರ್ಕಲ್, ಇನ್ನೊಂದು-ಮತ್ತೊಂದು ಎಂದು ಹಲವಾರು ಸುಧಾರಣೆಗಳನ್ನು ಮಾಡಿ. ಸ್ಟಡಿ ಸರ್ಕಲ್, employment counselling, career counselling, ಮಾದರಿ ವೃತ್ತಿ ಕೇಂದ್ರಗಳು, ಸ್ಕಿಲ್ ಟ್ರೈನಿಂಗ್ ಮತ್ತೆ ಬೇರೆ ಬೇರೆ ರೀತಿಯಲ್ಲಿ International Migration Centre ಮಾಡುತ್ತಿರುವಂಥದ್ದು. ಇವೆಲ್ಲವನ್ನು ಮಾಡಿ, ಒಟ್ಟಾರೆಯಾಗಿ ಮುಂದಿನ ದಿನಗಳಲ್ಲಿ ಐದು ವರ್ಷದ

ಕಾಲದಲ್ಲಿ ಒಂದು ಕೋಟಿ ಇರುವಂತಹ ಉದ್ಯೋಗಗಳನ್ನು ಸದೃಢಗೊಳಿಸುವುದು. ಗ್ರಾಮೀಣ ಭಾಗದಲ್ಲಿ ಹೊಸದಾಗಿ ಉದ್ಯೋಗಗಳನ್ನು ಹೆಚ್ಚಿಸುವಂತಹ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತೇವೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಉದ್ಯೋಗ ವಿನಿಮಯ ಕೇಂದ್ರಗಳನ್ನು activate ಮಾಡದೇ ಇದ್ದರೆ, ಈಗ ನಾವು ಕನ್ನಡಿಗರಿಗೆ ಉದ್ಯೋಗ ಸಿಗುತ್ತಿಲ್ಲ ಮತ್ತು ಅವರಿಗೆ ಉದ್ಯೋಗ ನೀಡಿಲ್ಲವೆಂದು ಬೇರೆ ಬೇರೆ ಸಂದರ್ಭದಲ್ಲಿ ಮಾತನಾಡುತ್ತೇವೆ. ಈಗ ಉದ್ಯೋಗ ಬೇಕು ಎಂದು, ರಿಜಿಸ್ಟರ್ ಆಗಿ ಅದಕ್ಕೆ ಕೆಲಸ ಸಿಕ್ಕಿದೆ ಎಂಬ ಮೂಲಭೂತವಾದಂತಹ ಹಲವಾರು ಮಾಹಿತಿಗಳು ಸಿಗುವುದೇ ಇಲ್ಲ. ಮೊದಲು ಅದನ್ನು monitor ಮಾಡುತ್ತಿದ್ದರು. ಆದರೆ, ಈಗ ಅದನ್ನು monitor ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಆದರೆ, ಮಾನ್ಯ ಮಂತ್ರಿಗಳು ಇದನ್ನು ಬಹಳ ಗಂಭೀರವಾಗಿ ಯೋಚಿಸಲಿ. ಮಾನ್ಯ ಮಂತ್ರಿಗಳು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮಾಹಿತಿ ನೀಡದೆ ನೇಮಕಾತಿ ಮಾಡಿಕೊಂಡರೆ ಮುಂದೆ ಏನು ಮಾಡಬೇಕು ಎಂಬುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲವೆಂದು ಹೇಳಿದರು. ಈಗ ಸದನದಲ್ಲಿ ಹಲವಾರು ತಿದ್ದುಪಡಿಗಳನ್ನು ತರುತ್ತೇವೆ. ಅದೇ ರೀತಿ ಇದಕ್ಕೂ ಸಹ ಒಂದು ತಿದ್ದುಪಡಿ ತೆಗೆದುಕೊಂಡು ಬರಲಿ. ಉದ್ಯೋಗ ವಿನಿಮಯ ಕೇಂದ್ರವನ್ನು strengthen ಮಾಡಿದರೆ, ಅದರಲ್ಲಿ ಕನ್ನಡಿಗರ ಹಿತಾಸಕ್ತಿ ಕೂಡ ಬರುತ್ತದೆ. ಎರಡನೆಯದಾಗಿ, ಈಗ ರೈತರ ವಿದ್ಯಾನಿಧಿಗೆ ಏನು ಹಣ ಕೊಡುತ್ತಾರೆ. ಇಲ್ಲಿಗೂ ಸಹ ಅಷ್ಟೇ ಹಣವನ್ನು ನೀಡಲಿ. ಏಕೆಂದರೆ, ಇಲ್ಲೂ ಸಹ ರೈತರ ಮಕ್ಕಳೇ ಇದ್ದಾರೆ. ಜಾತಿ ರಹಿತವಾಗಿ ರೈತರ ವಿದ್ಯಾನಿಧಿಗೆ ಹಣವನ್ನು ನೀಡಿದ್ದಾರೆ. ಈಗ ಮಧ್ಯಮ ವರ್ಗ ಮತ್ತು ಕೂಲಿ ಕಾರ್ಮಿಕರ ಮಕ್ಕಳೇ ಸಾಲವನ್ನು ತೆಗೆದುಕೊಂಡಿರುವುದು. ಯಾವುದೇ ರಾಜಕಾರಣಿಗಳ ಮತ್ತು ಅಧಿಕಾರಿಗಳ ಮಕ್ಕಳು ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಓದುತ್ತಿಲ್ಲ. ಆ ರೀತಿಯಲ್ಲಿ ಓದುತ್ತಿರುವುದು ಮಧ್ಯಮ ಮತ್ತು ಕೆಳಗಿನ ವರ್ಗದವರು ಮಾತ್ರ. ಅಂತಹವರ ಆ ಜ್ಞಾನಭಂಡಾರ ಏನು ಆ ಜ್ಞಾನಾರ್ಜನೆ ಇದೆ, ಅದು ಈ ದೇಶದ ಆಸ್ತಿ. ಆ ಕಾರಣಕ್ಕೋಸ್ಕರ ರೈತರ ವಿದ್ಯಾನಿಧಿಯಲ್ಲಿ ಕೊಡುವಷ್ಟು ಸವಲತ್ತುಗಳನ್ನಾದರೂ ಈ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಂತಹವರಿಗೆ ಕೊಟ್ಟರೆ, ತಕ್ಕಮಟ್ಟಿಗೆ ಬಡ್ಡಿಯ ಹೊರೆ ಕಡಿಮೆಯಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಪರಿಗಣಿಸಬೇಕೆಂದು ತಮ್ಮ ಮೂಲಕ ಆಗ್ರಹ ಮಾಡುತ್ತೇನೆ.

**ಡಾ॥ ಸಿ.ಎನ್.ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಮಾನ್ಯ ಸದಸ್ಯರ ಸಲಹೆ ಚೆನ್ನಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೆ ತಾವು ಏನೆಂದು ಹೇಳಿದ್ದೀರಿ.

**ಡಾ॥ ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಸಭಾಪತಿಯವರೇ, ನಾನು ಸಲಹೆ ಚೆನ್ನಾಗಿದೆ ಎಂದು ಹೇಳಿದೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ನಾನು ಮಾನ್ಯ ಸದಸ್ಯರ ತಲೆ ಚೆನ್ನಾಗಿದೆ ಎಂದು ತಿಳಿದುಕೊಂಡಿದ್ದೆ.

**ಡಾ॥ ಸಿ.ಎನ್.ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ತಲೆಯೂ ಚೆನ್ನಾಗಿದೆ ಮತ್ತು ಅವರ ಸಲಹೆಯೂ ಚೆನ್ನಾಗಿದೆ. ಈಗ ಯಾರೇ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡಬೇಕೆಂದರೆ, ಸ್ಥಿತಿವಂತರಲ್ಲದವರಿಗೂ ಸಹ interest subsidy component ಗಳನ್ನು ಶಿಕ್ಷಣದಲ್ಲಿ ತಂದರೆ, ಏಕೆಂದರೆ ನಾವು ಎಲ್ಲರೂ ಸಹ ಹೇಳುತ್ತಿದ್ದೇವೆ. ಇವತ್ತು ಇಪ್ಪತ್ತೊಂದನೇ ಶತಮಾನ ಜ್ಞಾನದ ಶತಮಾನ, 'knowledge-based economy' ಎಂದು ಹೇಳುತ್ತಿದ್ದೇವೆ. ಇವುಗಳನ್ನೆಲ್ಲಾ ಹೆಚ್ಚಿನ ರೀತಿಯಲ್ಲಿ ಸರಿಯಾಗಿ ಅಳವಡಿಸಿಕೊಂಡು, ಸರಿಪಡಿಸಿಕೊಳ್ಳಬೇಕಾದರೆ, interest completely waive off ಆಗಿ ಬರುವಂತಹ ದಿನಗಳು ಬರಬೇಕು ಎಂಬುದು ಇದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಸದ್ಯಕ್ಕೆ ವಿದ್ಯಾನಿಧಿಯ ಸವಲತ್ತನ್ನಾದರೂ ವಿಸ್ತರಿಸಿ ಕೊಡಲಿ.

**ಡಾ॥ ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಸಭಾಪತಿಯವರೇ, ಅದೇ ರೀತಿ ಬೇರೆ ಬೇರೆ ತಿದ್ದುಪಡಿಗಳನ್ನು ತಂದು, ಅದನ್ನು ಯಾವ ರೀತಿ balance ಮಾಡಬಹುದು, ಎಂಬುದನ್ನು ನೋಡಿಕೊಂಡು ಮಾಡುತ್ತೇವೆ.

**ಆ). ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ॥ ಸಿ.ಎನ್.ಅಶ್ವತ್ಥನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಮತ್ತು ಐಟಿ-ಬಿಟಿ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 28ನೇ ಮಾರ್ಚ್, 2022, ಸಮೂಹರ-1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 62 ಪ್ರಶ್ನೆಗಳ ಪೈಕಿ, 15 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಲಿಖಿತ ಉತ್ತರದ ಪ್ರತಿಗಳನ್ನು ಲಗತ್ತಿಸಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಯಾವಾಗಲೂ ಸಹ ಇದೇ ರೀತಿ ಆಗುತ್ತಿದೆ. ಯಾವೊತ್ತು ಸಹ ಶೇಕಡಾ 50ರಷ್ಟು ಉತ್ತರಗಳು ಬಂದಿಲ್ಲ. ಈ ರೀತಿಯಾದರೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳನ್ನು ಬಂದ್ ಮಾಡಿದರೆ ಬಹಳ ಉತ್ತಮವೆಂದು ಕಾಣುತ್ತದೆ. ಮಾನ್ಯ ಸದಸ್ಯರು ಬಹಳ ಕಷ್ಟಬಿದ್ದು ಪ್ರಶ್ನೆ ಹಾಕುತ್ತಾರೆ. ಆಗ ಅವರ ಪ್ರಶ್ನೆಗಳಗೆ ಉತ್ತರ ಬರುವುದಿಲ್ಲವೆಂದರೆ ಹೇಗೆ? ಈಗ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರೂ ಸಹ ಇವರು ಅವರ ಮಾತನ್ನು ಕೇಳುವುದಿಲ್ಲವೆಂದರೆ, ಅವರಿಗೆ ಸರ್ಕಾರದ ಮೇಲೆ ಗೌರವ ಇದೆಯೋ ಇಲ್ಲವೋ ಎಂಬುದು ನಮಗೆ ಇದರಿಂದಲೇ ಗೊತ್ತಾಗುತ್ತದೆ.

**ಸಭಾಪತಿಯವರು:–** ನಾನು ಅವರಿಗೆ ಬಹಳಷ್ಟು ಬಾರಿ ಹೇಳಿ ಹೇಳಿ ಸಾಕಾಗಿದೆ.

**ಡಾ॥ಕೆ.ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾನು ಕಳೆದ ಬಾರಿಯ ಅಧಿವೇಶನದಲ್ಲೂ ಸಹ ತಮಗೆ ಮನವಿ ಮಾಡಿಕೊಂಡಿದ್ದೆ. ನಾವು ಹಾಕಿದ ಪ್ರಶ್ನೆಗಳಗೆ ಉತ್ತರವೇ ಬರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಶೇಕಡಾ 95ರಷ್ಟು ಪ್ರಶ್ನೆಗಳಗೆ ಉತ್ತರವೇ ಬರುವುದಿಲ್ಲ. ಈ ರೀತಿಯಾದರೆ ಹೇಗೆ?

**ಡಾ॥ ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಪೂರ್ತಿಯಾಗಿ ಮಾನ್ಯ ಮರಿತಿಬ್ಬೇಗೌಡರ ಪ್ರಶ್ನೆಗಳೇ ಜಾಸ್ತಿ ಇವೆ.

**ಸಭಾಪತಿಯವರು:–** ಮಾನ್ಯ ಸದಸ್ಯರ ಪ್ರಶ್ನೆಗಳಗೆ ಬೇಗ ಉತ್ತರ ಒದಗಿಸಿ. ಮಾನ್ಯ ಬಿ.ಎಂ.ಫಾರೂಖ್‌ರವರು ಸರ್ಕಾರಿ ಭರವಸೆಗಳ ಸಮಿತಿಯ 48ನೇ ವರದಿಯನ್ನು ಒಪ್ಪಿಸುವುದು. ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ತಿಳಿಸಿದಂತೆ, ಈಗ ಸರ್ಕಾರಿ ಭರವಸೆಗಳ ಸಮಿತಿಯ ವರದಿ ಒಪ್ಪಿಸುವುದು ಬೇಡ. ಏಕೆಂದರೆ, ನಾಳೆ ಮಾನ್ಯ ಬಿ.ಎಂ.ಫಾರೂಖ್‌ರವರೇ ಬಂದು ಒಪ್ಪಿಸುತ್ತಾರೆ.

**೦2. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ,ಕವಿಪ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2022.

**ಸಭಾಪತಿಯವರು:-** ಮಂಡಿಸಲಾಯಿತು.

**೦3.ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳು ಹಾಗೂ ಅಧಿಕಾರಿಗಳು.**

**ಸಭಾಪತಿಯವರು:-** ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳು:

1. ಶ್ರೀ ಗೋವಿಂದ ಎಂ. ಕಾರಜೋಳ, ಜಲಸಂಪನ್ಮೂಲ ಸಚಿವರು.
2. ಶ್ರೀ ಅರಗ ಜ್ಞಾನೇಂದ್ರ, ಗೃಹ ಸಚಿವರು.
3. ಶ್ರೀ ಅರಬೈಲು ಹೆಬ್ಬಾರ ಶಿವರಾಮ್, ಕಾರ್ಮಿಕ ಸಚಿವರು.
4. ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.
5. ಶ್ರೀ ಕೆ.ಗೋಪಾಲಯ್ಯ, ಅಬಕಾರಿ ಸಚಿವರು.

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಇಲಾಖಾಧಿಕಾರಿಗಳು:**

1. ಡಾ॥ ಎಂ.ವಿ.ವೆಂಕಟೇಶ್, ಭಾ.ಆ.ಸೇ., ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ.
2. ಡಾ॥ ಅರುಂಧತಿ ಚಂದ್ರಶೇಖರ್, ಭಾ.ಆ.ಸೇ., ಯೋಜನಾ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಯೋಜನೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ.

3. ಶ್ರೀಮತಿ ಪಿ.ಎಸ್.ಮಾಲಾತಿ, ಸರ್ಕಾರದ ಉಪ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
4. ಶ್ರೀ ಬಿ.ಜಿ.ಹೇಮಣ್ಣ, ಸರ್ಕಾರದ ಜಂಟಿ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**(ಮುಂದು)**

**(654) 28.3.2022 12.50 ಎಲ್‌ಎಲ್(ಪಿಕೆ)ಎಕೆ**

**೦4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ:** ಫಲಿತಾಂಶದ ವಿಳಂಬ ಅವಧಿಯನ್ನು ಕೋವಿಡ್ ಅವಧಿಯೆಂದು ಪರಿಗಣಿಸಿ ಅನುಕಂಪ ನೇಮಕಾತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡುವ ಬಗ್ಗೆ.

- - -

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮೈಸೂರು ವಿಶ್ವವಿದ್ಯಾಲಯದಲ್ಲಿ ಪದವಿ ಪರೀಕ್ಷೆ ಫಲಿತಾಂಶ ಸಾಮಾನ್ಯವಾಗಿ ಜೂನ್ ತಿಂಗಳ ಅಂತ್ಯದೊಳಗೆ ಬರುತ್ತಿದ್ದು, ಕಳೆದ ವರ್ಷ ಕೋವಿಡ್ ಕಾರಣ ಪದವಿ ಅಂತಿಮ ವರ್ಷದ ಪರೀಕ್ಷೆಯ ಫಲಿತಾಂಶವು ನವೆಂಬರ್ ತಿಂಗಳಿನಲ್ಲಿ ಬಂದಿದೆ. ಮೃತರ ಮಕ್ಕಳು ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ನೀಡಿರುತ್ತದೆ. ಆದರೆ, ಕೋವಿಡ್ ಅವಧಿಯನ್ನು ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಫಲಿತಾಂಶ ವಿಳಂಬವಾದ ಕಾರಣ, ವಿಳಂಬದ ಅವಧಿಯನ್ನು ಕೋವಿಡ್ ಅವಧಿ ಎಂದು ಪರಿಗಣಿಸಲು ಆಡಳಿತ ಮತ್ತು ಸಿಬ್ಬಂದಿ ಇಲಾಖೆಯ ಸುತ್ತೋಲೆ ಸಂಖ್ಯೆ: ಸಿಆಸುಇ:76;ಸೇನಿಬಿ:2020, ದಿನಾಂಕ: 17.9.2021ರಂದು ಆದೇಶ ನೀಡಿರುತ್ತದೆ. ಇದೇ ಮಾದರಿಯಲ್ಲಿ ಅಂತಿಮ ವರ್ಷದ ಡಿಪ್ಲಮೋ/ಪದವಿ/ಸ್ನಾತಕೋತ್ತರ ಪದವಿಯ ಫಲಿತಾಂಶದ ಅವಧಿಯನ್ನು ಕೋವಿಡ್ ಅವಧಿಯೆಂದು ಪರಿಗಣಿಸಿ, ಪ್ರಸಕ್ತ ವರ್ಷದ ಡಿಸೆಂಬರ್-2021ರ

ಅಂತ್ಯದವರೆಗೂ ಅನುಕಂಪನದಡಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಆಡಳಿತ ಮತ್ತು ಸಿಬ್ಬಂದಿ ಇಲಾಖೆಗೆ ನಿರ್ದೇಶಿಸುವಂತೆ ವಿನಂತಿಸುತ್ತೇನೆ.

**ಡಾ: ಸಿ.ಎನ್. ಅಶ್ವತ್‌ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಇಲಾಖೆ):-** ಮಾನ್ಯ ಸಭಾಪತಿಗಳೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

**ಆ)** ವಿಷಯ: ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನ್ಯ ಕಾರ್ಯಕ್ರಮಗಳಿಂದ ಮುಕ್ತಗೊಳಿಸಿ
ಬೋಧನೆಗೆ ಹೆಚ್ಚಿನ ಪ್ರಾಶಸ್ತ್ಯದ ಬಗ್ಗೆ.

- - -

**ಡಾ॥ ತಳವಾರ ಸಾಬಣ್ಣ(ನಾಮ ನಿರ್ದೇಶನ ಹೊಂದಿದವರು**):- ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಈಗಾಗಲೇ ಶೇ 50ರಷ್ಟು ಶಿಕ್ಷಕರ ಕೊರತೆಯಿದೆ. ಇದರ ನಡುವೆ, ಶಿಕ್ಷಕರು ಎಷ್ಟು ಭಾರ ಹೊರಿಸಿದರೂ ತಾಳಿಕೊಳ್ಳಬಲ್ಲರು ಎಂದು ಸರ್ಕಾರ ತಿಳಿದುಕೊಂಡಂತಿದೆ. ಯಾವುದೇ ಚುನಾವಣೆಗಳು ಸಂದರ್ಭದಲ್ಲಿಯೂ ಬೂತ್ ಅಧಿಕಾರಿಯಾಗಿ ಇವರು ಹೋಗಬೇಕು. ಯಾವುದೇ ಜನಗಣತಿ, ಪ್ರಾಣಿಗಣತಿ ಇದ್ದರೂ ಅದರ ಹೊಣೆಯನ್ನು ಶಿಕ್ಷಕರ ಮೇಲೆ ಹೊರಿಸುವುದು ದಶಕಗಳಿಂದ ನಡದುಕೊಂಡು ಬಂದಿದೆ. ಶಾಲೆಗೆ ಬಾರದ ಮಕ್ಕಳನ್ನು ಮನೆಮನೆ ಹುಡುಕಿ 'ಮರಳಿ ಬಾ ಶಾಲೆಗೆ' ಎಂದು ಕರೆತರಲು ಇವರು ಬೇಕು. ಬಿಸಿಯೂಟ ತಯಾರಿಸುವ ಕೆಲಸ ಬಿಟ್ಟರೆ ಅದರ ಹಲವು ನಿರ್ವಹಣೆಗಳಿವೆ. ಕೇಂದ್ರ ಮತ್ತ ರಾಜ್ಯ ಸರ್ಕಾರ ಯಾವುದೇ ಹೊಸ ಯೋಜನೆ ಆರಂಭಿಸಿದರೂ ಅದರ ಬಗ್ಗೆ ಅರಿವು ಮೂಡಿಸಲು ಇವರು ಓಡಾಡಬೇಕಿದೆ. ಕೊರೋನಾ ಹಾವಳಿಯ ಸಂದರ್ಭದಲ್ಲಂತೂ ಇವರನ್ನು ಸಾಕಷ್ಟು ಬಳಸಿಕೊಳ್ಳಲಾಗಿತ್ತು. ಪ್ರೈಮರಿ, ಸೆಕೆಂಡರಿ ಸೋಂಕಿತರನ್ನು ಪತ್ತೆ ಹಚ್ಚಲೂ ಸಹ ಬಳಸಲಾಗಿತ್ತು. ಇದರ ಕಾರಣ ಹಲವಾರು ಶಿಕ್ಷಕರು ಮೃತ ಪಟ್ಟಿದ್ದು ಎಲ್ಲರ ಗಮನಕ್ಕೆ ಇದೆ. ಇದಲ್ಲದೆ ನಾನಾ ತರಬೇತಿಗಳಿಗೆ, ಮೀಟಿಂಗ್‌ಗಳಿಗೆ ತಾಲ್ಲೂಕು-ಜಿಲ್ಲಾ ಕೇಂದ್ರಗಳಿಗೆ

ಓಡಾಡುವುದಂತೂ ಇದ್ದದ್ದೇ. ಬಿಸಿಯೂಟ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಮಾಹಿತಿಯ ವರದಿಯನ್ನು ಮೊಬೈಲ್‌ನಲ್ಲಿ ಪ್ರತಿನಿತ್ಯ ಮೇಲಾಧಿಕಾರಿಗಳಿಗೆ ಕಳುಹಿಸಬೇಕಾಗಿದೆ. ಈ ಮಧ್ಯೆ ಪಾಠ ಯಾವಾಗ ಮಾಡುತ್ತಾರೆ, ಮಕ್ಕಳು ಶಿಕ್ಷಕರ ಮುಖ ಯಾವಾಗ ನೋಡುತ್ತಾರೆ ಎಂಬಂಥ ಪ್ರಶ್ನೆಗಳನ್ನು ಕೇಳುವುದಕ್ಕೆ ಆಸ್ಪದವಿದೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ಸದ್ಯ ಅನ್ಯ ಕಾರ್ಯಗಳಿಂದ ಮುಕ್ತಿ ಸಿಗಲಿದೆ. ಆದರೆ, ಪ್ರಾಥಮಿಕ ಶಾಲಾ ಶಿಕ್ಷಕರ ಕಥೆ ಇನ್ನೂ ಕಗ್ಗಂಟಾಗಿ ಕೂತಿದೆ. ಅಂಗನವಾಡಿ ಕಾರ್ಯಕರ್ತೆಯರಂತೆಯೇ ಶಿಕ್ಷಕರೂ ತಮ್ಮ ಮೇಲಿನ ಹೊರೆಗಳಿಂದ ಬಳಲಿದ್ದಾರೆ. ಇದೆಲ್ಲದರ ನಡುವೆ ಪಾಠ ಮಾಡಲು ಅವರಿಂದ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಪದೇ ಪದೇ ಶೈಕ್ಷಣಿಕ ಗುಣಮಟ್ಟ ಕುಸಿಯುವುದನ್ನು ನಾವು ನೋಡುತ್ತಿದ್ದೇವೆ. ಅಧ್ಯಯನ ಮತ್ತು ಬೋಧನೆಯ ಕಡೆ ಸರಕಾರಿ ಶಾಲಾ ಶಿಕ್ಷಕರು ಹೆಚ್ಚಿನ ಗಮನ ಕೇಂದರೀಕರಿಸುವಂತಾದರೆ, ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಂಥ ಫಲಿತಾಂಶವನ್ನು ತಂದುಕೊಡಬಲ್ಲರು. ಹಾಗೂ ಸರಕಾರಿ ಶಾಲೆಗಳಿಗೆ ಬರುವ ಗ್ರಾಮೀಣ ಭಾಗದ ಬಡ ಮಕ್ಕಳಿಗೆ ಅನ್ಯಾಯ ಮಾಡಿದಂತಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನುಸಾರ ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರ ತರಬೇತಿ ಮತ್ತು ಅವರ ಪಾಲ್ಗೊಳ್ಳುವಿಕೆ ತೀರಾ ಅವಶ್ಯವಾಗಿದೆ. ಏಕೆಂದರೆ, ಶಿಕ್ಷಕರು ಶಿಕ್ಷಣದ ಜೀವಾಳ. ಗಣತಿ, ಚುನಾವಣೆ ಕಾರ್ಯ ಮುಂತಾದವುಗಳಿಗೆ ಗುತ್ತಿಗೆ ಆಧಾರದಲ್ಲಿ ಗ್ರಾಮೀಣ ಸುಶಿಕ್ಷಿತರ ನೇಮಕ, ಶಿಕ್ಷಿತ ನಿರುದ್ಯೋಗಿಗಳ ಅರೆಕಾಲಿನ ಬಳಕೆ, ಎನ್‌ಜಿಓಗಳ ಮೂಲಕ ಇಂಥ ಕಾರ್ಯಗಳ ನಿರ್ವಹಣೆ ಮುಂತಾದ ನವೀನ ಚಿಂತನೆಗಳನ್ನು ಸರ್ಕಾರ ಮಾಡಬಹುದಾಗಿದೆ. ಕಾರಣ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನ್ಯ ಕಾರ್ಯಗಳಿಂದ ಮುಕ್ತಾಗೊಳಿಸಿ ಬೋಧನೆಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಚಿವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿ ಕೊಡಲಾಗುವುದು.

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಇ)** ವಿಷಯ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಶುದ್ಧ ಕ್ರಯ ಪತ್ರ ನೀಡುವ ಕುರಿತು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು**):- ಮಾನ್ಯ ಸಭಾಪತಿಗಳೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹಂಚಿಕೆ ಮಾಡಲಾದ ನಿವೇಶನಗಳನ್ನು 10 ವರ್ಷಗಳ ಲೀಸ್-ಕಂ-ಸೇಲ್ ಆಧಾರದ ಮೇಲೆ ನೀಡಲಾಗಿದ್ದು, ನಿವೇಶನಗಳು ಹಂಚಿಕೆಯಾಗಿ 10 ವರ್ಷ ಪೂರ್ಣಗೊಂಡಿದ್ದರೂ ಸಹ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಶುದ್ಧ ಕ್ರಯಪತ್ರವನ್ನು ನೀಡುತ್ತಿಲ್ಲ. ಲೀಸ್ ಅವಧಿಯಲ್ಲಿ ಮನೆ ನಿರ್ಮಾಣ ಮಾಡದ ಪ್ರಕರಣಗಳಲ್ಲಿ ನೋಂದಣಿ ಬೆಲೆಯ ಶೇಕಡ 25ರಷ್ಟು ದಂಡವನ್ನು ಪಾವತಿಸಿ, ಶುದ್ಧ ಕ್ರಯಪತ್ರ ಪಡೆಯಲು ಸೂಚಿಸುತ್ತಿರುವುದಾಗಿ ತಿಳಿದು ಬಂದಿದೆ. ಸದರಿ ನಿವೇಶನಗಳು ನಗರ ಪ್ರದೇಶದಿಂದ ದೂರದಲ್ಲಿರುವ ಹಾಗೂ ಇನ್ನಿತರೇ ಕಾರಣಗಳಿಂದಾಗಿ ಮನೆ ನಿರ್ಮಾಣಗಳು ಆಗಿರುವುದಿಲ್ಲ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991 ನಿಯಮ 19(7)ರ ಪ್ರಕಾರ ಗುತ್ತಿಗೆ ಕರಾರು ಪತ್ರ ಮಾಡಿಕೊಂಡ 10 ವರ್ಷಗಳು ಕಳೆದ ನಂತರ ಹಂಚಿಕೆಯನ್ನು ರದ್ದು ಮಾಡಿಲ್ಲದಿದ್ದಲ್ಲಿ, ಪ್ರಾಧಿಕಾರವು ಹಂಚಿಕೆದಾರರಿಗೆ ಕ್ರಯ ಪತ್ರವನ್ನು ಮಾಡಿಕೊಡಬೇಕಾಗಿರುತ್ತದೆ. ಅಲ್ಲದೇ, ಅಧಿಸೂಚನೆ ಸಂಖ್ಯೆ: ನಿ 165 ಬೆಮಪ್ರಾ 2012, ದುನಾಂಕ 20.3.2021ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ತಿದುಪಡಿ ನಿಯಮಗಳು 2012ನ್ನು ಅಧಿಸೂಚಿಸಲಾಗಿದ್ದು, ಇದರಲ್ಲಿ ನಿಯಮ (20)ಕ್ಕೆ ತರಲಾಗಿರುವ ತಿದ್ದುಪಡಿಯ ಪ್ರಕಾರ ತಿದ್ದುಪಡಿ ಜಾರಿಗೆ ಬಂದ ದಿನಾಂಕದಿಂದ 2005ರ ಪೂರ್ವದಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಸಂಬಂಧಪಟ್ಟಂತೆ ಹಂಚಿಕೆದಾರರು 10 ವರ್ಷದ ಗುತ್ತಿಗೆ ಅವಧಿಯೊಳಗೆ ಅಥವಾ ಕ್ರಯಪತ್ರ ಪಡೆಯದೇ ನೇರ ಮಾರಾಟ ಮಾಡಿರುವ ಪ್ರಕರಣಗಳಲ್ಲಿ ನೋಂದಣಿ ಬೆಲೆಯ ಶೇ. 25ರಷ್ಟು ದಂಡ ಶುಲ್ಕವನ್ನು ಪಾವತಿಸಿಕೊಂಡು ಕ್ರಯಪತ್ರ ನೀಡಲು ಅವಕಾಶ ಇರುತ್ತದೆ. ಈ ನಿಯಮದಡಿ ವಿಧಿಸಿರುವ ನೊಂದಣಿ ಬೆಲೆಯು ಶೇ 25 ರಷ್ಟು ದಂಡ ಅತಿ ಹೆಚ್ಚಾಗಿದ್ದು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಇಂತಹ ಪ್ರಕರಣಗಳಲ್ಲಿ ಸಾಂಕೇತಿಕ ದಂಡ ವಿಧಿಸಿ, ಶುದ್ಧ ಕ್ರಯಪತ್ರ ನೀಡಲು ಅವಕಾಶವಿರುತ್ತದೆ.

ಆದ್ದರಿಂದ, ದಂಡ ಪಾವತಿ ನಿಯಮವು 2005ರ ಹಿಂದಿನ ಹಂಚಿಕೆ ಪ್ರಕರಣಗಳಿಗೆ ಮಾತ್ರವೇ ಅನ್ವಯಿಸುತ್ತಿದ್ದು, 2005ರ ನಂತರ ಹಂಚಿಕೆಯಾದ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ. ಆದುದರಿಂದ ಬಡ ಹಂಚಿಕೆದಾರರ ಹಿತದೃಷ್ಟಿಯಿಂದ ಮನೆ ನಿರ್ಮಿಸಿದ 2005ರ ನಂತರ ಹಂಚಿಕೆಯಾದ ನಿವೇಶನಗಳಿಗಾದರೂ ಸಾಂಕೇತಿಕ ದಂಡ ವಿಧಿಸಿ, ಶುದ್ಧ ಕ್ರಯಪತ್ರ ನೀಡಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಆದೇಶಿಸುವಂತೆ ಕೋರುತ್ತೇನೆ.

**ಶ್ರೀ ಬಿ.ಎ.ಬಸವರಾಜ್(ಬೈರತಿ)(ನಗರಾಭಿವೃದ್ಧಿ ಇಲಾಖೆ, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು (ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಡಿ, ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು**):- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ಉತ್ತರ ಕಳುಹಿಸಿ ಕೊಡುತ್ತೇನೆ.

**ಈ)** ವಿಷಯ: ಪಡಿತರ ಚೀಟಿದಾರರಿಗೆ ಧಾನ್ಯಗಳ ವಿತರಣೆ ನಿಗದಿತ ಪ್ರಮಾಣ ಇಲ್ಲದಿರುವ ಬಗ್ಗೆ.

- - -

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಗಳೆ, ರಾಜ್ಯ ಸರ್ಕಾರ ಪಡಿತರ ಚೀಟಿದಾರರಿಗೆ ವಿತರಿಸುವ ರಾಗಿ, ಜೋಳ ಖರೀದಿ ಪ್ರಕ್ರಿಯೆ ನಿಗದಿತ ಪ್ರಮಾಣದಲ್ಲಿ ನಡೆಯದಿರುವುದು ದಿನಾಂಕ 23.3.2022ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು 8 ಲಕ್ಷ ಮೆಟ್ರಿಕ್ ಟನ್‌ನಷ್ಟು ರಾಗಿ ಮತ್ತು ಜೋಳ ಖರೀದಿಸಲು ಗುರಿ ಇಟ್ಟುಕೊಂಡಿತ್ತು. ಆದರೆ ಖರೀದಿಸಿರುವುದು ಕೇವಲ 3.81 ಲಕ್ಷ ಮೆಟ್ರಿಕ್ ಟನ್ ಮಾತ್ರ ಅದರಲ್ಲೂ ಏಪ್ರಿಲ್ 1 ರಿಂದ ಪಡಿತರದಲ್ಲಿ ಗೋದಿಯನ್ನು ಕೈಬಿಟ್ಟು ಕೇವಲ ಅಕ್ಕಿ ಮತ್ತು ಹೆಚ್ಚುವರಿಯಾಗಿ 1 ಕೆ.ಜಿ. ರಾಗಿ ಅಥವಾ ಜೋಳ ವಿತರಿಸಲಿದೆ. ಈ ಬಾರಿ ರೈತರಿಂದ ಬೆಂಬಲ ಬೆಲೆಗೆ ರಾಗಿ, ಭತ್ತ, ಜೋಳ ಖರೀದಿಸಲು ಒಬ್ಬರಿಗೆ ಕೇವಲ 5 ಕೆ.ಜಿ. ಅಕ್ಕಿ ಮತ್ತು ಒಂದು ಕೆ.ಜಿ.ರಾಗಿ ಮಾತ್ರ ಸಿಗಲಿದೆ. ಇದಕ್ಕಾಗಿ ಸರ್ಕಾರ ರೈತರಿಂದ ನಿಗದಿತ ಪ್ರಮಾಣದಲ್ಲಿ ಮಾತ್ರ ಖರೀದಿಸಲು

ಮುಂದಾಗಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಅಲ್ಲದೇ ರೈತರು ಸಹ ಇದಕ್ಕೆ ಸಹಕರಿಸದ ಕಾರಣ, ಆಹಾರ ಧಾನ್ಯಗಳನ್ನು ಕಡಿಮೆ ಪ್ರಮಾಣದಲ್ಲಿ ಸಂಗ್ರಹಿಸಿದ್ದು ಖರೀದಿಯಲ್ಲಿ ಕುಸಿತವಾಗಿರುತ್ತದೆ.

ಅಂತ್ಯೋದಯ ಮತ್ತು ಆದ್ಯತಾ ಪಡಿತರ ಚೀಟಿದಾರರಿಗೆ ಪ್ರತಿ ಕಾರ್ಡ್‌ಗೆ 2 ಕೆ.ಜಿ. ಗೋಧಿ ಮತ್ತು ಪ್ರತಿ ಸದಸ್ಯರಿಗೆ ತಲಾ 5 ಕೆ.ಜಿ. ಅಕ್ಕಿ ವಿತರಿಸಲಾಗುತ್ತಿತ್ತು. ಕೋವಿಡ್ ಹಿನ್ನೆಲೆಯಲ್ಲಿ ಜನ ಆರ್ಥಿಕವಾಗಿ ಸಂಕಷ್ಟದಲ್ಲಿದ್ದರು ಎಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಪ್ರತಿ ಸದಸ್ಯರಿಗೆ ತಲಾ 5ಕೆ.ಜಿ. ವಿತರಿಸುತ್ತಿತ್ತು. ಇನ್ನು ಕೇಂದ್ರದ ಪಾಲು ಸಿಗುವುದಿಲ್ಲ. ಇದರಿಂದ ಒಂದು ಕಾರ್ಡ್‌ಗೆ 2 ಕೆ ಕೆ.ಜಿ. ವಿತರಣೆಯಾಗುತ್ತಿದ್ದ ಗೋದಿಯ ಬದಲಿಗೆ ಪ್ರತಿ ಸದಸ್ಯರಿಗೆ ಹೆಚ್ಚುವರಿಯಾಗಿ ಒಂದೊಂದು ಕೆ.ಜಿ.ರಾಗಿ ಅಥವಾ ಜೋಳ ನೀಡಲು ನಿರ್ಧರಿಸಲಾಗಿದೆ. ಕರ್ನಾಟಕದಲ್ಲಿ ಸ್ಥಳೀಯವಾಗಿ ಬೆಳೆಯುವ ರಾಗಿ ಮತ್ತು ಜೋಳಕ್ಕೆ ಆದ್ಯತೆ ನೀಡಬೇಕೆಂಬ ಉದ್ದೇಶದಿಂದ ಗೋಧಿ ಬದಲಿಗೆ ಏ.1 ರಿಂದಪಡಿತರ ವಿತರಣೆಯಲ್ಲಿ ರಾಗಿ, ಜೋಳಕ್ಕೆ ಆದ್ಯತೆ ನೀಡಲಾಗುತ್ತಿದೆ. ರಾಗಿ 2.1 ಲಕ್ಷ ಮೆಟ್ರಿಕ್ ಟನ್ ಗುರಿ ಹೊಂದಲಾಗಿತ್ತು. 1.6 ಲಕ್ಷ ಮೆಟ್ರಿಕ್ ಟನ್ ಖರೀದಿಸಲಾಗಿದೆ. ಅದೇರೀತಿ ಭತ್ತ 5 ಲಕ್ಷ ಮೆಟ್ರಿಕ್ ಟನ್ ಗುರಿಯಿತ್ತು. ಆದರೆ 1.95 ಲಕ್ಷ ಮೆಟ್ರಿಕ್ ಟನ್ ಖರೀದಿಸಲಾಗಿದೆ. ಜೋಳ 1.1 ಲಕ್ಷ ಮೆಟ್ರಿಕ್ ಟನ್ ಗುರಿ ಇತ್ತು. ಆದರೆ 23 ಸಾವಿರ ಮೆಟ್ರಿಕ್ ಟನ್ ಮಾತ್ರ ಖರೀದಿಸಲಾಗಿದೆ. ಇನ್ನೂ ಸಹ ಖರೀದಿ ಮತ್ತು ಸಂಗ್ರಹ ಪ್ರಕ್ರಿಯೆ ಮುಗಿದಿಲ್ಲ. ದಯಮಾಡಿ ಸರ್ಕಾರ ಖರೀದಿ ಗುರಿಯನ್ನು ತಲುಪಬೇಕು. ಹೆಚ್ಚಿನ ಆಹಾರ ಧಾನ್ಯಗಳನ್ನು ವಿತರಣೆ ಮಾಡಬೇಕೆನ್ನುವ ವಿಷಯವನ್ನು ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

**ಶ್ರೀ ಬಿ.ಎ.ಬಸವರಾಜ್(ಬೈರತಿ)( ನಗರಾಭಿವೃದ್ಧಿ ಇಲಾಖೆ, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು (ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಡಿ, ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು**):- ಮಾನ್ಯ ಸಭಾಪತಿಗಳೆ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಿಂದ ಉತ್ತರ ಕಳುಹಿಸಿ ಕೊಡುವ ವ್ಯವಸ್ಥೆ ಮಾಡುತ್ತೇವೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(655) 28.03.2022 1.00 ವೈಎಲ್-ಆರ್‌ಎನ್**

**ಉ) ವಿಷಯ:- ಜನಸಂಖ್ಯೆ ನಿಯಂತ್ರಿಸುವ ಕುರಿತು.**

********

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ವಿಪರೀತವಾಗಿ ಜನಸಂಖ್ಯೆ ಸ್ಫೋಟವಾಗುತ್ತಿದೆ. ಇದನ್ನು ನಿಯಂತ್ರಿಸಲು ಸರ್ಕಾರ ವಿವಿಧ ಪ್ರಯತ್ನಗಳ ನಂತರವೂ ಕೂಡಾ ನಿರೀಕ್ಷಿತ ಫಲಿತಾಂಶ ಸಾಧಿಸುವಲ್ಲಿ ಯಶಸ್ಸು ಕಾಣಬೇಕಾಗಿದೆ.

ಈ ಹಿನ್ನಲೆಯಲ್ಲಿ, ಸರ್ಕಾರವು ಪ್ರಜೆಗಳಿಗೆ ವಿವಿಧ ರೀತಿಯಲ್ಲಿ ಸವಲತ್ತು, ಸಬ್ಸಿಡಿ ಇತ್ಯಾದಿಗಳನ್ನು ನೀಡುತ್ತಾ ಬಂದಿದೆ. ಉತ್ತರ ಪ್ರದೇಶ ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿರುವ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಸೌಲಭ್ಯಗಳನ್ನು ಕೇವಲ ಎರಡು ಮಕ್ಕಳನ್ನು ಹೊಂದಿದವರಿಗೆ ಮಾತ್ರ ಸರ್ಕಾರ ನೀಡುವ ಬಗ್ಗೆ ಅಗತ್ಯ ನಿಯಮಾವಳಿಗಳನ್ನು ರಚಿಸಲು ತಮ್ಮ ಮೂಲಕ ಸರ್ಕಾರಕ್ಕೆ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

**ಊ) ವಿಷಯ:- ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳ ಒಟ್ಟಾರೆ ಆಸ್ತಿ ಬಂಡವಾಳದ ಮೇಲೆ ಕನ್ಸೆಂಟ್ ಶುಲ್ಕ ವಿಧಿಸುತ್ತಿರುವ ಬಗ್ಗೆ.**

****

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ವಾಯುಮಾಲಿನ್ಯ ನಿಯಂತ್ರಣ ಮಂಡಳಿಯು (ಪಿಸಿಬಿ) ಏಕಾಏಕಿ ಖಾಸಗಿ ಆಸ್ಪತ್ರೆಗಳ ಕನ್ಸೆಂಟ್ ಶುಲ್ಕ ಹೆಚ್ಚಳ ಮಾಡಿರುವುದಕ್ಕೆ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂ ಅಸೋಷಿಯೇಷನ್ (ಫನಾ) ಆಕ್ರೋಶ ವ್ಯಕ್ತಪಡಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಈ ಸಂಬಂಧ ಫನಾ ಅಧ್ಯಕ್ಷರು ಮಾನ್ಯ ಪ್ರವಾಸೋದ್ಯಮ, ಜೀವಿಶಾಸ್ತ್ರ ಹಾಗೂ ಪರಿಸರ ಖಾತೆ ಸಚಿವರನ್ನು ಭೇಟಿಯಾಗಿ ಶುಲ್ಕ ಪರಿಷ್ಕರಿಸುವಂತೆ ಒತ್ತಾಯಿಸಿದ್ದು, ವಾಯುಮಾಲಿನ್ಯ ನಿಯಂತ್ರಣ ಮಂಡಳಿಯ ಅವೈಜ್ಞಾನಿಕ ತೀರ್ಮಾನದಿಂದ ಆಸ್ಪತ್ರೆಗಳನ್ನು ನಡೆಸುವುದು ದುಸ್ತರವಾಗಿರುವುದಾಗಿ ಹೇಳಿದ್ದಾರೆ.

ಮುಂದುವರೆದು, ಈ ರೀತಿ ಶುಲ್ಕ ವಸೂಲಿ ಮಾಡಿದರೆ ಆಸ್ಪತ್ರೆಗಳು ಸ್ವಾಭಾವಿಕವಾಗಿ ಚಿಕಿತ್ಸಾ ವೆಚ್ಚವನ್ನು ಹೆಚ್ಚಳ ಮಾಡಬೇಕಾಗುತ್ತದೆ ಎಂಬುದಾಗಿ ತಿಳಿಸಿವೆ. ಈ ಹಿಂದೆ ಆರಂಭದಲ್ಲಿ ಕನ್ಸೆಂಟ್ ಶುಲ್ಕವನ್ನು ಪ್ರತಿ ವರ್ಷ ತೆಗೆದುಕೊಳ್ಳಲಾಗುತ್ತಿತ್ತು. ನಂತರ ಐದು ವರ್ಷಕ್ಕೆ ಹೆಚ್ಚಳ ಮಾಡಲಾಯಿತು. ಈಗ 10 ವರ್ಷಕ್ಕೆ ಏರಿಕೆ ಮಾಡಿದ್ದು ಒಂದೇ ಬಾರಿ ಮುಂದಿನ ಹತ್ತು ವರ್ಷದ ಶುಲ್ಕ ಪಾವತಿ ಮಾಡುವಂತೆ ಪಿ.ಸಿ.ಬಿ. ಕೇಳುತ್ತಿದೆ.

ಶುಲ್ಕವನ್ನು ಸಹ ಬೇಕಾಬಿಟ್ಟಿ ಏರಿಕೆ ಮಾಡಿದ್ದು, ರೂ.50 ಕೋಟಿಯಿಂದ ರೂ.250 ಕೋಟಿವರೆಗಿನ ಬಂಡವಾಳಕ್ಕೆ ಹಳೆ ಶುಲ್ಕ ರೂ.75 ಸಾವಿರ ಇದ್ದು ರೂ.1 ಲಕ್ಷಕ್ಕೆ ಪರಿಷ್ಕರಿಸಿ ಶೇ. 33 ರಷ್ಟು ಹೆಚ್ಚಿಸಲಾಗಿದೆ. ಅದೇ ರೀತಿ 250 ಕೋಟಿ ರೂಪಾಯಿಯಿಂದ 500 ಕೋಟಿ ರೂಪಾಯಿ ಬಂಡಾವಳಕ್ಕೆ ರೂ.1 ಲಕ್ಷದಿಂದ ರೂ.5 ಲಕ್ಷದವರೆಗೆ, 500 ಕೋಟಿ ರೂಪಾಯಿಯಿಂದ 1000

ಕೋಟಿ ರೂಪಾಯಿ ಬಂಡವಾಳಕ್ಕೆ ರೂ.1.50 ಲಕ್ಷದಿಂದ ರೂ.10 ಲಕ್ಷಕ್ಕೆ ಹಾಗೂ 1000 ಕೋಟಿ ರೂಪಾಯಿಗೂ ಅಧಿಕ ಬಂಡವಾಳಕ್ಕೆ ರೂ. 2 ಲಕ್ಷದಿಂದ ರೂ.20 ಲಕ್ಷದವರೆಗೆ ಕನ್ಸೆಂಟ್ ಶುಲ್ಕ ಪರಿಷ್ಕರಿಸಿದ್ದು, ಒಟ್ಟು ಶೇಕಡ 33 ರಿಂದ ಶೇ. 90 ರಷ್ಟು ಹೆಚ್ಚಳ ಮಾಡಲಾಗಿದೆ.

ಇಷ್ಟು ದಿನ ಆಸ್ಪತ್ರೆಗಳಿಂದ ಎಷ್ಟು ಬೆಡ್‌ಗಳಿಗೆ ಎಷ್ಟು ತ್ಯಾಜ್ಯ ಸೃಷ್ಟಿಯಾಗುತ್ತದೆ, ಆಸ್ಪತ್ರೆಯಿಂದಾಗುವ ಮಾಲಿನ್ಯ ಯಾವ ಪ್ರಮಾಣದ್ದು ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕನ್ಸೆಂಟ್ ಶುಲ್ಕ ಪಾವತಿಸಲಾಗುತ್ತಿತ್ತು. ಆದರೆ, ಈಗ ಆಸ್ಪತ್ರೆಯ ಒಟ್ಟಾರೆ ಆಸ್ತಿ, ಬಂಡವಾಳದ ಮೇಲೆ ಕನ್ಸೆಂಟ್ ಶುಲ್ಕ ವಸೂಲಿ ಮಾಡಲಾಗುತ್ತಿದೆ ಎಂಬುದ ಫನಾ ಆರೋಪಿಸಿದೆ.

ಆದಕಾರಣ, ಈ ವಿಚಾರದಲ್ಲಿ ಸರ್ಕಾರ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್ (ಫನಾ) ನೊಂದಿಗೆ ಮತ್ತೊಮ್ಮೆ ಚರ್ಚೆ ನಡೆಸಿ, ಶುಲ್ಕ ಪರಿಷ್ಕರಣೆಗೆ ಮುಂದಾಗಬೇಕು, ಸಾರ್ವಜನಿಕರಿಗೆ ಖಾಸಗಿ ಆಸ್ಪತ್ರೆಗಳಿಂದ ದೊರೆಯುವ ಸೇವೆಗಳಿಗೆ ಹೆಚ್ಚಿನ ದರ ವಿಧಿಸುವುದನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಮಾನ್ಯ ಪ್ರವಾಸೋದ್ಯಮ, ಜೀವಿಶಾಸ್ತ್ರ ಹಾಗೂ ಪರಿಸರ ಖಾತೆ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು) (ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರ ವಿಷಯಕ್ಕೆ ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಋ) ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಬಿ.ಆರ್.ಸಿ. ಕೇಂದ್ರಕ್ಕೆ ನೇಮಕಾತಿ ಕುರಿತು.**

*****

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಶಿಕ್ಷಣ ಇಲಾಖೆಯು ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರ ತತ್ಸಮಾನ ವೃಂದದ

ಬಿಆರ್‌ಸಿ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಭರ್ತಿ ಮಾಡಿಕೊಳ್ಳಲು ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ 5 ವರ್ಷ ಪೂರ್ಣಗೊಳಿಸಿದ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಭರ್ತಿ ಮಾಡಿಕೊಳ್ಳಲು ಪರೀಕ್ಷೆ ನಡೆಸಲಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯು ಕೆಲವು ಮುಖ್ಯ ಶಿಕ್ಷಕರಿಗೆ ಯಾವುದೇ ಪರೀಕ್ಷೆ ನಡೆಸದೆ ಅಂತಹ ಹುದ್ದೆಗಳಲ್ಲಿ ಮುಂದುವರೆಸಿದೆ, ಅಂತಹ ಹುದ್ದೆಗಳನ್ನು ಖಾಲಿ ತೋರಿಸಿರುವುದಿಲ್ಲ. ಲಿಖಿತ ಪರೀಕ್ಷೆ ಮೂಲಕ ನೇಮಕಗೊಂಡ 5 ವರ್ಷ ಪೂರ್ಣಗೊಳಿಸಿದ ಹುದ್ದೆಗಳನ್ನು ಮಾತ್ರ ಖಾಲಿ ಹುದ್ದೆ ಎಂದು ತೋರಿಸಲಾಗಿರುತ್ತದೆ. ನಿರ್ದಿಷ್ಟ ಪಡಿಸಿದ ಮುಖ್ಯ ಶಿಕ್ಷಕರ ತತ್ಸಮಾನ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಆಯ್ಕೆಯಾದವರನ್ನು ಮಾತ್ರ ನಿಯುಕ್ತಿಗೊಳಿಸುವುದು ಮತ್ತು ಪರೀಕ್ಷೆ ಬರೆಯದೆ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳನ್ನು ಸಹ ಖಾಲಿ ಹುದ್ದೆ ಎಂದು ತೋರಿಸುವ ಬಗ್ಗೆ ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಆ ರೀತಿ ಪರೀಕ್ಷೆ ನಡೆಸದೇ ಯಾವುದೇ ರೀತಿಯ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಪ್ರಯತ್ನ ಮಾಡಿಲ್ಲ. ಆದರೆ, ಎಲ್ಲಿ ಪರೀಕ್ಷೆ ನಡೆದಿರುವುದಿಲ್ಲವೋ, ಅಂತಹ ಜಾಗಗಳಿಗೆ ತಾತ್ಕಾಲಿಕವಾಗಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಉಳಿದ ಹುದ್ದೆಗಳನ್ನು ಪರೀಕ್ಷೆ ನಡೆಸಿಯೇ ಆ ಸ್ಥಳವನ್ನು ಭರ್ತಿ ಮಾಡಿಕೊಳ್ಳಲಾಗುವುದು.

**ಎ) ವಿಷಯ:- 6-8ನೇ ತರಗತಿ ಶಿಕ್ಷಕರ ನೇಮಕಾತಿ ಪ್ರವೇಶ ಪರೀಕ್ಷೆ ನಡೆಸಲು ಹೆಚ್ಚಿನ ಕಾಲಾವಕಾಶ ಕೋರಿಕೆ ಬಗ್ಗೆ.**

****

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೂರು ವರ್ಷಗಳ ಬಳಿಕ ನಡೆಯುತ್ತಿರುವ 6-8ನೇ ತರಗತಿ ಶಿಕ್ಷಕರ ನೇಮಕಾತಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ.) ಪಠ್ಯ ಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಿಸಿದೆ. ಆದರೆ ಪಠ್ಯ ಕ್ರಮದ ವಿಶಾಲ ವ್ಯಾಪ್ತಿ

ಅಭ್ಯರ್ಥಿಗಳನ್ನು ಕಳವಳಕ್ಕೀಡು ಮಾಡಿದೆ. ಒಟ್ಟಾರೆ ಪರೀಕ್ಷಾ ಪ್ರಕ್ರಿಯೆಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಲು ಮುಂದಾಗಿರುವ ಇಲಾಖೆಯ ತ್ವರಿತಗತಿಗೆ ಮೆಚ್ಚುಗೆ ಇದೆಯಾದರೂ ಪರೀಕ್ಷಾ ಸಿದ್ಧತೆಗೆ ಹೆಚ್ಚು ಸಮಯಾವಕಾಶ ಇಲ್ಲದಿರುವುದು ಚಿಂತೆಗೆ ಕಾರಣವಾಗಿದೆ. ಹೀಗಾಗಿ ಈ ಬಾರಿ ನೇಮಕಕ್ಕೆ ಅರ್ಹತೆ ಗಳಿಸುವ ಅಭ್ಯರ್ಥಿಗಳ ಸಂಖ್ಯೆ ಇಳಿಮುಖವಾಗಲಿದೆ ಎಂಬ ಅನುಮಾನ ಶಿಕ್ಷಣ ತಜ್ಞರದ್ದು. ಆರಂಭದಲ್ಲಿಯೇ ಗೊಂದಲ ಮಾಡಿಕೊಂಡಿದ್ದ ಇಲಾಖೆ ಎರಡನೇ ಪತ್ರಿಕೆಯ 100 ಅಂಕಗಳ ಪ್ರಶ್ನೆಗಳಿಗೆ ಒ.ಎಂ.ಆರ್. ಶೀಟ್‌ನಲ್ಲಿ ಉತ್ತರಿಸಬೇಕು ಎಂದು ಹೇಳಿತ್ತು, ಹೊಸ ಪರೀಕ್ಷಾ ವಿಧಾನವಿರಬೇಕು ಎಂದು ಕೊಂಡಿದ್ದ ಅಭ್ಯರ್ಥಿಗಳು ಇದರಿಂದ ಅನುಕೂಲವೇ ಆಗಲಿದೆ ಎಂದು ತಿಳಿದಿದ್ದರು. ಆದರೆ, ತಿದ್ದುಪಡಿ ಅಧಿಸೂಚನೆ ಹೊರಡಿಸಿದ ಇಲಾಖೆ ಅದು ವಿವರಣಾತ್ಮಕ ಪ್ರಶ್ನೆಗಳು ಎಂದು ಸ್ಪಷ್ಟಪಡಿಸಿತು. ಇದೇ ರೀತಿ ಭಾಷಾ ಸಾಮರ್ಥ್ಯ ವಿಷಯದಲ್ಲಿ ಕೈಬಿಟ್ಟಿದ್ದ ಜೀವ ವಿಜ್ಞಾನವನ್ನು ಮತ್ತೆ ಸೇರಿಸಿತು.

ಆದ್ದರಿಂದ ಎಷ್ಟೇ ಓದಿಕೊಂಡಿದ್ದರೂ ಅಂತಿಮವಾಗಿ ಪಠ್ಯಕ್ರಮವನ್ನು ಆಧರಿಸಿ ಸಿದ್ಧತೆ ಮಾಡಿಕೊಳ್ಳಲೇಬೇಕಾಗುತ್ತದೆ. ಹೀಗಿರುವಾಗ 60 ದಿನಗಳಲ್ಲಿ ಸಜ್ಜುಗೊಳ್ಳುವುದು ಕಷ್ಟಸಾಧ್ಯವಾಗಿರುವುದರಿಂದ, ಉದ್ಯೋಗ ಆಕಾಂಕ್ಷಿಗಳಿಗೆ ಪರೀಕ್ಷೆಗೆ ಇನ್ನು ಹೆಚ್ಚಿನ ಕಾಲಾವಕಾಶ ನೀಡುವಂತೆ ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮಲ್ಲಿ ತುಂಬಾ ಶಿಕ್ಷಕರ ಕೊರತೆ ಇದೆ. ಕಳೆದ ಮೂರು ವರ್ಷಗಳಿಂದ ಪೂರ್ಣ ಪ್ರಮಾಣದಲ್ಲಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಾಗದ ಪ್ರಯುಕ್ತ, ಇನ್ನು ಹೆಚ್ಚು ಸಮಯವನ್ನು ವ್ಯಯ ಮಾಡಿದರೆ, ಶಿಕ್ಷಕರ ಕೊರತೆ ಮತ್ತಷ್ಟು ಹೆಚ್ಚಾಗುತ್ತದೆ. ಆಗಾಗಿ ಈ ವರ್ಷವೇ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಹಾಗೆಯೇ ಸಿ.ಇ.ಟಿ. ಪರೀಕ್ಷೆ ನಂತರ ಟಿ.ಇ.ಟಿ. ಪರೀಕ್ಷೆಯನ್ನು ಮತ್ತೊಮ್ಮೆ ನಡೆಸಬೇಕೆಂಬ ಯೋಚನೆಯೂ ಇದೆ. ಈ ವರ್ಷವೇ ಟಿ.ಇ.ಟಿ. ಪರೀಕ್ಷೆಯನ್ನು ಸಹ ನಡೆಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಏ) ವಿಷಯ:– ಪರೀಕ್ಷಾ ಸಮಯದಲ್ಲಿ ಸಮವಸ್ತ್ರ ಕಡ್ಡಾಯ ಕೈಬಿಡುವ ಕುರಿತು.**

*********

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರವು ಸುತ್ತೋಲೆಯನ್ನು ಹೊರಡಿಸಿ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಸಮವಸ್ತ್ರ ಕಡ್ಡಾಯವಾಗಿದೆ. ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು ನೀಡಿರುವುದು ಎರಡು ವರ್ಷಗಳೇ ಕಳೆದಿದೆ. ಕೋವಿಡ್–19 ನಿಂದಾಗಿ ಆನ್‌ಲೈನ್ ಶಾಲೆಗಳು ನಡೆದಿದ್ದರ ಪರಿಣಾಮ ವಿದ್ಯಾರ್ಥಿಗಳು ಸಮವಸ್ತ್ರ ಧರಿಸುತ್ತಿರಲಿಲ್ಲ. ಸಮವಸ್ತ್ರಗಳು ಹಳೆಯದಾಗಿದ್ದು ಮತ್ತು ಕೆಲವು ವಿದ್ಯಾರ್ಥಿಗಳ ಬೆಳವಣಿಗೆ ತಕ್ಕಂತೆ ಸಮವಸ್ತ್ರವನ್ನು ಧರಿಸಲು ಸಾಧ್ಯವಾಗದೇ ಇರುವಂತಾಗಿದೆ.

ವಿದ್ಯಾರ್ಥಿಗಳಿಗೆ ಪರೀಕ್ಷೆಯ ಕಲಿಕೆಯ ಜೊತೆಗೆ ಸಮವಸ್ತ್ರದ ವಿಚಾರವು ತಲೆನೋವು ಆಗಿ ಪರಿಣಮಿಸಿದೆ. ಒಂದು ಪರೀಕ್ಷಾ ಕೇಂದ್ರದಲ್ಲಿ ಹಲವಾರು ಶಾಲೆಯ ಮಕ್ಕಳು ಹಾಜರಿದ್ದು, ಬೇರೆ ಬೇರೆ ಶಾಲೆಯ ಸಮವಸ್ತ್ರವು ಧರಿಸುವುದು ಮತ್ತೊಂದು ಕಿರಿಕಿರಿಯಾಗಿದೆ. ಹಲವು ಅಲ್ಪಸಂಖ್ಯಾತರ ಶಾಲೆಗಳಲ್ಲಿ ಹಿಜಾಬ್ ಸಮವಸ್ತ್ರ ಆಗಿರುತ್ತದೆ. ಆ ಶಾಲೆಯ ಮಕ್ಕಳು ಹಿಜಾಬ್ ಧರಿಸಿ ಪರೀಕ್ಷೆ ಬರೆಯಬಹುದಾಗಿದೆ.

ಕಳೆದ ಎರಡು ವರ್ಷಗಳಿಂದ ಕೋವಿಡ್–19 ಆತಂಕದ ನಡುವೆ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಈ ಬಾರಿ ಹಿಜಾಬ್ ಸಂಘರ್ಷದ ಜತೆ ಎದುರಿಸಬೇಕಾಗಿದೆ. ಪ್ರಸ್ತುತ ವಾರ್ಷಿಕ ಪರೀಕ್ಷೆಗೆ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶವಿಲ್ಲ ಎಂದು ಸರ್ಕಾರ ಸ್ಪಷ್ಟೀಕರಣ ನೀಡಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ವಿದ್ಯಾರ್ಥಿಗಳು ಸಮವಸ್ತ್ರವನ್ನು ಧರಿಸಿ ಬರುವುದು ಕಡ್ಡಾಯವಾಗಿದೆ. ಆದರೆ, ಸರ್ಕಾರವು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡದಿರುವುದರಿಂದ, ಪೋಷಕರಿಗೆ ವಿದ್ಯಾರ್ಥಿಗಳನ್ನು ಸಮವಸ್ತ್ರ ಹಾಕಿ ಪರೀಕ್ಷೆಗೆ ಕಳುಹಿಸಲು

ಹರಸಾಹಸ ಪಡುತ್ತಿರುತ್ತಾರೆ. ಒಂದು ವೇಳೆ ವಸ್ತ್ರ ಸಂಹಿತೆಯನ್ನು ಪಾಲಿಸದೇ ಇದ್ದರೇ ಪರೀಕ್ಷಾ ಕೇಂದ್ರದ ಒಳಗೆ ಬಿಡಲಾಗುವುದಿಲ್ಲ ಎಂದು ಇಲಾಖೆ ಆದೇಶದಲ್ಲಿ ತಿಳಿಸಿರುತ್ತದೆ. ಆದುದರಿಂದ ರಾಜ್ಯ ಸರ್ಕಾರವು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪರೀಕ್ಷಾ ಸಮಯದಲ್ಲಿ ಸಮವಸ್ತ್ರವನ್ನು ಧರಿಸುವುದನ್ನು ಕೈ ಬಿಡುವ ವಿಚಾರವು ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿರುವುದರಿಂದ ತಮ್ಮ ಮೂಲಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಆ ವಿಚಾರವಾಗಿ ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ. ಯಾವ್ಯಾವ ಶಾಲೆಗಳಲ್ಲಿ ಸಮವಸ್ತ್ರ ನೀಡಿಲ್ಲವೋ, ಅಂತಹ ಶಾಲೆಗಳಿಗೆ ಸಮವಸ್ತ್ರವನ್ನು ಕಡ್ಡಾಯ ಮಾಡಿರುವುದಿಲ್ಲ ಹಾಗೂ outside students ರವರಿಗೂ ಸಮವಸ್ತ್ರವನ್ನು ಕಡ್ಡಾಯವಾಗಿ ಮಾಡಿಲ್ಲ. ಸರ್ಕಾರಿ ಶಾಲೆಯಲ್ಲಿ ಒಂದನೇ ತರಗತಿಯಿಂದ 10 ತರಗತಿಯವರೆಗೂ ಸಮವಸ್ತ್ರವನ್ನು ಘೋಷಣೆ ಮಾಡಿರುವುದಿಲ್ಲ. ಆ ರೀತಿ ತುಂಬಾ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಕಾಯ್ದೆ ಮತ್ತು ನಿಯಮಗಳಿಗನುಸಾರವಾಗಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವ ಅಧಿಸೂಚನೆ ಆಧಾರದ ಮೇಲೆ ಮಾಡಲಾಗಿದೆ. ಯಾವ ಶಾಲೆಯಲ್ಲಿ ಸಮವಸ್ತ್ರವನ್ನು ನೀಡಿಲ್ಲವೋ, ಅಂತಹ ಶಾಲೆಗಳಿಗೆ ಸಮವಸ್ತ್ರವನ್ನು ಮಾಡಿಲ್ಲ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಚರ್ಚೆ ಮಾಡಲು ಅವಕಾಶ ಇರುವುದಿಲ್ಲ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲು ಅವಕಾಶ ಇರುವುದಿಲ್ಲ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಹ ಈ ಸದನದಲ್ಲಿಯೇ ಇದ್ದಾರೆ. ಹಾಗಾಗಿ ಮಾನ್ಯ ಉಚ್ಛ ನ್ಯಾಯಾಲಯದ ಆದೇಶ ಏನಿದೆ, ಆ ಆದೇಶವನ್ನು ಸರಿಯಾಗಿ ಪಾಲನೆ ಮಾಡಿದರೆ ಸಾಕು. ಆದರೆ, ಮಾನ್ಯ ಉಚ್ಛ ನ್ಯಾಯಾಲಯದ ಆದೇಶವನ್ನು ಸಹ ಸರಿಯಾಗಿ ಪಾಲನೆ ಮಾಡುತ್ತಿಲ್ಲ. ದಯವಿಟ್ಟು ಮಾನ್ಯ ಸಚಿವರು ಅದರ ಕಡೆ ಗಮನಹರಿಸಬೇಕು.

**(ಮುಂದು)**

**(656) 28.03.2022/1.10/ಎಸ್‌ಕೆ-ಆರ್‌ಎನ್**

**ಸಭಾಪತಿಯವರು:-** ಗಮನ ಸೆಳೆಯುವ ಸೂಚನೆ ಅಡಿಯಲ್ಲಿನ ವಿಷಯದ ಬಗ್ಗೆ ಶ್ರೀ ಪಿ.ಆರ್.ರಮೇಶ್, ಶ್ರೀ ಮರಿತಿಬ್ಬೇಗೌಡ ಹಾಗೂ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಇವರಲ್ಲಿ ಯಾರಾದರೂ ಒಬ್ಬರು ಗಮನ ಸೆಳೆಯಿರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಗಮನ ಸೆಳೆಯುವ ಸೂಚನೆಯನ್ನು ಮಧ್ಯಾಹ್ನ ತೆಗೆದುಕೊಳ್ಳೋಣ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ಈಗ ವಿಧೇಯಕವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕುಡಿಯುವ ನೀರಿನ ಅಭಾವದ ಬಗ್ಗೆ ಇರುವಂತಹ ಈ ವಿಷಯವನ್ನು ಬೇಗ ಮುಗಿಸಬಹುದು. ಇದು ಬಹಳ ಮುಖ್ಯವಾದಂತಹ ವಿಷಯವಾಗಿರುವುದರಿಂದ ದಯವಿಟ್ಟು, ಈಗಲೇ ಸರ್ಕಾರದ ಗಮನ ಸೆಳೆಯಬಹುದು.

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**೦೫. ಶಾಸನ ರಚನೆ**

**<u>ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ</u>**

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2022**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2022 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಬಗ್ಗೆ 2022 ರಲ್ಲಿ ತಂದಿರುವ ತಿದ್ದುಪಡಿ ಪ್ರಸ್ತಾವನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೇವೆಗಳಿಂದ ದುರ್ನಡತೆ ಮತ್ತು ಇತರೆ ಕಾರಣಗಳಿಂದ ವಜಾಗೊಳಿಸುವ ನೌಕರರನ್ನು ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಗೆ ಅನರ್ಹಗೊಳಿಸುವುದು, ಸಹಕಾರ ಸಂಘ ಮತ್ತು ಸಂಸ್ಥೆಗಳ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ನೌಕರರು ಸೇವೆಯಿಂದ ವಜಾಗೊಳಿಸಲ್ಪಟ್ಟಿದ್ದಲ್ಲಿ, ಚುನಾವಣೆಗೆ ಸ್ಪರ್ಧಿಸಲು ಅನರ್ಹಗೊಳಿಸಲು ಸರ್ಕಾರವು ಉದ್ದೇಶಿಸಿ, ಈ ತಿದ್ದುಪಡಿಯ ಅವಶ್ಯಕತೆ ಇರುತ್ತದೆ ಎನ್ನುವುದು ಮೊದಲನೆಯದಾಗಿದೆ.

ಎರಡನೆಯದಾಗಿ, ಎರಡು ಲಕ್ಷಗಳನ್ನು ಮೀರಿದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಪ್ರತಿ ಹನ್ನೆರಡು ಸಾವಿರಕ್ಕೆ ಕಡಿಮೆಯಲ್ಲದ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯನು ಇರತಕ್ಕದ್ದು;

ಮೂರನೆಯದಾಗಿ, ಒಂದು ಲಕ್ಷವನ್ನು ಮೀರಿದ ಆದರೆ ಎರಡು ಲಕ್ಷಗಳನ್ನು ಮೀರಿರದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಪ್ರತಿ ಹತ್ತು ಸಾವಿರಕ್ಕೆ ಕಡಿಮೆಯಲ್ಲದ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯನು ಇರತಕ್ಕದ್ದು ಹಾಗೂ ಅಲ್ಲಿ ಕನಿಷ್ಠ ಹನ್ನೊಂದು ಚುನಾಯಿತ ಸದಸ್ಯರಿರತಕ್ಕದ್ದು;

ನಾಲ್ಕನೆಯದಾಗಿ, ಐವತ್ತು ಸಾವಿರವನ್ನು ಮೀರಿದ ಆದರೆ ಒಂದು ಲಕ್ಷವನ್ನು ಮೀರಿರದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಕನಿಷ್ಠ ಒಂಬತ್ತು ಚುನಾಯಿತ ಸದಸ್ಯರಿರತಕ್ಕದ್ದು;

ಹೀಗೆ ಐವತ್ತು ಸಾವಿರಕ್ಕಿಂತ ಕಡಿಮೆಯಿರುವ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಕನಿಷ್ಠ ಏಳು ಚುನಾಯಿತ ಸದಸ್ಯರಿರತಕ್ಕದ್ದು."

ಇದರಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ಕೂಡ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರೇ, ಇದಕ್ಕೆ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸಹ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಕೇಂದ್ರ ಸ್ಥಾನದ ಸ್ಥಳೀಯ ಸಂಸ್ಥೆಯ ಮೇಯರ್ ಅಥವಾ ಅಧ್ಯಕ್ಷರು ಇದರಲ್ಲಿ ಉಪಾಧ್ಯಕ್ಷರಾಗಿರುತ್ತಾರೆ. ಹೀಗೆ ವಿಶೇಷವಾಗಿ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ಈ ಕೆಳಕಂಡ ಕಲಂಗಳಿಗೆ ತಿದ್ದುಪಡಿಯನ್ನು ಸರ್ಕಾರ ಪ್ರಸ್ತಾಪ ಮಾಡಿದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ಒಬ್ಬ ವ್ಯಕ್ತಿ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು, ಅನರ್ಹತೆಯ ಬಗ್ಗೆ ವಿವರಗಳನ್ನು ತಿದ್ದುಪಡಿಯಲ್ಲಿ ನೀಡಲಾಗಿದೆ. ಕಲಂ 112ಕ್ಕೆ ಒಬ್ಬ ವ್ಯಕ್ತಿ ಗ್ರಾಮ ಪಂಚಾಯಿತಿಯಲ್ಲಿ ಚುನಾಯಿತನಾಗಿ ಸದಸ್ಯನಾಗಲು, ಮತ್ತು ಸದಸ್ಯನಾಗದಿರಲು

ಅನರ್ಹತೆ. ಕಲಂ 121 ರಲ್ಲಿ ಒಬ್ಬ ವ್ಯಕ್ತಿ ತಾಲ್ಲೂಕು ಪಂಚಾಯಿತಿಗೆ ಚುನಾಯಿತನಾಗಿ ಸದಸ್ಯನಾಗಲು ಮತ್ತು ಸದಸ್ಯನಾಗದಿರಲು ಅನರ್ಹತೆ. ಅದೇ ರೀತಿ 162ನೇ ಕಲಂ ಪ್ರಕಾರ ಒಬ್ಬ ವ್ಯಕ್ತಿ ಜಿಲ್ಲಾ ಪಂಚಾಯಿತಿಗೆ ಚುನಾಯಿತನಾಗಿ ಸದಸ್ಯನಾಗಲು ಮತ್ತು ಸದಸ್ಯನಾಗದಿರಲು ಅನರ್ಹತೆ.

ಮಾನ್ಯ ಸಭಾಪತಿಯವರೇ, ಈ ಮೇಲಿನ ನಿಬಂಧನೆ ಮತ್ತು ಅನರ್ಹತೆಯ ಜೊತೆಗೆ ರಾಜ್ಯ ಸರ್ಕಾರ ಪ್ರಸ್ತಾವಿತ ತಿದ್ದುಪಡಿಯಲ್ಲಿ ಈ ನಿಬಂಧನೆಗಳು ಮತ್ತು ಅನರ್ಹತೆಗೆ ಈ ಕೆಳಕಂಡ ವಿವಿಧ ಅನರ್ಹತೆಗಳನ್ನು ಸೇರ್ಪಡೆ ಮಾಡಿದೆ.

ಒಬ್ಬ ವ್ಯಕ್ತಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ; ಅಂದರೆ ಆ ವ್ಯಕ್ತಿ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಯಾಗಿದ್ದರೆ, ಅಥವಾ removal ಆಗಿದ್ದರೆ, ಅಥವಾ ವಜಾಗೊಳಿಸಿದ್ದರೆ, ಅಥವಾ ಒಬ್ಬ ವ್ಯಕ್ತಿ ಸಹಕಾರ ಸಂಘ ಮತ್ತು ಸಂಸ್ಥೆಗಳ ಅಧ್ಯಕ್ಷ ಹಾಗೂ ಸದಸ್ಯತ್ವ ಹುದ್ದೆಯಿಂದ ತೆಗೆದು ಹಾಕಲಾಗಿದ್ದರೆ; ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ, ಅಂದರೆ ಸಹಕಾರ ಸಂಘ ಮತ್ತು ಸಂಸ್ಥೆಗಳ ನೌಕರರಾಗಿದ್ದರೆ, ಆತನನ್ನು ಸೇವೆಯಿಂದ ಕಡ್ಡಾಯ ನಿವೃತ್ತಿ ಮಾಡಿದ್ದರೆ, ವಜಾಗೊಳಿಸಿದ್ದರೆ, removal ಮಾಡಿದ್ದರೆ, ಅದೇ ರೀತಿಯಲ್ಲಿ ಸಹಕಾರ ಸಂಘಗಳಲ್ಲಿ ಅಧ್ಯಕ್ಷ ಹಾಗೂ ಸದಸ್ಯತ್ವ ಪದವಿಯಿಂದ ವಜಾ ಮಾಡಿದ್ದರೆ, ಅಂತಹ ವ್ಯಕ್ತಿಗಳು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಚುನಾಯಿತರಾಗಿ ಸದಸ್ಯರಾಗದಿರಲು ಅನರ್ಹರಾಗಿರುವಂತಹ ಪ್ರಸ್ತಾವ ಇದೆ.

ಇದಲ್ಲದೇ, ಒಂದು ವೇಳೆ ಚುನಾಯಿತರಾಗಿ, ಚುನಾಯಿತರಾಗುವ ಸಂದರ್ಭದಲ್ಲಿ ಅರ್ಹತೆ ಇದ್ದರೂ ತದನಂತರವಾಗಿ ಏನಾದರೂ ಕೂಡ ಅವರು ಈ ರೀತಿಯ ಅನರ್ಹತೆಯನ್ನು ಪಡೆದುಕೊಂಡರೆ, ಅವರು ಕೂಡ ಅಂದರೆ, ಸಹಕಾರ ಸಂಘ ಮತ್ತು ಸಂಸ್ಥೆಗಳಲ್ಲಿ ಅವಿಶ್ವಾಸ ನಿರ್ಣಯ ಮಂಡನೆಯಲ್ಲಿ ತಾನು ಪಡೆದಿರುವ ಸಾಲದ ತಿರುವಳಿಯಲ್ಲಿ ಏನಾದರೂ defaulter ಆದರೆ, ಅವರು ಕೂಡ ಅನರ್ಹರಾಗುತ್ತಾರೆ ಎಂಬುದರ ಬಗ್ಗೆ ತಿದ್ದುಪಡಿಯನ್ನು ತಂದಿದ್ದಾರೆ.

ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಗಳು ಬಹಳ ದೊಡ್ಡ ಪರಿಣಾಮವನ್ನು ಹೊಂದಿದೆ. Larger implications ಇದೆ.

ಮಾನ್ಯ ಸಭಾಪತಿಯವರೇ, The Representation of the People Act 1951, ಈ ಪ್ರಜಾ ಪ್ರತಿನಿಧಿ ಕಾಯಿದೆಯಲ್ಲಿ ಎರಡು ಬಗೆಯಾದಂತಹ ಅನರ್ಹತೆಗಳನ್ನು ನಮೂದು ಮಾಡಲಾಗಿದೆ. ಮೊದಲನೆಯದಾಗಿ, ಸಂವಿಧಾನಾತ್ಮಕ ಅನರ್ಹತೆ Constitutional disqualification for the Membership of the Lok Sabha and the Legislative Assembly ಇದರಡಿಯಲ್ಲಿ ಲಾಭದಾಯಕ ಹುದ್ದೆ ಇದ್ದರೆ, office of profit ಇದ್ದರೆ, ಬುದ್ಧಿಭ್ರಮಣೆಯಾಗಿದ್ದರೆ, unsound mind ಆಗಿದ್ದರೆ, ದಿವಾಳಿಯಾಗಿದ್ದರೆ, insolvent ಆಗಿದ್ದರೆ, ಈ ರೀತಿಯಾಗಿದೆ.

ಅದೇ ರೀತಿಯಾಗಿ, ಶಾಸನಬದ್ಧ ಅನರ್ಹತೆ ಅಂದರೆ, statutory disqualification for the Membership of Lok Sabha and Legislative Assembly ಗೆ ಇರತಕ್ಕಂತಹದ್ದು. ಜನತಾ ಪ್ರತಿನಿಧಿ ಅಧಿನಿಯಮ, 1951 ಅದರಡಿಯಲ್ಲಿ ಕಲಂ ೮, ೮(ಎ) ಮತ್ತು ೯ ರ ಪ್ರಕಾರ ಒಬ್ಬ ವ್ಯಕ್ತಿ ಅಸ್ಪೃಶ್ಯತೆ ಬೋಧನೆ ಮತ್ತು ಆಚರಣೆ ಮಾಡಿ ಹೆಚ್ಚಿಗೆ ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ 150 ರಡಿಯಲ್ಲಿ ಶಿಕ್ಷೆಗೆ ಒಳಗಾಗಿದ್ದರೆ, ಭ್ರಷ್ಟಾಚಾರವೆಸಗಿ, ಭ್ರಷ್ಟಾಚಾರ ಕಾಯಿದೆಯಡಿಯಲ್ಲಿ ಶಿಕ್ಷೆಗೆ ಒಳಪಟ್ಟಿದ್ದರೆ, ಸರ್ಕಾರದೊಂದಿಗೆ contract ನಡೆಸುತ್ತಿದ್ದರೆ, ವರದಕ್ಷಿಣೆ ನಿಷೇಧ ಕಾಯಿದೆ ಅಧಿನಿಯಮ, 1950 ರಡಿಯಲ್ಲಿ ಶಿಕ್ಷೆಗೆ ಒಳಪಟ್ಟು, ಅಪರಾಧಿ ಎಂದು ನಿರ್ಣಯವಾಗಿದ್ದರೆ, ಚುನಾವಣಾ ವೆಚ್ಚ ಸಲ್ಲಿಸದೇ, ಚುನಾವಣೆಗೆ ಸ್ಪರ್ಧಿಸಲು ಅನರ್ಹತೆ ಹೊಂದಿದ್ದರೆ, ಇವುಗಳನ್ನು ಹೊರತುಪಡಿಸಿಯೂ ಮತ್ತೇನಾದರೂ ಆಗಿದ್ದರೆ ಅವರು ಸದಸ್ಯತ್ವಕ್ಕೆ disqualify ಆಗುತ್ತಾರೆ. ಅದು ಗ್ರಾಮ ಪಂಚಾಯಿತಿಗೆ ಇರಬಹುದು, ತಾಲ್ಲೂಕು ಪಂಚಾಯಿತಿಗೆ ಇರಬಹುದು, ಜಿಲ್ಲಾ ಪಂಚಾಯಿತಿಗೆ ಇರಬಹುದು. ಈಗ ಏನು ಮಾನ್ಯ ಸಚಿವರು ಈ ಒಂದು ತಿದ್ದುಪಡಿಯನ್ನು ಪ್ರಸ್ತಾಪ ಮಾಡಿದ್ದಾರೆ, ಸಹಕಾರ ಸಂಘ ಮತ್ತು ಸಂಸ್ಥೆಗಳ ಹುದ್ದೆಗಳಲ್ಲಿ ಯಾರು ಅಧ್ಯಕ್ಷರಾಗಿದ್ದರು, ಅವರನ್ನು ತೆಗೆದು ಹಾಕಿದ್ದರೆ ಅಥವಾ ಇಲ್ಲಿ ಸರ್ಕಾರಿ ನೌಕರರು ಯಾರು ಇದ್ದಾರೋ ಅವರು ಕಡ್ಡಾಯ ನಿವೃತ್ತಿಯಾಗಿದ್ದರೆ ಅಥವಾ removal ಆಗಿದ್ದರೆ, ಇವೆಲ್ಲವೂ ಕೂಡ offence ಅಥವಾ

ಅಪರಾಧವಾಗುವುದಿಲ್ಲ. ಕೇವಲ ಅವರ ಕಾರ್ಯ ಅವಧಿಯಲ್ಲಿ ಅಥವಾ ಹುದ್ದೆ ನಿರ್ವಹಣೆ ಮಾಡುವಲ್ಲಿ ಆಗಿರುವಂತಹ ಕೆಲವೊಂದು ಲೋಪದೋಷಗಳಿರಬಹುದು. ಇಂತಹ ಲೋಪದೋಷಗಳನ್ನು ಅನರ್ಹತೆಗೊಳಪಡಿಸುವುದರಿಂದ ಕೂಡ ಇದು ಕಾನೂನಿನ ಚೌಕಟ್ಟಿನೊಳಗೆ ಅಂದರೆ, scrutiny of law ಒಳಪಡುತ್ತದೆಯೇ, test of law ಎದುರಿಸುತ್ತದೆಯೇ ಎನ್ನುವುದು ಒಂದು ಅನುಮಾನವಿದೆ. ಇದರ ಬಗ್ಗೆ ಮಾನ್ಯ ಸಚಿವರು ವಿಶ್ಲೇಷಣೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ತಿದ್ದುಪಡಿ ಏನಾಗಿದೆ ಎಂದರೆ, ಕಲಂ 120, 190 ತಿದ್ದುಪಡಿ ಎಂದರೆ, ಚುನಾಯಿತ ಸದಸ್ಯರ ಸಂಖ್ಯೆ ಮಿತಿಯನ್ನು ಜನಸಂಖ್ಯೆ ಆಧಾರದ ಮೇಲೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸದಸ್ಯರ ಸಂಖ್ಯೆಯನ್ನು ತಿದ್ದುಪಡಿ ಮಾಡಿ ಹೆಚ್ಚಳ ಮಾಡುತ್ತಿದ್ದಾರೆ. ಅಂದರೆ, ತಾಲ್ಲೂಕು ಪಂಚಾಯಿತಿ ಸದಸ್ಯರ ಸಂಖ್ಯೆ ಜಾಸ್ತಿ ಮಾಡುತ್ತಿದ್ದಾರೆ.

**(ಮುಂದು)**

**(657) 28-03-2022 1.20 ಟಿಸಿಹೆಚ್-ವಿಕೆ**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಸದಸ್ಯರ ಸಂಖ್ಯೆಯನ್ನು ತಿದ್ದುಪಡಿ ಮಾಡುವ ಮೂಲಕ ಸದಸ್ಯರ ಸಂಖ್ಯೆಗಳನ್ನು ಜಾಸ್ತಿ ಮಾಡುತ್ತಿದ್ದಾರೆ. ಇದರ ಬಗ್ಗೆ ಯುವ ಶಾಸಕ ಮಿತ್ರರು ಮಾತನಾಡುತ್ತಾರೆ. ಹಾಗಾಗಿ, ನಾನು ಅದರ ಬಗ್ಗೆ ಹೇಳುವುದಿಲ್ಲ. ಆದರೆ ಇದರ implications ಏನಾಗಿದೆ ಎನ್ನತಕ್ಕಂಥದ್ದನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. ಈಗ ರಾಜ್ಯ ಸರ್ಕಾರ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗೆ territorial constituency ಅಂದರೆ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಏನು ತಯಾರು ಮಾಡಿದೆ, ಅದರ ಆಧಾರದ ಮೇಲೆ ರಾಜ್ಯ ಚುನಾವಣೆ ನಡೆಯುವಾಗ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯ ಕ್ಷೇತ್ರಗಳನ್ನು ನಿಗದಿಪಡಿಸಿ, ವಿಂಗಡಣೆ ಮಾಡಿ ಅದನ್ನು ಪ್ರಚಾರ ಮಾಡಿರತಕ್ಕಂಥದ್ದು ಸರಿಯಿಲ್ಲ, ಇದು unscientific ಆಗಿದೆ, ಇದರಲ್ಲಿ ವಾಸ್ತವ ಸಂಗತಿಯಿಲ್ಲ ಎಂದು ಹೈಕೋರ್ಟ್‌ನಲ್ಲಿ

ಸುಮಾರು 2600 ರಿಟ್ ಅರ್ಜಿಗಳು ದಾಖಲಾಗಿವೆ. ಈ 2600 ರಿಟ್ ಅರ್ಜಿಗಳನ್ನು ತೀರುವಳಿ ಮಾಡುವುದಕ್ಕೆ ರಾಜ್ಯ ಚುನಾವಣಾ ಆಯೋಗದಲ್ಲಿ ಯಾವುದೇ ರೀತಿಯಾದಂತಹ ವ್ಯವಸ್ಥೆ ಅಥವಾ ಮೆಕ್ಯಾನಿಜಂ ಇಲ್ಲ ಎಂದು ಚರ್ಚೆಗೆ ಬಂದಾಗ, ರಾಜ್ಯ ಸರ್ಕಾರವೇ voluntary ಯಾಗಿ ಬಿಲ್‌ನಲ್ಲಿ ತಿದ್ದುಪಡಿ ಮಾಡಿ ಒಂದು Delimitation Commission ಮಾಡುತ್ತೇವೆ ಎಂದು ಹೇಳಿ, ಆ Delimitation Commission ನ್ನು ಮಾಡಿದ್ದರು. ಒಬ್ಬರು ನಿವೃತ್ತ ಐಎಎಸ್ ಅಧಿಕಾರಿಯಾದ ಶ್ರೀ ಲಕ್ಷ್ಮೀನಾರಾಯಣ ಎಂಬುವರ ಅಧ್ಯಕ್ಷತೆಯಲ್ಲಿ Delimitation Commission ರಚನೆ ಮಾಡಲಾಗಿದೆ. ಈ ಆಯೋಗವು ಬಹುತೇಕವಾಗಿ ತನ್ನ ಕಾರ್ಯಗಳನ್ನು ಪೂರ್ಣಗೊಳಿಸಿದೆ. ಇಂತಹ ಸಂದರ್ಭದಲ್ಲಿ ನೀವು ಮತ್ತೊಮ್ಮೆ delimitation ಮರುವಿಂಗಡಣೆ ಮಾಡುತ್ತಾ ಹೋದಾಗ, ಈ ವಿವಾದಾತ್ಮಕವಾಗಿರುವ ಈ ಮರುವಿಂಗಡಣೆಯನ್ನು ಪ್ರಶ್ನೆ ಮಾಡಲು ಜನ ಹೈಕೋರ್ಟ್‌ಗೆ ಹೋಗುತ್ತಾರೆ. ಈಗಾಗಲೇ ಸುಮಾರು 6 ತಿಂಗಳು ಕಳೆದಿದೆ. ತಾವು ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಕಾರ್ಯಾವಧಿ ಮುಗಿದಿದೆ ಎಂದು ಸರ್ಕಾರ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದೆ. ಸಂವಿಧಾನದ 73ನೇ ತಿದ್ದುಪಡಿಯನುಸಾರ ಯಾವುದೇ ಪಂಚಾಯತ್ ರಾಜ್ Institution ಅಥವಾ Urban Local Body ಗಳಾಗಬಹುದು ಅವುಗಳಿಗೆ 6 ತಿಂಗಳ ಅವಧಿಗಿಂತ ಹೆಚ್ಚಿನ ಅವಧಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬಾರದೆಂದು ಇದೆ. ಈ ದೃಷ್ಟಿಯಲ್ಲಿ ತಾವು ಬಹುಶಃ ಚುನಾವಣೆಯನ್ನು ಮುಂದೂಡುವ ದೃಷ್ಟಿಯಿಂದ ಈ ಒಂದು ಬಿಲ್‌ಗೆ ತಿದ್ದಪಡಿಯನ್ನು ತಂದಿದ್ದಾರೆಂದು ನನ್ನ ಅನಿಸಿಕೆಯಾಗಿದೆ. ಈ ಕಾರ್ಯವನ್ನು ಈ ಮುಂಚೆ ಮಾಡಬಹುದಿತ್ತು. ಸರ್ಕಾರ ಇದಕ್ಕೆ delimitation constituency ಮಾಡುತ್ತೇವೆಂದು ಹೈಕೋರ್ಟ್ ಮುಂದೆ ಒಂದು undertaking ತೆಗೆದುಕೊಳ್ಳಬಹುದಿತ್ತು. ಅದನ್ನು ಬಿಟ್ಟು ಏತಕ್ಕೋಸ್ಕರ ಸರ್ಕಾರ ಈಗ ಈ ಒಂದು ತಿದ್ದುಪಡಿಯನ್ನು ಇಷ್ಟು ತಡವಾಗಿ ತಂದಿದ್ದಾರೆ? ಇದು ಇಲ್ಲದ complication ಗೆ ಅನುವು ಮಾಡಿಕೊಡುತ್ತದೆ. ಆದ್ದರಿಂದ ದಯಮಾಡಿ ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಈ ತಿದ್ದುಪಡಿಗಳ ಅವಶ್ಯಕತೆ ಇದೆಯೇ ಎನ್ನುವುದನ್ನು ನಾನು ಈ ಸದದ ಮೂಲಕ ಮಾನ್ಯ ಸಚಿವರ ಗಮನಕ್ಕೆ

ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಬಾಕಿ ವಿಚಾರಗಳನ್ನು ನಮ್ಮ ಯುವ ಶಾಸಕ ಮಿತ್ರರು ಮಾತನಾಡುತ್ತಾರೆ.

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ 1993 ವಿಧೇಯಕಕ್ಕೆ ಈಗ ಇನ್ನೊಂದು ತಿದ್ದುಪಡಿಯನ್ನು ತಂದಿದ್ದಾರೆ. ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಬಿಲ್‌ನಲ್ಲಿರತಕ್ಕಂಥ ಸಾಕಷ್ಟು ವಿಚಾರಗಳು ಈ ಹಿಂದೆ ತಂದಿದ್ದಂತಹ ತಿದ್ದುಪಡಿ ವಿಧೇಯಕದಲ್ಲೂ ಕೂಡ ಇವೆ. ಈಗ ಸರ್ಕಾರ ಎರಡು ಲಕ್ಷಗಳನ್ನು ಮೀರಿದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಪ್ರತಿ ಹನ್ನೆರಡು ಸಾವಿರಕ್ಕೆ ಕಡಿಮೆಯಿಲ್ಲದ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯನು ಇರತಕ್ಕದ್ದು ಎಂದು ಸರ್ಕಾರ ಒಂದು ತಿದ್ದುಪಡಿಯನ್ನು ತಂದಿದೆ. ಸರ್ಕಾರ ಇದನ್ನು ಮಾಡುವುದಕ್ಕೆ ಇಷ್ಟು ವರ್ಷಗಳು ಬೇಕೇ? ತಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಹಲವು ವರ್ಷಗಳಾಗಿದೆ. ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ಸರ್ಕಾರ ಆಡಳಿತಾಧಿಕಾರಿಯನ್ನು ನೇಮಕ ಮಾಡಿದೆ. ಈಗ ಅಲ್ಲಿ ಬರೀ ಆಡಳಿತಾಧಿಕಾರಿಗಳು ಮಾತ್ರ ಕೆಲಸ ಮಾಡುತ್ತಿದ್ದಾರೆ. ತಾವೇ ನಮ್ಮದು ಡಬಲ್ ಇಂಜಿನ್ ಸರ್ಕಾರ ಎಂದು ಹೇಳುತ್ತೀರಿ. ರಾಜ್ಯದಲ್ಲಿ ತಮ್ಮದೇ ಸರ್ಕಾರ ಇದೆ, ಕೇಂದ್ರದಲ್ಲೂ ಕೂಡ ತಮ್ಮದೇ ಸರ್ಕಾರ ಇದೆ. 'ಕಟ್ಟಕಡೆಯ ವ್ಯಕ್ತಿಗೂ ಅಧಿಕಾರವನ್ನು ಕೊಡಬೇಕು' ಎಂಬುದು ನಿಮ್ಮ ಸರ್ಕಾರದ ಉದ್ದೇಶವಾಗಿದೆ. ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಈ ಹಿಂದೆ ಕೂಡ ಬೇರೆ ಬೇರೆ ಬಿಲ್‌ಗಳಲ್ಲಿ ತಿದ್ದುಪಡಿ ತಂದಹ ಸಂದರ್ಭದಲ್ಲೂ ಕೂಡ ನಾವು ಮಾತನಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲೂ ಕೂಡ ಈಗಾಗಲೇ ಆಡಳಿತಾಧಿಕಾರಿಯನ್ನೂ ಕೂಡ ನೇಮಕ ಮಾಡಿದ್ದೀರಿ. ನೀವು ಚುನಾವಣೆ ಮಾಡುವುದಕ್ಕೆ ಸಾಧ್ಯವಾಗದೇ ಈ ಒಂದು ಬಿಲ್‌ಗೆ ತಿದ್ದುಪಡಿ ತಂದಿದ್ದೀರಿ ಎಂದು ನಾವು ಅವೊತ್ತು ಕೂಡ ಹೇಳಿದ್ದೇವೆ. ಈ ಹಿಂದೆಯೂ ಕೂಡ ನಿಮ್ಮ ಬಿಜೆಪಿ ಸರ್ಕಾರ ಇದ್ದಂತಹ ಸಂದರ್ಭದಲ್ಲೂ ಕೂಡ ಇದೇ ರೀತಿ ಮಾಡಿದ್ದೀರಿ. ಈ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲಾ ಯಾವುದೇ ಸ್ಥಳೀಯ

ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದೇ ಇಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಧಿಕಾರ ಸಿಗಬೇಕೆಂದು ತಾವು ಬರೀ ಮಾತಿನಲ್ಲಿ ಹೇಳುತ್ತೀರಿ. ಆದರೆ ಬಿಜೆಪಿ ಸರ್ಕಾರ ಯಾವಾಗ ಅಧಿಕಾರಕ್ಕೆ ಬಂದಿದೆಯೋ ಆಗೆಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದೇ ಇಲ್ಲ. ಈಗಲೂ ಕೂಡ ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿದೆ. ಆ ಕೋರ್ಟ್ ಛೀಮಾರಿ ಹಾಕುವವರೆಗೂ ಕೂಡ ಚುನಾವಣೆಗಳನ್ನು ನಡೆಸುವುದೇ ಇಲ್ಲ. ಮಾನ್ಯ ಸಭಾಪತಿಯವರೇ, ಈಗ ಈ ಬಿಲ್‌ಗೂ ಕೂಡ ತಿದ್ದುಪಡಿ ತಂದಿದ್ದಾರೆ. ಈ ಬಿಲ್‌ನಲ್ಲಿ ತಿದ್ದುಪಡಿ ತಂದಿರುವುದು ಏನೆಂದರೆ, ಸಾಮಾನ್ಯವಾಗಿ ಜನಸಂಖ್ಯೆ ಹೆಚ್ಚು ಇರುವ ಕಡೆಗಳಲ್ಲಿ ಒಬ್ಬ ಚುನಾಯಿತ ಸದಸ್ಯರು ಇರಬೇಕು. ಒಂದು ವೇಳೆ ಕಡಿಮೆ ಜನಸಂಖ್ಯೆ ಇರುವ ಪ್ರದೇಶದಲ್ಲಿ ಸದಸ್ಯರನ್ನು ತೆಗೆಯಬೇಕೆಂದು ಮಾಡಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಹಲವು ವರ್ಷಗಳಾಗಿದೆ. ಈಗ ಈ ಬಿಲ್‌ಗೆ ತಿದ್ದುಪಡಿ ತರುವ ಅವಶ್ಯಕತೆ ಏನಿತ್ತು? ಮಾನ್ಯ ಸಭಾಪತಿಯವರೇ, ಈಗ ಇದನ್ನು delimitation ಮಾಡುವುದಕ್ಕೆ ಈ ಬಿಲ್‌ಗೆ ತಿದ್ದುಪಡಿ ತಂದಿದ್ದಾರೆ. ಹಾಗಾದರೆ ಇದನ್ನು implement ಮಾಡುವುದಕ್ಕೆ ಎಷ್ಟು ದಿನ ಬೇಕು? ಅಂದರೆ ಚುನಾವಣೆಗಳನ್ನು ನಡೆಸಲೇಬಾರದು, ಆ ಸ್ಥಳೀಯ ಸಂಸ್ಥೆಗಳ ಅಧಿಕಾರವೆಲ್ಲವನ್ನೂ ನೀವೇ ಅನುಭವಿಸಬೇಕೆಂದು ಈ ಒಂದು ಬಿಲ್‌ಗೆ ತಿದ್ದುಪಡಿ ತಂದಿದ್ದೀರಿ. ಜನ ಇದರ ಮೇಲೆ ಮತ್ತೆ ಕೋರ್ಟ್‌ಗೆ ಹೋಗುತ್ತಾರೆ. ಕೊನೇಪಕ್ಷ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಸದಸ್ಯರುಗಳಿದ್ದರೆ ಒಳ್ಳೆಯದು. ಆ ಗ್ರಾಮಗಳಲ್ಲಿರುವ ಜನರೆಲ್ಲರೂ ಬಂದು ಮಾನ್ಯ ಶಾಸಕರು ಹಾಗೂ ಮಾನ್ಯ ಸಚಿವರನ್ನು ಭೇಟಿ ಮಾಡುವುದಕ್ಕೆ ಆಗುತ್ತದೆಯೇ? ಆ ಗ್ರಾಮದ ಜನಗಳು ವಿಧಾನಸೌಧಕ್ಕೆ ಬಂದರೆ ಒಳಗಡೆಯೇ ಬಿಡುವುದಿಲ್ಲ. ಹಾಗಾಗಿ, ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ಈಗ ತಾವೇನು ಈ ಒಂದು ಬಿಲ್‌ನ್ನು ಒಳ್ಳೆಯ ಉದ್ದೇಶಕ್ಕೆ ತಂದಿದ್ದೇವೆಂದು ಹೇಳುತ್ತಿದ್ದೀರಿ, ಆದರೆ 'ನೀವು ಈ ಬಿಲ್‌ನ್ನು ದುರುದ್ದೇಶದಿಂದ ತಂದಿದ್ದೀರಿ' ಎಂದು ನಾನು ಹೇಳುತ್ತಿದ್ದೇನೆ. ಚುನಾವಣೆಯನ್ನು ಮುಂದೂಡುವ ದೃಷ್ಟಿಯಿಂದ ಈ ಬಿಲ್‌ನ್ನು ತಂದಿದ್ದೀರಿ. ಆದ್ದರಿಂದ ದಯಮಾಡಿ ಆ ರೀತಿ ಆಗುವುದು ಬೇಡ. ಈ ರಾಜ್ಯದ ಜನ ನಿಮ್ಮ ಸರ್ಕಾರಕ್ಕೆ ಹಾಗೂ ಮಾನ್ಯ ಸಚಿವರ ಬಗ್ಗೆ ಇನ್ನೂ ಹೆಚ್ಚಿನ ಗೌರವ ಕೊಡಬೇಕಾದರೆ, ಈ ಕೂಡಲೇ ಚುನಾವಣೆಯನ್ನು ಮಾಡಿ. ಚುನಾವಣೆಗಳನ್ನು ಮಾಡಿದಲ್ಲಿ,

ಸ್ಥಳೀಯವಾಗಿ ಏನು ಸಮಸ್ಯೆಗಳಿವೆಯೋ ಅವುಗಳನ್ನು ನಿವಾರಿಸಿಕೊಳ್ಳಲು ಜನ ಆ ಸದಸ್ಯರ ಹತ್ತಿರ ಹೋಗುತ್ತಾರೆಯೇ ಹೊರತು, ತಮ್ಮ ಹತ್ತಿರ ಬರುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಮ್ಮ ಮನವಿಯಂತೆ ಆದಷ್ಟು ಬೇಗನೆ ಚುನಾವಣೆಗಳನ್ನು ಮಾಡಿ.

**ಶ್ರೀ ಎಸ್.ರವಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಪ್ರಮುಖವಾಗಿ ಈ ಬಿಲ್‌ನ್ನು ತಂದಿರತಕ್ಕಂಥ ಉದ್ದೇಶ ಏನಿದೆಯೆಂದು ಈ ಬಿಲ್‌ನ್ನು ನೋಡಿದಾಗ ನಮಗೆ ತಿಳಿಯುವುದೇನೆಂದರೆ, ಒಂದು constituency ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಚಿಕ್ಕ ತಾಲ್ಲೂಕುಗಳಿಂದ ದೊಡ್ಡ ತಾಲ್ಲೂಕುಗಳವರೆಗೂ ಇರತಕ್ಕಂಥ ಜನಸಂಖ್ಯೆ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆಗೆ ಸಂಬಂಧಪಟ್ಟಂತೆ, ಸುಮಾರು 50 ಲಕ್ಷ ಜನಸಂಖ್ಯೆಯಿಂದ ಸುಮಾರು 2 ಲಕ್ಷ ಜನಸಂಖ್ಯೆಯವರೆಗೂ constituency delimitation ಗೆ ಎಷ್ಟು ಜನಸಂಖ್ಯೆ ಇರಬೇಕೆಂದು mention ಮಾಡಿದ್ದಾರೆ. ಮತ್ತೆ candidature ಆಗತಕ್ಕಂಥ ಸಂದರ್ಭದಲ್ಲಿ ಅಕ್ರಮವನ್ನೆಸಗಿರತಕ್ಕಂಥ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ನೌಕರರುಗಳು ಅವರ ಸೇವೆಯಿಂದ ವಜಾ ಆಗಿರತಕ್ಕಂಥವರು, ಜೈಲು ಶಿಕ್ಷೆಗೆ ಒಳಪಟ್ಟಿರತಕ್ಕಂಥವರು ಆ ಚುನಾವಣೆಗೆ ಸ್ಪರ್ಧಿಸಲು ಅವಕಾಶವಿಲ್ಲವೆಂದು ತಿದ್ದುಪಡಿ ತಂದಿರುವುದಕ್ಕೆ ನಾನು ಸ್ವಾಗತಿಸುತ್ತೇನೆ. ಆದರೆ ಸಹಕಾರ ಸಂಘ-ಸಂಸ್ಥೆಗಳ ಚುನಾವಣೆಗೆ ಸಂಬಂಧಪಟ್ಟಂತೆ, ಆ ನೌಕರರನ್ನು ವಜಾ ಮಾಡಿರತಕ್ಕಂಥವರು, ಅಕ್ರಮಗಳಲ್ಲಿ ತಪ್ಪುಗಳನ್ನೆಸಗಿರತಕ್ಕಂಥವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶಗಳಿಲ್ಲ ಎಂದು ತಿದ್ದುಪಡಿ ತಂದಿದ್ದೀರಿ. ಇದರ ಜೊತೆಗೆ ಆತನು ಸಹಕಾರ ಸಂಘ ಮತ್ತು ಸಂಸ್ಥೆಗಳ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ ಅಥವಾ ಆತನನ್ನು ಸಹಕಾರ ಸಂಘ ಮತ್ತು ಸಂಸ್ಥೆಗಳ ಅಧ್ಯಕ್ಷ ಹಾಗೂ ಸದಸ್ಯತ್ವ ಹುದ್ದೆಯಿಂದ ತೆಗೆದುಹಾಕಿರುವ ವ್ಯಕ್ತಿಗಳು ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶಗಳಿಲ್ಲ. Cooperative system ನಲ್ಲಿ ಅವರು ಅಧ್ಯಕ್ಷರ ಸ್ಥಾನದಿಂದ ಹಾಗೂ ಸದಸ್ಯತ್ವ ಸ್ಥಾನದಿಂದ ನಿಯಮ 29 (ಸಿ) ಅಥವಾ ಇನ್ನಿತರೆ ನಿಯಮಗಳಲ್ಲಿ ತೆಗೆದುಹಾಕಿರತಕ್ಕಂಥವರು ಚುನಾವಣೆಗಳಲ್ಲಿ ಸ್ಪರ್ಧೆ ಮಾಡುವುದಕ್ಕೆ

ಅವಕಾಶಗಳಿಲ್ಲವೆಂದು ಹೇಳಿದ್ದಾರೆ. ಆದರೆ ನಾನು ಕೂಡ cooperative movement ನಲ್ಲಿ ಇದ್ದೇನೆ. ನಾನೂ ಕೂಡ ಬೆಂಗಳೂರು ಡಿಸಿಸಿ ಬ್ಯಾಂಕ್‌ನಲ್ಲಿ ಅಧ್ಯಕ್ಷನಾಗಿದ್ದೆನು. ಪ್ರಸ್ತುತ ನಾನು ಅಲ್ಲಿ ಈಗ ನಿರ್ದೇಶಕನಾಗಿದ್ದೇನೆ. Cooperative sector ನಲ್ಲಿ ನಾವೆಲ್ಲಾ ಬಹಳಷ್ಟು ರಾಜಕೀಯ ವ್ಯಕ್ತಿಗಳು ಇದ್ದೇವೆ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಕೂಡ cooperative sector ನಲ್ಲಿದ್ದಾರೆ. ನಾನು ಬರೀ ಅವರೊಬ್ಬರ ಹೆಸರನ್ನು ಮಾತ್ರ mention ಮಾಡುತ್ತಿದ್ದೇನೆ. ಇನ್ನೂ ಅನೇಕ ರಾಜಕೀಯ ವ್ಯಕ್ತಿಗಳು ಕೋ-ಅಪರೇಟಿವ್ ವ್ಯವಸ್ಥೆಯಲ್ಲಿ ಸಕ್ರಿಯರಾಗಿದ್ದಾರೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಕೋ-ಅಪರೇಟಿವ್ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆಯೆಂದು ಮಾನ್ಯ ಸಚಿವರಿಗೂ ಗೊತ್ತಿದೆ. ಆ ಕೋ-ಅಪರೇಟಿವ್ ವ್ಯವಸ್ಥೆಯಲ್ಲಿ ಒದ್ದವನದ್ದೇ ಚೆಂಡು, ಅಲ್ಲಿ ಕುಳಿತುಕೊಂಡವನದ್ದೇ ಚೇರು ಎಂಬಂತೆ ಆಗಿದೆ. ಅದು ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರಲಿ ಅಥವಾ ಜೆಡಿಎಸ್ (ಜಾ) ಪಕ್ಷ ಅಧಿಕಾರದಲ್ಲಿರಲಿ ಅಥವಾ ಬಿಜೆಪಿ ಪಕ್ಷ ಅಧಿಕಾರದಲ್ಲಿರಲಿ; ಪ್ರಸ್ತುತ ಯಾವ ಪಕ್ಷ ಅಧಿಕಾರದಲ್ಲಿರುತ್ತದೋ ಆ ಪಕ್ಷದ್ದೇ cooperative system. ಈಗ ಯಾರೋ ಒಬ್ಬ ವ್ಯಕ್ತಿ ನಾನು ಯಾವುದೋ ಒಂದು ಸಹಕಾರ ಸಂಘಕ್ಕೆ ಚುನಾವಣೆಗೆ ಸ್ಪರ್ಧಿಸುತ್ತೇನೆ ಎಂದರೆ, ಅವೊತ್ತಿನ ದಿನ ಆತ nomination file ಮಾಡುವುದಕ್ಕೆ ಆಗುವುದಿಲ್ಲ. ಅವನನ್ನು ನಿಯಮ 29 (ಸಿ) ರಡಿಯಲ್ಲಿ ಆರೋಪ ಬರುವಂತೆ ಮಾಡಿ ಆ ಸಹಕಾರ ಸಂಘದಿಂದ ವಜಾ ಮಾಡುತ್ತಾರೆ. ಈ cooperative system ನಲ್ಲಿ ಈ ರೀತಿಯ ವ್ಯವಸ್ಥೆ ಇದೆ. ಇದನ್ನು ಮಾನ್ಯ ಶಾಸಕರಾದ ಎಸ್.ಎಲ್.ಭೋಜೇಗೌಡ ಮತ್ತು ನಾನೂ ಕೂಡ ಅನುಭವಿಸಿದ್ದೇನೆ. ಸಾಕಷ್ಟು ಜನ ಕೋಅಪರೇಟಿವ್ ವ್ಯಸ್ಥೆಯಲ್ಲಿ ಅನುಭವಿಸಿದ್ದಾರೆ. ಪ್ರಸ್ತುತ ಅಧಿಕಾರದಲ್ಲಿರತಕ್ಕಂಥ ಪಕ್ಷದ ಆಧಾರದಲ್ಲಿ ಈ ಕೋ-ಅಪರೇಟಿವ್ ವ್ಯವಸ್ಥೆ ನಡೆಯುತ್ತಿದೆ. ಒಬ್ಬ ವ್ಯಕ್ತಿ ಕ್ಯಾಂಡಿಡೇಟ್ ಆಗುತ್ತಾನೆ, ಜಿಲ್ಲಾ ಪಂಚಾಯಿತಿಗೆ ಮತ್ತು ತಾಲ್ಲೂಕು ಪಂಚಾಯಿತಿಗೆ ಅವನನ್ನು avoid ಮಾಡಬೇಕೆಂದು ಮಾಡುತ್ತಾರೆ. ಒಬ್ಬ ವ್ಯಕ್ತಿ ಕೋ-ಅಪರೇಟಿವ್ ವ್ಯವಸ್ಥೆಯಲ್ಲಿ ಸ್ಪರ್ಧಿಸಬೇಕಾದರೆ ಆತ State Level Federation ನಲ್ಲಿ ನಿರ್ದೇಶಕನಾಗಿರಬೇಕಾಗಿಲ್ಲ. ಒಂದು ಊರಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಒಬ್ಬ ಸದಸ್ಯನಾಗಿದ್ದರೆ ಸಾಕು. ಆತ ಏನಾದರು ಚುನಾವಣೆಗೆ ಸ್ಪರ್ಧಿಸುತ್ತಾರೆಂದರೆ, ತಕ್ಷಣವೇ ಅವನು nomination ಮಾಡುವುದಕ್ಕೆ ಹಿಂದಿನ ದಿನ

ಆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಒಬ್ಬರು ಆಡಿಟರ್‌ನ್ನು ಕಳುಹಿಸಿ, ಪರಿಶೀಲನೆ ಮಾಡಿಸಿ, ಆತನ ಲೆಕ್ಕ ಈ ರೀತಿ ತಪ್ಪಾಗಿದೆ ಎಂದು 29 (ಸಿ) ಆಕ್ಟ್ ತಂದು supersede ಮಾಡಿಸಿದರೆ ಆತ nomination ಮಾಡುವಂತಿಲ್ಲ.

**(ಮುಂದು)**

**(658)28.3.2022/1.30/ಎಂ.ಎಂ-ವಿ.ಕೆ**

**ಶ್ರೀ ಎಸ್. ರವಿ(ಮುಂದು):-**

ಅದು ಮಾನ್ಯ ಸಚಿವರಿಗೆ ಅರ್ಥವಾಗುತ್ತದೆ. ಇದು ಬಹಳ ಗಂಭೀರವಾಗುತ್ತದೆ. ಇದು ಶಾಶ್ವತವಲ್ಲ. ಇವತ್ತು ನೀವಿದ್ದೀರಿ, ನಾಳೆ ಇನ್ನೊಬ್ಬರು ಅಧಿಕಾರಕ್ಕೆ ಬರುತ್ತಾರೆ. ಸಹಕಾರ ಸಂಘಗಳ ಅಧ್ಯಕ್ಷ ಮತ್ತು ಸದಸ್ಯರಿಗೆ ತರುವುದು; ಬಹುತೇಕ ಶೇ.75ರಷ್ಟು ಭಾಗ ಸಹಕಾರ ವ್ಯವಸ್ಥೆಯಲ್ಲಿ ವಜಾ ಆಗುವುದು ರಾಜಕೀಯ ಕಾರಣಗಳಿಗಾಗಿ. ಆದ್ದರಿಂದ ಈ ವಿಧೇಯಕವನ್ನು ಹಿಂಪಡೆಯಬೇಕಾಗುತ್ತದೆ. ವಜಾಗೊಂಡ ನೌಕರರಿಗೆ ಶಿಕ್ಷೆಯಾಗಿರುವಂತಹವರಿಗೆ ಅಂತಹವರಿಗೆಲ್ಲಾ ನೀವು ಒಳ್ಳೆಯ ಕೆಲಸ ಮಾಡಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ವಿಧೇಯಕವನ್ನು ಮಾತ್ರ ದಯವಿಟ್ಟು ತರಬೇಡಿ ಇದರಿಂದ ಬಹಳ ಗಂಭೀರವಾದಂತಹ ಪರಿಣಾಮವಾಗುತ್ತದೆ. Scrutiny ಸಮಯದಲ್ಲಿ ತಂದು 29ಸಿ ಪ್ರಕಾರ ವಜಾ ಆಗಿದೆ, ಆತ body ಯಲ್ಲಿ ನಿರ್ದೇಶಕನಾಗಿದ್ದಾನೆ ಅವನು ಚುನಾವಣೆಯಲ್ಲಿ ನಿಂತುಕೊಳ್ಳುವ ಹಾಗಿಲ್ಲ ಎಂದರೆ ಮುಗಿಯಿತು. ಚುನಾವಣೆಯೇ ಮುಗಿದು ಹೋಗುತ್ತದೆ. ಅದು ನಿಮಗೂ, ನಮಗೂ ಅನ್ವಯವಾಗುತ್ತದೆ ಹಾಗೂ ಅದೊಂದು ಕೆಟ್ಟ ಪರಂಪರೆಗೆ ನಾಂದಿಯಾಗುತ್ತದೆ. ತಾವು ಜಿಲ್ಲಾ ಯೋಜನಾ ಸಮಿತಿ ಎಂದು ಮಾಡಿದ್ದೀರಿ. ಆ ಜಿಲ್ಲಾ ಯೋಜನಾ ಸಮಿತಿಗೆ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಪ್ರಾವಿಜನ್ ಮಾಡಿದ್ದಾರೆ. ಇದಕ್ಕೆ ಪಂಚಾಯಿತಿಯ ಛೇರ್ಮನ್‌ರನ್ನು ಏತಕ್ಕೆ ಬಿಟ್ಟಿದ್ದೀರಿ? ಗ್ರಾಮ ಪಂಚಾಯಿತಿ ಸದಸ್ಯರುಗಳಾಗಾದರೂ ಅಥವಾ ಪಂಚಾಯಿತಿ ಛೇರ್ಮನ್‌ಗಾದರೂ ಮಾಡಿ. ತಾಲ್ಲೂಕು ಪಂಚಾಯಿತಿಗೆ ಒಬ್ಬರೇ ಮತ್ತು ಜಿಲ್ಲಾ ಪಂಚಾಯಿತಿಗೆ ಒಬ್ಬರೇ ಅಧ್ಯಕ್ಷರಿದ್ದಾರೆಂದು ಅವರನ್ನು

ಸುಲಭವಾಗಿ ಆಯ್ಕೆ ಮಾಡಿಕೊಂಡಿದ್ದೇವೆ, ಪಂಚಾಯಿತಿಗಳು ತಾಲ್ಲೂಕು ಮಟ್ಟದಲ್ಲಿ ಜಾಸ್ತಿ ಇವೆ ಎಂದು ನೀವೇನಾದರೂ ಅಂದುಕೊಂಡರೆ, ಒಂದು ತಾಲ್ಲೂಕಿಗೆ ಒಬ್ಬರು ಛೇರ್ಮನ್. ಈ ರೀತಿಯಾಗಿ ನೀವು ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಿಗೆ; ಚುನಾವಣೆ ಮುಖ್ಯವಾದರೂ ಅವರು ಯೋಜನಾ ಸಮಿತಿಯಲ್ಲಿ ಇರಬೇಕು. ಗ್ರಾಮ ಪಂಚಾಯಿತಿಯ ಅಸ್ತಿತ್ವಕ್ಕೆ ಪ್ರತಿನಿಧಿಸುವ ವಿಚಾರದಲ್ಲಿ ಇಬ್ಬರು ಅಥವಾ ಮೂವರಾದರೂ ಇರಲೇಬೇಕಾಗುತ್ತದೆ. ದಯಮಾಡಿ ಈ ವಿಚಾರವನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ನೀವು ತಂದಿರುವ ವಿಧೇಯಕವು ಸಂಪೂರ್ಣವಾಗಿ ಜಿಲ್ಲಾ ಯೋಜನಾ ಸಮಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ ಇದೆ. ತಾಲ್ಲೂಕು ಪಂಚಾಯಿತಿಯು ಇವತ್ತು ಹಲ್ಲು ಕಿತ್ತ ಹಾವಾಗಿದೆ. ಅದು ಆಟಕ್ಕುಂಟು ಲೆಕ್ಕಕ್ಕಿಲ್ಲದಂತಾಗಿದೆ. ನಮ್ಮ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಇರುವುದು ತ್ರಿಪಕ್ಷೀಯ ಪದ್ಧತಿಯಾಗಿದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ. ತಾಲ್ಲೂಕು ಪಂಚಾಯಿತಿ ಬೇಕೇ ಎಂಬುದನ್ನು ನೋಡಿ. ಹೇಗಿದ್ದರೂ ನಿಮಗೆ ಚುನಾವಣೆ ಮಾಡುವ ಉದ್ದೇಶವಿಲ್ಲ. ಮಾನ್ಯ ಸದಸ್ಯರಾದ ರಮೇಶಗೌಡ ಮತ್ತು ತಿಪ್ಪೇಸ್ವಾಮಿಯವರು ಹೇಳಿದ ಮಾತನ್ನು ಅನುಮೋದಿಸುತ್ತೇನೆ. ನೀವು ಅವತ್ತಿನಿಂದಲೂ ನಡೆದುಕೊಳ್ಳುತ್ತಿರುವ ರೀತಿ ಮತ್ತು ತೋರುತ್ತಿರುವ ವರ್ತನೆಯನ್ನು ನೋಡಿದರೆ ನೀವು ಸ್ಥಳೀಯ ಸಂಸ್ಥೆಗಳಿಗೆ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಎಂ.ಎಲ್.ಎ., ಚುನಾವಣೆ ಬರುವವರೆಗೂ ಚುನಾವಣೆ ಮಾಡಲೇಬಾರದು ಎಂದು ಮಂತ್ರಿಗಳು ಕಟಿಬದ್ಧರಾಗಿ ತೀರ್ಮಾನ ತೆಗೆದುಕೊಂಡಿರುವ ಹಾಗಿದೆ. ಏನೋ ಒಂದಿಷ್ಟು ಸುಧಾರಣೆ ತರುವ ನೆಪದಲ್ಲಿ ಕಣ್ಣು ಒರೆಸುವುದಕ್ಕೆ ಏನೋ ಮಾಡುತ್ತಿದ್ದೇವೆ ಎಂಬುದು ಮಾಧ್ಯಮಗಳಲ್ಲಿ ಪ್ರಕಟವಾಗಲಿ ಎಂದು, ಚುನಾವಣೆ ನಡೆಸುವುದಕ್ಕೆ ಸುಧಾರಣೆ ತರುತ್ತಿದ್ದೇವೆ, ಬಿಲ್ಲುಗಳನ್ನು ಮಂಡಿಸುತ್ತಿದ್ದೇವೆ ಎಂಬ ಕಣ್ಣೊರೆಸುವ ತಂತ್ರ ಮಾಡುತ್ತಿದ್ದಾರೆ. ಆದ್ದರಿಂದ ತಾಲ್ಲೂಕು ಪಂಚಾಯಿತಿ ಬೇಕೇ ಎಂಬುದನ್ನೂ ತೀರ್ಮಾನ ಮಾಡಿಬಿಡಿ. ತ್ರಿಪಕ್ಷಿಯ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಷ್ಟೇ ಇದ್ದರೆ ಸಾಕೇ? ತಾಲ್ಲೂಕು ಪಂಚಾಯಿತಿಯು ಶಕ್ತಿಹೀನವಾಗಿದ್ದು ಹಲ್ಲಿಲ್ಲದ ಹಾವಾಗಿದೆ. ತಾಲ್ಲೂಕು ಪಂಚಾಯಿತಿಗಳಲ್ಲಿ ಕೆಲಸಗಳೇ ಆಗುತ್ತಿಲ್ಲ, ತಾವು ಏನು ನಿಯಂತ್ರಣ, ಅಧಿಕಾರ ಕೊಟ್ಟಿದ್ದೀರಿ; ಅದಕ್ಕೆ ಒಂದಷ್ಟು ಶಕ್ತಿ ಕೊಡುವ ರೀತಿಯಲ್ಲಿ ಬಿಲ್

ತಂದಿದ್ದಾರೆ. ಚುನಾವಣೆಯನ್ನು ಏತಕ್ಕೆ ಮುಂದೂಡಿದ್ದೀರಿ ಎಂಬುದನ್ನು ಇದೇ ಸಂದರ್ಭದಲ್ಲಿ ಹೇಳಿ. ಹಿಂದುಳಿದ ವರ್ಗದವರ ಓ.ಬಿ.ಸಿ., ಯವರ ಜನಸಂಖ್ಯೆ ಎಷ್ಟಿದೆ ಎಂಬ ನಿಖರಾದ ಮಾಹಿತಿಯನ್ನು ಕೋರ್ಟ್‌ಗೆ ಸಲ್ಲಿಸಿದರೆ ಸಾಕು ಚುನಾವಣೆ ಮಾಡುವುದಕ್ಕೆ ಅವರು ಅವಕಾಶ ಕೊಡುತ್ತಾರೆ. ನೀವು ಆ ಮಾಹಿತಿಯನ್ನು ಕೊಡಿ. ಕಾಂತರಾಜು ಆಯೋಗವನ್ನು ಯಾವುದೇ ಸರ್ಕಾರ ಮಾಡಿರಲಿ, ಅದು ಸರ್ಕಾರದ ಹಣ 150-170ಕೋಟಿ ರೂಪಾಯಿಗಿಂತಲೂ ಅಧಿಕವಾದಂತಹ ಕರ್ನಾಟಕ ರಾಜ್ಯದ ತೆರಿಗೆದಾರರ ಹಣ ಅದಕ್ಕೆ ವೆಚ್ಚವಾಗಿದೆ. ಮಾಹಿತಿ ಕೊರತೆ ಇದೆ, census ಮಾಡಬೇಕು, ಕಷ್ಟವಾಗುತ್ತದೆ ಎಂದು ನೀವು ಹೇಳುವ ಬದಲು ಚುನಾವಣೆ ನಡೆಸುವ ಬದ್ಧತೆ ನಿಮಗಿದ್ದಲ್ಲಿ "ಕಾಂತರಾಜು ವರದಿ"ಯನ್ನು ಲೇ ಮಾಡಿ, ಆ ವರದಿಯನ್ನು ನೀವು ಕೋರ್ಟ್‌ಗೆ ಕೊಟ್ಟರೆ ಚುನಾವಣೆ ಆಗುತ್ತದೆ. ಆಗ ನೀವು ಪಂಚಾಯತ್ ರಾಜ್ ವ್ಯವಸ್ಥೆಯ ಪರವಾಗಿ ನೀವಿದ್ದೀರಿ ಎಂದು ನಾವು ಒಪ್ಪಿಕೊಳ್ಳಬಹುದು ಇಲ್ಲದಿದ್ದರೆ ಪಂಚಾಯತ್ ರಾಜ್ ವ್ಯವಸ್ಥೆಯ ವಿರೋಧಿಗಳು ಎಂದು ಸಾರಾಸಗಟಾಗಿ ಹೇಳಬೇಕಾಗುತ್ತದೆ.

**ಶ್ರೀ ಪಿ.ಆರ್. ರಮೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ವಿಧೇಯಕಕ್ಕೆ ಏನು ತಿದ್ದುಪಡಿ ತಂದಿದ್ದಾರೆ ಮೂಲತಃ ನೀವು ಏನು ಇಲ್ಲಿ ಕೊಟ್ಟಿದ್ದೀರಿ ಸಹಕಾರ ಸಂಘ ಮತ್ತು ಕೇಂದ್ರ ಸರ್ಕಾರ ಇದರ ಜೊತೆಗೆ ಮತೀಯ ಗಲಭೆಗಳಲ್ಲಿರುವಂತಹವರು ಮತ್ತು ಯಾರು ಸಮಾಜದ ಘಾತುಕ, ಅಘಾತುಕರಿದ್ದಾರೆ ಅಂತಹವರಿಗೆ ತರಬೇಕಾಗುತ್ತದೆ. ಏಕೆಂದರೆ ಒಬ್ಬ ಜನಪ್ರತಿನಿಧಿಯಾಗಿ ನಾವು ನೋಡಬೇಕಾದರೆ ಅವರು ಮಾದರಿಯಾಗಿರಬೇಕು. ಮಾದರಿಯಾಗಿದ್ದಾಗ ಮಾತ್ರ ಜನಪ್ರತಿನಿಧಿಯಿಂದ ಜನರು ಏನಾದರೂ ಅಪೇಕ್ಷೆ ಪಡಬಹುದು. ನಮ್ಮ ಜನಪ್ರತಿನಿಧಿ ಯಾವ ರೀತಿ ಇದ್ದಾರೆ ಎಂದು ಹೇಳುವುದಕ್ಕೆ ನಮಗೆ ಕಾಯಿದೆಗಳಲ್ಲಿ ಕೊಟ್ಟಿಲ್ಲವೆಂದರೆ, ನೀವು ನಿರ್ದಿಷ್ಟವಾಗಿ ಯಾವುದೋ ಒಂದಷ್ಟು ಕೊಟ್ಟಿದ್ದೀರಿ. ಅದು ಸ್ವಾಗತಾರ್ಹ. ಅದರ ಜೊತೆಗೆ ಇನ್ನೂ ಬಹಳ ಬಿಗಿ ಮಾಡಬೇಕು, ಜನಪ್ರತಿನಿಧಿಗಳು ಬಹಳ ಮಾದರಿಯಾಗಿರಬೇಕು ಮತ್ತು ಗುಣಾತ್ಮಕವಾದಂತಹ ಜನಪ್ರತಿನಿಧಿಗಳು ಬರಬೇಕು ಎಂದರೆ ಇನ್ನೂ ಸ್ವಲ್ಪ refine ಮಾಡಬೇಕು. ಏಕೆಂದರೆ ಇದು 73-74ನೇ ತಿದ್ದುಪಡಿ ತಂದಿರುವುದರ ಮೂಲ

ಉದ್ದೇಶವೇನೆಂದರೆ ಎಲ್ಲರಿಗೂ ಈ ಅಧಿಕಾರ ವ್ಯಾಪ್ತಿಗೆ; ಯಾವುದೇ ಜನ ಮೀಸಲಾತಿ ಇರಬಹುದು, ಹಿಂದುಳಿದ ವರ್ಗಗಳಿರಬಹುದು, ಎಸ್.ಸಿ., ಎಸ್.ಟಿ., ಇರಬಹುದು ಮಹಿಳೆಯರಿಗೆ ಶೇ.50ರಷ್ಟು ಇವೆಲ್ಲಾ ಕೊಟ್ಟಿರುವುದೇನೆಂದರೆ, ನಮ್ಮ ಸಮಾಜದ ಎಲ್ಲಾ ವರ್ಗದ ಜನರು ಆಡಳಿತದಲ್ಲಿ ಕೆಲಸ ಮಾಡಬೇಕೆನ್ನುವ ಉದ್ದೇಶದಿಂದ ಇದನ್ನೆಲ್ಲಾ ಸಂವಿಧಾನದಲ್ಲಿ ತಂದಿದ್ದಾರೆ. ಯಾವುದೇ ರಾಜ್ಯಗಳಾಗಲೀ ಕೇಂದ್ರಗಳಾಗಲೀ ಸಂವಿಧಾನದ ಅಡಿಯಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಇನ್ನೊಂದು ಬಹಳ ಮುಖ್ಯವಾದ ಎರಡನೇ ತಿದ್ದುಪಡಿಯನ್ನು ತಂದಿದ್ದಾರೆ. ಮಲೆನಾಡು ಪ್ರದೇಶದಿಂದ ತರೀಕೆರೆ, ಕಡೂರು ಮತ್ತು ಅಜ್ಜಂಪುರ ತಾಲ್ಲೂಕುಗಳನ್ನು ವಿನಾಯಿತಿಗೊಳಿಸಲು ಕೊಟ್ಟಿದ್ದಾರೆ. ವಿನಾಯಿತಿ ಪಡೆಯಲು ನಿಮಗೆ ಅಧಿಕಾರವಿದೆಯೇ ಎಂಬುದಕ್ಕೆ ಕಾನೂನು ಅಭಿಪ್ರಾಯವನ್ನು ತೆಗೆದುಕೊಂಡು ನೀವಿಲ್ಲಿ ಉತ್ತರ ಕೊಡಬೇಕಾಗುತ್ತದೆ. ಏಕೆಂದರೆ ಅನುಚ್ಛೇದ 243–ಸಿ ಪಂಚಾಯತ್ 73 ಪಾರ್ಟ್ 9 ಇದೆ. ಅದರಲ್ಲಿ ಈ ರೀತಿ ಇದೆ.

***"243C. Composition of Panchayats***

*(1) Subject to the provisions of this Part, the Legislature of a State may, by law, make provisions with respect to the composition of Panchayts: Provided that the ratio between the population of the territorial area of a Panchayat at any level and the number of seats in such Panchayat to be filled by election shall, so far as practicable, be the same throughout the State,"*

ನಾನು ಬೀದರ್‌ನಲ್ಲಿ ಎಷ್ಟು ಕೊಡುತ್ತೇನೋ ಅಷ್ಟನ್ನು ಕೊಡಗಿನಲ್ಲೂ, ಮಂಗಳೂರಿನಲ್ಲೂ ಕೊಡಬೇಕು, ಅದೇ ಮಾದರಿಯನ್ನಾಗಿ ಇಟ್ಟುಕೊಂಡು ನಾವು ಹೋಗಬೇಕು. ಆದರೆ ನೀವು exemption ತಂದಿರುವುದು, is it not violating the constitutional provision ಎಂಬುದು ನನ್ನ ಪ್ರಶ್ನೆ. ಇದನ್ನು ದಯವಿಟ್ಟು ನೀವು ಪರಿಶೀಲನೆ ಮಾಡಿ ಈ ಸಭೆಗೆ ಉತ್ತರ ಕೊಡಬೇಕು. ಅದರ ಜೊತೆಗೆ ನೀವು ಜಿಲ್ಲಾ ಪಂಚಾಯಿತಿ ;

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾವು ಮಲೆನಾಡಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೊಟ್ಟಿದ್ದೇವೆ. ಈ ಮೂರು ತಾಲ್ಲೂಕುಗಳನ್ನು ಬಿಟ್ಟು ಎಂದು ಕೊಟ್ಟಿದ್ದೇವೆ. ಈ ಮೂರು ತಾಲ್ಲೂಕುಗಳು ಬಯಲುಸೀಮೆಯಾಗಿದ್ದು ಇಲ್ಲಿ density of population is more. Less population ಇರುವವರಿಗೆ ವಿನಾಯಿತಿ ಕೊಟ್ಟಿದ್ದೇವೆ, ಈ ಮೂರು ತಾಲ್ಲೂಕುಗಳು ಆ ಜಿಲ್ಲೆಯ ವಿನಾಯಿತಿಗೆ ಸೇರುವುದಿಲ್ಲ ಎಂದು ಹೇಳಿದ್ದೇವೆ. These are not included in that exemption.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಚಿವರೇ, ಹಿಂದೆ ಪೂರ್ಣವಾಗಿ ಒಳಗೊಂಡಿತ್ತು ಈಗ ವಿನಾಯಿತಿ ಮಾಡಲಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, That is part of Chikmagalur District. ನರಸಿಂಹರಾಜಪುರ, ಕೊಪ್ಪ, ಶೃಂಗೇರಿ ಜನಸಂಖ್ಯೆಯನ್ನು ನಾವು ಕಡೂರು, ತರೀಕೆರೆಗೆ ಹೋಲಿಸುವುದಕ್ಕಾಗುವುದಿಲ್ಲ. ಮಲೆನಾಡಿನಲ್ಲಿ ಏನು ವಿನಾಯಿತಿ ಕೊಟ್ಟಿದ್ದೇವೆ ಅದು ಚಿಕ್ಕಮಗಳೂರಿನಲ್ಲಿ ಕಡೂರು ಮತ್ತು ತರೀಕೆರೆಗೆ ಅನ್ವಯಿಸುವುದಿಲ್ಲ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸ್ಪಷ್ಟೀಕರಣ ಮಾಡಿದ್ದಕ್ಕೆ ಸಂತೋಷ. ಇನ್ನೊಂದು ಜಿಲ್ಲಾ ಯೋಜನಾ ಸಮಿತಿಯನ್ನು ಮಾಡಿದ್ದಾರೆ. ನಾನು ಮೊನ್ನೆ ದಿವಸ ಒಂದು ಚುಕ್ಕೆಗುರುತಿನ ಪ್ರಶ್ನೆ ಕೇಳಿದ್ದೆ. ಅದು ಹಾಕಿದ ಮೇಲೆ raise ಆಗಿದೆ. ನಾನು ಮೊನ್ನೆ ದಿವಸ ಜಿಲ್ಲಾ ಯೋಜನಾ ಸಮಿತಿಗಳು ಏನು ಮಾಡಬೇಕಾಗಿತ್ತು ಅದನ್ನು ಮಾಡಿಲ್ಲ ಎಂದು ಇದನ್ನೆ ಹೇಳಿದ್ದು. ಇವತ್ತು ನೀವು ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರನ್ನು ಇಲ್ಲಿ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಹೊರಟಿದ್ದಾರೆ. ಅದನ್ನು ಮಾಡುವುದರಿಂದ ಯಾವ ರೀತಿ ಯೋಜನೆಗಳು 1992–93ರಲ್ಲಿ ನಮ್ಮ ಸಂವಿಧಾನಕ್ಕೆ ಒಂದು ತಿದ್ದುಪಡಿ ತಂದಿದ್ದರು. ಅಲ್ಲಿಂದ ಇಲ್ಲಿಯವರೆಗೂ ಇವರು ಜಿಲ್ಲೆಗಳಲ್ಲಿ Planning Authorities ನ್ನೇ ರಚನೆ ಮಾಡಿಲ್ಲ. ಇದರಲ್ಲಿ ಇನ್ನೂ ಬಹಳಷ್ಟು

ವಿಷಯಗಳು ಬರುತ್ತವೆ. ಕಾರಣವೇನೆಂದರೆ, ನೀವು ಆ ಜಿಲ್ಲೆಯಲ್ಲಿ land use or Planning Authority ಏನು ಇರುತ್ತದೆ ಅದರ ಪ್ರಕಾರದಲ್ಲಿ ಎಷ್ಟೋ Planning Authority ಯಲ್ಲಿ master plan ತಯಾರು ಮಾಡಿಲ್ಲ.

**(ಮುಂದು)**

**(659) 28-03-2022 KH/BNS 1-40**

**ಶ್ರೀ ಪಿ.ಆರ್.ರಮೇಶ್ (ಮುಂದು)**

ಇವರು ಯಾವ ಒಂದು ಜಿಲ್ಲೆಗೆ ಮತ್ತು ತಾಲ್ಲೂಕಿಗೆ ಸೀಮಿತರಾಗಿರುತ್ತಾರೋ, ಅದರಿಂದ ಹೊರಗೆ ಬರುವುದಕ್ಕೆ non classification ಆಗಿದೆ. ಅಲ್ಲಿ ಬರುವಂತಹ ಇಂಡಸ್ಟ್ರಿಗಳು ಇರಬಹುದು. ಹಾಗೆಯೇ ಇದಕ್ಕೆ ಸಂಬಂಧಿಸಿದಂತೆ ಯಾವುದೋ ಒಂದು ಪ್ರಶ್ನೆ ಇದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರ ಹಾಗೂ ಸಣ್ಣ ನೀರಾವರಿ, ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗಲೇ ನಾವು planning authority meeting ಅನ್ನು ಮಾಡಿ, proposal ಅನ್ನು district ನಿಂದ ಕಳುಹಿಸಿದ್ದೆವು. ಇದಕ್ಕೆ ಅಮೆಂಡ್‌ಮೆಂಟ್ ಆಗಲೇಬೇಕಾಗಿದೆ ಎಂದು ಹೇಳರುವುದಕ್ಕೆ ನಾವು ಇದನ್ನು ತಂದಿದ್ದೇವೆ. ಆವತ್ತು district Ministers ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿದ್ದೇವೆ. ನಾನು ಹಾಸನ ಮತ್ತು ತುಮಕೂರು ಈ ಎರಡರ plan ಅನ್ನು ಕಳುಹಿಸಿದ್ದೆ. ಆ ಸಭೆಯಲ್ಲಿ ಒಬ್ಬ ಎಂಎಲ್‌ಸಿ ಯವರು ಇದ್ದರು. ಆವತ್ತು district Minister ಅಧ್ಯಕ್ಷತೆಯಲ್ಲಿ ಮಾಡಿದ್ದೆವು. ಇದು ಕಾನೂನಿನಲ್ಲಿ ಪ್ರಾವಿಷನ್ ಇರಲಿಲ್ಲವೆಂದು ಸರ್ಕಾರ, ಜಿಲ್ಲಾ ಪಂಚಾಯತ್, ನಗರ ಸ್ಥಳೀಯ ಸಂಸ್ಥೆಗಳು ಈ ಮೂರು ವ್ಯವಸ್ಥೆಯನ್ನು ತರಬೇಕೆಂದು ಒಬ್ಬರನ್ನು ಸಹಾಧ್ಯಕ್ಷರು ಎಂದು ಮಾಡಿದ್ದೇವೆ. Major municipality or head quarters ರವರನ್ನು ಉಪಾಧ್ಯಕ್ಷರನ್ನಾಗಿ ಮಾಡಿ, envisage ಮಾಡಿದ್ದೇವೆ ಅಷ್ಟೇ. ಬೇರೆ ಏನೂ ಇಲ್ಲ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆ ರೀತಿ ಮಾಡಿದ್ದರೆ ಸರಿ. ಆದರೆ, ಅವರು ನನಗೆ ಉತ್ತರ ಕೊಟ್ಟಿರುವುದರ ಬಗ್ಗೆ ಈಗ ನಾನು ಮಾತನಾಡಬೇಕು. ಇವರು ಇಡೀ 30 ಜಿಲ್ಲೆಗಳಲ್ಲಿ ಒಂದು ಸಭೆಯನ್ನು ಮಾಡಿಲ್ಲ, ಜಿಲ್ಲಾ planning committee ಗಳಿಗೆ ಸಂಬಂಧಿಸಿದಂತೆ ಒಂದು ಸಭೆಯನ್ನು ಸಹ ಮಾಡಿಲ್ಲ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಹೇಳುತ್ತಿದ್ದೇನೆ. ಇವತ್ತು ಇವರು ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ಮಾಡಿ, ಒಳ್ಳೆಯದು. ಆದರೆ, proper ಆಗಿ ಕೆಲಸ ಆಗುವಂತಹ ರೀತಿಯಲ್ಲಿ ಒಂದು ವಿಕೇಂದ್ರೀಕರಣ ಆಗಬೇಕಾಗುತ್ತದೆ. ಎಷ್ಟೋ ಯೋಜನೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ್ದು ಬರುತ್ತದೆ. ಆ ಕೆಲಸಗಳನ್ನು ಮಾಡುವುದಕ್ಕೆ ಕಾಮಗಾರಿಗಳನ್ನು ಯೋಜನಾ ಬದ್ಧವಾಗಿ ಕೈಗೆತ್ತಿಕೊಳ್ಳದೇ ಇರುವುದೇ ಇದೇ ಮೂಲ ಕಾರಣ. ಹಾಗಾಗಿ, ಇವರು ಇದನ್ನು ತುಂಬಾ ವಿಳಂಬವಾಗಿ ಮಾಡಿದ್ದಾರೆ ಎಂದು ಹೇಳುತ್ತಿದ್ದೇನೆ. ಹಾಗಾಗಿ, ದಯವಿಟ್ಟು, legal aspects ಬಗ್ಗೆ ಸ್ವಲ್ಪ ಸ್ಪಷ್ಟೀಕರಣವನ್ನು ಕೊಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮಾಡುತ್ತಾರೆಯೋ, ಇಲ್ಲವೋ ಎಂದು ಸರ್ಕಾರವನ್ನು ನೇರವಾಗಿ ಕೇಳುವುದಕ್ಕೆ ಬಯಸುತ್ತೇನೆ. ಈ ಹಿಂದೆ delimitation ಗೋಸ್ಕರ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಆವತ್ತು ಈ ವಿಧೇಯಕವನ್ನು ತಂದಿದ್ದರೆ ಬೇಡ ಎಂದು ಯಾರು ಸಹ ಹೇಳುತ್ತಿರಲಿಲ್ಲ. ಇದರಲ್ಲಿ ಮಹತ್ವದ ತಿದ್ದುಪಡಿಗಳು ಏನು ಇಲ್ಲ. ಮಾನ್ಯ ಸಚಿವರೇ, ಒಂದು ಮಾತನ್ನು ಹೇಳುತ್ತೇನೆ, ಒಂದು ಕಾಲಕ್ಕೆ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಎಂದರೆ, . . .

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಒಂದು ನಿಮಿಷ. ಇವತ್ತು ಒಂದು ತಾಲ್ಲೂಕನ್ನು ಸೃಷ್ಠಿ ಮಾಡಿದಾಗ, in original Act, minimum 11 are to be there for Taluk Panchayat ಎಂದು ಇತ್ತು. ಆಗ 50 ಸಾವಿರ ಜನಸಂಖ್ಯೆಯೂ ಇರಲಿಲ್ಲ. ಅಜ್ಜಂಪುರ, ಹೆಬ್ರಿಯಲ್ಲಿ not even 25,000 population. ತಾಲ್ಲೂಕು ಪಂಚಾಯಿತಿಯನ್ನು

ಹೇಗೆ constitute ಮಾಡಬೇಕೆಂದು ಅರ್ಥವಾಗದೇ, ಇದರ ಬಗ್ಗೆ ಒಂದು ವಿಧೇಯಕವನ್ನು ತರಬೇಕಾದಂತಹ ಪರಿಸ್ಥಿತಿ ಮಾನ್ಯ ಕೆ.ಎಸ್.ಈಶ್ವರಪ್ಪನವರಿಗೆ ಮತ್ತು ನಮಗೆ ಒದಗಿ ಬಂದಿತು. Belgaum district rural population is more than four lakhs. ಈಗ ಚಿಕ್ಕಬಳ್ಳಾಪುರದಲ್ಲಿ 1.50 ಲಕ್ಷ ಜನಸಂಖ್ಯೆ, ಈಗ ಮಲೆನಾಡು ಭಾಗದಲ್ಲಿ 50 ಸಾವಿರ, 70 ಸಾವಿರ ಮತ್ತು ಒಂದು ಲಕ್ಷ population of the rural municipality ಆಗಿರುವುದರಿಂದ, ಇದನ್ನು ಅನಿವಾರ್ಯವಾಗಿ ತಂದಿರುವುದನ್ನು ಬಿಟ್ಟರೆ, ತರಲೇಬೇಕೆಂದು ಈ ಬಿಲ್ ಅನ್ನು ತಂದಿಲ್ಲ. ಇದಕ್ಕೆ ಬಹಳ exercise ಮಾಡಿ, ಈ ಬಿಲ್ ಅನ್ನು ಆರ್.ಡಿ.ಪಿ.ಆರ್.ನವರು ತಂದಿದ್ದಾರೆ. ಇದಕ್ಕೆ ಚುನಾವಣೆ ಮಾಡುವುದಕ್ಕೆ ಆಗುತ್ತಿರಲಿಲ್ಲ. 11 ಜನ ಎಂದರೆ, Hebri taluk panchayath ನಲ್ಲಿ every 400 population ಗೆ ಒಬ್ಬ ಮೆಂಬರ್ ಆಗಿಬಿಡುತ್ತಿದ್ದನು. ಇದು ಆಗಬಾರದೆಂದು ಎಲ್ಲವನ್ನೂ ಚರ್ಚೆ ಮಾಡಿ ಮಾಡಿದ್ದೇವೆ. ಅದಕ್ಕಾಗಿ, 11 ಜನ ಇರುವುದನ್ನು ಕನಿಷ್ಠ 7 ಜನಕ್ಕೆ ಎಂದು ಮಾಡುವಂತಹ ಪರಿಸ್ಥಿತಿ ಬಂದಿತು. 7 ಜನ ಏಕೆ ಮಾಡಿದ್ದೇವೆ ಎಂದರೆ, statutorily ತಾಲ್ಲೂಕು ಪಂಚಾಯಿತಿಯಲ್ಲಿ ಸಮಿತಿ ಸಭೆ ಮಾಡಿದಾಗ 7 ಜನ ಇರಲೇಬೇಕೆಂದು ತಾವು ಹೇಳುತ್ತೀರಲ್ಲವೇ? ಅದಕ್ಕೆ ನಾವು ಅನಿವಾರ್ಯವಾಗಿ 7 ಜನರನ್ನು ಇಟ್ಟುಕೊಂಡಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕನಿಷ್ಠ 50 ಸಾವಿರ ಜನಸಂಖ್ಯೆ ಇರುವಂತಹವರಿಗೆ 7 ಜನ ಇರಬೇಕೆಂದು ಹೇಳುತ್ತಾರೆ; 50 ಸಾವಿರ ಜನಸಂಖ್ಯೆಗಿಂತ ಮೇಲಿದ್ದರೆ 9 ಜನ ಇರಬೇಕೆಂದು ಹೇಳುತ್ತಾರೆ; ಒಂದು ಲಕ್ಷ ಜನಸಂಖ್ಯೆ ಇದ್ದರೆ, 10 ಸಾವಿರಕ್ಕೆ ಒಬ್ಬರು ಎಂದು ಹೇಳುತ್ತಾರೆ; 2 ಲಕ್ಷ ಜನಸಂಖ್ಯೆ ಇದ್ದರೆ, 12 ಸಾವಿರಕ್ಕೆ ಒಬ್ಬರು ಎಂದು ಹೇಳುತ್ತಾರೆ. ಇರಲಿ, ಚಿಂತೆ ಇಲ್ಲ. ಒಂದು ಕಾಲದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಇದ್ದವು. ಇಡೀ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಅಲ್ಲಿಯೇ ಆಗುತ್ತಿತ್ತು. ಶಾಸಕನಿಗಿಂತ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು ಆಗಬೇಕೆಂದು ಎಲ್ಲರೂ ಇಷ್ಟಪಡುತ್ತಿದ್ದರು. ಅಲ್ಲಿ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಆಗುತ್ತಿತ್ತು. ಈಗ ತಾಲ್ಲೂಕು ಪಂಚಾಯಿತಿ ಎನ್ನುವುದು ನಾಮಕಾವಸ್ಥೆ ಆಗಿಹೋಗಿದೆ. ಇದಕ್ಕೆ ಏನು ಅಧಿಕಾರ ಇದೆ, ಗ್ರಾಂಟ್ ಏನು ಹೋಗುತ್ತದೆ? ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರೇ, ಚುನಾವಣೆಗೆ ಮೊದಲು

ಮೀಸಲಾತಿಯನ್ನು ಘೋಷಣೆ ಮಾಡಿದರು. ಕ್ಷೇತ್ರಗಳನ್ನು ಘೋಷಣೆ ಮಾಡಿದರು. ಇದಕ್ಕೆ 6 ತಿಂಗಳ ಮೊದಲೇ ಜನ ಹೊರಟರು. ಇನ್ನು ನಿಂತಿಲ್ಲ. ಆ ಕ್ಷೇತ್ರದಲ್ಲಿ ಅಕಾಂಕ್ಷಿಗಳು ಏನೇನು ಮಾಡಿಕೊಳ್ಳುತ್ತಿದ್ದಾರೆ, ಇದಕ್ಕೆ 5–6 ಜನರ ಪಟ್ಟಿ. ಇದು ದೇವರಿಗೊಬ್ಬನಿಗೇ ಪ್ರೀತಿ. ಇದು ಇನ್ನು ಮುಂದಕ್ಕೆ ಹೋಗುತ್ತದೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಬಹುಶಃ ವಿಧಾನಸಭೆ ಚುನಾವಣೆ ಆದ ನಂತರ ಈ ಚುನಾವಣೆ ಆಗುತ್ತದೆ ಎನ್ನುವಂತಹ ಆತಂಕ ನಮ್ಮಲ್ಲಿ ಕಾಣುತ್ತಿದೆ. ಮಾನ್ಯ ಸಚಿವರೇ, ಈ ಚುನಾವಣೆ ವಿಧಾನಸಭೆ ಚುನಾವಣೆ ಆದ ಮೇಲೆ ಆಗುತ್ತದೆ ಎಂದು ತಾವು ಸ್ಪಷ್ಟವಾಗಿ ಹೇಳಿಬಿಡಿ. ನಮಗೆ ಚಿಂತೆ ಇಲ್ಲ. ಈಗ ತಾವು ಹೊಸದಾಗಿ ಮಾಡಿದರೆ, ಜನರು ಕೋರ್ಟ್‌ಗೆ ಹೋಗುವುದಿಲ್ಲವೇ? ಜನರು ಕೋರ್ಟ್‌ಗೆ ಹೋಗಿಯೇ ಹೋಗುತ್ತಾರೆ. ತಾವು ಏನೇ ಮಾಡಿದರೂ ಹೋಗುತ್ತಾರೆ. ನನ್ನ ಅಭಿಪ್ರಾಯದ ಪ್ರಕಾರ ಇದು ಕಾರಣ ಅಲ್ಲ. ತಾವು ಯಾರಿಗೋ ನಿಂತುಕೊಳ್ಳಬೇಡಿ ಎಂದು ಹೇಳಿದ್ದೀರಲ್ಲವೇ? ಅವನು ಸುಮ್ಮನೆ ಇರುತ್ತಾನೆಯೇ? ಅವನೇ ಪ್ರಶ್ನೆ ಮಾಡಿಕೊಂಡು ಹೋಗುತ್ತಾನೆ. ನಾನು ಜನರಿಂದ ಆಯ್ಕೆಯಾಗಿ ಬರುತ್ತೇನೆ ಎಂದು ಹೋಗುತ್ತಾನೆ. ಇದನ್ನು ಎಷ್ಟರಮಟ್ಟಿಗೆ ಸಿಂಧು ಮಾಡಿಕೊಳ್ಳುತ್ತೀರೋ ನೋಡಿ. ಏಕೆಂದರೆ, ಮತ್ತೆ ಯಾರಾದರೂ ಹೋಗಿ ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದರೆ, ನೋಡಿ, ಎಂಎಲ್ಎ., ಎಂಪಿ., ಚುನಾವಣೆಗೆ ಯಾರು ಬೇಕಾದರೂ ಹೇಗೆ ಬೇಕಾದರೂ ನಿಂತುಕೊಳ್ಳಬಹುದು. ನಾನು Taluk Panchayath, Zilla Panchayath ಗೆ ಹೋಗುತ್ತೇನೆ ಎಂದರೆ, ಈ ಚುನಾವಣೆಗೆ ಈ ರೀತಿ ತಂದಿದ್ದಾರೆಯಲ್ಲವೇ ಎಂದು ಹೇಳುತ್ತಾನೆ. ಮತ್ತೆ ಇದು ಬಿದ್ದುಹೋಗುತ್ತದೆ. ಮಾನ್ಯ ಸಚಿವರೇ, ಇದನ್ನು ಹೇಗೆ ಸರಿಪಡಿಸಬೇಕೆನ್ನುವ ಬಗ್ಗೆ ನೋಡಿ. ತಮಗೆ ತುಂಬಾ ಆಳವಾದ ಜ್ಞಾನವಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಧಾನಸಭೆ ಚುನಾವಣೆಗಿಂತ ಮೊದಲು ಆಗುತ್ತದೆಯೇ, ಇಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದ್ದು, ಇದಕ್ಕೆ ಸ್ಪಷ್ಟನೆ ಕೊಡಿ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ. ನಾನು ಹೇಳುವುದು ಏನು ಇಲ್ಲ. ಇವರಿಗೆ ಒಂದು ವರ ಸಿಕ್ಕಿಬಿಟ್ಟಿದೆ. 2010 ರಲ್ಲಿ ಆಗಿರುವಂತಹ ಸುಪ್ರೀಂ ಕೋರ್ಟ್ ಆದೇಶಕ್ಕೆ ಈಗ ವರ ಸಿಕ್ಕಿದೆ. ನಾನು ಕಳೆದ 2 ಅಧಿವೇಶನಗಳಲ್ಲಿ ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರು ಬಿಬಿಎಂಪಿಗೆ

ಸಂಬಂಧಪಟ್ಟ ಬಿಲ್ ಅನ್ನು ತಂದಾಗ ನಾನು ಹೇಳಿದ್ದೆ: ಚುನಾವಣೆ ಆಗಲಿ, ಚುನಾವಣೆ ಆದ ಮೇಲೆ ಮಾಡೋಣವೆಂದು ಹೇಳಿದ್ದೆ. ಅವರು ಇಲ್ಲ. ಈ ಬಿಲ್ ಅನ್ನು ತಂದರೆ ಒಳ್ಳೆಯದಾಗುತ್ತದೆ ಎಂದು ಹೇಳಿದರು. ಇದನ್ನು ಸುಪ್ರೀಂ ಕೋರ್ಟ್‌ಗೆ ಹೋಗಿ ಸಬ್ಮಿಟ್ ಮಾಡಿದರೆ ನಾವು 6 ತಿಂಗಳಿನಲ್ಲಿ ಮಾಡುತ್ತೇವೆ ಎಂದು ಹೇಳಿದರು. ಬೆಂಗಳೂರು ಬಿಬಿಎಂಪಿ.,ಯಲ್ಲಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದು ಈಗಾಗಲೇ 2 ವರ್ಷಗಳಾಯಿತು. ಬೆಂಗಳೂರಿನಲ್ಲಿ ಜನರು ಜನಪ್ರತಿನಿಧಿಗಳಿಲ್ಲದೇ ಸಾಯುತ್ತಿದ್ದಾರೆ. ಅವರ ಕಷ್ಟ ಹೇಳತೀರದು. ಈ ಬಿಲ್ ಬಗ್ಗೆ ಹೇಳಬೇಕಾದರೆ, ಇವರು ಯಾವುದೇ ಚುನಾವಣೆಯನ್ನು ಮಾಡುವುದಿಲ್ಲ. ಈಗ ಈ ಬಿಲ್‌ಗೆ ಅರ್ಜೆಂಟ್ ಏನಿದೆ, ತಮಗೆ ಒಂದು OBC settle ಆಗುವವರೆಗೂ ತಾವು ಯಾವುದೂ ಏನೂ ಮಾಡುವುದಿಲ್ಲ. ಮಾನ್ಯ ಸಚಿವರಾದ ಕೆ.ಎಸ್.ಈಶ್ವರಪ್ಪನವರು ನನ್ನ ಅವಧಿಯಲ್ಲಿಯೇ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಆಗುತ್ತದೆಯೋ, ಇಲ್ಲವೋ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಪತ್ರಿಕೆಗಳಲ್ಲಿ ಓದಿದ್ದೆ. ತಾವು ಹೇಳಿದ್ದೀರೋ, ಇಲ್ಲವೋ ಎನ್ನುವ ಬಗ್ಗೆ ನಂತರ ಸ್ಪಷ್ಟೀಕರಣ ಕೊಡಿ. ಇವರು ಎಂಎಲ್ಎ ಚುನಾವಣೆಯನ್ನು ನಡೆಸಬಹುದು; ಆದರೆ, ಇದಕ್ಕಿಂತ ಮೊದಲು ಯಾವುದೇ ಚುನಾವಣೆಗಳನ್ನು ನಡೆಸುವುದಿಲ್ಲ. ಸುಮ್ಮನೆ ಏಕೆ ಸಮಯ ವ್ಯರ್ಥ ಮಾಡುತ್ತೀರಿ? ತಮಗೆ ಇರುವಂತಹ ಅಪಾರ ಜ್ಞಾನವನ್ನು ಇಂತಹದರಲ್ಲಿ ಹಾಕಿ, ಬೇರೆ ವಿಷಯಕ್ಕೆ ಏಕೆ divert ಮಾಡುತ್ತೀರಿ? ಇದರಿಂದ ಲಾಭ ಏನಿದೆ? ಚುನಾವಣೆ ಯಾವಾಗ ಆಗುವುದಿಲ್ಲವೋ, ಆಗ ಯಾರಿಗೂ ಏನು ಸಿಗುವುದಿಲ್ಲ? ಓಬಿಸಿ ಕ್ಲಿಯರ್ ಆಗುವವರೆಗೂ ಆಗುವುದಿಲ್ಲ. ಇವರ ಅವಧಿಯಲ್ಲಿ ಓಬಿಸಿ ಕ್ಲಿಯರ್ ಆಗುವುದಿಲ್ಲ. ಓಬಿಸಿ ಆಗದೇ ಇವರು ಚುನಾವಣೆ ಮಾಡುವುದಿಲ್ಲ ಎಂದು ನಾನು ಬರೆದುಕೊಡುತ್ತೇನೆ. ಮೊನ್ನೆಯ ದಿವಸ ನಾನು ಡಿಬೇಟ್‌ನಲ್ಲಿ ಮಾತನಾಡುವಾಗ ಹೇಳಿದೆ. ನಾವು 5 ರಾಜ್ಯಗಳಲ್ಲಿ ಗೆದ್ದಿದ್ದೇವೆ ಎಂದು ಹೇಳಿದರು. ತಾವು ಇಲ್ಲಿ ಸೆಮಿಫೈನಲ್ ಮಾಡಿ, ಅಲ್ಲೆಲ್ಲಿಯೋ ಗೆದ್ದಿದ್ದನ್ನು ನಮಗೆ ಏಕೆ ಹೇಳುತ್ತೀರಾ? ನಮ್ಮ ಮುಂದೆ ಬನ್ನಿ. ಅದನ್ನು ಬಿಟ್ಟು ಬಾಕಿ ಇರುವುದೆಲ್ಲಾ ಹೇಳುತ್ತಾರೆ. ದಯವಿಟ್ಟು, ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಿ. ಚುನಾವಣೆ ಮಾಡುವ ಸಮಯಕ್ಕೆ ಬಿಲ್ ಅನ್ನು ತೆಗೆದುಕೊಂಡು ಬನ್ನಿ. ಆಗ ನಾವೇ ಬೆಂಬಲ ಕೊಡುತ್ತೇವೆ. ಸುಮ್ಮನೆ ಬಿಲ್ ಅನ್ನು ತಂದು ಜನರನ್ನು ಏಕೆ ಮರಳು ಮಾಡುತ್ತೀರಿ?

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಪಂಚಾಯತ್ ರಾಜ್ ವಿಧೇಯಕದ ಬಗ್ಗೆ ಮಾತನಾಡುವುದು ಬಹಳ ಕಷ್ಟ. ಇದಕ್ಕೆ ಎಷ್ಟೇ ತಿದ್ದುಪಡಿಗಳಾದರೂ ಕೂಡ ಗೊಂದಲ ಅಂತೂ ನಿರಂತರವಾಗಿರುತ್ತದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ, ಇವರು ಕಳೆದ ಆಡಳಿತ ಮಂಡಳಿಯ ಅವಧಿ ಒಂದು ವರ್ಷ ಇರುವಾಗಲೇ ಚುನಾವಣೆಗೆ ಸಿದ್ಧತೆ ಮಾಡಿ, ಸರ್ಕಾರ ತಿದ್ದುಪಡಿಯನ್ನು ತರಬಹುದಾಗಿತ್ತು. ಆ ಅವಧಿ ಮುಗಿಯುವ ಕೊನೆ ಅಂಚಿನಲ್ಲಿ ಬಂದು ತಿದ್ದುಪಡಿ ಮಾಡುತ್ತೇವೆ ಎಂದು ಚುನಾವಣೆಯನ್ನು ಮುಂದೂಡಿದ್ದಾರೆ. ಆಡಳಿತಾಧಿಕಾರಿಗಳ ನೇಮಕ ಮಾಡಿ ಈಗಾಗಲೇ ಒಂದು ವರ್ಷದ ಮೇಲಾಯಿತು. ಈಗ ಆಡಳಿತಾಧಿಕಾರಿಗಳದೇ ದರ್ಬಾರು. ಇಲ್ಲಿ ಜನಪ್ರತಿನಿಧಿಗಳು ಯಾರು ಇಲ್ಲ. ಈಗ ತಿದ್ದುಪಡಿ ತಂದಿದ್ದೀರಿ. ಈ ತಿದ್ದುಪಡಿಯಲ್ಲಿಯೂ ಕೂಡ ಸಾಕಷ್ಟು ನ್ಯೂನತೆಗಳು ಇವೆ. ನಾಳೆ ಈ ತಿದ್ದುಪಡಿಯಾದ ಮೇಲೂ ಕೂಡ ಜನಸಾಮಾನ್ಯರು ಕೋರ್ಟ್‌ಗೆ ಹೋಗುತ್ತಾರೆ. ಮತ್ತೆ ಕೋರ್ಟ್‌ನಿಂದ ತಡೆಯಾಜ್ಞೆಯಾಗುತ್ತದೆ. ಇನ್ನು ಈ ಚುನಾವಣೆ ಯಾವಾಗ ನಡೆಯುತ್ತದೆ? ನಾನು ಹಿಂದೆ ಒಂದು ಬಾರಿ ನೋಡಿದ್ದೆ: ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ಪಂಚಾಯತ್ ರಾಜ್ ಚುನಾವಣೆಯನ್ನು 5 ವರ್ಷ ಮಾಡಿರಲಿಲ್ಲ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ 25 ಜನ ಎಂಎಲ್‌ಸಿಗಳು ಬಂದಿರಲಿಲ್ಲ. ಇದನ್ನು ನಾನು ಎಲ್ಲಿಯೋ ಕೇಳಿದ್ದೆ, ಎಲ್ಲಿಯೋ ಓದಿದ್ದೆ. ಅಂತಹ ಒಂದು ಪರಿಸ್ಥಿತಿ ಇವತ್ತು ಇಲ್ಲಿ ಬಂದಿದೆ. ನಾನು ಈ ಬಿಲ್ ನ ಬಗ್ಗೆ ಮಾತನಾಡಬೇಕೆಂದರೆ, ನಮ್ಮ ಕಾನೂನು ಸಚಿವರು ಸದನದಲ್ಲಿಯೇ ಇದ್ದಾರೆ. ನಾನು ಕಾನೂನು ಅಭ್ಯಾಸ ಮಾಡಿಲ್ಲ. ಕಡ್ಡಾಯ ನಿವೃತ್ತಿ ಮತ್ತು ವಜಾಗೊಳಿಸಲ್ಪಟ್ಟವರು, ಇವರು ಯಾರಾದರೂ criminal, conviction ಆಗಿದ್ದರೆ, ಇಂತಹವರು ಸ್ಪರ್ಧೆ ಮಾಡಬಾರದೆಂದು ಸಾಂವಿಧಾನದಲ್ಲಿ ಪ್ರಾವಿಷನ್ ಇದೆಯೇ? ಸಹಕಾರ ಸಂಘಗಳಲ್ಲಿ ಬಹಳಷ್ಟು ಜನರು defaulters ಇರುತ್ತಾರೆ, ಅನೇಕ ಕಾರಣಗಳಿಗೆ ಬಹಳಷ್ಟು ಜನರು ವಜಾಗೊಂಡಿರುತ್ತಾರೆ. ಈಗ ನಾನು ಕೂಡ 25 ವರ್ಷ ನಿರಂತರವಾಗಿ ಪ್ರಾಥಮಿಕ ಸೊಸೈಟಿಯಿಂದ ರಾಜ್ಯ ಮಟ್ಟದ ಬ್ಯಾಂಕುಗಳಲ್ಲಿ ನಿರ್ದೇಶಕನಾಗಿ ಮತ್ತು ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಸಹಕಾರಿ ಕ್ಷೇತ್ರವನ್ನು ಬಲಗೊಳಿಸಿದರೆ, ನಮ್ಮ ಗ್ರಾಮೀಣ ಪ್ರದೇಶದ ಜನರು, ರೈತರು, ಹೆಣ್ಣುಮಕ್ಕಳಿಗೆ ಸಹಾಯವಾಗುತ್ತದೆ ಎಂದು ಯಾವ ಉದ್ದೇಶದಿಂದ ಈ ಬಿಲ್ ಅನ್ನು

ತಂದಿದ್ದಾರೋ ಗೊತ್ತಿಲ್ಲ. ಆದರೆ, ಇದರಲ್ಲಿ ಕೆಲವರದು corruption ಇರಬಹುದು, ಮತ್ತೊಂದು ಇರಬಹುದು, ಕೆಲವು ಸದಸ್ಯರಲ್ಲಿ ನಡವಳಿಕೆ ಸರಿಯಿಲ್ಲದೇ ಇರಬಹುದು, ಆ ಕಾರಣದಿಂದ ವಜಾ ಆಗಿರಬಹುದು. ಆದರೆ, ಇದನ್ನು ನಾವು ಆಧಾರವಾಗಿಟ್ಟುಕೊಂಡು ಕಾಯ್ದೆ ತಂದರೆ ಹೇಗೆ? ಇದರ ಬಗ್ಗೆ ಪ್ರಶ್ನೆ ಮಾಡಿದರೆ ಕೋರ್ಟ್‌ನಲ್ಲಿ ಯಾವ ರೀತಿ sustain ಆಗುತ್ತದೆ.

**(ಈ ಹಂತದಲ್ಲಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಸಭಾಪೀಠವನ್ನು ಅಲಂಕರಿಸಿದರು)**

ಜನಸಂಖ್ಯೆ ಆಧಾರದ ಬಗ್ಗೆ ಮಾನ್ಯ ಕಾನೂನು ಸಚಿವರು ಹೇಳಿದರು. ಅಲ್ಲಿ ಜನಸಂಖ್ಯೆ ಕಡಿಮೆ ಇದೆ, ಅದಕ್ಕೆ ಅಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಖಂಡಿತವಾಗಿಯೂ ಇದು ಒಪ್ಪುವಂತಹದ್ದು.

**(ಮುಂದು)**

**(660)/28-3-2022/1-50/ಎಲ್‌ಎಂ/ಬಿಎನ್‌ಎಸ್**

**ಶ್ರೀ ಮರಿತಿಬ್ಬೇಗೌಡ**(ಮುಂದು):-

ಆದರೆ ಹಿಂದಿನ ಅವಧಿಯಲ್ಲಿ ಚುನಾವಣೆ ನಡೆದಿತ್ತು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** 51 ಹೊಸ ತಾಲ್ಲೂಕುಗಳಾಗಿರುವುದರಿಂದ ಈ ಸಮಸ್ಯೆ ಸೃಷ್ಟಿಯಾಗಿರುವುದು.

**ಶ್ರೀ ಮರಿತಿಬ್ಬೇಗೌಡ:-**ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಹೇಳುವುದನ್ನು ನಾನು ಒಪ್ಪುತ್ತೇನೆ. ಜಿಲ್ಲಾ ಯೋಜನಾ ಸಮಿತಿಗೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಇರುವುದು ಏಕೆ? ಸಾಕಷ್ಟು ಕಷ್ಟಪಟ್ಟು ಅವರು ಗೆದ್ದು ಬಂದಿರುತ್ತಾರೆ. ದಿ: ರಾಮಕೃಷ್ಣ ಹೆಗಡೆಯವರ ನೇತೃತ್ವದ ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದಾಗ ಭಾರತ ದೇಶಕ್ಕೆ ಮಾದರಿಯಾದಂತಹ ಮಂಡಲ ಪಂಚಾಯಿತಿ ವ್ಯವಸ್ಥೆಯನ್ನು ಜಾರಿ ಮಾಡಿದ್ದರು. ಅವತ್ತು ಕೆಳಹಂತದ ಸದಸ್ಯರಿಗೆ ತುಂಬಾ ಅಧಿಕಾರವಿತ್ತು. ನಂತರ ಕೇಂದ್ರದಲ್ಲಿ ದಿ: ರಾಜೀವ್

ಗಾಂಧಿಯವರ ಸರ್ಕಾರ ಬಂದ ಮೇಲೆ ಪಂಚಾಯತ್ ರಾಜ್ ಬಿಲ್ ತಂದು ಅವರವರ ರಾಜ್ಯಕ್ಕೆ ಸಿಮೀತವಾಗಿ ಮಾಡಿಕೊಳ್ಳುವಂತೆ ಅವಕಾಶ ಮಾಡಿಕೊಟ್ಟರು. ಆದರೆ ಇವತ್ತು ನಮ್ಮ ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರ, ಉಪಾಧ್ಯಕ್ಷರ ಅಧಿಕಾರವನ್ನು ಏಕೆ ಮೊಟಕುಗೊಳಸುತ್ತೀರಿ?

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ಜಿಲ್ಲಾ ಪ್ಲ್ಯಾನಿಂಗ್‌ನಲ್ಲಿ ಎರಡೂ ಬಂದು ಮಿಶ್ರ ಆಗುತ್ತಿದೆ. ಒಂದು ಗ್ರಾಮೀಣ ವ್ಯವಸ್ಥೆ, ಇನ್ನೊಂದು ULB (Urban Local Bodies) ವ್ಯವಸ್ಥೆ. ಮುನ್ಸಿಪಾಲಿಟಿ, ಕಾರ್ಪೋರೇಶನ್ ಕೂಡಾ ಆ ಯೋಜನೆಯ ಸದಸ್ಯರಾಗುವುದರಿಂದ ಇದನ್ನು ಮಾಡಲಾಗಿದೆ. ಬೇರೆ ಯಾವ ಕಾರಣದಿಂದ ಅಲ್ಲ. ಮುನ್ಸಿಪಲ್ ವ್ಯವಸ್ಥೆಯಲ್ಲಿ ಬಂದವರು ಆಗಬೇಕೊ, ಜಿಲ್ಲಾ ಪಂಚಾಯಿತಿ ವ್ಯವಸ್ಥೆಯಲ್ಲಿ ಬಂದವರು ಆಗಬೇಕೊ ಎನ್ನುವ ಜಿಜ್ಞಾಸೆ ಬೇಡ ಎಂದು difficulty remove ಮಾಡಿರುವುದನ್ನು ಬಿಟ್ಟರೆ ಇನ್ನೇನು ಇಲ್ಲ. It is not only rural but inclusive of urban. Planning authority ಮಾಡಿರುವುದು ಅದು ಮುನ್ಸಿಪಲ್ ಸೇರುತ್ತದೆ, ಇದು ಸೇರುತ್ತದೆ. ಅಲ್ಲಿಯು ಸದಸ್ಯರಿರುತ್ತಾರೆ, ಇಲ್ಲಿಯು ಸದಸ್ಯರಿರುತ್ತಾರೆ. ಹಾಗಾಗಿ Minister ಇರಲೆಂದು ಮಾಡಿರುವುದು ಅಷ್ಟೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೆ, ಸದಸ್ಯರು ಇರಬಹುದು ಎಂದು ಹೇಳಿ, ಇಲ್ಲಿ ಶಾಸಕರನ್ನೆ ಬಿಟ್ಟಿದ್ದೀರಿ. ಯೋಜನಾ ಸಮಿತಿಯಲ್ಲಿ ಶಾಸಕರು ಇಲ್ಲ. ಶಾಸಕರು ಬೇಡವೆ? ಸ್ಥಳೀಯ ಸಂಸ್ಥೆಯ ಸದಸ್ಯರು ಶಾಸಕರು ಯಾರು ಆ ಜಿಲ್ಲೆಯ ಯೋಜನಾ ಸಮಿತಿಯಲ್ಲಿ ಸದಸ್ಯರಾಗಿರುವುದಿಲ್ಲ. ಆ ಭಾಗದಲ್ಲಿ ಸ್ಥಳೀಯವಾಗಿ ಇರುವ ವಿಧಾನಸಭೆಯ ಸದಸ್ಯರು ಇರಬಹುದು, ವಿಧಾನ ಪರಿಷತ್ತಿನ ಸದಸ್ಯರು ಇರಬಹುದು. ಲೋಕಸಭಾ ಸದಸ್ಯರು ಇರಬಹುದು, ದಯಮಾಡಿ ಇವರನ್ನು ಆ ಯೋಜನಾ ಸಮತಿಯಲ್ಲಿ ಸೇರಿಸಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಗಳೆ, ಅವರೆಲ್ಲರೂ original Act ನಲ್ಲಿ ಸದಸ್ಯರಾಗಿರುತ್ತಾರೆ. ಶಾಸಕರು ಆ ಸಮಿತಿಯ ಸದಸ್ಯರಾಗಿರುತ್ತಾರೆ. ಈಗ ಆ ಸಮಿತಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಸಹ ಅಧ್ಯಕ್ಷರು ಯಾರು ಇರಬೇಕು ಎನ್ನುವುದನ್ನು ಮಾತ್ರ ಹೇಳರುವುದು.

ಅವರು regular ಆಗಿ ಸದಸ್ಯರಾಗಿರುತ್ತಾರೆ. All MLAs are members of district planning committee.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಇಲ್ಲಿ office bearers ಎಂದಲ್ಲ ಸದಸ್ಯರು ಎಂದೇ ಕೊಟ್ಟಿರುವುದು. ತಾವು ತಂದಿರುವ ವಿಧೇಯಕದ ಯಾವ ಕಾಲಂನಲ್ಲಿಯು ಶಾಸಕರು ಇಲ್ಲ. ಇದರ ಬಗ್ಗೆ ದಯಮಾಡಿ ಆಲೋಚನೆ ಮಾಡಿ. ಮಾನ್ಯ ಕೆ.ಎಸ್.ಈಶ್ವರಪ್ಪನವರು ಬಹಳ ಅನುಭವಿಗಳು, ತಾಲ್ಲೂಕು ಪಂಚಾಯಿತಿ ಏಕೆ ಬೇಕು?

**ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಸಚಿವರು**):- ಮಾನ್ಯ ಸಭಾಪತಿಗಳೆ, three tier system ಅನ್ನು ಕೇಂದ್ರ ಸರ್ಕಾರ ಸಂವಿಧಾನದಲ್ಲಿ ಇದನ್ನು ಸೇರಿಸಿ ಜಾರಿಗೆ ತಂದಿದ್ದಾರೆ. ಇದನ್ನು ತೆಗೆಯಲು ನಮಗೆ ಬರುವುದಿಲ್ಲ. ನನಗೆ ವೈಯಕ್ತಿಕವಾಗಿ ಕೇಳದರೆ ತಾಲ್ಲೂಕು ಪಂಚಾಯಿತಿಯನ್ನು ಖಂಡಿತವಾಗಿ ತೆಗೆಯಬೇಕು ಎನ್ನುವುದು ನನ್ನ ಅಭಿಪ್ರಾಯ. ಆದರೆ ಅದನ್ನು ತೆಗೆಯುವ ಅಧಿಕಾರ ನಮಗೆ ಇಲ್ಲ. ಎಲ್ಲಾ ರಾಜ್ಯಗಳ ಅಭಿಪ್ರಾಯವನ್ನು ಕೇಳಿ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿ, ತಿದ್ದುಪಡಿ ವಿಧೇಯಕವನ್ನು ತಂದು ಅದನ್ನು ಬದಲಾವಣೆ ಮಾಡಬೇಕಾಗುತ್ತದೆ. ನಮಗೆ ಅಧಿಕಾರ ಇದ್ದಿದರೆ ಒಂದು ಬಿಲ್‌ನ್ನು ತಂದು ಪಾಸ್ ಮಾಡಿಸಿಕೊಂಡು ತಾಲ್ಲೂಕು ಪಂಚಾಯಿತಿಯನ್ನು ತೆಗೆದು ಬಿಸಾಕಿ ಬಿಡುತ್ತಿದ್ದೆ. ಆದರೆ ನಮಗೆ ತೆಗೆದು ಹಾಕುವಂತಹ ಅಧಿಕಾರವಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ. ತಾಲ್ಲೂಕು ಪಂಚಾಯಿತಿಯನ್ನು ಸಂಪೂರ್ಣವಾಗಿ ನಿಷ್ಕ್ರಿಯ ಮಾಡಬೇಡಿ. ಒಂದು ತಾಲ್ಲೂಕಿನಲ್ಲಿ ಜಿಲ್ಲಾಪಂಚಾಯಿತಿ elected members ಇದ್ದಾರೆ. ಅದರ ಜೊತೆಗೆ ಆ ಭಾಗದಲ್ಲಿ ಯಾವ ಸಮುದಾಯಕ್ಕೂ represent ಮಾಡಲು ಆಗುತ್ತಿಲ್ಲ, ಉದಾಹರಣೆಗೆ ಎಸ್‌ಸಿ/ಎಸ್‌ಟಿ, ಓಬಿಸಿ ಇರಬಹುದು, ಇಂತವನ್ನು ಜಿಲ್ಲಾ ಪಂಚಾಯಿತಿ ಸದಸ್ಯರ ಜೊತೆಯಲ್ಲಿ 5 ಜನರನ್ನು nominees ಮಾಡಿ. ತಾಲ್ಲೂಕು ಉಸ್ತುವಾರಿ ನೋಡಿಕೊಳ್ಳಲು ಉಸ್ತುವಾರಿ ಸಮಿತಿಯನ್ನು ಮಾಡಿ ಬಿಟ್ಟುಬಿಡಿ. ಅದಕ್ಕೆ ಚುನಾವಣೆ ಬೇಡ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೆ, "ಜಿಲ್ಲೆಯಲ್ಲಿ ತಮ್ಮ ಚುನಾವಣಾ ಕ್ಷೇತ್ರವನ್ನು ಹೊಂದಿರುವ ರಾಜ್ಯ ವಿಧಾನಸಭೆಯ ಎಲ್ಲ ಸದಸ್ಯರುಗಳು, ಮತ್ತು ಜಿಲ್ಲೆಯ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿರುವ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರುಗಳು ಮತ್ತು ಜಿಲ್ಲಾಧಿಕಾರಿಗಳು ಸಮಿತಿಯ ಖಾಯಂ ಆಹ್ವಾನಿತರಾಗಿರತಕ್ಕದು." ಇದು 2015 ರ ಕಲಂ 44 ನಲ್ಲಿ ಸ್ಪಷ್ಟವಾಗಿದೆ. ಶಾಸಕರು ಇದ್ದೇ ಇರುತ್ತಾರೆ. ಈಗ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಸಹ ಅಧ್ಯಕ್ಷರು ಯಾರು ಆಗುತ್ತಾರೆ ಎನ್ನುವುದಕ್ಕೆ ಮಾತ್ರ amendment ತಂದಿರುವುದು. ಎಂಎಲ್‌ಎ, ಎಂಎಲ್‌ಸಿ ಗಳು ಇಲ್ಲ ಎಂದು ತಿಳಿದುಕೊಳ್ಳಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ತಾಲ್ಲೂಕು ಪಂಚಾಯಿತಿಗೆ ಉಸ್ತುವಾರಿ ಸಮಿತಿಯನ್ನು ರಚನೆ ಮಾಡುವುದರ ಬಗ್ಗೆ ಯೋಚನೆ ಮಾಡಿ. ಸುಮ್ಮನೆ ಚುನಾವಣೆ ಮಾಡುವುದರಿಂದ ಹಣ ಖರ್ಚು ಮಾಡಿಕೊಂಡು ವ್ಯವಸ್ಥೆ ಎಲ್ಲಾ ಹಾಳಾಗುತ್ತಿದೆ. ಅದಕ್ಕೆ ಯಾವ ಅನುದಾನವನ್ನು ಕೊಡುವುದಿಲ್ಲ. ಸಹಕಾರ ಸಂಘದಲ್ಲಿ defaulters ಆಗಿರುವವರು, ವಜಾಗೊಂಡಿರುವವರು ಇವರೆಲ್ಲರನ್ನು ಮಾಡಲು…..

**ಶ್ರೀ ಜೆ.ಸಿ.ಮಾಧ್ಯಸ್ವಾಮಿ:-** ಮಾನ್ಯ ಸಭಾಪತಿಗಳೆ, entire thing is mistaken. Defaulters ಸುದ್ದಿ ಮಾತನಾಡಿರುವುದಿಲ್ಲ, 'punished'. ಅಲ್ಲಿ ಶಿಕ್ಷೆಯಾಗಿರುವವರನ್ನು ಇಲ್ಲಿ disqualify ಮಾಡಿದ್ದೇವೆ. Defaulters ಬಗ್ಗೆ ನಾವು ಹೇಳಿರುವುದಿಲ್ಲ. ಸಹಕಾರ ಸಂಘದಲ್ಲಿ ಯಾರಿಗಾದರೂ punishment ಆಗಿದ್ದರೆ ಅಂತವರು ಇಲ್ಲಿ ಬರುವುದು ಬೇಡ ಎಂದು ಹೇಳಿದ್ದೇವೆ. Defaulters ನ್ನು ಇಲ್ಲಿ ಬರಬೇಡಿ ಎಂದು ಹೇಳಲು ಆಗುತ್ತದೆಯೇ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಈ ರೀತಿ ನಿಯಂತ್ರಣ ಮಾಡುವುದಾದರೆ ಕಾನೂನಿನಲ್ಲಿ ಇದು permit ಆಗುತ್ತದೆಯೇ? ಹಾಗಿದ್ದರೆ ಯಾರು ಆರೋಪಕ್ಕೆ ಒಳಗಾಗಿ ವಜಾಗೊಂಡಿದ್ದಾರೆ ಅಂತವರು ವಿಧಾನಸಭಾ ಚುನಾವಣೆಗೆ ನಿಲ್ಲಬಾರದು ಎಂದು ಇಲ್ಲಿ ಒಂದು resolution ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಪಾಸ್ ಮಾಡಿಕೊಂಡು ಬಿಡಿ. ಈ ಜಗತ್ತು

ಸ್ವಚ್ಛವಾಗಲಿ. ನಮ್ಮ ರಾಜ್ಯ ಒಂದು ಮಾದರಿಯಾಗಲಿ. ಸಹಕಾರ ಸಂಘದಲ್ಲಿ ಯಾರು ಆರೋಪಿಗಳಾಗಿ ವಜಾಗೊಂಡಿದ್ದಾರೆ ಅಂತವರು ಯಾರು ವಿಧಾನಸಭೆ, ಲೋಕಸಭೆಗೆ ಸ್ಪರ್ಧೆ ಮಾಡುವಂತಿಲ್ಲ, ಜನಸಾಮಾನ್ಯರು ಮತ ಹಾಕಿ ಗೆಲ್ಲಿಸುವಂತಹ ಯಾವ ಚುನಾವಣೆಗೂ ನಿಲ್ಲಬಾರದು ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಕಳುಹಿಸಿ. ಆದರೆ ಈ ರೀತಿ ಮಾಡಲು ಆಗುವುದಿಲ್ಲ. ಇದರ ಬಗ್ಗೆ ಯೋಚನೆ ಮಾಡಿ, ಕೋರ್ಟ್‌ನಲ್ಲಿ ನಿಲ್ಲುತ್ತವೆಯೇ ಇಂತಹ ವಿಷಯಗಳು? ಮಾನ್ಯ ಈಶ್ವರಪ್ಪನವರೆ ತಾವು ತುಂಬ ಬುದ್ಧಿವಂತರು ಹಾಗೂ ಹಿರಿಯರು, ಇದು ಪಂಚಾಯತ್ ರಾಜ್ ವಿಷಯ. ಕೆಲವು ತಿದ್ದುಪಡಿಗಳನ್ನು ತರಬೇಕು ತನ್ನಿ, ಅದಕ್ಕೆ ನನ್ನ ವಿರೋಧವೇನು ಇಲ್ಲ. ಇಂತವೆಲ್ಲ ಮಾಡುವುದರಿಂದ ಈಗಿನ ಚುನಾವಣೆ ನಿಮ್ಮ ಅವಧಿಯಲ್ಲಿ ಮಾತ್ರ ನಡೆಯಲು ಸಾಧ್ಯವಿಲ್ಲ. ಚುನಾವಣೆ ಸಂದರ್ಭದಲ್ಲಿ ಇಂತಹ ತಿದ್ದುಪಡಿಗಳನ್ನು ಮಾಡಬಾರದು. ಇವೆಲ್ಲ ಕೋರ್ಟ್‌ಗೆ ಹೋಗಿ ಅಲ್ಲಿಂದ ಆಕ್ಷೇಪಣೆ ಬಂದರೆ ಸುಮ್ಮನೆ ತೊಂದರೆಯಾಗುತ್ತದೆ.

ಇನ್ನು ಸಹಕಾರಿ ಸಂಘದಲ್ಲಿ ನಿವೃತ್ತಿ ಹೊಂದಿದ ಅಧಿಕಾರಿಗಳೆಲ್ಲರನ್ನು restrict ಮಾಡಿದ್ದೀರಿ. ಇದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. ಇದು ಕಾನೂನಿಗೆ ವಿರುದ್ಧವಾಗಿದೆ. ಸಂವಿಧಾನಕ್ಕೆ ವಿರೋಧವಾಗಿದೆ. ಆದ್ದರಿಂದ ಈ ವಿಧೇಯಕಕ್ಕೆ ನನ್ನ ಒಪ್ಪಿಗೆ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು, ಇದರ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ನಾವು ಚಿಕ್ಕವರಿದ್ದಾಗ ಚಡ್ಡಿ ಹಾಕಿಕೊಂಡು, ಕಾಲಿನಲ್ಲಿ ಚಪ್ಪಲಿನೂ ಇಲ್ಲದೆ ಕಡ್ಲೆಪುರಿ ತಿನ್ನಲು ಸಂತೆಗೆ ಹೋಗುತ್ತಿದ್ದೆವು. ಅಲ್ಲಿ ಹಾವಾಡಿಸುವವರು ಬಂದಿರುತ್ತಿದ್ದರು. ಎರಡು ಕಡೆ ಎರಡು ಬುಟ್ಟಿಯಲ್ಲಿ ಹಾವುಗಳನ್ನು ಇಟ್ಟಿರುತ್ತಿದ್ದರು. ಅಲ್ಲಿ ಜನರನ್ನು ಸೇರಿಸಲು ಡ್ರಂ-ಡ್ರಂ ಎಂದು ಭಾರಿಸುತ್ತಿದರು, ಅಲ್ಲಿ ಏನು ನಡೆಯುತ್ತಿದೆ ಎಂದು ನೋಡಲು ನಾವು ಎಲ್ಲರಿಗಿಂತ ಮುಂದೆ ನಿಲ್ಲುತ್ತಿದ್ದೆವು. ಜನರು ಸೇರುವವರಿಗೆ ಭಾರಿಸುತ್ತಲೆ ಇರುತ್ತಿದ್ದ, ಜನರು ಸೇರಿದ ಮೇಲೆ ಎರಡು ಬುಟ್ಟಿಯಲ್ಲಿ ಒಂದು ಬುಟ್ಟಿಯನ್ನು ತೋರಿಸಿ, ನೋಡಿ ಸ್ವಾಮಿ ಈ ಹಾವು ಧರ್ಮಸ್ಥಳದಲ್ಲಿ ಹಿಡಿದಿರುವುದು, ಈ ಹಾವಿಗೆ ಮಾನ್ಯ ವೀರೇಂದ್ರ ಹೆಗಡೆಯವರು ಬಹುಮಾನವನ್ನು ಕೊಟ್ಟಿರುವುದು

ಎಂದು ಹೊರಗೆ ಬಿಡುವನು ಇದು ಇಷ್ಟು ಉದ್ದ ಇದೆ. ಇಷ್ಟು ಅಗಲ ಇದೆ, ಕಾಳಿಂಗ ಸರ್ಪ ಎಂದು ಎಲ್ಲವನ್ನು ಹೇಳುತ್ತಿದ್ದನು. ನಾವು ಅದನ್ನೆ ನೋಡುತ್ತಾ ನಿಲ್ಲುತ್ತಿದ್ದೆವು. ಜನ ಸೇರಿದಾಗ ಹಾವಾಡಿಗ ತಮ್ಮವರಿಗೆ ಇವನ್ಯಾರು ಎಂದು ಕೇಳುತ್ತಿದ, ಆಗ ಇನ್ನೊಬ್ಬ ಅವರು ವೆಂಕಟೇಶ್ ಇಂತಹ ಕೆಂಪು ಬಟ್ಟೆ ಹಾಕಿದ್ದಾರೆ ಎಂದು ಹೇಳುವನು. **(ಮುಂದು)**

**(661)28-03-2022(02-00)bsd-ks**

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು)**

ನೀನು ಒಳಗಿದ್ದರೂ ನಿನಗೆ ಹೇಗೆ ಗೊತ್ತಾಯಿತು ಎಂದು ಕೇಳುತ್ತಾನೆ. ಅಷ್ಟೊತ್ತಿಗೆ ಜನರೆಲ್ಲರೂ ಸೇರುತ್ತಾರೆ, ಆಗ ಹಾವು ಆಡಿಸುವವನಿಗೆ ಖುಷಿ ಆಗುತ್ತದೆ. ಅವನು ತೋರಿಸುವ ಹಾವನ್ನು ನಾವೂ ನೋಡಬೇಕಲ್ಲವೇ? ಆಗ ಅವನು " ಯಾವ ನನ್ನ ತಂದೆ-ತಾಯಿ, ಯಾವ ನನ್ನ ಅಣ್ಣ-ತಮ್ಮ, ಯಾವ ನನ್ನ ಅಕ್ಕ-ತಂಗಿ ಹಾವಿನ ಹೊಟ್ಟೆಗೆ ಬೇಕಾಗಿರುವ ಕೋಳಿ ಮೊಟ್ಟೆಗೆ ನಾಲ್ಕಾಣೆ ಹಾಕುವುದಿಲ್ಲವೋ! ಅವರ ತಂದೆ-ತಾಯಿ ಮೇಲೆ ಆಣೆ" ಎಂದು ಹೇಳುತ್ತಾನೆ. ಆಗ ಎಲ್ಲಾ ಜನರು ದುಡ್ಡು ಹಾಕುತ್ತಾರೆ. ಆಗ ಅವನ ಕೆಲಸ ಆಯಿತು. ಕೊನೆಗೆ ಒಂದು ಹಾವನ್ನು ಆಡಿಸಿ ಹೊರಟು ಬಿಡುತ್ತಾನೆ. ಇನ್ನೊಂದು ಹಾವನ್ನು ತೋರಿಸಿ ಬಿಡುತ್ತಾನೆ ಎಂದರೆ ಬಿಡುವುದೇ ಇಲ್ಲ. ಅದೇರೀತಿ ಚುನಾವಣೆಯೂ ಕಾಯ್ದು, ಚುನಾವಣೆಯೂ ಇಲ್ಲ. ಈಗ ಹೈಕೋರ್ಟ್‌ಗೆ ತಿದ್ದುಪಡಿ ತರುತ್ತಿರುವುದರಿಂದ ಈ ರೀತಿ ಆಗುತ್ತದೆ ಎಂದಿರುವ ವಿಚಾರ ಬಂದಿದೆ. ಎಲ್ಲರೂ ಹೇಳಿದ್ದಾರೆ. ಜನಪ್ರತಿನಿಧಿಗಳು ಇರುವ ಯಾವುದೇ ಸ್ಥಳೀಯ ಸಂಸ್ಥೆಗಳು ಇರಬೇಕು. ಸಹಕಾರ ಸಂಸ್ಥೆಗಳ ವಿಚಾರದಲ್ಲಿ ಮಾನ್ಯ ರವಿ ರವರು ಹೇಳಿರುವ ವಿಚಾರಗಳನ್ನು ಪುನರ್ ಉಚ್ಛಾರ ಮಾಡಬೇಕಾಗುತ್ತದೆ. ಮಾನ್ಯ ಕಾನೂನು ಸಚಿವರು ಆ ರೀತಿ ಯಾವುದೂ ಇಲ್ಲ ಎಂದು ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಚುನಾವಣೆ ಮಾಡಿಸಲು ಬೇಗ ವ್ಯವಸ್ಥೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಹೆಚ್ಚು ಕಡಿಮೆ ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳುತ್ತಿರುವಾಗಲೇ ಮಧ್ಯೆ

ಮಧ್ಯೆ ಉತ್ತರ ಸಿಕ್ಕಿಹೋಗಿದೆ. ಇಲ್ಲಿ ಚುನಾವಣೆ ನಡೆಸುತ್ತಾರೋ ಇಲ್ಲವೋ ಎಂಬುದೊಂದೇ ಪ್ರಶ್ನೆಯಾಗಿದೆ. ನನ್ನ ನೆರವಿಗೆ ಮಾನ್ಯ ಹರಿಪ್ರಸಾದ್ ರವರು ಬರಬೇಕು. ಏಕೆಂದರೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಮಾಡಬೇಕೆಂಬ ಒಂದೇ ಉದ್ದೇಶದಿಂದಲೇ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಇಡೀ ರಾಜ್ಯದಲ್ಲಿ ಶಾಂತಿಯುತವಾಗಿ ಯಶಸ್ವಿಯಾಗಿ ಮಾಡಿದ್ದೇವೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಇನ್ನೂ ಅವಧಿ ಇರುವುದಕ್ಕೆ ಮುಂಚೆಯೇ ನಾವು ತಯಾರಾಗಿದ್ದೇವೆ ಎಂದು ಚುನಾವಣಾ ಆಯೋಗಕ್ಕೆ ಪತ್ರವನ್ನು ಬರೆದು ಹಾಕಿದ್ದೇವೆ. ಇಲ್ಲದಿದ್ದರೆ ತಯಾರಿದ್ದೇವೆ ಎಂದು ನಾವು ಏಕೆ ಬರೆಯಬೇಕಾಗಿತ್ತು? ಪತ್ರ ಬರೆದ ಮೇಲೆ ಹಿರಿಯರಾದ ಶ್ರೀ ತಿಪ್ಪೇಸ್ವಾಮಿ ರವರು ಹೇಳಿದಂತೆ 2,600 ಆಕ್ಷೇಪಣೆಗಳು ಬಂದಿದ್ದು, ಆಕ್ಷೇಪಣೆ ಬಂದಿದ್ದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಮಾಡುವುದು ಸೂಕ್ತವಲ್ಲ ಎಂದು ಹಾಗೂ ಏನೇನು ಮಾಡಬೇಕೆಂದು ಸಾಕಷ್ಟು ಚರ್ಚೆಗಳನ್ನು ಮಾಡಿ ಒಂದು ಕಮೀಷನ್ ಅನ್ನು ಮಾನ್ಯ ಲಕ್ಷ್ಮಿನಾರಾಯಣ ರವರು ಅಧ್ಯಕ್ಷತೆಯಲ್ಲಿ ಮಾಡಿದ್ದೇವೆ. ಅನೇಕ ಸಲಹೆಗಳು ಬಂದಿದ್ದು, ಅವುಗಳನ್ನು ತಾವುಗಳೇ ಒಪ್ಪಿದ್ದು, ಅವುಗಳೆಲ್ಲವನ್ನು ಇಟ್ಟುಕೊಂಡು ಮಾಡುತ್ತಿದ್ದೇವೆ. ಯಾವ ಕಾರಣಕ್ಕೂ ಚುನಾವಣೆಯನ್ನು ಮುಂದಾಕುವ ಯೋಚನೆ ಸರ್ಕಾರಕ್ಕಿಲ್ಲ. ಈಗಾಗಲೇ ಸರ್ವ ಪಕ್ಷಗಳ ಸಭೆಯನ್ನು ಕರೆದಿದ್ದು, ಮಾನ್ಯ ಹರಿಪ್ರಸಾದ್ ರವರು ಬಂದಿದ್ದರು. ಇದರ ಬಗ್ಗೆ ಬೆಳಗ್ಗೆ ವಿಧಾನಸಭೆಯಲ್ಲಿಯೂ ಚರ್ಚೆಯಾಯಿತು. ಮಾನ್ಯ ಸಿದ್ದರಾಮಯ್ಯನವರು ಯಾವುದೋ ಕಾರಣಕ್ಕೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಆದರೂ ಸಾಕಷ್ಟು ಚರ್ಚೆಗಳನ್ನು ಮಾಡಿದ್ದೇವೆ. 2010 ರ ವಿಷಯ ನೆಪ ಅಲ್ಲ. ಈಗ ಚುನಾವಣೆ ಮಾಡುವುದಕ್ಕೆ ಹೊರಟರೆ ಓಬಿಸಿ ಗಳನ್ನು ಬಿಟ್ಟು ಮಾಡಬೇಕಾಗುತ್ತದೆ. ಇದನ್ನು ಬಿಟ್ಟು ಮಾಡಿ ಎಂದು ನೀವೆಲ್ಲರೂ ಹೇಳುವುದಾದರೆ ಮಾಡೋಣ. ಯಾವ ಕಾರಣಕ್ಕೂ ಓಬಿಸಿ ಬಿಟ್ಟು ಚುನಾವಣೆ ಮಾಡುವ ಪ್ರಶ್ನೆ ಇಲ್ಲ, ಅವುಗಳನ್ನು ಸೇರಿಸಿಕೊಂಡೇ ಮಾಡಬೇಕು. ಅವರಿಗೆ ಮೀಸಲಾತಿ ಕೊಟ್ಟು ಮಾಡಬೇಕೆಂಬ ಉದ್ಧೇಶದಿಂದ ಏನೇನು ಮಾಡಬೇಕೆಂದು ಯೋಚನೆಗಳನ್ನು ಮಾಡುತ್ತಿದ್ದೇವೆ. ಅದಕ್ಕಾಗಿ 31ನೇ ತಾರೀಖು ಸರ್ವ ಪಕ್ಷಗಳ ಸಭೆ ಕರೆದು, ಈ ಚುನಾವಣೆ ಮಾಡಲು ಮೀಸಲಾತಿ ಇಟ್ಟುಕೊಂಡು ಏನು ಮಾಡಬೇಕು ಎಂದು ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು ರವರುಗಳ ಜೊತೆ

ಮಾತನಾಡಿಕೊಂಡು ದಿನಾಂಕ 31ನೇ ತಾರೀಖಿನಂದು ಸಭೆ ನಡೆಸುತ್ತಿದ್ದೇನೆ. ಆ ಸಭೆಯಲ್ಲಿ ಅಡ್ವೋಕೇಟ್ ಜನರಲ್, ಕಾನೂನು ಸಚಿವರೂ ಇರುತ್ತಾರೆ. ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಚುನಾವಣೆಗಳನ್ನು ಮಾಡಲೇಬೇಕು ಎಂದು ಮಾಡಿಕೊಂಡು ಓಬಿಸಿ ರವರಿಗೆ ಅನ್ಯಾಯವಾಗಿದೆ. ಈ ರೀತಿ ಅನ್ಯಾಯವಾಗಲು ಬಿಡುವುದಿಲ್ಲ. ಚುನಾವಣೆಯನ್ನು ಮಾಡುತ್ತೇವೆ, ಜೊತೆಗೆ ಮೀಸಲಾತಿಯನ್ನು ಓಬಿಸಿ ರವರಿಗೆ ಕೊಡುತ್ತೇವೆ. ಆ ದಿಕ್ಕಿನಲ್ಲಿ ಮಾಡುತ್ತಿದ್ದು, ಉಳಿದಿರುವ ಪ್ರಶ್ನೆಗಳಿಗೆ ಅಲ್ಲಲ್ಲಿಯೇ ಉತ್ತರ ಕೊಟ್ಟಿರುತ್ತೇನೆ ಎಂದು ಭಾವಿಸಿಕೊಳ್ಳುತ್ತೇನೆ. ಆದ್ದರಿಂದ ಈ ವಿಧೇಯಕಕ್ಕೆ ಅನುಮತಿ ಕೊಡಬೇಕೆಂದು ಕೋರುತ್ತೇನೆ.

**ವೈಸ್ ಚೇರ್ಮನ್:** ಪ್ರಸ್ತಾವ ಏನೆಂದರೆ;

“ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 9ರ ವರೆಗೆ**

**ವೈಸ್ ಚೇರ್ಮನ್:** “ ಖಂಡ 2 ರಿಂದ 9ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 9 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಖಂಡ 2 ಇತ್ಯಾದಿ**

**ವೈಸ್ ಚೇರ್ಮನ್:** ಪ್ರಸ್ತಾವ ಏನೆಂದರೆ;

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೆ.ಎಸ್. ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ವೈಸ್ ಚೇರ್ಮನ್:** ಪ್ರಸ್ತಾವ ಏನೆಂದರೆ;

" ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**೦6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ)ವಿಷಯ: ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಗ್ರಾಮ ಪಂಚಾಯಿತಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರ ಇ-ಸ್ವತ್ತು ತಂತ್ರಾಂಶದ ಲಾಗಿನ್ ಅನ್ನು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ.**

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಹೆಚ್.ಎಸ್. ಗೋಪಿನಾಥ್ ರವರು ದಿನಾಂಕ 14-03-2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)ವಿಷಯ: ಕೋವಿಡ್-19 ಉಲ್ಬಣಗೊಳ್ಳುವ ಸಾಧ್ಯತೆಗಳಿರುವುದರಿಂದ ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳುವ ಬಗ್ಗೆ**

– – –

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಶಶಿಲ್ ಜಿ. ನಮೋಶಿ ರವರು ದಿನಾಂಕ 21-03-2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಇ)ವಿಷಯ: ಟಮೋಟೊ ಬೆಲೆ ಕುಸಿತದಿಂದ ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದಿರುವ ಬಗ್ಗೆ**

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ)(ಸಹಕಾರ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರು ದಿನಾಂಕ 23–03–2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಈ)ವಿಷಯ: ಐಟಿಐ ಮತ್ತು ಡಯಟ್‌ಗಳಲ್ಲಿನ ಇಎಲ್‌ಟಿಸಿ ಬೋಧಕ ಹುದ್ದೆಗಳನ್ನು ರದ್ದುಪಡಿಸಿ ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ.**

– – –

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಶ್ರೀ ಮರಿತಿಬ್ಬೇಗೌಡ ರವರು ದಿನಾಂಕ 24–03–2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಉ)ವಿಷಯ: ಬೀದರ್ ಜಿಲ್ಲೆಯಲ್ಲಿ ಪಾಪನಾಶಲಿಂಗೇಶ್ವರ ದೇವಸ್ಥಾನ ಕಟ್ಟಡ ಶಿಥಿಲಾವಸ್ಥೆಯಲ್ಲಿರುವ ಬಗ್ಗೆ.**

– – –

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ)(ಬೆಂಗಳೂರು ಹೊರತುಪಡಿಸಿ)(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಶ್ರೀ ಅರವಿಂದ ಕುಮಾರ್ ಅರಳಿ ರವರು ದಿನಾಂಕ 24–03–2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ)ವಿಷಯ: ದಕ್ಷಿಣ ಕನ್ನಡ ಜಿಲ್ಲೆ ದೇವಸ್ಥಾನಗಳ ಜಾತ್ರೋತ್ಸವದಲ್ಲಿ ಹಿಂದುಗಳೇತರರಿಗೆ ಜಾತ್ರಾ ವ್ಯಾಪಾರಕ್ಕೆ ಅವಕಾಶ ಇಲ್ಲದಿರುವ ಬಗ್ಗೆ.**

– – –

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ) (ಬೆಂಗಳೂರು ಹೊರತುಪಡಿಸಿ) (ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಶ್ರೀ ಸಿ.ಎಂ. ಇಬ್ರಾಹಿಂ ರವರು ದಿನಾಂಕ 24-03-2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಖ)ವಿಷಯ: ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ದೇವರಾಯಸಮುದ್ರ ಗ್ರಾಮದಲ್ಲಿನ ವೃಷಬಾದ್ರಿ ಬೆಟ್ಟದ ಬಳಿ ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ.**

**- - -**

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ)(ಬೆಂಗಳೂರು ಹೊರತುಪಡಿಸಿ) (ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಕೆ. ಗೋವಿಂದರಾಜ್ ರವರು ದಿನಾಂಕ 24-03-2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಹೇಳಿಕೆಯನ್ನು ಲಗತ್ತಿಸಿದೆ)**

**ಎ)ವಿಷಯ: ಗದಗ ಜಿಲ್ಲೆಯ ಶಿರಹಟ್ಟಿ ಗ್ರಾಮದ ಭಾರತಿ ಶಿಕ್ಷಣ ಸಮಿತಿಯ ಎಸ್‌ಎಸ್‌ಕೆ ಅನುದಾನಿತ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಎಸ್.ಕೆ.ಅಂಗಡಿ ರವರನ್ನು ಸೇವೆಯಿಂದ ವಜಾ ಮಾಡಿರುವ ಬಗ್ಗೆ.**

- - -

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ)(ಬೆಂಗಳೂರು ಹೊರತುಪಡಿಸಿ) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರು ದಿನಾಂಕ 25-03-2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಏ)ವಿಷಯ: ಸಮಾಜ ಕಲ್ಯಾಣ ಇಲಾಖೆಯ ಕರ್ನಾಟಕ ವಸತಿ ಶಿಕ್ಷಣ ಸಂಘದ ವಸತಿ ಶಾಲೆಗಳಿಗೆ 230 ಹುದ್ದೆಗಳ ನೇಮಕಾತಿ ಬಗ್ಗೆ.**

\- - -

**ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ, ಬೆಂಗಳೂರು ಹೊರತುಪಡಿಸಿ)(ಬೆಂಗಳೂರು ಹೊರತುಪಡಿಸಿ)(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಅರವಿಂದ ಕುಮಾರ್ ಅರಳಿ ದಿನಾಂಕ 25-03-2022 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆ ಲಗತ್ತಿಸಿದೆ)**

**ವೈಸ್ ಚೇರ್ಮನ್:** ಖಾಸಗಿ ನಿರ್ಣಯದ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಉತ್ತರ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್ ರವರು ಇಲ್ಲದಿರುವುದರಿಂದ ದಯಮಾಡಿ ನಂತರ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

**ಡಾ: ಕೆ. ಸುಧಾಕರ್:-** ಉತ್ತರ ತಯಾರಿದೆ.

**ವೈಸ್ ಚೇರ್ಮನ್:** ಕ್ಲಾರಿಫಿಕೇಷನ್ ಕೇಳಲು ಮಾನ್ಯ ಸದಸ್ಯರು ಇಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಈ ವಿಷಯ ಸುಮಾರು ಒಂದು ವರ್ಷದಿಂದ ಇದ್ದು, ನಾವು ಶುಕ್ರವಾರ ಒತ್ತಾಯ ಮಾಡಿದ್ದರಿಂದ, ಇವತ್ತು ಬಂದಿದ್ದು, ಈ ಒಂದು ದಿವಸದಲ್ಲಿ ಏನೂ ಆಗುವುದಿಲ್ಲ. ದಯಮಾಡಿ ಮುಂದಕ್ಕೆ ಹಾಕಬೇಕೆಂದು ಕೋರುತ್ತೇನೆ.

**ವೈಸ್ ಚೇರ್ಮನ್:** ಮಾನ್ಯ ಸಚಿವರೇ, ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್ ರವರು ಬರಲಿ, ಮಧ್ಯಾಹ್ನದ ನಂತರ ಉತ್ತರ ಕೊಡಿ. ಇಲ್ಲದಿದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪಿಕೊಂಡರೇ ಈಗಲೇ ಉತ್ತರ ನೀಡುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಧ್ಯಾಹ್ನದ ನಂತರ ತೆಗೆದುಕೊಳ್ಳಿ. ಇಂದು ಒಂದು ಸಮಾರಂಭ ಇದೆ.

**ವೈಸ್ ಚೇರ್ಮನ್:-** ಮಾನ್ಯ ಸಚಿವರು ಉತ್ತರ ಪ್ರಾರಂಭ ಮಾಡುವುದಾದರೆ ತಾವು ಮಾನ್ಯ ಸದಸ್ಯರನ್ನು ಕರೆಸಿ. ಅದು ಮುಗಿದುಹೋಗಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಈಗ ಇಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಕಾಂಗ್ರೆಸ್ ಪಕ್ಷದವರಿಗೆ ಮಧ್ಯಾಹ್ನದ ನಂತರ ಕಾರ್ಯಕ್ರಮ ಇದ್ದು, ಮಧ್ಯಾಹ್ನದ ನಂತರ ಉತ್ತರ ಹೇಳಿ ಎಂದರೆ ಹೇಗೆ? ಯಾರು ಇರುತ್ತಾರೆ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಈ ವಿಷಯ ಸುಮಾರು ಒಂದೂವರೆ ವರ್ಷದಿಂದ ಇದ್ದು, ಶುಕ್ರವಾರ ಒತ್ತಾಯ ಮಾಡಿದ ನಂತರ ಇಂದು ಉತ್ತರ ಕೊಡುವುದಾಗಿ ತಿಳಿಸಿದ್ದರು, ನಾವು ಮೊದಲೇ ಕಾರ್ಯಕ್ರಮ ಇದೆ ಎಂದು ಹೇಳಿದ್ದೆವು. ಮಾನ್ಯ ಸದಸ್ಯರು ಹಾಜರಾತಿ ಹಾಕಿ ಬರುತ್ತಾರೆ, ಅದಕ್ಕೆ ತಾಪತ್ರಯ ಏನೂ ಇಲ್ಲ. ಆದ್ದರಿಂದ ವಿರಾಮ ಕೊಡುವುದು ಒಳ್ಳೆಯದು ಎಂದು ನನ್ನ ಭಾವನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಸಂತೋಷ, ಕಾರ್ಯಕ್ರಮ ಇದೆ ಎಂದು ಹೇಳಿದೆ.

**ವೈಸ್ ಚೇರ್ಮನ್:-** ಈಗ ಊಟದ ವಿರಾಮಕ್ಕಾಗಿ ಸದನವನ್ನು 3-30 ಗಂಟೆಯವರೆಗೆ ಮುಂದೂಡುತ್ತೇನೆ.

(ಸದನವು ಭೋಜನ ವಿರಾಮಕ್ಕಾಗಿ 2 ಗಂಟೆ 9 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನ: 3 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(662) 28.3.2022 3.40 ಪಿಕೆ:ಜಿಆರ್

**(ಮಧ್ಯಾಹ್ನ 2 ಗಂಟೆ 9 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 47 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠಾಸೀನರಾದರು)**

**ಸಭಾಪತಿಯವರು:-** ಮಾನ್ಯ ಕಾನೂನು ಸಚಿವರು ಅನ್ಯ ಕಾರ್ಯದ ನಿಮಿತ್ತ ಹೋಗಬೇಕಾಗಿರುವುದರಿಂದ ಮೊದಲು ಅವರು ಉತ್ತರಿಸಬಹುದಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಡಾ॥ ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಗಳೆ, ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330 ಈ ಎರಡರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಂಬಂಧಪಟ್ಟಂಥ ವಿಚಾರ ಇದೆ. ಇವೆರಡನ್ನೂ ಕ್ಲಬ್ ಮಾಡಿದರೆ ಒಳ್ಳೆಯದು; ಒಂದೇ ಉತ್ತರವನ್ನು ಕೊಡಬಹುದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):–** ಈ ಎರಡನ್ನು ಕ್ಲಬ್ ಮಾಡಿ ತೆಗೆದುಕೊಳ್ಳಬೇಕೆಂದು ನಾನೂ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಆಯಿತು; ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಗೋವಿಂದ ರಾಜು, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ಸೂರಜ್ ರೇವಣ್ಣ ಅವರುಗಳು ನಿಯಮ ೩೩೦ರ ವಿಷಯ ಮತ್ತು ಶ್ರೀ ಎಸ್.ರುದ್ರೇಗೌಡ ಅವರ ಗಮನ ಸೆಳೆಯುವ ಸೂಚನೆ ಎರಡನ್ನೂ ಒಗ್ಗೂಡಿಸಿ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ. ಈಗ ಮೊದಲಿಗೆ ಮಾನ್ಯ ಎಸ್.ರುದ್ರೇಗೌಡರು ಮಾತನಾಡುತ್ತಾರೆ.

## 07. ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330ರ ಮೇರೆಗೆ

### ಗಮನ ಸೆಳೆಯುವ ಸೂಚನೆ

**ವಿಷಯ:** ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು ಕಡಿತಗೊಳಿಸಿರುವ ಕುರಿತು.

– – –

### ನಿಯಮ 330ರ ಮೇರೆಗೆ

**ವಿಷಯ:** ಕರ್ನಾಟಕ ನಾಗರೀಕ ಸೇವಾ ನಿಯಮ 2021ಕ್ಕೆ ತಿದ್ದುಪಡಿ ತರಲು ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸದೇ ಕರಡು ಅಧಿಸೂಚನೆಯನ್ನು ಹೊರಡಿಸಿರುವುದರ ಕುರಿತು.

– – –

**ಶ್ರೀ ಎಸ್‌ರುದ್ರೇಗೌಡ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಗಳೆ, ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಕ್ತಿತ್ವ ಪರೀಕ್ಷೆಯ ಅಂಕಗಳನ್ನು ಕಡಿತಗೊಳಿಸಿರುವ ಸಂಬಂಧ ಮಾನ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಗಳೆ,

**(ಸಚಿವರ ಹೇಳಿಕೆ ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರುದ್ರೇಗೌಡ –** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಲೋಕಸೇವಾ ಆಯೋಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಸಂವಿಧಾನ ರಚನೆಯ ಜೊತೆ ಜೊತೆಗೆ ಸ್ಥಾಪನೆಯಾಯಿತು. ಇದೊಂದು ಸ್ವತಂತ್ರವಾದ ಸಂಸ್ಥೆಯಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಬೇಕಾಗುವಂತಹ ಅಧಿಕಾರಿಗಳನ್ನು, ಉದ್ಯೋಗಿಗಳನ್ನು ಆಯ್ಕೆ ಮಾಡುವಂತಹ ಹಿನ್ನೆಲೆಯಲ್ಲಿ ಭಾರತೀಯ ಸಂವಿಧಾನದ ವಿಧಿ 315ರ ಪ್ರಕಾರ ಲೋಕಸೇವಾ ಆಯೋಗ ಸ್ಥಾಪನೆಯಾಯಿತು. ಅದರ ಕಾರ್ಯ ಚಟುವಟಿಕೆಗಳು ನಿಯಮ 320 ಮತ್ತು 321ರಲ್ಲಿ ಹೇಳಲ್ಪಟ್ಟಿವೆ. ಇವತ್ತಿನ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಒಂದು ವಿಶೇಷವಾದ ಹಿನ್ನೆಲೆ ಇದೆ.

**(ಮುಂದು)**

**(663) ದಿನಾಂಕ:28-03-2022 3.50 ಡಿಎಸ್-ಜಿಆರ್**

**ಶ್ರೀ ಎಸ್.ರುದ್ರೇಗೌಡ(ಮುಂದು):-**

ಅದೇನೆಂದರೆ, ಡಿ.ಪಿ.ಎ.ಆರ್., ನಿಂದ ಕರಡು ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅದರ ಪ್ರಕಾರ ಎರಡು ಮಹತ್ವದ ವಿಷಯಗಳನ್ನು ಸರ್ಕಾರ ತಿದ್ದುಪಡಿ ಮಾಡುವುದಕ್ಕೆ ಪ್ರಸ್ತಾವನೆಯನ್ನು ಮಂಡಿಸಿದೆ.

(ಈ ಹಂತದಲ್ಲಿ ಶ್ರೀಮತಿ ಭಾರತಿ ಶೆಟ್ಟಿಯವರು ಪೀಠವನ್ನಲಂಕರಿಸಿದರು)

ಮೊದಲನೆಯದು, ಗ್ರೂಪ್ 'ಬಿ' ವೃಂದದಲ್ಲಿ ಯಾರನ್ನು ನೇಮಕ ಮಾಡಿಕೊಳ್ಳುತ್ತಾರೆಯೋ ಅದನ್ನು 'ಸಿ' ಮತ್ತು 'ಡಿ' ವರ್ಗಕ್ಕೆ ಸೇರಿಸಿ ಆಯ್ಕೆ ಮಾಡುವಂತಹ ಪ್ರಪೋಸಲ್‌ನ್ನು ಸರ್ಕಾರ ಹೊಂದಿದೆ. ಅದರ ಜೊತೆಗೆ ಗ್ರೂಪ್ 'ಬಿ' ಮತ್ತು 'ಎ' ಹುದ್ದೆಗಳಿಗೆ ಆಯ್ಕೆಯಾಗುವಂತಹ ಅಭ್ಯರ್ಥಿಗಳಿಗೆ ಹಿಂದೆ ಇದ್ದಂತಹ 50 ಅಂಕಗಳನ್ನು 25 ಅಂಕಗಳಿಗೆ ಇಳಿಸಿದ್ದಾರೆ. ಈ ವಿಷಯವಾಗಿ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಸರ್ಕಾರಕ್ಕೆ ಎಲ್ಲಾ ರೀತಿಯ ಆಲೋಚನೆಗಳು ಸರ್ಕಾರದ ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಎಲ್ಲಾ ಅಧಿಕಾರಗಳು ಇವೆ. ಅದೇ ರೀತಿ ಈಗ ಪ್ರಸ್ತಾವನೆಯನ್ನು ಮುಂದಿಟ್ಟಿದ್ದಾರೆ ಅದಕ್ಕೆ ಕಾರಣವನ್ನು ನಿಖರವಾಗಿ ತಿಳಿಸದಿದ್ದರೂ ಕೂಡ ಸುಧಾರಣೆಯ ನಿಟ್ಟಿನಲ್ಲಿ ಇದನ್ನು

ತೆಗೆದುಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಅಂಕಗಳು ಕಡಿಮೆಯಾದಾಗ ನಾವು ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಎಲ್ಲೋ ಒಂದು ಕಡೆ ಅನ್ಯಾಯವಾಗುತ್ತದೆ ಎನ್ನುವ ಭಾವನೆ. ಈ ಹಿಂದೆ ಇದ್ದಂತಹ 50 ಅಂಕಗಳು ಕೂಡ ತುಂಬಾ ಕಡಿಮೆ. ಏಕೆಂದರೆ, 1981 ಮತ್ತು 85 ರಲ್ಲಿ ಸರ್ವೋಚ್ಛ ನ್ಯಾಯಾಲಯ ತೀರ್ಪು ಕೊಟ್ಟಿದೆ. ಅದರ ಪ್ರಕಾರ ಮುಖ್ಯ ಪರೀಕ್ಷೆಯ ಒಟ್ಟು ಅಂಕಗಳ ಶೇಕಡ ಹನ್ನೆರಡುವರೆ ಅಷ್ಟು ಇರಬೇಕೆಂದು ಈಗಾಗಲೇ ತೀರ್ಪು ಕೊಟ್ಟಿದೆ. ಅದರ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಲೋಕಸೇವಾ ಆಯೋಗದವರು ನಡೆಸುವ ಮುಖ್ಯ ಪರೀಕ್ಷೆಗೆ 1250 ಅಂಕಗಳು ಇವೆ. ಅದರ ಪ್ರಕಾರ ನಾವು ಲೆಕ್ಕ ಹಾಕಿದಾಗ 150 ಅಂಕಗಳನ್ನು ಕೊಡಬೇಕಾಗುತ್ತದೆ. ಇದು ಸರ್ವೋಚ್ಛ ನ್ಯಾಯಾಲಯ ಕೊಟ್ಟಿರುವಂತಹ ತೀರ್ಪು. ಇದಕ್ಕೆ ಕಾರಣವೇನೆಂದರೆ, ಯಾರು ಈ ಪರೀಕ್ಷೆಯನ್ನು ಬರೆದು ಅಂಕಗಳನ್ನು ತೆಗೆದುಕೊಂಡಿರುತ್ತಾರೆ ಆ ಅಂಕಗಳ ಜೊತೆಗೆ ಅವರ ವ್ಯಕ್ತಿತ್ವವೂ ಮುಖ್ಯ. ಸಮಾಜದಲ್ಲಿರುವ ಕಷ್ಟಗಳಿಗೆ ಸ್ಪಂದಿಸುವ ಅಧಿಕಾರಿಗಳನ್ನು ನಾವು 'ಎ' ಮತ್ತು 'ಬಿ' ವೃಂದದಲ್ಲಿ ಆಯ್ಕೆ ಮಾಡುತ್ತೇವೆ. ಸರ್ಕಾರದ ಎಲ್ಲಾ ಅನುಮೋದನೆಗಳನ್ನು ಸಮಾಜದಲ್ಲಿರುವಂತಹ ಕಟ್ಟ ಕಡೆಯ ವ್ಯಕ್ತಿಗೆ ನ್ಯಾಯ ಒದಗಿಸುವಂತಹ ಅತೀ ಮುಖ್ಯವಾದ ಸ್ಥಾನದಲ್ಲಿ ಅವರು ಇರುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಕೆಲವು ವರ್ಷಗಳ ಹಿಂದೆ ದೊಂಬರು ಎನ್ನುವ ಪದವನ್ನು ನಾವು ಕೇಳಿದ್ದೇವೆ, ರಸ್ತೆಗಳಲ್ಲಿ ಅವರು ಹಗ್ಗ ಕಟ್ಟಿಕೊಂಡು ಪ್ರದರ್ಶನ ಮಾಡಿ ಜನರಿಂದ ಅವರು ಹಣವನ್ನು ತೆಗೆದುಕೊಳ್ಳುತ್ತಿರುತ್ತಾರೆ. ಇತಿಹಾಸದಲ್ಲಿ ಮೊದಲ ಬಾರಿಗೆ ಒಬ್ಬ ವ್ಯಕ್ತಿ ಪರೀಕ್ಷೆಗೆ ಬಂದಿದ್ದ. ಅವನಿಗೆ ಎಷ್ಟು ಅಂಕ ಕಡಿಮೆ ಇತ್ತು ಎಂದರೆ ಯಾವುದಲ್ಲಾದರೂ ಒಂದು ಅಂಕ ಕಡಿಮೆಯಾದರೂ ಕೂಡ ಕೊಡುವುದಕ್ಕಾಗುತ್ತಿರಲಿಲ್ಲ. ಆಗ 180-200 ಅಂಕಗಳವರೆಗೆ ಕೊಡುತ್ತಿದ್ದೆವು. ಒಟ್ಟು ಅಂಕಗಳು 1800-1850 ಇರುತ್ತಿತ್ತು. ಆನಂತರದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಲೋಕಸೇವಾ ಆಯೋಗದ ಬಗ್ಗೆ ಹೊರಗಡೆಯಲ್ಲಿ ನಾವೇನು ಮಾತನಾಡುತ್ತಿರುತ್ತೇವೆ ಆಂತರಿಕವಾಗಿ ಸಾಕಷ್ಟು ಸುಧಾರಣೆಗಳಾಗಿವೆ. ಆದರೆ ವ್ಯವಸ್ಥೆ ಕೂಡ ಅದಕ್ಕೆ ಸಹಕರಿಸಬೇಕು. ಉದಾಹರಣೆಗೆ ಇಲಾಖೆಗಳಿಂದ ಬರುವಂತಹ ಪ್ರತಿಕ್ರಿಯೆ, ಇಲಾಖೆಗಳು ಯಾವ ರೀತಿ ಸ್ಪಂದಿಸಬೇಕು, ಇಲಾಖೆಯವರು ಕೊಟ್ಟರೆ ಮಾತ್ರ ಲೋಕಸೇವಾ ಆಯೋಗದವರು ನೇಮಕಾತಿ ಮಾಡುವುದಕ್ಕೆ ಸಾಧ್ಯ. ಅದೇ feeding

agency. ಸರ್ಕಾರಕ್ಕೆ ಬೇಕಾದ ಅಧಿಕಾರಿಗಳನ್ನು, ಎಲ್ಲಾ ಹುದ್ದೆಗಳಿಗೆ ಲೋಕಸೇವಾ ಆಯೋಗ ಮಾಡುತ್ತದೆ. ಆದರೆ ಅದನ್ನು ಕೊಡುವಂಥವರು ಯಾರು? ಅಲ್ಲಿ ಸಾಕಷ್ಟು ತೊಂದರೆಗಳಿವೆ. ಈ ವರ್ಷದಲ್ಲಿ ಒಂದೇ ಒಂದು ನೋಟಿಫಿಕೇಶನ್ ಬಂದಿದೆ ಎಂದು ಮಾನ್ಯ ಸದಸ್ಯರಾದ ರವಿ ಯವರು ಪ್ರಸ್ತಾಪ ಮಾಡಿದರು. ನಾನು ಅಲ್ಲಿ ಒಬ್ಬ ಸದಸ್ಯನಾಗಿ 2011 ರಿಂದ 2016 ರವರೆಗೆ 5 ವರ್ಷ 3 ತಿಂಗಳು ನಾನು ಕೆಲಸ ಮಾಡಿದ್ದೇನೆ. ಆ ಸಂದರ್ಭದಲ್ಲಿ ನಡೆದಂತಹ ಹಲವಾರು ಘಟನೆಗಳನ್ನು ಹೇಳುವುದಕ್ಕೆ ಸಮಯವಿಲ್ಲ. ಆದರೂ ಒಂದೆರಡು ಮಾತುಗಳನ್ನು ಇಲ್ಲಿ ಹೇಳವುದಕ್ಕೆ ಬಯಸುತ್ತೇನೆ. 18 ವರ್ಷಗಳ ಕಾಲ ವೆಹಿಕಲ್ ಇನ್ಸ್‌ಪೆಕ್ಟರ್ ಹುದ್ಧೆಗೆ interview ಮಾಡುವುದಕ್ಕಾಗಿರಲಿಲ್ಲ. ಅಂತಹ ಸಂದರ್ಭದಲ್ಲಿ interview ಮಾಡಿದ್ದೆವು. ಮುಖ್ಯ ಕಾರ್ಯದರ್ಶಿ ಮತ್ತು ಇಲಾಖಾಧಿಕಾರಿಗಳ ಸಂಪರ್ಕ ಮಾಡಿ ಅವರ ಎಲ್ಲಾ ಅನುಮಾನಗಳನ್ನು ಬಗೆಹರಿಸಿ interview ಮಾಡಿದೆವು. Central Motor Vehicles Act and State Motor Vehicles Act ಅವೆರಡಕ್ಕೂ ಕೂಡ ಸಾಮ್ಯತೆ ಇದೆ. ಅದಕ್ಕೆ ತಕ್ಕ ಹಾಗೆ ನಾವು ನೋಟಿಫಿಕೇಶನ್ ಮಾಡಬೇಕಾಗುತ್ತದೆ. ಆದರೆ ಇದನ್ನು ಹೀಗೆ ಮಾಡಬೇಕೆಂದು ಹಠ ಮಾಡಿದರು. ಆಯ್ಕೆಯನ್ನು ಮಾಡಿದೆವು. ಆಯ್ಕೆ ಮಾಡಿ ಹತ್ತು ವರ್ಷಗಳಾಗಿದೆ. ಇವತ್ತು ಏನಾಗಿದೆ ಎಂದರೆ, ನೋಟಿಫಿಕೇಶನ್ ಸರಿಯಿಲ್ಲದ ಕಾರಣಕ್ಕಾಗಿ ಅವರು ಸುಪ್ರೀಂ ಕೋರ್ಟ್ ಆದೇಶದ ಮೇಲೆ ಅವರು ಕೆಲಸದಲ್ಲಿದ್ದಾರೆ. ಹೀಗೆ ಇಲಾಖೆಗಳಿಂದ ಬರುವಂತಹ ನೋಟಿಫಿಕೇಶನ್ ಎಲ್ಲಾ ರೀತಿಯಿಂದಲೂ ಸರಿಯಾಗಿದ್ದರೆ ಕೆ.ಪಿ.ಎಸ್.ಸಿ., ಇನ್ನು ಚೆನ್ನಾಗಿ ಕೆಲಸ ಮಾಡಬಹುದು ಎನ್ನುವುದು ನನ್ನ ಭಾವನೆ. ನಾನು ಆಗಲೇ ಸಂದರ್ಶನದ ಅಂಕಗಳ ಬಗ್ಗೆ ನಾನು ಮಾತನಾಡುತ್ತಿದ್ದೆ. Gazetted Probationers ಏನು ತೆಗೆದುಕೊಳ್ಳುತ್ತೇವೆ 8-10 ಹುದ್ದೆಗಳಿಗೆ ನಾವು ಒಂದೇ ಅರ್ಜಿಯನ್ನು ತೆಗೆದುಕೊಳ್ಳುತ್ತೇವೆ. Assistant Commissioner – Revenue, Assistant Commissioner – Accounts, Dy.S.P., ತಹಸೀಲ್ದಾರ್ 'ಬಿ' ಗ್ರೂಪ್, ಈ ರೀತಿ ಒಂದೇ ಅರ್ಜಿಯಲ್ಲಿ 8 ರಿಂದ 10 ಹುದ್ದೆಗಳಿಗೆ ಅರ್ಜಿಯನ್ನು ಹಾಕುತ್ತಾರೆ. ಅದರಲ್ಲಿ ಅಭ್ಯರ್ಥಿಗಳು ಆದ್ಯತೆಯನ್ನು ಕೊಟ್ಟಿರುತ್ತಾರೆ. ನಾನು ಮೊದಲು Dy.S.P., ಆಗಬೇಕೆಂದು ಕೆಲವರು ಬರೆಯುತ್ತಾರೆ, ಕೆಲವರು Assistant Commissioner – Revenue ಎಂದು ಬರೆಯುತ್ತಾರೆ. ಆ ರೀತಿ

ಆದ್ಯತೆಯನ್ನು ಕೊಡುತ್ತಾ ಹೋಗುತ್ತಾರೆ. ಇದರ ಜೊತೆಗೆ ನಮಗೆ ಗೊತ್ತಿರುತ್ತದೆ Horizontal and vertical reservation ಅಡಿಯಲ್ಲಿ General Merit, II A, II B, III A, III B, SC/ST ಎಂದು ಇದೆ. ಅದರಲ್ಲಿ ಜರನಲ್ ಮೆರಿಟ್ ಬರುತ್ತದೆ, ಮಹಿಳಾ ಮೀಸಲಾತಿ ಬರುತ್ತದೆ, ಗ್ರಾಮೀಣ ಮೀಸಲಾತಿ ಬರುತ್ತದೆ, ಕನ್ನಡ ಬರುತ್ತದೆ, Ex–Servicemen ಬರುತ್ತದೆ. ಈ ರೀತಿ horizonatal ಇದೆ. ಈ ಎಲ್ಲದ್ದರ ಮಧ್ಯೆದಲ್ಲಿ ಅಭ್ಯರ್ಥಿಗಳನ್ನು ಅವರವರ ಅಂಕಗಳು ಮತ್ತು ಅವರು ಕೊಟ್ಟಂಥ ಸಂದರ್ಶನಕ್ಕನುಗುಣವಾಗಿ ಅವರನ್ನು ಆಯ್ಕೆ ಮಾಡಬೇಕಾಗುತ್ತದೆ. 25 ಅಂಕಗಳನ್ನು ಕೊಟ್ಟಾಗ ಬಹುಶಃ ಯಾರು ನಗರ ಪ್ರದೇಶದಲ್ಲಿ ಅವರ ಸಂಸಾರದಲ್ಲಿ ಒಳ್ಳೆಯ ವಾತಾವರಣವಿದ್ದು, ವಿದ್ಯಾವಂತರಿದ್ದು, ಚೆನ್ನಾಗಿ ಅಧ್ಯಯನ ಮಾಡಿ ಒಳ್ಳೆಯ ಅಂಕಗಳನ್ನು ತೆಗೆದಿರುತ್ತಾರೆ ಅಂಥವರಿಗೆ ಬಹಳ ಸುಲಭವಾಗುತ್ತದೆ. ನಾವು ಯೋಚನೆ ಮಾಡಬೇಕಾಗಿರುವುದು ಗುಡ್ಡಗಾಡು ಪ್ರದೇಶಗಳಿಂದ ಬರತಕ್ಕಂಥ ಜನರು, ಹಳ್ಳಿಯಿಂದ ಬರತಕ್ಕಂಥ ಜನರು, ಯಾರಿಗೆ ಆರ್ಥಿಕವಾಗಿ ಹೆಚ್ಚಿನ ಶಕ್ತಿ ಇರುವುದಿಲ್ಲ, ಬೇರೆಯವರಿಂದ ಮಾರ್ಗದರ್ಶನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಸ್ವಂತ ಪ್ರತಿಭೆಯ ಮೇಲೆ ಅವರು ಕೆ.ಪಿ.ಎಸ್.ಸಿ., ಯಲ್ಲಿ ಕ್ಲಾಸ್ 'ಎ', ಕ್ಲಾಸ್ 'ಬಿ' ಹುದ್ದೆಗಳಿಗೆ ಪ್ರಯತ್ನ ಮಾಡುತ್ತಾರೆ ಅಂಥವರಿಗೆ ಯಾವ ರೀತಿ ಸಹಾಯ ಮಾಡಬಹುದು ಎಂಬುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಆ ಕಾರಣಕ್ಕಾಗಿ ನನಗನಿಸುವುದೇನೆಂದರೆ, ಈಗೇನು 25 ಅಂಕಗಳನ್ನು ಸರ್ಕಾರ ನಿಗದಿಪಡಿಸಿದೆ ಅದರ ಬಗ್ಗೆ ಪುನಃ ಆಲೋಚನೆ ಮಾಡಿ ಸೂಕ್ತವಾದ ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತಿದ್ದೇನೆ. ಅದಲ್ಲದೆ ನನ್ನ ಕೆಲವು ಅನುಭವಗಳಾಗಿರುವ ವಿಷಯದ ಬಗ್ಗೆ ಸದನದಲ್ಲಿ ಹಂಚಿಕೊಳ್ಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಈಗಾಗಲೇ ಹೇಳಿದ ಹಾಗೆ ಇಲಾಖೆಗಳ ಸಂವಹನ ಬದಲಾವಣೆಯಾಗಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನವನ್ನು ಹರಿಸಿ ಅವರ ಮಧ್ಯದಲ್ಲಿ ಒಳ್ಳೆಯ ವಾತಾವರಣವನ್ನು ಏರ್ಪಡಿಸಿದರೆ ಖಡಿತವಾಗಿಯೂ ಲೋಕಸೇವಾ ಆಯೋಗದ ಉದ್ದೇಶ ಏನಿದೆ ಆ ಉದ್ದೇಶ ನೆರವೇರುತ್ತದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಎಸ್.ರುದ್ರೇಗೌಡರವರು ಲೋಕಸೇವಾ ಆಯೋಗದಲ್ಲಿ

ಸುಮಾರು 6 ವರ್ಷಗಳ ಕಾಲ ಕೆಲಸ ಮಾಡಿರತಕ್ಕಂಥ ಅನುಭವವಿದೆ. ಅವರು ಅಲ್ಲಿರುವಂತಹ ಸಂದರ್ಭದಲ್ಲಿ ಕೆಲಸ ಮಾಡಿರುವುದನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರ ಪ್ರಾಮಾಣಿಕತೆ, ಅವರಲ್ಲಿದ್ದ ಬದ್ಧತೆಯನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಉಲ್ಲೇಖ ಮಾಡಿರುವುದೇನೆಂದರೆ, ಹಿಂದೆ ವೆಹಿಕಲ್ ಇನ್ಸ್‌ಪೆಕ್ಟರ್‌ಗಳ ನೇಮಕಾತಿಯಾಗುವಂತಹ ಸಂದರ್ಭದಲ್ಲಿ ಆಗಿರುವಂತಹ ಲೋಪದಿಂದ ಈಗಾಗಲೇ ಅದು ನ್ಯಾಯಾಲಯದಲ್ಲಿದ್ದುಕೊಂಡು ಇವತ್ತು ಅವರು ಕೆಲಸ ಮಾಡುತ್ತಿದ್ದಾರೆ ಎನ್ನುವಂಥದ್ದನ್ನು ಹೇಳಿದ್ದಾರೆ.

**(ಮುಂದು)**

**(664) 28/03/2022 /4:00/ ಎಸ್‌ಪಿಆರ್/ಎಂಡಿ**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಮುಂದು):-**

ಅದು ಮೊದಲನೇಯ ಹಂತದ್ದಾಗಿದ್ದು. ಅದರ ಮುಂದುವರೆದ ಭಾಗವೇ ಎರಡನೇಯ ಹಂತ. ಎರಡನೇ ಹಂತದ ವಾಹನ ನಿರೀಕ್ಷಕರ ಹುದ್ದೆಯ ನೇಮಕಾತಿಯು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕವೇ ನಡೆಯಿತು. ಈಗಷ್ಟೇ ಸದಸ್ಯರು ಪ್ರಸ್ತಾಪಿಸಿದಂತೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾನೂನುಗಳು ಪ್ರತ್ಯೇಕವಾಗಿವೆ ಹಾಗೂ ಇವುಗಳಲ್ಲಿ ಬಹಳಷ್ಟು ವ್ಯತ್ಯಾಸಗಳೂ ಸಹ ಇವೆ. ಇತ್ತೀಚೆಗೆ ನಮ್ಮ ರಾಜ್ಯ ಸರ್ಕಾರದಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ವಾಹನ ನಿರೀಕ್ಷರದ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಏನಾಗಿದೆ ಎಂದರೆ, ರಾಜ್ಯ ಸರ್ಕಾರದ ಕಾನೂನಿನಡಿ ಮೆರಿಟ್‌ನ್ನು ಒಂದು ಕಡೆಗೆ ಹಾಗೂ ಮತ್ತೊಂದೆಡೆ ಅಭ್ಯರ್ಥಿಗಳು ಯಾವುದಾದರೂ ಗ್ಯಾರೇಜ್‌ನಲ್ಲಿ ಕನಿಷ್ಠ ಪಕ್ಷ ಒಂದು ವರ್ಷ ಕೆಲಸ ಮಾಡಿರಬೇಕು ಎನ್ನುವ ನಿಬಂಧನೆಗಳನ್ನು ಪರಿಗಣಿಸಿವೆ. ಈ ರೀತಿಯ ಒಂದು ನಿಬಂಧನೆಯು ರಾಜ್ಯ ಸರ್ಕಾರದ ಕಾನೂನಿನಲ್ಲಿದೆ. ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಈ ರೀತಿಯ ಕಾನೂನಿಗೆ ತಿದ್ದುಪಡಿ ಮಾಡಲಾಗಿದೆ. ಇದನ್ನು ಕೈ ಬಿಟ್ಟು ಕೇಂದ್ರ ಸರ್ಕಾರದಲ್ಲಿರುವ ಕಾನೂನನ್ನು ನಾವು ಇಲ್ಲಿಯೂ ಸಹ ಅಳವಡಿಸಿಕೊಂಡಿದ್ದೇವೆ. ಆಗ ಆಯೋಗದಲ್ಲಿ ಗೊಂದಲಗಳಾದವು. ೯೦ ಅಂಕಗಳನ್ನು ಪಡೆದ ಅಭ್ಯರ್ಥಿಗೆ ಮೆರಿಟ್ ಆಧಾರದ ಮೇಲೆ ಉದ್ಯೋಗ ದೊರೆಯಬೇಕು. ಆದರೆ

ಅಲ್ಲಿ ಕೇವಲ 60 ಅಂಕಗಳನ್ನು ಪಡೆದ ಅಭ್ಯರ್ಥಿಗೆ ಉದ್ಯೋಗ ದೊರೆಯುವ ವ್ಯವಸ್ಥೆಗಳಾದವು. ಇದಕ್ಕೆ ಕಾರಣವೇನು ಎಂದು ನಾವು ನೋಡಲು ಹೋದಾಗ, ಯಾವ ಅಭ್ಯರ್ಥಿಯು ಗ್ಯಾರೇಜ್‌ನಲ್ಲಿ ಕೆಲಸ ಮಾಡಿ, ತನಗೆ ಒಂದು ವರ್ಷದ ಅನುಭವವಿದೆ ಎನ್ನುವ ಪ್ರಮಾಣ ಪತ್ರವನ್ನು ಒದಗಿಸಿದ್ದನೋ, ಅವನಿಗೆ ಆದ್ಯತೆ ನೀಡಲಾಗಿತ್ತು. ಅಂದರೆ, ಆಗಿನ ಸಂದರ್ಭದಲ್ಲಿ ಅನುಭವ ಪ್ರಮಾಣ ಪತ್ರವನ್ನು ಪರಿಗಣಿಸಲಾಗಿತ್ತು ಹಾಗೂ ಆದ್ಯತೆಯನ್ನು ನೀಡಲಾಗಿತ್ತು. ಪ್ರಶ್ನಿತ ವಿಷಯಕ್ಕೆ ಸಂಬಂಧಪಟ್ಟಂತೆ, ಬಿ.ಇ.(ಮೆಕ್ಯಾನಿಕಲ್) ಕೋರ್ಸ್‌ನ್ನು ವ್ಯಾಸಂಗ ಮಾಡಿರುವ ವಿದ್ಯಾರ್ಥಿ ಯಾವುದಾದರೂ ಒಂದು "ಪುಟುಗೋಸಿ" ಗ್ಯಾರೇಜ್‌ಗೆ ಹೋಗಿ ಕೆಲಸ ಮಾಡಲು ಸಾಧ್ಯವೇ ಎನ್ನುವ ಅಂಶವನ್ನು ನಾವುಗಳೆಲ್ಲರೂ ಆಲೋಚನೆ ಮಾಡಬೇಕಾಗಿದೆ. ಆಗ ತಮಗೆ ಬೇಕಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದರು. ಆಗ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳೂ ಸಹ ತಮ್ಮ ಸೇವಾ ಅನುಭವದ ಪ್ರಮಾಣ ಪತ್ರಗಳನ್ನು ಲಗತ್ತಿಸಿದ್ದರು. ಎಷ್ಟು ಜನ ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದರು, ಆ ಪೈಕಿ ಎಷ್ಟು ಅಭ್ಯರ್ಥಿಗಳು ಪಾಸಾದರು, ಅಷ್ಟೂ ಜನ ಅನುಭವ ಪ್ರಮಾಣ ಪತ್ರಗಳನ್ನು ಹೊಂದಿದ್ದರು. ಆದರೆ ಅಲ್ಲಿ ಏನಾಯಿತು ಎಂದರೆ, ತಮಗೆ ಬೇಕಾದ ಅಭ್ಯರ್ಥಿಗಳಿಗೆ ಉದ್ಯೋಗವನ್ನು ನೀಡಬೇಕೆಂಬ ಇಚ್ಛೆಯನ್ನಿಟ್ಟುಕೊಂಡು, ಕೆಲವೊಂದು ಗ್ಯಾರೇಜ್‌ಗಳಿಂದ ತಂದ ಪ್ರಮಾಣ ಪತ್ರಗಳನ್ನು ಮಾತ್ರವೇ ಮಾನ್ಯ ಮಾಡಿ, ಇನ್ನುಳಿದ ಪ್ರಮಾಣ ಪತ್ರಗಳನ್ನು ಅಮಾನ್ಯಗೊಳಿಸಿದರು. ಹೀಗೆ ಮಾಡಿ, 90 ರಷ್ಟು ಅಂಕಗಳನ್ನು ಅಭ್ಯರ್ಥಿಗಳನ್ನು ಆಯ್ಕೆ ಮಾಡದೇ, ಕೇವಲ 60 ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಮಾತ್ರವೇ ಆಯ್ಕೆ ಮಾಡುತ್ತಾರೆ. ನಂತರದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಬಿಡುಗಡೆಗೊಳಿಸುತ್ತಾರೆ. ಇದನ್ನು ನೋಡಿದ 90 ಅಂಕಗಳನ್ನು ಪಡೆದ ಅಭ್ಯರ್ಥಿಗೆ ತನ್ನ ಹೆಸರು ಈ ತಾತ್ಕಾಲಿಕ ಪಟ್ಟಿಯಲ್ಲಿ ಏಕೆ ಇಲ್ಲ ಎನ್ನುವುದು ಗೊತ್ತಾಗುತ್ತದೆ ಹಾಗೂ ತಾನು ಅರ್ಜಿಯೊಂದಿಗೆ ಸಲ್ಲಿಸಿದ ಗ್ಯಾರೇಜ್‌ನಲ್ಲಿ ಕೆಲಸ ಮಾಡಿದ ಅನುಭವ ಪ್ರಮಾಣ ಪತ್ರ ಹಾಗೂ ಸದರಿ ಗ್ಯಾರೇಜ್ ಸರಿಯಿಲ್ಲ ಎನ್ನುವ ಕಾರಣಗಳು ತಿಳಿಯುತ್ತವೆ. ಆಯ್ಕೆಗೊಂಡ ಅಭ್ಯರ್ಥಿಯು ಸಲ್ಲಿಸಿದ ಅನುಭವ ಪ್ರಮಾಣ ಪತ್ರ ಹಾಗೂ ಸದರಿ ಗ್ಯಾರೇಜ್ ಸರಿಯಿದೆ; ಹೀಗಾಗಿ ಈತನು ಆಯ್ಕೆಗೊಂಡಿದ್ದಾನೆ ಎನ್ನುವ ಅಂಶಗಳು ತಿಳಿಯುತ್ತವೆ. ನಮ್ಮ ರಾಜ್ಯದಲ್ಲಿ ಬಿ.ಇ.

(ಮೆಕ್ಯಾನಿಕಲ್) ಓದಿದ ವಿದ್ಯಾರ್ಥಿಗಳು ಯಾರೂ ಸಹ ಗ್ಯಾರೇಜ್‌ಗಳಿಗೆ ಹೋಗಿ ಕೆಲಸ ಮಾಡುವುದಿಲ್ಲ. ಹಿಂದೆ ಅನುಭವವುಳ್ಳವರು ಅವರ ಅಧಿಕಾರಾವಧಿಯಲ್ಲಿ ಆದ ನೇಮಕಾತಿಯ ಸಂದರ್ಭದಲ್ಲಿ ಹಾಗೂ ಅವರ ಕಾಲಾನಂತರದಲ್ಲಿ ಆದ ನೇಮಕಾತಿಯ ಸಂದರ್ಭದಲ್ಲಿ ಲೋಪದೋಷಗಳು ಯಾವ ರೀತಿಯಾಗಿ ನಡೆಯುತ್ತವೆ ಎನ್ನುವ ವಿಚಾರಗಳು ಕರ್ನಾಟಕ ಲೋಕ ಸೇವಾ ಆಯೋಗಕ್ಕೂ, ಅಲ್ಲಿ ಕರ್ತವ್ಯ ನಿರ್ವಹಿಸಿದವರಿಗೆ ಹಾಗೂ ಈ ಸದನಕ್ಕೂ ಗೊತ್ತಾಗಲಿ ಎನ್ನುವ ಕಾರಣದಿಂದ ನಾನು ಈ ಅಂಶವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದೇನೆ ಎಂದು ನಾನು ಹೇಳಬಯಸುತ್ತೇನೆ.

**ಶ್ರೀ ಎಸ್.ರುದ್ರೇಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರು ಪ್ರಸ್ತಾಪಿಸಿರುವುದು ಸರಿ ಇರಬಹುದು ಏಕೆಂದರೆ ಆ ಸಂದರ್ಭದಲ್ಲಿ ನಾನು ಅಲ್ಲಿರಲಿಲ್ಲ. ಆದರೆ, ನನಗೆ ತಿಳಿದ ಮಟ್ಟಿಗೆ ಆ ಬ್ಯಾಚಿನಲ್ಲಿ ಆಯ್ಕೆಗೊಂಡವರು ಸಂಪೂರ್ಣವಾಗಿ ಮೆರಿಟ್ ಮೇಲೆ ಆಯ್ಕೆಗೊಂಡಿದ್ದರು ಹಾಗೂ ಇದಕ್ಕೆ ಯಾವುದೇ ಸಂದರ್ಶನವಿರಲಿಲ್ಲ ಎನ್ನುವುದನ್ನು ನಾನು ಕೇಳಲ್ಪಟ್ಟಿದ್ದೇನೆ. ಆ ಸಂದರ್ಭದಲ್ಲಿ ಸಂದರ್ಶನ ಪ್ರಕ್ರಿಯೆ ಇತ್ತೋ ಅಥವಾ ಇಲ್ಲವೋ ಎನ್ನುವುದು ನನಗೆ ತಿಳಿದಿಲ್ಲ. ಈ ಕುರಿತಾದ ಮಾಹಿತಿ ಸಂಗ್ರಹ ಮಾಡಬೇಕು. ಆದರೆ, ಸದರಿ ತಾತ್ಕಾಲಿಕ ಪಟ್ಟಿಯನ್ನು ಆಯೋಗದವರು ಇನ್ನೂ ಸಹ ಬಿಡುಗಡೆಗೊಳಿಸಿಲ್ಲ. ಸಂದರ್ಶನವಿಲ್ಲದೇ ಕೇವಲ ಅಂಕಗಳ ಆಧಾರದ ಮೇಲೆ ಆಯ್ಕೆ ಆಗಿದೆ ಎಂದು ನಾನು ಭಾವಿಸುತ್ತೇನೆ. ಇವರ ಪ್ರಕಾರ, ಆಯೋಗದ ಹಿಂದಿನ ನೇಮಕಾತಿ ಅಧಿಸೂಚನೆಯು ಸರಿಯಾಗಿತ್ತು. ಏಕೆಂದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗ್ಯಾರೇಜ್‌ನಲ್ಲಿ ತರಬೇತಿ ನೀಡಲಾಗುತ್ತದೆ ಎಂದು ಈ ಹಿಂದೆ ಹೇಳಲಾಗಿತ್ತು. ಹಾಗೂ ಈ ಬಗ್ಗೆ ಪ್ರಮಾಣ ಪತ್ರವನ್ನೂ ಸಹ ನೀಡಲಾಗಿತ್ತು. ಆದರೆ ಇದನ್ನು ನ್ಯಾಯಾಲಯವು ಮಾನ್ಯ ಮಾಡಲಿಲ್ಲ. ಇದು ಬೇರೆಯ ವಿಚಾರವಾಗಿದೆ. ಈ ಹಿಂದಿನ ಸಂದರ್ಭದಲ್ಲಿ, ಐದು ವರ್ಷಗಳಲ್ಲಿ ನಾವು ಸುಮಾರು 22,000 ನೇಮಕಾತಿಯಾಗಿತ್ತು. ನಿಕಟಪೂರ್ವ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಸರ್ಕಾರವು ಹೊಸದಾಗಿ 150 ಕಾಲೇಜುಗಳನ್ನು ಮಂಜೂರು ಮಾಡಿತ್ತು. ಆ ಪೈಕಿ 6 ಇಂಜನಿಯರಿಂಗ್ ಹಾಗೂ 5 ವೈದ್ಯಕೀಯ

ಕಾಲೇಜುಗಳಿದ್ದವು. ನೀರಾವರಿ ಇಲಾಖೆಗೆ ಮೂರು ಬ್ಯಾಚ್‌ಗಳಲ್ಲಿ ನೇಮಕಾತಿ ಮಾಡಲಾಗಿತ್ತು. ಒಂದು ಬ್ಯಾಚ್‌ನಲ್ಲಿ 1800, ಮತ್ತೊಂದು ಬ್ಯಾಚ್‌ನಲ್ಲಿ 500 ಅಭ್ಯರ್ಥಿಗಳ ನೇಮಕಾತಿ ಮಾಡಲಾಗಿತ್ತು. ಈ ರೀತಿಯಾಗಿ 3 ಬ್ಯಾಚ್‌ಗಳಲ್ಲಿ ನೇಮಕಾತಿ ಮಾಡಲಾಗಿತ್ತು. ಅದೇ ಸಂದರ್ಭದಲ್ಲಿ ಸುಮಾರು 2,000 – 2,500 ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರ ನೇಮಕಾತಿಯೂ ಸಹ ಆಯಿತು. ಆ ಸಂದರ್ಭದಲ್ಲಿ ನನಗೆ ಆದ ಅನುಭವವನ್ನು ನಾನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಆ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ಸ್ವಲ್ಪ proactive ಆಗಿ ಕೆಲಸ ಮಾಡಿ, ಲೋಕ ಸೇವಾ ಆಯೋಗದ ಅಧಿಸೂಚನೆಯಲ್ಲಿ ಏನೇನು ಅಂಶಗಳಿರಬೇಕು ಹಾಗೂ ಇರಬಾರದು, ಆಯೋಗದ ನಿಬಂಧನೆಗಳು ಏನು ಎನ್ನುವ ಅಂಶಗಳನ್ನು ಸರಿಯಾಗಿ ತಯಾರಿಸಿದ್ದಲ್ಲಿ ಪ್ರಾಯಶಃ ಆಯೋಗದ ಬಲ ವರ್ಧನೆಯಾಗುತ್ತದೆ; ಹಾಗೂ ಆಯೋಗವು ನಮ್ಮ ಸಂವಿಧಾನದ ಮೂಲಭೂತ ಆಶಯದಂತೆ ಕೆಲಸ ನಿರ್ವಹಿಸಬಹುದು.

ನಾನು ಈಗಾಗಲೇ ಪ್ರಸ್ತಾಪಿಸಿದಂತೆ, ಮುಖ್ಯವಾಗಿ ಪಡೆದುಕೊಂಡ ಅಂಕಗಳನ್ನು ಕಡಿಮೆ ಮಾಡುತ್ತಿರುವ ಉದ್ದೇಶವೇನೆಂದರೆ, ಪ್ರಾಯಶಃ ಹೆಚ್ಚು ಮಾನ್ಯತೆಯನ್ನು ಮೆರಿಟ್ ಅಭ್ಯರ್ಥಿಗಳಿಗೆ ನೀಡುವುದು ಆಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಈ ವಿಚಾರದಲ್ಲಿ ಸರ್ಕಾರವು ಏಕಾಏಕಿಯಾಗಿ ಅಂಕಗಳನ್ನು ಕಡಿಮೆ ಮಾಡಿದೆ ಎನ್ನುವ ಅಂಶದ ಬಗ್ಗೆ ಇನ್ನು ಉತ್ತರಿಸಬೇಕಾಗಿದೆ. ನಾನು ಈಗಾಗಲೇ ಪ್ರಸ್ತಾಪಿಸಿದಂತೆ, ಸಾಮಾಜಿಕ ನ್ಯಾಯವನ್ನೂ ಸಹ ಸರ್ಕಾರವು ಗಮನಿಸಬೇಕು. ಈ ಮಧ್ಯದಲ್ಲಿ ನಾನು ಗಮನಿಸಿರುವ ಎರಡು ಮುಖ್ಯ ಅಂಶಗಳನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಕರ್ನಾಟಕ ಲೋಕ ಸೇವಾ ಆಯೋಗ ಎಂದರೆ ಅಲ್ಲಿ ಮಧ್ಯವರ್ತಿಗಳ ಹಾವಳಿ. ನಮಗೆ ಗೊತ್ತಿಲ್ಲದಂತೆ ಅಲ್ಲಿ ಬಹಳಷ್ಟು ವಿಷಯಗಳು ನಡೆದಿರುತ್ತವೆ. ನನ್ನ ಹೆಸರನ್ನು ಹೇಳಿಯೇ ಹಲವಾರು ರೋಚಕ ವಿಷಯಗಳನ್ನು ಮಾಡಿದ್ದಾರೆ. ಇವುಗಳನ್ನು ನಾನು ನಂತರದಲ್ಲಿ handle ಮಾಡಿದ್ದೇನೆ. ಇದು ಬೇರೆಯ ವಿಷಯವಾಗಿದೆ. ಈ ರೀತಿಯ ಹೆಸರು ದುರ್ಬಳಕೆ ಪ್ರಕ್ರಿಯೆಗೆ ಕಡಿವಾಣವನ್ನು ಹೇಗೆ ಹಾಕಬೇಕು? ಪ್ರಸ್ತುತ ಆಯೋಗಕ್ಕೆ ಕಾವಲುಗಾರರನ್ನು ನೇಮಿಸಲಾಗಿದೆ. ಆದರೂ ಸಹ ಇತ್ತೀಚೆಗೆ ನಡೆದ ಲಿಖಿತ ಪರೀಕ್ಷೆಯಲ್ಲಿ, ಅಲ್ಲಿನ ಕೆಲವು ಅಧಿಕಾರಿಗಳು ಶಾಮೀಲಾಗಿ ಪ್ರಶ್ನೆ ಪತ್ರಿಕೆಯನ್ನು ಸೋರಿಕೆ

ಮಾಡಿದ್ದರು. ಇಲ್ಲಿ ಮುಖ್ಯವಾಗಿ ಪರಿಗಣಿಸಬೇಕಾಗಿರುವ ಅಂಶವೇನೆಂದರೆ, ಪ್ರಾಮಾಣಿಕ ವ್ಯಕ್ತಿಗಳು ಆಯೋಗದಲ್ಲಿ ಕರ್ತವ್ಯ ನಿರ್ವಹಿಸುವಂತೆ ಸರ್ಕಾರವು ಗಮನಿಸಬೇಕು. ಅಲ್ಲಿನ ಬಹುದೊಡ್ಡ ದೌರ್ಬಲ್ಯವೇನೆಂದರೆ, ಆಯೋಗಕ್ಕೆ ಪ್ರತ್ಯೇಕವಾದ ನೇಮಕಾತಿ ಆಗುತ್ತದೆ. ಯಾವುದೇ ವ್ಯಕ್ತಿ ಒಮ್ಮೆ ಅಲ್ಲಿ ಕರ್ತವ್ಯಕ್ಕೆ ಸೇರಿಕೊಂಡರೇ, ಅವರು ನಿವೃತ್ತರಾಗುವವರೆಗೆ ಅಲ್ಲಿಯೇ ಇರುತ್ತಾರೆ. ಹೀಗಾಗಿ ಅಲ್ಲಿನ ಎಲ್ಲಾ ವಿಷಯಗಳು ಅವರಿಗೆ ಚೆನ್ನಾಗಿ ತಿಳಿದಿರುತ್ತವೆ ಹಾಗೂ ಆಯೋಗಕ್ಕೆ ಬಂದ ಸಾರ್ವಜನಿಕರಿಗೆಲ್ಲರಿಗೂ "ಬಹುಶಃ ಈ ವ್ಯಕ್ತಿಯನ್ನು ಹಿಡಿದುಕೊಂಡರೆ, ನಮ್ಮ ಕೆಲಸವು ಆಗಬಹುದು" ಎನ್ನುವ ಮನಃಸ್ಥಿತಿಯನ್ನು ಅವರು ಹೊಂದಿರುತ್ತಾರೆ. ಇದೆಲ್ಲಕ್ಕಿಂತಲೂ ಹೆಚ್ಚಿನ ದುರ್ದೈವವೆಂದರೆ, "ನಾನು ಲೋಕ ಸೇವಾ ಆಯೋಗಕ್ಕೆ ಬಂದಿದ್ದೇನೆ; ಇಲ್ಲಿ ದುಡ್ಡು ಕೊಟ್ಟರೆ ಕೆಲಸವು ಆಗುತ್ತದೆ" ಎನ್ನುವ ಮಾನಸಿಕತೆಯು ಅಲ್ಲಿಗೆ ಬರುವ ಅಭ್ಯರ್ಥಿಗಳು ಹೊಂದಿರುತ್ತಾರೆ. ಬೆಂಗಳೂರು ನಗರದ ಆನಂದರಾವ್ ವೃತ್ತ ಹಾಗೂ ಅಲ್ಲಿನ ಸುತ್ತ ಮುತ್ತಲಿನ ಪ್ರದೇಶದಲ್ಲಿ ಕೆಲವು ಹೋಟೇಲ್‌ಗಳಿವೆ. ಆ ಹೋಟೇಲ್‌ಗಳಲ್ಲಿ ಯಾವಾಗಲೂ ಸಹ ಒಂದು ಕ್ಯಾಂಪ್‌ಗಳಿರುತ್ತವೆ. ಗೆಝೆಟೆಟ್ ಪ್ರೋಬೇಷನರಿ ಹುದ್ದೆಗೆ ಸಂದರ್ಶನ ನಡೆಯುತ್ತಿದೆ ಎಂದರೆ, ನೀವುಗಳು ಆ ಹೋಟೇಲ್‌ಗಳಿಗೆ ಹೋಗಿ ಈ ಸಂಗತಿಯನ್ನು ನೋಡಬಹುದು. ಇದರಿಂದಾಗಿ ಸಾಕಷ್ಟು ಅಭ್ಯರ್ಥಿಗಳು ಅನ್ಯಾಯಕ್ಕೂ ಸಹ ಒಳಗಾಗುತ್ತಿದ್ದಾರೆ. ಇಂತಹ ಎಲ್ಲಾ ಸಂಗತಿಗಳನ್ನು ಸರ್ಕಾರವು ಗಮನದಲ್ಲಿಟ್ಟುಕೊಳ್ಳಬೇಕು. ಕೇವಲ ಅಂಕಗಳನಷ್ಟೇ ಕಡಿಮೆ ಮಾಡುವುದು ಅಲ್ಲ; ಈ ವಿಷಯಗಳ ಬಗ್ಗೆ ಸರ್ಕಾರವು ಸಮಗ್ರವಾದ ಚಿಂತನೆಯನ್ನು ಮಾಡಬೇಕು.

ಇತ್ತೀಚೆಗೆ, ಬೇರೆ ಪ್ರಶ್ನೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಒಬ್ಬ 'Chief Controller of Examination' ಎಂಬುವವರನ್ನು ನೇಮಿಸುವ ಬಗ್ಗೆ ಆಲೋಚಿಸುತ್ತಿದ್ದೇವೆ ಎಂಬ ಮಾತನ್ನು ಹೇಳಿದರು. ಈ ರೀತಿಯಾದ ಬಹಳಷ್ಟು ಆಲೋಚನೆಗಳು ಸರ್ಕಾರದಲ್ಲಿರಬಹುದು. ಇದರ ಜೊತೆಗೆ, ವೃಂದ – ಬಿ ಇದನ್ನು ವೃಂದ–ಸಿ ಮತ್ತು ವೃಂದ–ಡಿ ಗೆ ಸೇರಿಸಬೇಕು ಎನ್ನುವ ಪ್ರಸ್ತಾವನೆಯ ಬಗ್ಗೆಯೂ ತಿಳಿಸಿದರು. ತಹಸೀಲ್ದಾರ್‌ರವರುಗಳು ವೃಂದ–ಬಿ ಇದಕ್ಕೊಳಪಡುತ್ತಾರೆ. ಇವರುಗಳನ್ನು ನಾವು 'Taluk Magistrate' ಎಂಬುದಾಗಿಯೂ ಸಹ

ಕರೆಯುತ್ತೇವೆ. ಒಂದು ವೇಳೆ, ಇವರುಗಳನ್ನು ನಾವು ಅಪಿಕ ವರ್ಗಕ್ಕೆ ಸೇರಿಸಿದರೆ, ಸರಿಹೋಗುತ್ತದೆಯೋ ಅಥವಾ ಇವರುಗಳನ್ನು ಪ್ರಶ್ನಿತ ಪ್ರಸ್ತಾವನೆಯಿಂದ ಕೈಬಿಡಲಾಗುತ್ತದೆಯೇ ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಈ ರೀತಿಯ ಗೊಂದಲಗಳು ಕರಡು ಅಧಿಸೂಚನೆಯಲ್ಲಿವೆ. ದಯಮಾಡಿ ಸರ್ಕಾರವು ಇಂತಹ ಸಂಗತಿಗಳ ಬಗ್ಗೆ ಸಾಕಷ್ಟು ಚಿಂತನೆಯನ್ನು ಮಾಡಬೇಕು. ನನಗೆ ಅನ್ನಿಸಿದ ಮಟ್ಟಿಗೆ ಸಾರ್ವಜನಿಕರ ದೃಷ್ಟಿಯಲ್ಲಿ ಮಾಧ್ಯಮಗಳ ಸಹಕಾರವನ್ನು ಸೇರಿಸಿ, ಇವತ್ತಿನ ದಿವಸ ಕರ್ನಾಟಕ ಲೋಕ ಸೇವಾ ಆಯೋಗದ ನೈತಿಕತೆಯು ಬಹಳಷ್ಟು ಕೆಳಗೆ ಇಳಿದಿದೆ. ಹೀಗಾಗಿ ಇದನ್ನು ಮೇಲಕ್ಕೆತ್ತುವ ಕೆಲಸವನ್ನು ನಾವುಗಳೆಲ್ಲರೂ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವಕಾಶ ನೀಡಿದ್ದಕ್ಕಾಗಿ ನಾನು ಪೀಠಕ್ಕೆ ವಂದಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಭಾರತದ ಸಂವಿಧಾನ ಅಧ್ಯಾಯ 2 ರಡಿ ಅನುಚ್ಛೇದ 135 ಕೆಳಗೆ ಕೇಂದ್ರ ಸರ್ಕಾರಕ್ಕೆ ಸೇವೆ ಸಲ್ಲಿಸುವ ಅಧಿಕಾರಿಗಳ ಆಯ್ಕೆ, ಅದೇ ರೀತಿಯಾಗಿ ರಾಜ್ಯ ಸರ್ಕಾರಕ್ಕೆ ಸೇವೆ ಸಲ್ಲಿಸುವ ಅಧಿಕಾರಿಗಳ ಆಯ್ಕೆಗಳಿಗೆ ಸಂಬಂಧಪಟ್ಟಂತೆ ಅಂದರೆ, ಕೇಂದ್ರದಲ್ಲಿ ಕೇಂದ್ರ ಲೋಕ ಸೇವಾ ಆಯೋಗ ಮತ್ತು ರಾಜ್ಯಕ್ಕೆ ಸಂಬಂಧಪಟ್ಟಂತೆ ರಾಜ್ಯ ಲೋಕ ಸೇವಾ ಆಯೋಗ ಇವುಗಳನ್ನು ನೇಮಕ ಮಾಡುವುದಕ್ಕೆ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಇದೇ ರೀತಿಯಾಗಿ ರಾಜ್ಯ ಸರ್ಕಾರವು ನಮ್ಮ ರಾಜ್ಯದಲ್ಲಿ ಕರ್ನಾಟಕ ಲೋಕ ಸೇವಾ ಆಯೋಗವನ್ನು ರಚಿಸಿದೆ. ಭಾರತದ ಸಂವಿಧಾನದ ಅನುಚ್ಛೇದ 320 ರಡಿ ಲೋಕ ಸೇವಾ ಆಯೋಗಗಳ ಪ್ರಕಾರಗಳು ಅಂದರೆ, ಲೋಕ ಸೇವಾ ಆಯೋಗದ ಕಾರ್ಯ ವಿಧಾನಗಳ ಬಗ್ಗೆ ವಿವರವಾದ ವ್ಯಾಖ್ಯಾನವಿದೆ. ಪ್ರಪ್ರಥಮವಾಗಿ ರಾಜ್ಯದ ಸೇವೆಗಳಲ್ಲಿ ಸೇವೆ ಸಲ್ಲಿಸುವ ಅಧಿಕಾರಿಗಳ ಅಥವಾ ನೌಕರರ ನೇಮಕಾತಿ ಸಂಬಂಧ ಪರೀಕ್ಷೆ ನಡೆಸುವುದು ಆಯಾ ರಾಜ್ಯ ಲೋಕ ಸೇವಾ ಆಯೋಗಗಳ ಆದ್ಯ ಕರ್ತವ್ಯವಾಗಿದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(665/28-3-2022/4-10/ಬಿಕೆಪಿ-ಎಂ.ಡಿ.**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ಮುಂದು):-**

ಅದೇ ರೀತಿ Article 187(2), Article 229(2) and Article 330 of the Constitution ಅಡಿಯಲ್ಲಿ ಪ್ರತಿಯೊಂದು ರಾಜ್ಯ ಸರ್ಕಾರ ಕೂಡ ರಾಜ್ಯದಲ್ಲಿ ಸೇವೆ ಮಾಡುವಂತಹ ಯಾವ ನೌಕರ ವರ್ಗ ಇದೆ, ಅವರ ಸೇವಾ ಭದ್ರತೆ ಬಗ್ಗೆ, ಷರತ್ತಿನ ಬಗ್ಗೆ ಮತ್ತು ನೇಮಕಾತಿ ಬಗ್ಗೆ ಹಾಗೂ ಅವರ ಇತರ ಸೇವಾ ಸೌಕರ್ಯಗಳ ಬಗ್ಗೆ ಕೂಡ ಕಾಯಿದೆ ಮತ್ತು ನಿಯಮಾವಳಿಗಳನ್ನು ರೂಪಿಸಬೇಕೆಂದು ಒಂದು ಉಲ್ಲೇಖ ಇದೆ. ಇದರಂತೆ ಕೂಡ ನಮ್ಮ ಕರ್ನಾಟಕ ರಾಜ್ಯದಲ್ಲಿ *Karnataka State Civil Services Act, 1978* ಎಂದು ಹೇಳಿ ಕಾಯಿದೆಯನ್ನು ಕೂಡ ರೂಪಿಸಿದೆ. ಇದು ಯಾರಿಗೆಲ್ಲಾ ಅನ್ವಯವಾಗುತ್ತದೆ ಎಂದು ಹೇಳಿದರೆ, ಈ ಕಾಯಿದೆ ರಾಜ್ಯ ಸರ್ಕಾರದಲ್ಲಿ ಇರತಕ್ಕಂತಹ ಇಲಾಖೆಗಳು, ಪ್ರಾಧಿಕಾರಗಳು, ಇದರ ಅಥಾರಿಟಿಗೆ ಅನ್ವಯಿಸುತ್ತದೆ. ಇದಲ್ಲದೆ, ರಾಜ್ಯ ಸರ್ಕಾರದ ಸೇವೆಯಲ್ಲಿರುವ ನೌಕರರು, ಕರ್ನಾಟಕ ವಿಧಾನಮಂಡಲದಲ್ಲಿ ಸೇವೆ ಮಾಡುವಂತಹ ನೌಕರರು ಮತ್ತು ಅಧಿಕಾರಿಗಳು, ಅದೇ ರೀತಿಯಲ್ಲಿ ಕರ್ನಾಟಕ ಹೈಕೋರ್ಟ್‌ನಲ್ಲಿ ಕೆಲಸ ಮಾಡತಕ್ಕಂತಹ ನೌಕರರು ಅಂದರೆ, non-judicial posts ಗಳಲ್ಲಿ ಕೆಲಸ ಮಾಡುವಂತಹವರಿಗೆ *Karnataka State Civil Services Act* ಅನ್ವಯವಾಗುತ್ತದೆ. ಈ ಕಾಯಿದೆಯ ಸೆಕ್ಷನ್-3 ರಲ್ಲಿ ಕೂಡ ಯಾವ್ಯಾವ ರೀತಿಯ ಹುದ್ದೆಗಳು ಇರಬೇಕು, ಯಾವ್ಯಾವ ವಿಭಾಗದಲ್ಲಿ ಇರಬೇಕು ಎನ್ನುವಂತಹದ್ದನ್ನು ಉಲ್ಲೇಖ ಮಾಡಿ, ತುಂಬಾ ಸರಳವಾಗಿ ಹೇಳಿದೆ. ಅದರಲ್ಲಿ ಈ ಕರ್ನಾಟಕ ಲೋಕಾಸೇವಾ ಆಯೋಗ ಇರಬಹುದು, Union Public Service Commission ಇರಬಹುದು ಅವರುಗಳ Service Commission ಗಳ autonomy ಎಷ್ಟಿದೆ ಎಂದು ಹೇಳಿ ಇದನ್ನು 3(2)(ಬಿ)ನಲ್ಲಿ ಓದಿದರೆ ಅರ್ಥವಾಗುತ್ತದೆ. ಎಷ್ಟರಮಟ್ಟಿಗೆ ತಾವು Public Service Commission ಗಳಿಗೆ ಮಹತ್ವ ಕೊಡಬೇಕು, ಅದು ಎಷ್ಟರ ಮಟ್ಟಿಗೆ ಎತ್ತರದಲ್ಲಿದೆ ಎನ್ನುವುದು ಅರ್ಥವಾಗುತ್ತದೆ. Section 3(2)(b) reads thus;

> *"where the proposed rules relate to the methods of recruitment to civil services or civil posts in respect of which the Karnataka Public Service Commission has to be consulted under clause (3) of Article 320 of the Constitution of India and in the case of officers and servants of the High Court under the proviso to clause (I) of Article 229 of the Constitution of India, a copy of the draft rules as published under clause (a) shall be forwarded to the Secretary of the Karnataka Public Service Commission for communicating the views of the Commission on the proposed rules within the period specified under the said clause;"*

ಯಾರಾದರೂ ಕೂಡ *Karnataka State Civil Services Act* ಗೆ ಬದಲಾವಣೆ ತರಬೇಕೆಂದು ಏನಾದರೂ ಇದ್ದರೆ, ರಾಜ್ಯ ಸರ್ಕಾರವಾಗಲಿ, ಮತ್ತೊಂದು ಆಗಲಿ ಅವರೆಲ್ಲರೂ ಕೂಡ Public Service Commission ಅನ್ನು consult ಮಾಡಬೇಕಾಗುತ್ತದೆ ಎನ್ನುವುದು ಇದರಲ್ಲಿ ಅಡಕವಾಗಿದೆ. ಅದೇ ರೀತಿಯಲ್ಲಿ section 3(2)(c) reads thus;

> *"The State Government or the Chief Justice of the High Court or the Special Board shall consider the views of the Karnataka Public Service Commission and any objection or suggestion from any person likely to be affected by the said rules received before the expiry of the period specified under clause (a) and make the rules with such modifications as it or he may deem fit;"*

Special Board ಅಂದರೆ, ಕರ್ನಾಟಕ ವಿಧಾನ ಮಂಡಲದ್ದು. ಅಂದರೆ ಯಾವುದೇ ರೂಲ್ಸ್ ಅನ್ನು ಬದಲಾವಣೆ ಮಾಡಬೇಕಾದರೂ ಕೂಡ Public Service Commission ಅನ್ನು

consult ಮಾಡಬೇಕಾಗುತ್ತದೆ. ತದನಂತರವೇ ಬದಲಾವಣೆಗಳನ್ನು, ತಿದ್ದುಪಡಿಗಳನ್ನು ತರಬೇಕೆನ್ನುವುದು ಒಂದು ಕಡ್ಡಾಯವಾದ ನಿಯಮ ಕಾಯಿದೆ ಅಡಿಯಲ್ಲಿ ಅಡಕವಾಗಿದೆ. ಮೇಲೆ ಹೇಳಿದ ರೀತಿಯಲ್ಲಿಯೇ ರಾಜ್ಯ ಸರ್ಕಾರವಾಗಲಿ, ಹೈಕೋರ್ಟ್ ಆಗಲಿ, ಕರ್ನಾಟಕ ವಿಧಾನ ಮಂಡಲವಾಗಲಿ, ತಾವು ತರತಕ್ಕಂತಹ ತಿದ್ದುಪಡಿ ಇರಲಿ, ಬದಲಾವಣೆಗಳು ಇರಲಿ, Karnataka State Public Service Commission ಅನ್ನು consult ಮಾಡಬೇಕಾಗುತ್ತದೆ ಅಥವಾ ಅದರ ಸಹಮತಿಯನ್ನು ಪಡೆಯಬೇಕೆನ್ನುವುದು ಇದೆ. ಕರ್ನಾಟಕ ಸರ್ಕಾರದ ನೇಮಕಾತಿ ಮತ್ತು ಸೇವಾ ಭದ್ರತೆ ನಿಯಮಗಳಿಗೆ ಸಂಬಂಧಿಸಿದಂತೆ ತಿದ್ದುಪಡಿ ತರುವ ಮುನ್ನ Article 320 of the Indian Constitution ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಪ್ರಕಾರ್ಯಗಳು, ವ್ಯಾಖ್ಯಾನಗಳು, ಸಿವಿಲ್ ಸೇವೆಗಳಿಗೆ ಮತ್ತು ಸಿವಿಲ್ ಹುದ್ದೆಗಳಿಗೆ ನೇಮಕ ಮಾಡುವ ವಿಧಾನ, ಹಾಗೂ ಬಡ್ತಿ ಮಾಡುವ ವಿಧಾನ ಹಾಗೂ ಶಿಸ್ತು ಪಾಲನೆಯ ಬಗ್ಗೆ ಕೂಡ ರಾಜ್ಯ ಸರ್ಕಾರವಾಗಲಿ, ಅಥವಾ ಕರ್ನಾಟಕ ವಿಧಾನ ಮಂಡಲವಾಗಲಿ, ಹೈಕೋರ್ಟ್ ಆಗಲಿ, ಕರ್ನಾಟಕ ಲೋಕಸೇವಾ ಆಯೋಗವನ್ನು consult ಮಾಡಬೇಕು, ಅದರ concurrence ಪಡೆಯಬೇಕು ಎನ್ನುವುದು ಇದೆ. ಇದರ ಒಂದು exception ಏನಿದೆ ಎಂದರೆ, ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂತೆ ಇರುವಂತಹ ನಿಯಮಗಳನ್ನು ಮುಖ್ಯ ಕಾರ್ಯದರ್ಶಿಯವರು ಮಾಡುತ್ತಾರೆ. ಆದರೆ, ಕರ್ನಾಟಕ ವಿಧಾನಮಂಡಲದ ಈ ಕಾಯಿದೆಯಲ್ಲಿ ಅಡಕವಾಗಿರುವಂತಹ ಮತ್ತು ನಿಯಮಾವಳಿಯಲ್ಲಿ ಅಡಕವಾಗಿರುವಂತಹದ್ದನ್ನು ವಿಶೇಷ ಮಂಡಳಿಯೇ ಅದನ್ನು ಜಾರಿ ಮಾಡುತ್ತದೆ. ಅದೇ ರೀತಿಯಲ್ಲಿ ಹೈಕೋರ್ಟ್‌ಗೆ ಸಂಬಂಧಪಟ್ಟಿರುವಂತಹದ್ದನ್ನು ಮುಖ್ಯ ನ್ಯಾಯಾಧೀಶರು ಜಾರಿ ಮಾಡುತ್ತಾರೆ. ಇಷ್ಟೆಲ್ಲಾ ಇದ್ದರೂ ಕೂಡ ರಾಜ್ಯ ಸರ್ಕಾರ ಎರಡು ಕರಡು ತಿದ್ದುಪಡಿಯನ್ನು ತಂದಿದೆ.

**ಅವುಗಳೆಂದರೆ;**

ದಿನಾಂಕ 21-02-2022 ರಂದು ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ ನೇಮಕಾತಿ, ನಿಯಮಗಳು 2021ಕ್ಕೆ ಕರಡು ತಿದ್ದುಪಡಿಯನ್ನು ತಂದು, ಅದನ್ನೂ ಕೂಡ ಪ್ರಕಟಣೆ ಮಾಡಿದ್ದಾರೆ, ನನಗೆ ತಿಳಿದಮಟ್ಟಿಗೆ ಈ ತಿದ್ದುಪಡಿ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಗೆ

ಸಂಬಂಧಪಟ್ಟಿದ್ದಾಗಿರುತ್ತದೆ. ಈ ತಿದ್ದುಪಡಿಯಲ್ಲಿ ಏನಿದೆ ಎಂದರೆ, ನಾಗರಿಕ ಸೇವೆಯಲ್ಲಿರುವ ಬಿ ಗ್ರೂಪ್‌ನಲ್ಲಿರುವ ಹುದ್ದೆಗಳನ್ನು ಕೈಬಿಟ್ಟು, ಈ ಹುದ್ದೆಗಳನ್ನು ಗ್ರೂಪ್-ಸಿ ಹುದ್ದೆಗಳಲ್ಲಿ ವಿಲೀನಗೊಳಸಲಾಗಿರುತ್ತದೆ. ಅಂದರೆ, ರಾಜ್ಯ ಸರ್ಕಾರದಲ್ಲಿ ಇನ್ನು ಮುಂದೆ ಬಿ-ಗ್ರೂಪ್ ಹುದ್ದೆಗಳು ಇರುವುದಿಲ್ಲ. ಎಲ್ಲಾ ಹುದ್ದೆಗಳು ಕೂಡ ಎ,ಸಿ.ಡಿ ಗುಂಪಿನ ಹುದ್ದೆಗಳು ಮಾತ್ರ ಎಂದು ವರ್ಗೀಕರಣವಾಗುತ್ತದೆ. ಇದು ತುಂಬಾ implication ಆಗುತ್ತದೆ. ಇದರ ಬಗ್ಗೆ ನಾನು ಮುಂದೆ ಹೇಳುತ್ತೇನೆ. ಅಲ್ಲದೆ, ಬಿ ಗುಂಪಿನ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪರೀಕ್ಷೆಗೆ ನಿಗದಿಪಡಿಸಿರುವ ಎರಡು ಪ್ರಶ್ನೆ ಪತ್ರಿಕೆಗಳಿಗೆ ಇಟ್ಟಿರುವ ಅಂಕಗಳನ್ನು ೨೦೦ ರಿಂದ ೩೦೦ ಕ್ಕೆ ಏರಿಸಲಾಗಿದೆ. ಇದರಲ್ಲಿ ಏನಾಗಿದೆ ಎಂದು ಹೇಳಿದರೆ, ಸಿ ಗುಂಪಿನಲ್ಲಿ ಇರುವಂತಹ ಹುದ್ದೆಗಳನ್ನು ಕೂಡ ಬಲಪಡಿಸುತ್ತೇವೆ, ಬಿ-ಗ್ರೂಪ್ ಬೇಡ ಎಂದು ಹೇಳಿ ೨೦೦ ಅಂಕಗಳು ಏನಿದ್ದವು, ಅದನ್ನು ೩೦೦ ಅಂಕಗಳಿಗೆ ಏರಿಸಿದ್ದಾರೆ. ಮತ್ತೆ ಸಂದರ್ಶನಕ್ಕೆ ನಿಗದಿಪಡಿಸಿದ್ದ ಗರಿಷ್ಠ ಅಂಕಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಿಗದಿಪಡಿಸುವ ಒಟ್ಟು ಅಂಕಗಳಿಗೆ ಏನು ಶೇಕಡ ೫ರಷ್ಟು ಗರಿಷ್ಠ ಅಂಕಗಳು ಅಂದರೆ ೫೦ ಅಂಕಗಳು ಇದ್ದುದನ್ನು ೨೫ಕ್ಕೆ ಇಳಿಸಿದ್ದಾರೆ. ಇದನ್ನು ಗ್ರೂಪ್-ಸಿ ಗೂ ಸಹ ಮಾಡಿದ್ದಾರೆ. ಇದು retrospective ಆಗಿದೆ. ಇಲ್ಲಿ ಈಗಾಗಲೇ ಇದು ಯಾವುದಾದರೂ ಪ್ರಾಧಿಕಾರದ ನೇಮಕಾತಿ ಆಗಿರಬಹುದು, ಕೆಪಿ.ಎಸ್‌ಸಿ. *ಮೂಲಕ* ಆಗಿರಬಹುದು ಅಥವಾ ಪೋಲೀಸ್ ಇಲಾಖೆಯಲ್ಲಿ ಆಗಿರುವಂತಹ ನೇಮಕಾತಿ ಇರಬಹುದು. ಇದು ಎಲ್ಲಕ್ಕೂ ಅನ್ವಯವಾಗುತ್ತದೆ. ಮಾನ್ಯ ಗೃಹ ಸಚಿವರು ಇಲ್ಲಿ ಗಮನಿಸಬೇಕು. ತಾವು ಯಾವುದಾದರೊಂದು ನೇಮಕಾತಿ ಕಾರ್ಯ ಪೆಂಡಿಂಗ್ ಇದ್ದರೆ ಅಥವಾ ನೇಮಕಾತಿ ಪ್ರಕ್ರಿಯೆಯಲ್ಲಿ ಇದ್ದರೆ, ಅದಕ್ಕೂ ಸಹ ಈ ತಿದ್ದುಪಡಿ ಅನ್ವಯವಾಗುತ್ತದೆ. ಆದರೆ, ಇದನ್ನು ಇನ್ನೂ ಅಂತಿಮಗೊಳಿಸಿಲ್ಲ, ಮಾಡುತ್ತಾರೆ. ಮಾಡಿದಾಗ ಇದು ಅನ್ವಯವಾಗುತ್ತದೆ. ಅದೇ ರೀತಿ ಇನ್ನೊಂದು ತಿದ್ದುಪಡಿ ಇದ್ದು, ಏನೆಂದರೆ;

1) ದಿನಾಂಕ 21-2-2022 ರಂದು ಈ ಕರ್ನಾಟಕ ಗೆಜೆಟೆಡ್ ಪ್ರೊಬಬೇಷನರ್‌ಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997 ಕ್ಕೂ ಕೂಡ ತಿದ್ದುಪಡಿಯನ್ನು ತಂದಿದ್ದಾರೆ. ಇದರ ಬಗ್ಗೆ ಮಾನ್ಯ ಎಸ್.ರುದ್ರೇಗೌಡರು ವಿವರವಾಗಿ

ಹೇಳಿದ್ದಾರೆ. ಅವರು ಮೊದಲು ಅಲ್ಲಿ ಇದ್ದರು. ಅವರು ಕಳಂಕರಹಿತವಾಗಿ ಎಲ್ಲಾ ಕಡೆ ಕೂಡ ಸೇವೆ ಮಾಡಿಕೊಂಡು ಬಂದಿದ್ದಾರೆ. ಈ ವಿಚಾರವಾಗಿ ಮಾತನಾಡುತ್ತಾ, ಇದರಿಂದ ಯಾವ ರೀತಿಯಾಗಿ ಗ್ರಾಮಾಂತರ ಮಕ್ಕಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಮತ್ತೆ ಇನ್ನು ಹೆಚ್ಚಿನ ವಿಷಯಗಳನ್ನು ನಮ್ಮ ಸ್ನೇಹಿತರು ಮಾತನಾಡುತ್ತಾರೆ. ಹೀಗಾಗಿ ನಾನು ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ.

ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರ ಯಾವ ರೀತಿಯಾಗಿ, ನಾಗರಿಕ ಸೇವಾ ನಿಯಮಗಳನ್ನು ಮತ್ತು ಕಾಯಿದೆಗಳನ್ನು ರೂಪಿಸುತ್ತದೆಯೋ ಅದೇ ರೀತಿಯಲ್ಲಿ ನಾವು ಕೂಡ ಮಾಡಿಕೊಳ್ಳುತ್ತೇವೆ. ಮೊಟ್ಟಮೊದಲನೆಯದಾಗಿ, ಕೇಂದ್ರ ಸರ್ಕಾರದ ಸೇವೆಯಲ್ಲಿರತಕ್ಕಂತಹ ನೌಕರರನ್ನು ಗ್ರೂಪ್ ಎ.ಬಿ.ಸಿ.ಡಿ. ಎಂದು ವರ್ಗೀಕರಣ ಮಾಡಿದ್ದಾರೆ. ಅದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆಂದರೆ ಅವರು ನಿರ್ವಹಿಸುವಂತಹ ಕೆಲಸ, ಅವರು ನಿರ್ವಹಿಸುವಂತಹ ಜವಾಬ್ದಾರಿ, ಅವರಿಗೆ ನೀಡತಕ್ಕಂತಹ ವೇತನದ ಆಧಾರದ ಮೇಲೆ classify ಮಾಡಿ ವರ್ಗೀಕರಣ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರವೂ ಕೂಡ ಇದೇ ಮಾದರಿಯನ್ನು ಆಧಾರವನ್ನಾಗಿ ಇಟ್ಟುಕೊಂಡು ರಾಜ್ಯ ವೇತನ ಆಯೋಗ ಏನು ಶಿಫಾರಸ್ಸು ಮಾಡುತ್ತದೆ, ಅದರ ಅನ್ವಯ ವಿವಿಧ ವೇತನ ಶ್ರೇಣಿ ಅಂದರೆ pay scale ಮತ್ತು ಇತರ ವೇತನ ವೃಂದ ಅಂದರೆ pay band ಎಂದು ಹೇಳುತ್ತೇವೆ. ಆ ಒಂದು pay band ಆಧಾರದ ಮೇಲೆ ರಾಜ್ಯ ಸರ್ಕಾರದಲ್ಲಿ ಇರತಕ್ಕವರಿಗೂ ಕೂಡ ಗ್ರೂಪ್- ಎ,ಬಿ,ಸಿ,ಡಿ ಎಂದು ವರ್ಗೀಕರಣ ಮಾಡಿದೆ. ಗ್ರೂಪ್-ಎ.ಗೆ ಸೇರಿದ ಹುದ್ದೆಗಳು ಬಹುತೇಕವಾಗಿ ಉಪ ವಿಭಾಗ ಮತ್ತು ಜಿಲ್ಲಾ ಮಟ್ಟದಲ್ಲಿ ಇರತಕ್ಕಂತಹ ಹುದ್ದೆಗಳಾಗಿವೆ. ಅದು ಯಾವುದೇ ಇಲಾಖೆ ಇರಬಹುದು, ಜಿಲ್ಲಾ ಮಟ್ಟ ಮತ್ತು sub-division ಮಟ್ಟದಲ್ಲಿ ಇರುತ್ತವೆ. ಇನ್ನು ಗ್ರೂಪ್ -ಬಿ ಹುದ್ದೆಗಳು ಎಲ್ಲಿ ಇರುತ್ತವೆ ಎಂದರೆ, ಅವುಗಳು ಸಾಮಾನ್ಯವಾಗಿ ತಾಲ್ಲೂಕು ಮಟ್ಟದಲ್ಲಿರುವಂತಹ ಅಧಿಕಾರಿ ಹುದ್ದೆಗಳು.

**(ಮುಂದು)**

**(666) 28.03.2022 04.20 ಎಸ್‌ವಿ-ಎಕೆ**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

ಇನ್ನು ಗ್ರೂಪ್ ಬಿ ಹುದ್ದೆಗಳು ಸರ್ವೇಸಾಧಾರಣವಾಗಿ ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆಗಳಾಗಿರುತ್ತದೆ. ಬಿ ಗ್ರೂಪ್‌ನಲ್ಲಿ ಗೆಜೆಟೆಡ್ ಮತ್ತು ನಾನ್-ಗೆಜೆಟೆಡ್ ಹುದ್ದೆಗಳಿವೆ. ಅಂದರೆ ಬಿ ವರ್ಗೀಕರಣವಾಗಿರುವ ಹುದ್ದೆಗಳನ್ನು ಕೈಬಿಟ್ಟರೆ ತಾಲ್ಲೂಕು ಮಟ್ಟದಲ್ಲಿರುವ ಎಲ್ಲಾ ಹುದ್ದೆಗಳು ನಾನ್-ಗೆಜೆಟೆಡ್ ಹುದ್ದೆಗಳಾಗುತ್ತವೆ. ಉದಾಹರಣೆಗೆ: ತಾಲ್ಲೂಕು ತಹಶೀಲ್ದಾರ್, ರೇಷ್ಮೆ ಅಧಿಕಾರಿ, ಕೃಷಿ ಅಧಿಕಾರಿ, Assistant Executive Engineer, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ, Block Education Resource Person/B.R.C person, Block Education Officer, E.O., Nursing Superintendent. ಆಸ್ಪತ್ರೆಯಲ್ಲಿರತಕ್ಕಂತಹ ನರ್ಸ್‌ಗಳನ್ನು monitor ಮಾಡುವ ನರ್ಸಿಂಗ್ ಸೂಪರಿಂಟೆಂಡೆಂಟ್ ಕೂಡ ಬಿ ಗ್ರೇಡ್ ಹುದ್ದೆಯಾಗಿದೆ. ಅದನ್ನು ಕೂಡ ಸಿ ಗ್ರೇಡ್ ಮಾಡುವ ವಿಚಾರ ಬಂದಿದೆ. ತಾಲ್ಲೂಕು ಖಜಾನೆ ಅಧಿಕಾರಿಗಳು ಕೂಡ ಸಿ ದರ್ಜೆಗೆ ಬಂದಿರುತ್ತವೆ. ಇವರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಡಳಿತ ವ್ಯವಸ್ಥೆಯ ಕೊಂಡಿಯಾಗಿರುತ್ತಾರೆ. ಇದಕ್ಕೆ middle management ಎಂದು ಹೇಳಲಾಗುತ್ತದೆ. ತಾಲ್ಲೂಕು ತಹಶೀಲ್ದಾರ್ ಅವರು ತಾಲ್ಲೂಕಾ ಮ್ಯಾಜಿಸ್ಟ್ರೇಟ್ ಆಗಿರುತ್ತಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಬಿ ಗ್ರೂಪ್ ಹುದ್ದೆಯಾಗಿದ್ದು, ಅದು ಕೂಡ ಬಿ ಗ್ರೂಪ್ ನಿಂದ ಸಿ ಗ್ರೂಪ್‌ಗೆ ಹೋಗಿದೆ. ಅವರ ಕೆಳಗೆ ಕೆಲವು ನಾನ್-ಗೆಜೆಟೆಡ್ ಬಿ ಗ್ರೂಪ್‌ನ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಅವರು ಯಾವ ರೀತಿಯಾಗಿ ಅವರಿಂದ ಕೆಲಸವನ್ನು ಪಡೆಯುತ್ತಾರೆ, ಯಾವ ರೀತಿಯಾಗಿ ಉಸ್ತುವಾರಿ ಮಾಡುತ್ತಾರೆ? ಸರ್ಕಾರ ಇಂತಹ ತಿದ್ದುಪಡಿಗಳನ್ನು ಪುನರ್ ಪರಿಶೀಲನೆ ಮಾಡಬೇಕು. ಇದರಿಂದಾಗಿ ಯಾವ ಕಾಯಿದೆಗೆ ತೊಂದರೆಯಾಗುತ್ತದೆ, ಇದರಿಂದ ಯಾವ ರೀತಿಯಾಗಿ ಶಿಸ್ತು, ಅಶಿಸ್ತು ಮೂಡುತ್ತದೆ ಎಂದು ನಾನು ಹೇಳುತ್ತೇನೆ. ಈ ಸೇವಾ ನಿಯಮಗಳಿಗೆ ತಿದ್ದುಪಡಿ ತಂದಿರುವ ಕಾರಣ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ವಿವಿಧ ಕಾಯಿದೆಗಳಿಗೆ ನಾವು ತಿದ್ದುಪಡಿಯನ್ನು ತರಬೇಕಾಗುತ್ತದೆ.

ಕಂದಾಯ ಇಲಾಖೆಯಲ್ಲಿ ಬರುವ Karnataka Land Revenue Act ಅಡಿಯಲ್ಲಿ ಸರ್ವೆಯರ್, ಡೆಪ್ಯುಟಿ ತಹಶೀಲ್ದಾರ್, ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ಸರ್ವೆ ಸೂಪರ್‌ವೈಸರ್ಸ್ ಇದ್ದಾರೆ. ಇನ್ನು Karnataka Financial Code ತರುವಲ್ಲಿ Drawing/Disbursing Officers ಇದ್ದಾರೆ. ಅವರನ್ನು specimen signature ಯಿಂದ ಹಿಡಿದು A.G ಯವರೆಗೆ ಇಂತಹವರೇ Drawing Officer/Disbursing Officer/Safe Drawing Officer ಎಂದು ದೃಢೀಕರಿಸಲಾಗುತ್ತದೆ. ಅವರು ಸಾಮಾನ್ಯವಾಗಿ ಬಿ ಗ್ರೂಪ್‌ನಲ್ಲಿರತಕ್ಕಂತಹ ಹುದ್ದೆಯಲ್ಲಿರುತ್ತಾರೆ. Treasury Code ಗೆ effect ಆಗುತ್ತದೆ. ಎ.ಸಿ.ಬಿಲ್ ಅಥವಾ ಡಿ.ಸಿ. ಬಿಲ್ ಡ್ರಾ ಮಾಡಬೇಕೆಂದರೆ....

**ವೈಸ್ ಛೇರ್‌ಮನ್:-** ಮಾನ್ಯ ತಿಪ್ಪೇಸ್ವಾಮಿಯವರೇ, ಇನ್ನು ಎಷ್ಟು ಹೊತ್ತು ನಿಮಗೆ ಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನು ಎರಡು-ಮೂರು ನಿಮಿಷಗಳಲ್ಲಿ ಮುಗಿಸುತ್ತೇನೆ. ನಾನು ಇಲ್ಲಿ ವಾಸ್ತವ ಸಂಗತಿಯನ್ನಷ್ಟೇ ಹೇಳುತ್ತಿದ್ದು, ಬೇರೆ ಯಾವುದೇ ವಿಷಯಾಂತರ ಮಾಡುತ್ತಿಲ್ಲ. Karnataka Panchayat Raj Act ಗೆ, ಸಿ.ಸಿ.ಎ. ರೂಲ್ಸ್‌ಗೆ ತಿದ್ದುಪಡಿ ತರಬೇಕಾಗಿದೆ. ಕೆ.ಪಿ.ಎಸ್.ಸಿ. ಕಾರ್ಯವೈಖರಿಯ ಬಗ್ಗೆ ನಾವು ಯಾರೂ ಮಾತನಾಡುತ್ತಿಲ್ಲ. ಪಿ.ಸಿ.ಹೋಟಾ ಅವರು ಕೊಟ್ಟಿರುವ ಸಲಹೆಗಳು ಮತ್ತು ಶಿಫಾರಸ್ಸುಗಳನ್ನು ಸರ್ಕಾರ ದಯಮಾಡಿ ಜಾರಿಗೆ ತರಬೇಕು. ಅದನ್ನು ಬಲಪಡಿಸಬೇಕು. ಅದನ್ನು ಅವಹೇಳನ ಮಾಡಬಾರದು. ಅವರು ಹೇಳಿರುವಂತೆ ಪ್ರತಿಯೊಂದು ಸಂದರ್ಶನದಲ್ಲಿಯೂ ಒಬ್ಬ ತಜ್ಞರನ್ನು ಹಾಕಬೇಕು. ಕೇವಲ ಸದಸ್ಯರಿಗೆ ಮತ್ತು ಅಧ್ಯಕ್ಷರಿಗೆ ಅಧಿಕಾರವನ್ನು ನೀಡಬಾರದು. ತಜ್ಞರಿಂದ ಕಮಿಷನ್ ಗೈಡ್ ಆಗಲಿ. ಕಮಿಷನ್‌ನವರಿಗೆ ತಾವು ಮಾಡುತ್ತಿರುವುದು ತಪ್ಪು, ತಜ್ಞರ ಅಭಿಪ್ರಾಯ ಈ ರೀತಿಯಿದೆ ಎನ್ನುವ ವಿವೇಚನೆ ಅವರಿಗೆ ಬರಲಿ.

ಗೆಝೆಟೆಡ್ ಪ್ರೊಬೇಷನರ್ ಆಯ್ಕೆ ಇರಲಿ ಅಥವಾ ಬೇರೆ ಯಾವುದೇ ಆಯ್ಕೆಯಿರಲಿ ಕೆ.ಪಿ.ಎಸ್.ಸಿ.ಯವರು 50 ಅಂಕಗಳಿಂದ 25 ಅಂಕ ಮಾಡಿರುವುದು ಸರಿಯಲ್ಲ. ಅದನ್ನು ಸುಧಾರಣೆ

ಮಾಡಬೇಕು. ಅಲ್ಲಿರುವಂತಹ ಆಡಳಿತ ವ್ಯವಸ್ಥೆಯನ್ನು ಕಾರ್ಯಪರಿಶೀಲನೆ ಮಾಡಬೇಕು. ಗ್ರೂಪ್ ಬಿ ಹುದ್ದೆಗಳನ್ನು ಗ್ರೂಪ್ ಸಿ ಹುದ್ದೆಗಳೊಂದಿಗೆ ವಿಲೀನಗೊಳಿಸಿರುವುದು ಸಾಧುವಲ್ಲ ಎಂದು ಹೇಳಬಯಸುತ್ತೇನೆ. ಈ ತಿದ್ದುಪಡಿ ಇನ್ನೂ ಕರಡಿನ ರೂಪದಲ್ಲಿದೆ. ದಯಮಾಡಿ ಇದನ್ನು ಹಿಂಪಡೆಯಬೇಕು. ಮತ್ತೊಮ್ಮೆ ಆಲೋಚನೆ ಮಾಡಿ ನಂತರ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಬೇಡಿಕೊಳ್ಳುತ್ತೇನೆ.

**ವೈಸ್ ಛೇರ್‌ಮನ್:–** ಮುಂದಿನ ಸರದಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರದ್ದು. ತಮಗೆ ಎಷ್ಟು ಸಮಯ ಬೇಕು? ಈಗಾಗಲೇ 35 ನಿಮಿಷಗಳಾಗಿವೆ. ತಾವು ಐದು ನಿಮಿಷ ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ನಿಯಮ 330 ಹಾಗೂ ನಿಯಮ 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಯ ರೂಪದಲ್ಲಿಯೂ ಬಂದಿದೆ. ಆರು ಜನ ಸಹಿ ಮಾಡಿರುತ್ತೇವೆ.

**ವೈಸ್ ಛೇರ್‌ಮನ್:–** ಒಟ್ಟು ಕಾಲಾವಕಾಶ 45 ನಿಮಿಷ. ಅದರಲ್ಲಿ ಸರ್ಕಾರಕ್ಕೆ 10–15 ನಿಮಿಷಗಳ ಸಮಯ ಉತ್ತರ ಕೊಡಲಿಕ್ಕಾಗಿ ಬೇಕು.

**ಡಾ:ವೈ.ಎ.ನಾರಾಯಣಸ್ವಾಮಿ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಶ್ರೀಕಂಠೇಗೌಡರೇ, ವಿಷಯ ಬಹಳ ಮಹತ್ತರವಾಗಿದೆ. ಅದರ ಬಗ್ಗೆ ಬೇರೆ ಮಾತಿಲ್ಲ. ಎರಡನ್ನೂ ಕಂಬೈನ್ ಮಾಡಿ ಈಗಾಗಲೇ ಬೇರೆಯವರು ಹೇಳಿರುವ ವಿಚಾರಗಳನ್ನು ಹೊರತುಪಡಿಸಿ ತಾವು ನಿರ್ದಿಷ್ಟವಾಗಿ ಹೇಳಿ. ಆದರೆ ಬೇಗ ಮುಗಿಸೋಣ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಶ್ರೀಕಂಠೇಗೌಡರೇ, ಒಂದು ನಿಮಿಷ... ನಾನು ಎಲ್ಲರಲ್ಲಿಯೂ ಕೇಳಿಕೊಳ್ಳುತ್ತೇನೆ. ನಿಯಮ 72 ಆಗಬಹುದು, ನಿಯಮ 330 ಆಗಬಹುದು; ದಯವಿಟ್ಟು ಅರ್ಧಗಂಟೆ ಚರ್ಚೆ ಮಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ವಿಚಾರಕ್ಕೆ ಹೋಗುತ್ತಿದ್ದೆನು. ಈಗ ನಾನು introduction ಗೆ ಎರಡು ಮಾತನ್ನು ಹೇಳಲೇಬೇಕಾಗಿದೆ. ನಮ್ಮಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇದೆ. ಶಾಸಕಾಂಗಕ್ಕೆ ಎಷ್ಟು ಜವಾಬ್ದಾರಿಯಿರುತ್ತದೆಯೋ ಅಷ್ಟೇ ಮಹತ್ತರವಾದ ಜವಾಬ್ದಾರಿ ಕಾರ್ಯಾಂಗಕ್ಕೆ ಇರುತ್ತದೆ. ಕಾರ್ಯಾಂಗವನ್ನು ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಹೋಗುವ ಮಹತ್ವದ ಜವಾಬ್ದಾರಿ ನಮ್ಮೆಲ್ಲರ ಹೆಗಲ ಮೇಲಿದೆ. ಹಾಗಾಗಿ ಇದು ಹಗುರವಾಗಿ ತೆಗೆದುಕೊಳ್ಳುವಂತಹ ವಿಚಾರವಲ್ಲ. ನಾವು ತೆಗೆದುಕೊಳ್ಳುವ ತೀರ್ಮಾನಗಳು, ಮಾಡುವ ಶಾಸನಗಳು ಅವುಗಳನ್ನು ಅನುಷ್ಠಾನಕ್ಕೆ ಕೊಡುವಂತಹವರು ಕಾರ್ಯಾಂಗದವರು. ಆ ದಿಸೆಯಲ್ಲಿ ನಾವು ಇಡಬೇಕಾದಂತಹ ಹೆಜ್ಜೆಗಳು ಮುಖ್ಯವಾಗುತ್ತವೆ. ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗವು ಸಂವಿಧಾನದತ್ತ ಸಂಸ್ಥೆಗಳು. ಅದಕ್ಕೆ ಅದರದ್ದೇ ಆದ ಮಾರ್ಗದರ್ಶಿ ಸೂತ್ರಗಳಿವೆ. ಏಕಾಏಕಿ ನಾವು ಏನೇನೋ ಮಾಡಲು ಬರುವುದಿಲ್ಲ. ಆದರೆ ಈಗ ಆಗಿ ಹೋಗಿದೆ. ಆ ತಪ್ಪುಗಳು ಆಗಬಾರದು.

ಇಂದು ಮಾನ್ಯ ರುದ್ರೇಗೌಡರು ಆಯೋಗದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿ ಅದರ ಘನತೆಯನ್ನು ಹೆಚ್ಚಿಸಿದವರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಅದೇ ಹಾದಿಯಲ್ಲಿ ಬಂದಂತಹ ಒಬ್ಬ ಅಧಿಕಾರಿಯಾಗಿ ಕೆಲಸ ಮಾಡಿದ ಮಾನ್ಯ ತಿಪ್ಪೇಸ್ವಾಮಿಯವರು ಪ್ರಾಮಾಣಿಕವಾಗಿ ನಿಷ್ಪಕ್ಷಪಾತವಾಗಿ ಸೇವೆಯನ್ನು ಮಾಡುತ್ತಾ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ನಾನು ಮಾನ್ಯ ನಾರಾಯಣಸ್ವಾಮಿಯವರ ಒತ್ತಾಯಕ್ಕೆ ಮಣಿದು ನೇರವಾಗಿ ವಿಚಾರಕ್ಕೆ ಬರುತ್ತೇನೆ. ದಿನಾಂಕ 10.05.1985ರಂದು 'Ashok Kumar Yadav & Others vs. State of Haryana and Others' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಒಂದು ಆದೇಶ ಬಂದಿದೆ. ನಮ್ಮಲ್ಲಿ ಪರೀಕ್ಷೆ ಎರಡು ಮಾದರಿಯಲ್ಲಿರುತ್ತದೆ. ಲಿಖಿತ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆ. ಮತ್ತೊಂದು ವ್ಯಕ್ತಿತ್ವ ಪರೀಕ್ಷೆಯಾಗಿದೆ. ಲಿಖಿತ ಪರೀಕ್ಷೆಯ ಒಟ್ಟು ಅಂಕದ ಮೇಲೆ ಕನಿಷ್ಠ 12.2 ಇರಲೇಬೇಕೆಂದು ಸುಪ್ರೀಂಕೋರ್ಟ್ ಹೇಳಿದೆ. ಇದು ನಾನು ಹೇಳುತ್ತಿರುವುದಲ್ಲ. ಕೇಂದ್ರ

ಲೋಕಸೇವಾ ಆಯೋಗದ ಮೇಲೆ ಬಹಳ ದೂರುಗಳು ಬಂದಾಗ ಹೋಟಾ ಸಮಿತಿ ರಚಿಸಲಾಗುತ್ತದೆ. ಆ ಸಮಿತಿಯು ಸಹ ಕನಿಷ್ಠ 12.2 ಮೌಖಿಕ ಪರೀಕ್ಷೆಗೆ, ವ್ಯಕ್ತಿತ್ವ ಪರೀಕ್ಷೆಗೆ ಇರಬೇಕೆಂದು ಹೇಳುತ್ತದೆ.

ನಾನು ತಮ್ಮ ಮೂಲಕ ಬಹಳ ಹಿರಿಯರಾದ ಹಾಗೂ ಸಮರ್ಥರಾದ ಕಾನೂನು ಸಚಿವರಲ್ಲಿ ಕೇಳಬಯಸುತ್ತೇನೆ. ಲಿಖಿತ ಪರೀಕ್ಷೆಗಳಲ್ಲಿ ಅನ್ಯಾಯಗಳಾಗಲಿಲ್ಲವೇ? ಮೌಖಿಕ ಪರೀಕ್ಷೆಗಳಲ್ಲಿಯೂ ಆಗಿವೆ, ಇಲ್ಲವೆಂದು ಹೇಳುತ್ತಿಲ್ಲ. ಅದಕ್ಕೆ ಏನು ಮಾಡಬೇಕೆಂದು ಮತ್ತು how to improve it; how to avoid corruption and how to avoid irregularities ಎಂದು ಹೋಟಾ ಸಮಿತಿಯು ಹೇಳುತ್ತದೆ. ಆ ಸಮಿತಿಯ ವರದಿಯನ್ನು ಕೇಂದ್ರ ಲೋಕಸೇವಾ ಆಯೋಗ ಜಾರಿಗೆ ತಂದಿತು. ರಾಜ್ಯದಲ್ಲಿಯೂ ತನ್ನಿ.

**(ಮುಂದು)**

**(667) 28-03-2022 (4.30) ಕೆಜಿ-ಎಕೆ**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಮಾನ್ಯ ಸಭಾಪತಿಯವರೇ, ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಳ್ಳೆಯ ಅಧಿಕಾರಿಗಳಾದ ಒಬ್ಬ ಕಾರ್ಯದರ್ಶಿ ಮತ್ತು ಒಬ್ಬ Controller of Examination ರವರನ್ನು ಸರ್ಕಾರ ಕೆಪಿಎಸ್‌ಸಿಗೆ ಕೊಡುವುದಾದರೆ, ಇಡೀ ಆಯೋಗದ ಪರೀಕ್ಷೆಗಳು ಸರಿಯಾಗಿ ನಡೆಯುತ್ತದೆ. ಆಗ ಪರೀಕ್ಷೆಗಳಲ್ಲಿ ಲೋಪ ಆಗುವುದಿಲ್ಲ. ನಾನು ನೂರಾರು ಪರೀಕ್ಷೆಗಳನ್ನು ಮಾಡಿದ್ದೇನೆ. Superintendent ಆಗಿ, Chief Superintendent ಆಗಿ, Deputy Chief ಆಗಿ ಪರೀಕ್ಷೆಗಳನ್ನು ನಡೆಸಿದ್ದೇನೆ. ಸರಿಯಾಗಿರುವಂತಹ ಈ ಇಬ್ಬರು ಅಧಿಕಾರಿಗಳನ್ನು ಕೊಟ್ಟರೆ, ಕರ್ನಾಟಕ ಲೋಕಸೇವಾ ಆಯೋಗ 75% ರಿಂದ 80% ಸರಿಹೋಗುತ್ತದೆ. ನಮ್ಮ ದೇಶದ ಆಯಯಾ ರಾಜ್ಯಗಳ ಲೋಕಸೇವಾ ಆಯೋಗಗಳ ಮಾಹಿತಿಗಳು ನನ್ನ ಬಳಿ ಇವೆ. ಕೇಂದ್ರ ಲೋಕಸೇವಾ ಆಯೋಗ written test marks ಅನ್ನು ಒಟ್ಟು 1750 ಅಂಕಗಳಿಗೆ ಇಟ್ಟಿದೆ. ಅದರ ಮೇಲೆ 15.71%, ಅಂದರೆ, 275 ಅಂಕಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಇಟ್ಟಿದ್ದಾರೆ. ಒರಿಸ್ಸಾ ರಾಜ್ಯದಲ್ಲಿ 1800 ಅಂಕಗಳಿಗೆ written examination ಇದೆ. Oral exam ಗೆ 250 ಅಂಕಗಳು, 13.89% ಇದೆ. ಕೇಂದ್ರ ಲೋಕಸೇವಾ

ಆಯೋಗದ್ದು 15.71% ಇದೆ. ಕೇರಳ ರಾಜ್ಯದ್ದು 16.67% ಇದೆ. ಈ ರೀತಿ ಎಲ್ಲಾ ರಾಜ್ಯದಲ್ಲಿಯೂ ಕನಿಷ್ಠ ಪಕ್ಷ 10% ಮೇಲೆ ಇದೆ. ಆದರೆ, ನಮ್ಮ ರಾಜ್ಯದಲ್ಲಿ ಅದು 2%ಗೆ ನಿಂತಿದೆ. ಇದು ನಮಗೆ ಅರ್ಥವಾಗುತ್ತಿಲ್ಲ. ಓದಿಗಿಂತ ಬಹಳ ಮುಖ್ಯ ಆಡಳಿತ. ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದವರು ಒಳ್ಳೆಯ ಆಡಳಿತವನ್ನು ಮಾಡುತ್ತಾರೆಂದು ಇಲ್ಲ. ಆಡಳಿತ ಒಂದು skill. ನಾವು ಆ skilled administration ಅನ್ನು ನಿರೀಕ್ಷೆ ಮಾಡಬೇಕೆಂದರೆ, ಆ ವ್ಯಕ್ತಿಯ ವ್ಯಕ್ತಿತ್ವವನ್ನು ಆನಾವರಣ ಮಾಡಿಕೊಳ್ಳಬೇಕು. ನಮ್ಮ ಬ್ಯಾಚ್‌ನಲ್ಲಿ ಕೆಲವರು III Class ನಲ್ಲಿ ಪಾಸ್ ಆಗಿದ್ದವರು I.A.S., K.A.S ಮಾಡಿ ಅದ್ಭುತವಾದ ಆಡಳಿತವನ್ನು ಮಾಡಿ ಬಹಳ ಒಳ್ಳೆಯ ಹೆಸರನ್ನು ಪಡೆದುಕೊಂಡವರು ಇದ್ದಾರೆ. ಹಾಗೆಯೇ, ನಮ್ಮ ಬ್ಯಾಚ್‌ನಲ್ಲಿ Rank, merit ಪಡೆದುಕೊಂಡು C.T.O., S.D.O ಆಗಿ failure ಆಗಿರುವವರು ಇದ್ದಾರೆ. II Class, III Class ನಲ್ಲಿ ಪಾಸಾದವರು ಬಹಳ successful officers ಆಗಿದ್ದಾರೆ. ಅವರು ಬಹಳ ಹೆಸರು ಪಡೆದುಕೊಂಡಿದ್ದಾರೆ. ಅವರು ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. gold medal ಪಡೆದುಕೊಂಡಿದ್ದವರು failure ಆಗಿದ್ದಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಆಡಳಿತದ ದಕ್ಷತೆಗೆ ಪರೀಕ್ಷೆಗಳ ಅಂಕಗಳಗಷ್ಟೇ ಮುಖ್ಯವಾಗುವುದಿಲ್ಲ. ಆ ವ್ಯಕ್ತಿಯ ವ್ಯಕ್ತಿತ್ವವನ್ನು ಹೊರಗಚ್ಚುವಂತಹ ಕೆಲಸವನ್ನು ಮಾಡಿ, ಆ ವ್ಯಕ್ತಿಯ ವ್ಯಕ್ತಿತ್ವನ್ನು ಅನಾವರಣ ಮಾಡುವಂತಹ ದಿಶೆಯಲ್ಲಿ ಕನಿಷ್ಠ ಅಂಕಗಳು ಇರಲೇಬೇಕಾಗುತ್ತದೆ. ಈಗ ನಮ್ಮ ಕ್ಯಾಬಿನೆಟ್ ತೆಗೆದುಕೊಂಡಿರುವಂತಹ ತೀರ್ಮಾನ ಸಂವಿಧಾನಕ್ಕೂ ವಿರುದ್ಧವಾಗಿದೆ. ಪಿ.ಸಿ.ಹೋಟಾ ಸಮಿತಿಯ ತೀರ್ಮಾನಕ್ಕೂ ವಿರುದ್ಧವಾಗಿದೆ ಹಾಗೂ Supreme Court ತೀರ್ಮಾನಕ್ಕೂ ವಿರುದ್ಧವಾಗಿದೆ.

ಮಾನ್ಯ ಸಭಾಪತಿಯವರೇ, ಕೇರಳಾದಲ್ಲಿ 300 ಅಂಕಗಳಿಗೆ written examination ಇದೆ. Oral exam ಗೆ 50 ಅಂಕಗಳನ್ನು ಇಟ್ಟಿದ್ದಾರೆ. ಅಲ್ಲಿಗೆ 16.67% ಇದೆ. ಅದೇರೀತಿ ಗುಜರಾತ್‌ನಲ್ಲಿ 900 ಅಂಕಗಳಿಗೆ written examination ಇದೆ. 100 ಅಂಕಗಳಿಗೆ ಮೌಖಿಕ ಪರೀಕ್ಷೆಯನ್ನು ಇಟ್ಟಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ 1200 ಅಂಕಗಳಿಗೆ written examination ಇದೆ. ಆದರೆ, ಅದರ ಮೌಖಿಕ ಪರೀಕ್ಷೆಯನ್ನು ಕೇವಲ 25 ಅಂಕಗಳಿಗೆ ಇಳಿಸಿದ್ದಾರೆ. ಈ ರೀತಿಯಾದರೆ, ಆ ವ್ಯಕ್ತಿಯ ವ್ಯಕ್ತಿತ್ವನ್ನು ಯಾವ ರೀತಿ assess ಮಾಡುತ್ತಾರೆ? ಲೋಪಗಳು written exam ನಲ್ಲಿಯೂ ಇವೆ, oral exam ನಲ್ಲಿಯೂ ಇವೆ. ನಾನು ಲೋಪಗಳು ಇಲ್ಲವೆಂದು ಹೇಳುತ್ತಿಲ್ಲ. ಇದಕ್ಕೆ Hota Committee recommendations ಏನಿದೆ, ಅದು

remedy. ಅದು ಪರಿಹಾರ. ನಾನು ಅದನ್ನು ಅಳವಾಗಿ ಓದಿಲ್ಲ. ಮಾನ್ಯ ಸಚಿವರು ಅದನ್ನು ಅಳವಾಗಿ ಓದಿ ಹೋಟಾ ಸಮಿತಿಯ ಎಲ್ಲಾ ಸಲಹೆಗಳನ್ನು ಇಲ್ಲಿ ಜಾರಿಗೆ ತಂದರೆ, ಆಗ ಇದು ಸರಿ ಹೋಗುತ್ತದೆ. ಈಗ U.P.S.C (Union Public Service Commission) ಸರಿ ಹೋಗಿದೆ ಅಲ್ಲವೇ; ಅದನ್ನು ನಾವೆಲ್ಲರೂ ಒಪ್ಪುತ್ತೇವೆ ಅಲ್ಲವೇ; ಏಕೆಂದರೆ, ಹೋಟಾ ಸಮಿತಿಯ ಎಲ್ಲಾ ಶಿಫಾರಸ್ಸುಗಳನ್ನು ಕೇಂದ್ರದಲ್ಲಿ implement ಮಾಡಿದ್ದಾರೆ. ಆ ರೀತಿಯ ಸುಧಾರಣೆಗಳನ್ನು ಮಾಡಬೇಕೇ ಹೊರತು, ವ್ಯಕ್ತಿತ್ವದ ಆದಿಯಲ್ಲಿ ಪರೀಕ್ಷೆಗೆ ಇರುವ ಅವಕಾಶವನ್ನು ಕಡಿಮೆಗೊಳಿಸುವುದು ಸರಿಯಾದ ಮಾರ್ಗವಲ್ಲ. 1200 ಅಂಕಗಳಿಗೆ written exam ಮಾಡಿ Class–I, Class–II Officers ಗೆ 25 ಅಂಕಗಳಲ್ಲಿ ಅವರ ವ್ಯಕ್ತಿತ್ವವನ್ನು ಅಳೆಯುತ್ತೇವೆಂದರೆ, ಇದಕ್ಕೆ ನಗಬೇಕೋ ಅಥವಾ ಆಳಬೇಕೋ ಅರ್ಥವಾಗುತ್ತಿಲ್ಲ. This is not the way to award marks. ಈಗ ಏನೇನೂ ದೂರುಗಳಿವೆ ಅದಲ್ಲ, ಈಗ ಏನೇನೂ ಆರೋಪಗಳಿವೆ ಅದಲ್ಲ, ಅದಕ್ಕೆ ನಾನು ಪಿ.ಸಿ.ಹೋಟಾ ಸಮಿತಿಯ remedy ಅನ್ನು ಹೇಳಿದ್ದೇನೆ. ಸರ್ಕಾರಕ್ಕೆ ಇನ್ನು ಅವಕಾಶ ಇದೆ. ಸರ್ಕಾರ ಆ ಅಲೋಚನೆಯಲ್ಲಿದೆ ಎಂದು ಉತ್ತರದಲ್ಲಿ ಹೇಳಿದೆ. ಅದಕ್ಕೆ ಖಂಡಿತವಾಗಿ ಸರ್ಕಾರ ಈ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಮ್ಮ ದೇಶದಲ್ಲಿರುವ ಎಲ್ಲಾ ರಾಜ್ಯಗಳ ಲೋಕ ಸೇವಾ ಆಯೋಗಗಳು oral exam ಗೆ ಇಟ್ಟಿರುವಂತಹ ಅಂಕಗಳನ್ನು ಗಮನಿಸಿದಾಗ, ನಮ್ಮ ರಾಜ್ಯದಲ್ಲಿ ಮಾತ್ರ ಅತ್ಯಂತ ಕಡಿಮೆ 2% ಅಂಕಗಳನ್ನು Personality Test ಗೆ ಇಡಲಾಗಿದೆ. This is very meagre. ಹಾಗಾಗಿ, ನಮ್ಮ ಸರ್ಕಾರ ಆ ತಪ್ಪು ನಿರ್ಧಾರಕ್ಕೆ ಹೋಗುವುದು ಬೇಡ. ಅದರ ಬದಲಾಗಿ ಸುಧಾರಣೆಗಳನ್ನು ಮಾಡಲಿ. ಮಾನ್ಯ ಸದಸ್ಯರಾದ ರುದ್ರೇಗೌಡ ಅಂತಹವರನ್ನು ಆಯ್ಕೆ ಮಾಡಲಿ. ನಾವು ಬೇಡ ಎಂದು ಹೇಳಿಲ್ಲ. ನಾವು ಸರ್ಕಾರವನ್ನು ಹಿಡಿದುಕೊಂಡಿದ್ದೇವೆಯೇ? ಪ್ರಮಾಣಿಕವಾಗಿ ಇರುವವರನ್ನೇ ಆಯ್ಕೆ ಮಾಡಲಿ. ಸಮಾಜದಲ್ಲಿ ಇಂತಹವರು ಪ್ರಮಾಣಿಕವಾಗಿ ಇದ್ದಾರೆ, ಇಂತಹವರು ಒಳ್ಳೆಯವರು ಎಂದು ಎಲ್ಲರಿಗೂ ಗೊತ್ತಾಗುತ್ತದೆ. ನಾವು ರಾಗಿ ಬೆಳೆಯನ್ನು ಬಿತ್ತಿ ಗೋಧಿಯ ಬೆಳೆಯನ್ನು ನಿರೀಕ್ಷೆ ಮಾಡುವುದಕ್ಕೆ ಆಗುತ್ತದೆಯೇ? ಭತ್ತ ಬೆಳೆಯನ್ನು ಬಿತ್ತಿ ಅದರಲ್ಲಿ ರಾಗಿ ಬೆಳೆಯನ್ನು ನಿರೀಕ್ಷೆ ಮಾಡುವುದಕ್ಕೆ ಆಗುತ್ತದೆಯೇ? ಅದಕ್ಕೆ ಬೆಳೆಯನ್ನು ನೇಡುವಾಗಲೇ ಒಳ್ಳೆಯ ಭತ್ತದ ಬೀಜವನ್ನು ಹಾಕಿದರೆ, ಒಳ್ಳೆಯ ಭತ್ತದ ಬೆಳೆ ಬರುತ್ತದೆ. ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಸದಸ್ಯರನ್ನು ಆಯ್ಕೆ ಮಾಡುವಂತಹ ಸಮಯದಲ್ಲಿ ಸರ್ಕಾರ ಎಚ್ಚರಿಕೆ ವಹಿಸಿದರೆ, ಬಹುಪಾಲು ಶೇಕಡಾ 99% ಆರೋಪಗಳು ನಿಂತುಹೋಗುತ್ತವೆ. ಆ ಬಗೆಗಿನ ದೂರುಗಳು ಹೊರಟು

ಹೋಗುತ್ತವೆ. ಅದರ ಜೊತೆಗೆ ಪಿ.ಸಿ.ಹೋಟಾ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತಂದರೆ, ಅಲ್ಲಿಗೆ ಎಲ್ಲವೂ ಸರಿಹೋಗುತ್ತದೆ. ಆಗ ಅದು ಸರಿ ದಾರಿಗೆ ಬರುತ್ತದೆ. ಹಾಗಾಗಿ, ಯಾವುದೇ ಕಾರಣಕ್ಕೂ Supreme Court ತೀರ್ಮಾನವನ್ನು ಉಲ್ಲಂಘನೆ ಮಾಡುವುದು ಬೇಡ. ಅದೇರೀತಿ ಹೋಟಾ ಸಮಿತಿಯ ಶಿಫಾರಸ್ಸುಗಳು ಸಹ ಯಾವುದೇ ಕಾರಣಕ್ಕೂ ಉಲ್ಲಂಘನೆಯಾಗುವುದು ಬೇಡ. ಅದಕ್ಕಾಗಿ ಸರ್ಕಾರ ಇದನ್ನು ಮರುಪರಿಶೀಲನೆ ಮಾಡಬೇಕಾಗಿದೆ. ಏಕೆಂದರೆ, ವ್ಯಕ್ತಿತ್ವದ ಪರೀಕ್ಷೆಯೂ ಸಹ ಲಿಖಿತ ಪರೀಕ್ಷೆಯಷ್ಟೇ ಮಹತ್ವದ್ದಾಗಿದೆ. ಏಕೆಂದರೆ, ನಾವು ಸಮರ್ಥವಾದ ನೌಕರರ ಶಾಹಿಯನ್ನು ನಿರ್ಮಾಣ ಮಾಡಬೇಕಲ್ಲವೇ; Bureaucracy is more important than other things. ನಮ್ಮ ಯೋಜನೆಗಳನ್ನು, ನಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ಕೊಡುವ ದಿಶೆಯಲ್ಲಿ, ನಮ್ಮ ಶಾಸನಗಳನ್ನು ಜಾರಿಗೆ ತರುವ ದಿಶೆಯಲ್ಲಿ ಈ bureaucracy, ಕಾರ್ಯಾಂಗ ಬಹಳ ಮುಖ್ಯವಾಗಿ ನಿಲ್ಲುತ್ತದೆ. ನನ್ನ ಎಲ್ಲಾ ಭಾವನೆಗಳು ಮತ್ತು ವಿಚಾರಗಳು ಮಾನ್ಯ ಕಾನೂನು ಸಚಿವರಿಗೆ ಅರ್ಥವಾಗಿದೆ ಎಂದು ಬಾವಿಸಿದ್ದೇನೆ. ನನ್ನ ಬಳಿ ಇನ್ನು ಬಹಳವಾದ ಮಾಹಿತಿ ಇದೆ. ಆದರೆ, ಮಾನ್ಯ ಕಾನೂನು ಸಚಿವರು ಹೆಚ್ಚು ನಿರೀಕ್ಷೆ ಮಾಡುವುದಿಲ್ಲ. ಅದಕ್ಕೆ ನಾನು ನೇರವಾಗಿ ಹೇಳಿದ್ದೇನೆ. ಬೇರೆ ರಾಜ್ಯಗಳಲ್ಲಿ ಇರುವುದಕ್ಕಿಂತ 50% ಕಡಿಮೆ ಮಾಡಿ ಪರವಾಗಿಲ್ಲ, ಆದರೆ, ಬೇರೆ ರಾಜ್ಯಗಳಲ್ಲಿ 10%, 12%, 15%, 17% ರಷ್ಟು ಇರುವಾಗ ನಮ್ಮ ರಾಜ್ಯದಲ್ಲಿ ಕೇವಲ 2% ಗೆ ಇಳಿಸುವುದು ಒಳ್ಳೆಯದಲ್ಲ. ಇದು ಯಾವ ದೃಷ್ಟಿಯಲ್ಲಿಯೂ ಒಳ್ಳೆಯದಲ್ಲ. ಹಾಗಾಗಿ, ಇದರ ಪ್ರಮಾಣವನ್ನು ಹೆಚ್ಚಿಸುವಂತಹ ದಿಶೆಯಲ್ಲಿ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕು ಹಾಗೂ ಅದನ್ನು ಘೋಷಣೆ ಮಾಡಬೇಕೆಂದು ನಾನು ತಮ್ಮ ಮೂಲಕ ನೇರವಾಗಿ ಮಾನ್ಯ ಕಾನೂನು ಸಚಿವರಿಗೆ ಮಾನ್ಯ ಮುಖ್ಯಮಂತ್ರಿಯಗಳ ಪರವಾಗಿ ಮನವಿ ಮಾಡುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ರಮೇಶ್‌ರವರೇ, ತಾವು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು. ದೊಡ್ಡ ಪುಸ್ತಕದಲ್ಲಿನ ಎರಡು ಲೈನ್‌ಗಳನ್ನು ಮಾತ್ರ ಓದಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಬಹಳ ಸಂತೋಷ. ಅದಕ್ಕೆ ತಮಗೆ ಧನ್ಯವಾದಗಳು. ಈಗ ಸದನದಲ್ಲಿ ಚರ್ಚೆಗೆ ಬಂದಿರುವಂತಹ ವಿಷಯದ ಮೇಲೆ ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಸರ್ಕಾರ ನಿರ್ಧಾರ ತೆಗೆದುಕೊಳ್ಳಬಹುದು. ಆದರೆ, ಸಂವಿಧಾನ ಬದ್ಧವಾದ ಒಂದು ಇಲಾಖೆ ಅಥವಾ ಒಂದು ಸಂಸ್ಥೆಯನ್ನು consultation ಮಾಡದೇ, ಏನು ಮಾಡುವುದಕ್ಕೆ

ಆಗುವುದಿಲ್ಲವೆಂದು ಇದೆ. Commission ಎಂದರೆ, ಸರ್ಕಾರ ನೇಮಕ ಮಾಡಿರುವಂತಹ ಅಧ್ಯಕ್ಷರು ಮತ್ತು ಅದರ ಸದಸ್ಯರನನ್ನು ಒಳಗೊಂಡಿರುತ್ತದೆ. ಆ Commission ನಲ್ಲಿ ಈ ವಿಷಯವನ್ನು ಇಟ್ಟು ಚರ್ಚೆ ಮಾಡಿ 50 ಅಂಕಗಳಿಂದ, ಅದನ್ನು 25 ಅಂಕಗಳಿಗೆ ಇಳಿಸುವುದಕ್ಕೆ ಅಲ್ಲಿಂದ resolution ಮೂಲಕ ಸರ್ಕಾರಕ್ಕೆ ಬಂದಿದೆಯೇ; Article 320 ಪ್ರಕಾರ, ಇದನ್ನು ಮಾಡಲಾಗಿದೆಯೇ; Article 320(5)ರ ಪ್ರಕಾರ ಸರ್ಕಾರಕ್ಕೆ ಅಧಿಕಾರ ಇದೆ. ಇದನ್ನು ಸರ್ಕಾರ ಮಾಡಿದೆಯೇ ಎಂಬ ಈ ಎರಡು ಅಂಶಗಳಿಗೆ ಮಾನ್ಯ ಕಾನೂನು ಸಚಿವರು clarify ಮಾಡಬೇಕು. ಹೌದು, ಅವರು resolution ಮಾಡಿದ್ದಾರೆಂದರೆ, ಅದು ದಯವಿಟ್ಟು ಇಲ್ಲಿ record ಆಗಲಿ.

**ವೈಸ್ ಛೇರ್ಮನ್:-** ಮಾನ್ಯ ಕಾನೂನು ಸಚಿವರೇ, ತಾಲ್ಲೂಕು ಮಟ್ಟದಲ್ಲಿ, ವಿಭಾಗ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯವನ್ನು ಮುನ್ನಡೆಸಬೇಕಾದರೆ, ಅಧಿಕಾರಿಯಾಗುವವರಿಗೆ ನಾಯಕತ್ವದ ಗುಣ ಇರಬೇಕೆಂದು ಹೇಳುತ್ತಾರೆ. ಇದು ಒಂದು. ಈ ನಾಯಕತ್ವದ ಗುಣವನ್ನು ವ್ಯಕ್ತಿತ್ವದ ಮೂಲಕ ಗುರುತಿಸಬೇಕಾಗಿದೆ. ಮಾನ್ಯ ಸದಸ್ಯರುಗಳು ಹೇಳಿದ ಎಲ್ಲಾ ಭಾವನೆಗಳನ್ನು ಅರ್ಥ ಮಾಡಿಕೊಂಡರೆ, System ನಲ್ಲಿ ಏನಾದರೂ ಬದಲಾವಣೆ ತರುವುದಿದ್ದರೆ ತರಬೇಕು. ನೆಗಡಿಯಾದರೆ, ಮೂಗು ಕತ್ತರಿಸಿದಂತೆ ಆಗಿದೆ. ಇದು ಆಗುವುದು ಬೇಡ. ಅದಕ್ಕೆ system ನಲ್ಲಿ ಏನಾದರೂ ಬದಲಾವಣೆ ತರುವಂತಹ ವ್ಯವಸ್ಥೆ ಮಾಡಿ. ಇದರಿಂದ ಗ್ರಾಮೀಣಾ ಪ್ರದೇಶದ ಮಕ್ಕಳಿಗೆ ಅನುಕೂಲವಾಗಲಿ. ಏಕೆಂದರೆ, ನಾಯಕತ್ವದ ಗುಣ ಗ್ರಾಮೀಣಾ ಪ್ರದೇಶದ ಮಕ್ಕಳಲ್ಲಿ ಹೆಚ್ಚಾಗಿ ಇರುತ್ತದೆ. ಅದಕ್ಕೆ ಅವರಿಗೆ ಒಂದು ನ್ಯಾಯವನ್ನು ಒದಗಿಸುವುದಕ್ಕೆ ಆಗುತ್ತದೆಯೇ ಎಂಬ ಬಗ್ಗೆ ಚಿಂತನೆ ಮಾಡಿ, ತಾವು ಉತ್ತರವನ್ನು ಕೊಡಿ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನ್ಯಾಯವಾಗದ ರೀತಿಯಲ್ಲಿ ಉತ್ತರ ಬಂದರೆ, ಸಂತೋಷ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ನಾನು ಮಾನ್ಯ ಸದಸ್ಯರು ಹೇಳಿರುವಂತಹ ಎಲ್ಲಾ ವಿಷಯಗಳನ್ನು ಆಲಿಸಿದ್ದೇನೆ. ಮಾನ್ಯ ಸದಸ್ಯರು ಸರ್ಕಾರಕ್ಕೆ basically Article 320 ರಡಿ ಅಧಿಕಾರ ಇದೆಯೇ ಎಂದು ಕೇಳಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದೆ ಎಂದು ಹೇಳಿದ ಮೇಲೆ, ನಾನು ಆ ವಿಷಯಕ್ಕೆ ಹೋಗುವುದಿಲ್ಲ. It is consultative provision, not a mandatory provision. You can understand law better. 2000 ನಲ್ಲಿ rules ಬದಲಾವಣೆ ಮಾಡಿ notification ಮಾಡಿದಾಗ,

(ಮುಂದು)

(668) 28-03-2022 (4.40) ಎಂವಿ-ಆರ್‌ಎನ್

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

With respect to any of the matters mentioned in sub-clause (a) to (e) of clause (3) of the Article 320 of the Constitution the case of service and the post specified in annexure-1 to regulations ನಲ್ಲಿ in regard to making rules regulating recruitment to Civil service of the State and Civil posts in connection of the affairs of the State ಇದರಲ್ಲಿ ನಾವು exemptions ತೆಗೆದುಕೊಂಡಿದ್ದೇವೆ. ನಾವು ಅವರನ್ನು consult ಮಾಡುವ ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಎರಡನೆಯದು ಏನೆಂದರೆ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು P.C.Hota ಸಮಿತಿ ಬಗ್ಗೆ ಮಾತನಾಡಿದರು. ಇದರಲ್ಲಿ ಆ ಸಮಿತಿಯವರು ಬಹಳ ಸ್ಪಷ್ಟವಾಗಿ ಹೇಳುತ್ತಾರೆ. ಅಂದರೆ, The weightage of 10.25 percentage of marks in interview test is in conformity with the ratio. The Apex Court of India in two judgments: Ashok Kumar Yadav vs. State of Hariyana (1987 AIR 454) & Lila Dhar vs. State of Rajasthan (1981 AIR 1777) it is held that disproportionately high percentage of marks for the interview test may vitiate the selection because of a possible scope of subjective by interview boards. ಅವರು ಹೇಳಿರುವುದಕ್ಕೆ ಮಾನ್ಯ ಸುಪ್ರೀಂ ಕೋರ್ಟ್ ಏನನ್ನು ಹೇಳಿದೆ ಎಂದರೆ, a

disproportionately high percentage of marks for the interview test may vitiate the selection because of a possible scope of subjective by interview boards. ಆಗ ಏನಾಯಿತು ಎಂದರೆ, ಇಲ್ಲಿ viva ಗೆ 200 ಅಂಕಗಳನ್ನು ಇಟ್ಟಿದ್ದೆವು. ಭಾರತ ದೇಶದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದಾಗ 'D' Category ಗೆ ಸಂದರ್ಶನ ಮಾಡಬಾರದು ಎಂದು ತೀರ್ಮಾನವಾಯಿತು. ನಾವು clerical cadre ಗೆ ಯಾವುದೇ ರೀತಿಯ ಸಂದರ್ಶನ ಮಾಡಬಾರದು ಎಂಬ ತೀರ್ಮಾನ ತೆಗೆದುಕೊಂಡಿರುವುದು ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರಿಗೆ ಗೊತ್ತಿದೆ. Written test ಆಧಾರದ ಮೇಲೆಯೇ ಅವರಿಗೆ ನೇಮಕಾತಿಯ ಆದೇಶಗಳನ್ನು ನೀಡಬೇಕೆಂದು ಆಯಿತು. ಆಮೇಲೆ ಇದನ್ನು 'C' category ಗಳಿಗೂ ತರಬೇಕೆ? 'C' category ನಲ್ಲಿ ಏನಾಯಿತು ಎಂದರೆ, ಕೆಲವು ಹುದ್ದೆಗಳಲ್ಲಿ ನಾವು ಈಗಾಗಲೇ professional ಇರುವಂತಹ ಕೋರ್ಸ್‌ಗಳಿಗೆ ಸಂದರ್ಶನ ಬೇಡವೆಂದು ನಿರ್ಧಾರ ತೆಗೆದುಕೊಂಡು ಆಯಿತು. ಎಂಜಿನಿಯರಿಂಗ್, ಕೃಷಿ ವಿಜ್ಞಾನ ಮತ್ತು ಡಾಕ್ಟರ್ ಇವರ್ಯಾರಿಗೂ ಸಹ Viva ಬೇಕಾಗಿಲ್ಲ. Written test ಆಧಾರದ ಮೇಲೆ ನೇಮಕಾತಿಯನ್ನು ಕೊಟ್ಟುಬಿಡಿ ಎಂದು ತಿಳಿಸಲಾಯಿತು. ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಕೇಳಿದ ಹಾಗೆ, 'B' category ಯವರನ್ನು 'C' Category ಗೆ ತಂದು ಕೊಡುತ್ತೀರಾ ಎಂದರೆ, Gazetted Probationers ಅಲ್ಲ. You are very much aware. 'B' Category ಯಲ್ಲಿ Non–Gazetted ನವರು ಸಹ ಇದ್ದಾರೆ. Gazetted Probationers ಗಳನ್ನು ಸಂದರ್ಶನವಿಲ್ಲದೇ ನೇಮಕಾತಿ ಮಾಡುವಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿಲ್ಲ. Gazetted Probationers ನವರಿಗೆ ಸಂದರ್ಶನ, Viva ಇದ್ದೇ ಇರುತ್ತದೆ. Gazetted Probationers ಅಲ್ಲದಂತಹ ಹುದ್ದೆಗಳೇನಾದರೂ ಆ ಗ್ರೂಪ್‌ನಲ್ಲಿದ್ದರೆ ಅಂತಹ ಹುದ್ದೆಗಳನ್ನು "ಸಿ" ಕ್ಯಾಟಗರಿಗೆ merge ಮಾಡಿಕೊಂಡು, ಅವರನ್ನು interview–less ಆಗಿ selection ಮಾಡಬೇಕೇ ಎನ್ನುವಂತಹ ಆಲೋಚನೆ ಇರುವುದರಿಂದ, Gazetted Probationers... ಮಾನ್ಯ ಸದಸ್ಯರು ಹೇಳಿದ ಹಾಗೆ Tahsildars and others ಗೆ ಇಲ್ಲ. You have quoted Circle Inspector. ಕರ್ನಾಟಕದಲ್ಲಿ Circle Inspector ಗಳಿಗೆ direct recruitment ಇಲ್ಲ. Only

Sub-Inspector elevated as Circle Inspector. ಅವರು ಆ cadre ನಲ್ಲಿ ಇರುತ್ತಾರೆಂದರೆ, ನಾವು ಅವರನ್ನು select ಮಾಡುವುದಿಲ್ಲ. ಅವರು Sub-Inspector ಆಗಿ ಬಂದಿರುತ್ತಾರೆ. ಹಾಗಾಗಿ, Gazetted Probationers…

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದು ಅವರು "ಬಿ"ಯನ್ನು "ಸಿ" ಗೆ ಕೈಬಿಟ್ಟು, "ಬಿ" ಯನ್ನು "ಸಿ" ಗೆ merge ಮಾಡುತ್ತಿದ್ದಾರೆ. ಇದರಿಂದ ಆಡಳಿತದಲ್ಲಿ ಬದಲಾವಣೆ ಆಗುವಂಥದ್ದಕ್ಕೆ ಹೇಳುವುದು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಚಿವರು):-** ಮಾನ್ಯ ಸಭಾಪತಿಯವರೇ, 'B' Category ನಲ್ಲಿ some posts are non-gazetted posts. In B-category, some posts which are Gazetted Probationers posts. Gazetted Probationers post ಗಳನ್ನು ನಾವು "ಸಿ" ಗೆ ತೆಗೆದುಕೊಳ್ಳುವುದಿಲ್ಲ. ಅವರಿಗೆ ಸಂದರ್ಶನವಿಲ್ಲದೆ ನೇಮಕಾತಿ ಮಾಡುವುದಿಲ್ಲ. Non-Gazetted posts ಗಳು "ಸಿ" ನಲ್ಲಿ ಇತ್ತು. ಅದನ್ನು interview ಬಿಟ್ಟು ಮಾಡಬೇಕೇ ಎಂದು ಯೋಚನೆ ಮಾಡುತ್ತಿದ್ದೇವೆ. ಈಗ wide gap; two hundred marks gap ಅದು ಮಾನ್ಯ ಎಸ್.ರುದ್ರೇಗೌಡರಿಗೂ ಸಹ ಗೊತ್ತಿದೆ. ನಾವು 2011ರ ಬ್ಯಾಚ್ ಅನ್ನು challenge ಮಾಡಿ, ಮಾತನಾಡಬೇಕಾಗುತ್ತದೆ. ಈಗ ಸುಪ್ರೀಂ ಕೋರ್ಟ್‌ಗೆ ಹೋಗಿ ಆಗಿರುವುದು ಏನೆಂದರೆ, highest merit 1037 marks ಅನ್ನು ಶ್ರೀಮತಿ ಮೈತ್ರಿ ಎಂಬುವವರು ತೆಗೆದುಕೊಂಡರು. Followed by 900 and add ಮತ್ತೊಂದು ಅಭ್ಯರ್ಥಿ ತೆಗೆದುಕೊಂಡರು. 900 add marks ಗೆ 148, 149 marks ಕೊಟ್ಟು, ಈಕೆಗೆ ಕೇವಲ 75 marks ಕೊಟ್ಟಿದ್ದಕ್ಕೆ, ಇಡೀ 2011 batch struck ಆಯಿತು. Gap of 74 marks, ನಾವು ಅದನ್ನು ಹೇಳಬೇಕಲ್ಲವೇ? ಏನು ಅದು what is the cause of action for that? ನಾನು written test ನಲ್ಲಿ 1037 ಅಂಕಗಳನ್ನು ತೆಗೆದುಕೊಂಡಿದ್ದೇನೆ. Followed by a candidate who have secured only 900 and add marks he selected by making a difference of 50%. ಇದಕ್ಕೆ ಸರ್ಕಾರ ಏನೆಂದು ಹೇಳಬೇಕು? ಸರ್ಕಾರ ಇದಕ್ಕೆ ಉತ್ತರ ನೀಡಬೇಕಲ್ಲವೇ? ಕೋರ್ಟ್ ಸಹ

struck ಮಾಡಿತು. ಇದು ಏನು ಇಷ್ಟೊಂದು discretionary power ಅನ್ನು ಕೊಡಬೇಕಾ? ಮೇಡಂ, ನಾವು ಯಾರಿಗೆ select ಮಾಡುವುದು. They are all toppers. 1:3, 1:5 ಆ ಲೆವೆಲ್‌ಗೆ ಬಂದಿರುವಂತಹವರಿಗೆ ಸಂದರ್ಶನಕ್ಕೆ ಕರೆಯುವುದು. ಈಗ ಯಾರೋ ತಳಹಂತದಲ್ಲಿ ಇರುವಂತಹವರನ್ನು ಸಂದರ್ಶನಕ್ಕೆ ಕರೆಯುವುದಿಲ್ಲ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ, ಲಿಖಿತ ಪರೀಕ್ಷೆಯಲ್ಲಿ ಒಬ್ಬೊಬ್ಬರಿಗೆ 5, 10, 20, 30 ಅಂತರದಲ್ಲಿ 1:3 ಯಲ್ಲಿ ಸಂದರ್ಶನಕ್ಕೆ ಕರೆದಾಗ ವ್ಯತ್ಯಾಸ ಬರಬಹುದು. ಆಕಸ್ಮಿಕವಾಗಿ ಇಂತಹ ಪ್ರಕರಣಗಳಲ್ಲಿ 60 ರಿಂದ 70 ಅಂಕಗಳು ಬಂದಾಗ ಇದಕ್ಕೆ ಉತ್ತರ ಹೇಳಬೇಕಲ್ಲವೇ? ನಾವು ಆ ಅಂಕಗಳಲ್ಲಿ ಬಹಳ discretion ಕೊಡಬಾರದು, ಈ ಮಾತುಗಳಿಗೆಲ್ಲಾ ನಾವು ಉತ್ತರ ಏಕೆ ಹೇಳಬೇಕು. No record will be available. Interview ನಲ್ಲಿ marks ಸರಿಪಡಿಸಿ.

**ಶ್ರೀ ಎಸ್.ರುದ್ರೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಅಂಕದಲ್ಲಿ ಏನು ವ್ಯತ್ಯಾಸವಾಗಿತ್ತು. ಆ ಅಭ್ಯರ್ಥಿ ಸೋಲಿಗರ ಹೆಣ್ಣು ಮಗಳು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ. ನನಗೆ ಮಾನ್ಯ ಸದಸ್ಯರ ಬಗ್ಗೆ ತುಂಬಾ ಗೌರವವಿದೆ. ನಾನು ಮಾನ್ಯ ಸದಸ್ಯರ ವಿಷಯದ ಬಗ್ಗೆ ಮಾತನಾಡುತ್ತಿಲ್ಲ. ಮಾನ್ಯ ಸದಸ್ಯರು ಈ ವಿಷಯ conclude ಆದ ಮೇಲೆ ಮಾತನಾಡಲಿ. ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಇಷ್ಟೊಂದು discretion power ಇರಬೇಕೇ ಎಂಬ ಆಲೋಚನೆಯಾಯಿತು. ಮಾನ್ಯ ಸುಪ್ರೀಂ ಕೋರ್ಟ್ ಸಹ ಹೇಳಿತು. Disproportionate ಆಗಿ interview ನಲ್ಲಿ ಅಂಕಗಳನ್ನು ಕೊಡಬೇಡಿ ಎಂದು. ಮಾನ್ಯ ಸದಸ್ಯರು ಒಂದು ಪ್ರಶ್ನೆ ಕೇಳಿದರು, Administration is common sense. Administration depends on training, not by selection. ಅವರು ಆಡಳಿತದಲ್ಲಿ ಬರುತ್ತಿದ್ದ ಹಾಗೆಯೇ ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳನ್ನು ಆಡಳಿತ ನಡೆಸಿ ಎಂದು ಕಳುಹಿಸುವುದಿಲ್ಲ. Training impart ಮಾಡುತ್ತೇವೆ, method of training and help of training helps in getting a good administration and governance. Train

ಮಾಡುವುದಕ್ಕೆ ಯಾವ ಪದಾರ್ಥ ಸೂಕ್ತ, raw material ಚೆನ್ನಾಗಿ ಇದೆಯೋ ಇಲ್ಲವೋ ಅಷ್ಟೇ ಮಾಡುವುದು ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ. ಈಗ ಪ್ರಶ್ನೆ ಏನೆಂದರೆ, ನಾವು ಈಗ ಇದಕ್ಕೆ ಒಂದು ಇತಿಶ್ರೀ ಹಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೆಲವು ಹುದ್ದೆಗಳಿಗೆ ಸಂದರ್ಶನ ಬೇಡವೆಂದು ತೀರ್ಮಾನ ಮಾಡಿಬಿಟ್ಟಿದ್ದೇವೆ. ಅಂದರೆ, ಎಂಜಿನಿಯರ್, ಡಾಕ್ಟರ್, ಕೃಷಿ ಅಧಿಕಾರಿಗಳು, ಸಬ್ ಇನ್ಸ್‌ಪೆಕ್ಟರ್‌ರವರನ್ನು ಮೊದಲೇ ನಾವು Public Service Commission scope ನಿಂದ ಹೊರಗಡೆ ಇಟ್ಟುಬಿಟ್ಟು ಅವರಿಗೆ ಸಂದರ್ಶನವಿಲ್ಲ. ಈಗ ಸಂದರ್ಶನವಿಲ್ಲದೆ ಏನು ನೇಮಕಾತಿಯಾಗಿದೆ, ಎಲ್ಲೂ ಸಹ ಆಪಾಧನೆಗಳು ಸರ್ಕಾರದ ಮೇಲೆ ಈ ಪ್ರಮಾಣದಲ್ಲಿ ನೇಮಕಾತಿ ಆಗುವಂತಹ ಸಂದರ್ಭದಲ್ಲಿ ಆಗಲಿಲ್ಲ ಮಾನ್ಯ ಮರಿತಿಬ್ಬೇಗೌಡರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, due to merit.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, due to merit, ಹಾಗಾಗಿ ಇದಕ್ಕೆ ನಾವು ಏನಾದರೊಂದನ್ನು ಮಾಡಲೇಬೇಕು ಮತ್ತು ಕಡಿಮೆ ಮಾಡಬೇಕೆಂದು we cutdown it to 50 marks. 200 ಅಂಕ ಇದ್ದದ್ದನ್ನು 50 ಅಂಕಗಳಿಗೆ ತಂದರು. ರೀತಿ ತರಬೇಕಾದರೆ, Written Test marks ಅನ್ನು optional marks ಕಡಿಮೆ ಮಾಡಿ, 300 ರಿಂದ 400 ಅಂಕಗಳನ್ನು ಲಿಖಿತ ಪರೀಕ್ಷೆಯಲ್ಲೂ ಸಹ ಕಡಿಮೆ ಮಾಡಿ, ಇಲ್ಲಿಗೆ ತಂದಿದ್ದೇವೆ. ಈಗ ನಮ್ಮ ಮುಂದೆ ಇರುವಂತಹ ಪ್ರಶ್ನೆ ಈ gap ಅನ್ನು ಕಡಿಮೆ ಮಾಡಲೇಬೇಕು. ನೀವು ಇಷ್ಟೊಂದು ಮಾತನಾಡುತ್ತೀರಿ. ವಿಧಾನ ಸಭೆಯಲ್ಲೂ ಸಹ ನಾನೇ ಉತ್ತರವನ್ನು ನೀಡಿದ್ದೇನೆ. The difference between a rural and urban student is in speaking, not in getting written test marks. ಈಗ ಹಳ್ಳಿ ಹುಡುಗ ಏನಾದರೂ miserable ಆಗಿ performance ಮಾಡುತ್ತಾನೆಂದರೆ, ಅವರು ಮಾತನಾಡುವುದಕ್ಕೆ ಕಷ್ಟವಾಗುತ್ತದೆ. Because his school, ಅವರ ಸ್ಟಡಿ ಕನ್ನಡ ಮಾಧ್ಯಮದಲ್ಲಿ ಇರುತ್ತದೆ ಮತ್ತು rural background ನಲ್ಲಿ ಇರುತ್ತದೆ. ಅವರು ಕಷ್ಟಪಟ್ಟು ಬರೆಯುತ್ತಾರೆ. ಆದರೆ, communicate ಮಾಡುವುದಕ್ಕಾಗುವುದಿಲ್ಲ. It is his problem. ಅವರಿಗೆ communicate ಮಾಡುವುದಕ್ಕೆ ಆಗುವುದೇ ಇಲ್ಲ. That is where he fails. Number one doctors

who are very good profession or in marks. ಅವರು GATE Examination pass ಆಗಿ ಲಂಡನ್ ಮತ್ತು ಅಮೆರಿಕಾಕ್ಕೆ ಹೋಗುವುದಕ್ಕೆ ಆಗುತ್ತಿಲ್ಲ. ಏಕೆಂದರೆ, English ಇಲ್ಲ. ಮತ್ತೆ interview ನಲ್ಲಿ he will never fair better. ಈ ಸ್ಥಿತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಎಸ್.ರುದ್ರೇಗೌಡರು ಹೇಳಿದರು ಹಳ್ಳಿ ಮಕ್ಕಳಿಗೆ ಅನ್ಯಾಯವಾಗುತ್ತದೆ ಎಂದು. How will you distinguish? ಈಗ ಯಾರು ಹಳ್ಳಿ ಹುಡುಗ ಯಾರು ಟೌನ್ ಹುಡುಗ ಎಂದು ಗೊತ್ತಾಗುವುದಕ್ಕೆ ಅವರ ಹತ್ತಿರ mode ಇಲ್ಲ. ಅವರ ಹತ್ತಿರ ಯಾರಿಗೆ written test ನಲ್ಲಿ ಜಾಸ್ತಿ ಅಂಕ ಬಂದಿದೆ, ಯಾರಿಗೆ ಅಂಕ ಕಡಿಮೆ ಬಂದಿದೆ ಗೊತ್ತಿರುವುದಿಲ್ಲ. ಅದು ಗೊತ್ತಾದರೆ ಅದು ಗೋಲ್‌ಮಾಲ್ ಎಂದು ತೀರ್ಮಾನವಾಗಿ ಹೋಗುತ್ತದೆ. ಇವತ್ತು ಕೆ.ಪಿ.ಎಸ್.ಸಿ.ನಲ್ಲಿ ಇರುವಂತಹ ಸ್ಥಿತಿಯಲ್ಲಿ will not be disclosed. ಸಂದರ್ಶನವಾಗುವವರೆಗೆ ಯಾವುದೇ ಅಭ್ಯರ್ಥಿ ಲಿಖಿತ ಪರೀಕ್ಷೆಯಲ್ಲಿ ಎಷ್ಟು ಅಂಕ ತೆಗೆದುಕೊಂಡಿರುತ್ತಾರೆಂದು ಗೊತ್ತಾಗುವುದಕ್ಕೆ ಸಾಧ್ಯವಿಲ್ಲ ಮತ್ತು ಗೊತ್ತಾಗಕೂಡದು. ಲಿಖಿತ ಪರೀಕ್ಷೆಯಲ್ಲಿ ಅವರಿಗೆ ಎಷ್ಟು ಇದೆ ಮತ್ತು ಎಷ್ಟು ಇಲ್ಲವೆಂದು ಗೊತ್ತಿಲ್ಲದಾಗ how can you there to help a man? ಈಗ ಅಂಕವನ್ನು ಸಂದರ್ಶನದಲ್ಲಿ ಚೆನ್ನಾಗಿ ಮಾಡುವವರಿಗೆ ಕೋಡಬೇಕಾ? ಅಥವಾ ನಾವು ಯಾರಿಗೋ ಸಹಾಯ ಮಾಡುತ್ತೇವೆಂದು ಮಾತನಾಡಬೇಕೇ Interview Committee ಯವರು. Are we supposed to say? ಈ ರೀತಿಯ ಮಾತು ಹೊರಗಡೆ ಹೋದರೆ ಏನಾಗುತ್ತದೆ? ನಾವು ಯಾರಿಗೂ ಸಹಾಯ ಮಾಡಬೇಕು, ಅದಕ್ಕೆ ನೀವು hide ಮಾಡಿ, ಅಂಕವನ್ನು ಜಾಸ್ತಿ ಇಡದೇ ಹೋದರೆ, ಅವರಿಗೆ ಮಾಡುವುದಕ್ಕೆ ಆಗುವುದಿಲ್ಲ, ಇವರಿಗೆ ಮಾಡುವುದಕ್ಕೆ ಆಗುವುದಿಲ್ಲ ಎಂದರೆ, No, it cannot be tolerated. ಅದು ಆಗುತ್ತದೆಯೇ? ಈಗ ಯಾರು ಚೆನ್ನಾಗಿ perform ಮಾಡುತ್ತಾರೋ ಅವರಿಗೆ ಅಂಕಗಳನ್ನು ನೀಡಬೇಕು ಅಷ್ಟೆ. ಅವರು ಹೇಳುವುದು ನಿಜ. ಹೌದು ಅವರಿಗೆ ಆ ಸ್ಕಿಲ್ ಬೇಕು. ಆ ಸ್ಕಿಲ್ ಪ್ರಶ್ನೆ ಬರುವುದು ಯಾವಾಗ? ನಾನು ಹೇಳಿದ್ದು ಗೌರವ ಬರುತ್ತದೆ ಎಂದು. ಈಗ ಎಲ್ಲೋ ಒಂದು ಕಡೆ ನಾವು ಹೇಳಿದರೆ ಅವರು ಆಯ್ಕೆಯಾಗುತ್ತಾರೆ ಎನ್ನುವಂತಹ ಸ್ಥಿತಿಗಳನ್ನು ನಿರ್ಮಾಣ ಮಾಡಿ, ಅಭ್ಯರ್ಥಿಗಳನ್ನು ಇಲ್ಲಿಗೆ ತರುತ್ತಿದ್ದೇವೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ನನ್ನ ಹಾಗೆ ಹಳ್ಳಿ ಹಿನ್ನೆಲೆ

ಇರುವಂತಹವರು. Try to understand. ಈಗ ಹಳ್ಳಿ ಮಕ್ಕಳು spoken language ನಲ್ಲಿ ಇರುವುದಿಲ್ಲ. Speaking ನಲ್ಲೇ ಅವರಿಗೆ ಹೊಡೆತ ಬೀಳುತ್ತಿರುವುದು. ಈ ಭಾಷೆ ಮೊದಲಿನಿಂದ ಬರುವುದಕ್ಕೂ, ಮಧ್ಯದಲ್ಲಿ ಪಿ.ಯು.ಸಿ. ಆದ ನಂತರ ಕಲಿಯುವುದಕ್ಕೂ ಎಷ್ಟು ವ್ಯತ್ಯಾಸವಿದೆ ಮಾನ್ಯ ಎಸ್.ಎಲ್.ಭೋಜೇಗೌಡರೆ. ನನ್ನ ಅನೇಕ ಸ್ನೇಹಿತರು, Professors, they used to feel. ನನಗೂ ಸಹಿತ ಭಾಷಣ ಮಾಡಬೇಕಾದರೆ ಹಿಡಿದುಬಿಡುತ್ತದೆ. ಎಲ್ಲೋ ಒಂದು ಕಡೆ ಇಂಗ್ಲಿಷ್ ಭಾಷೆ ಬಳಸಬೇಕಾದರೆ ಒಳಗೆ ಹಿಡಿದುಬಿಡುತ್ತದೆ. ಏಕೆಂದರೆ, ನಾವು bottom ನಿಂದ ಬಂದಿಲ್ಲ. ನಾವು ಮಧ್ಯದಲ್ಲಿ ಬಂದಿರುವಂತಹವರು. ಹಾಗಾಗಿ ಆ ಮಕ್ಕಳಿಗೆ ಏನಾದರೂ scope ಕೊಡಬೇಕಾ? ಅವರು ಕಷ್ಟಪಟ್ಟು ಪರೀಕ್ಷೆಯಲ್ಲಿ ಬರೆದಿರುತ್ತಾನೆ. ಆದರೆ, ಅವರು ಉತ್ತರ ಕೇಳಿದಾಗ ಹೇಳುವುದಕ್ಕೆ ಆಗುವುದಿಲ್ಲ.

**(ಮುಂದು)**

**(669) 28.03.2022 04.50 LL-RN**

**ಶ್ರೀ ಜೆ.ಸಿ. ಮಾಧುಸ್ವಾಮಿ(ಮುಂದು):-**

ಆ ಅಭ್ಯರ್ಥಿಗೆ ಇಂಗ್ಲಿಷ್ ಭಾಷೆ ಬರುತ್ತದೆ. ಆದರೆ, ಅದು ತಾಯಿ ಭಾಷೆ ಆಗಿರುವುದಿಲ್ಲ. ಆ ಭಾಷೆ ಇರುತ್ತದೆ, ಈ ಭಾಷೆ ಇರುವುದಿಲ್ಲ. ಎಲ್ಲಿಯೋ ಒಂದು ಕಡೆ ಅವನಿಗೆ ಇದು ನಿಜವಾಗಿ ತೊಡಕು ಆಗುತ್ತಿದೆ. ಹಾಗಾಗಿ, ಈ ತೊಡಕನ್ನು ನಿವಾರಣೆ ಮಾಡಬೇಕು. ಲಿಖಿತ ಪರೀಕ್ಷೆಯಲ್ಲಿ ಆತ ಪ್ರೂವ್ ಮಾಡುತ್ತಾನೆಂದರೆ, ಇಲ್ಲಿ ಯಾರದ್ದೋ ಕೈಯಲ್ಲಿ ಆತ ಸಿಕ್ಕಿಹಾಕಿಕೊಂಡು ಅಂಕಗಳಲ್ಲಿ ಮುಂದೆ ಇದ್ದವನು ಹಿಂದೆ ಹಾಗೂ ಹಿಂದೆ ಇದ್ದವನು ಮುಂದೆ ಹೋಗುವುದು ಸರಿಯೇ? Proportionate marks ಕೊಡುವುದು ನಾವು. ಆ proportionate marks ಅನ್ನು ನಾವು 50 ಇದ್ದರೂ ಕೂಡ ಕೊಡುತ್ತೇವೆ. 10 ಇದ್ದರೂ ಅಥವಾ 100 ಅಂಕ ಇದ್ದರೂ ಸಹ proportionate ಆಗಿ ಕೊಡುತ್ತೇವೆ. ಅಲ್ಲಿ ಸುಮಾರು 6 ಜನ ಅಥವಾ 4 ಜನ ಕುಳಿತುಕೊಂಡು ಮಾರ್ಕ್ಸ್ ಅನ್ನು ಹಾಕುತ್ತಾರೆ. 100 ಅಂಕಗಳಿಗೆ 20 ಅಂಕಗಳನ್ನು ನೀಡಿದರೆ, 10 ಅಂಕಗಳಿಗೆ 2 ಅಂಕಗಳನ್ನು ನೀಡಿದ ರೀತಿಯೇ

ಆಗುತ್ತದೆ. ಆ ರೀತಿಯ ಅಂಕಗಳನ್ನು ನೀಡಬೇಕಾದರೆ, ಅಂಕಗಳ ಮಧ್ಯೆ ಅಂತರ ಏತಕ್ಕೆ ಜಾಸ್ತಿ ಇರಬೇಕೆಂಬ ಬೇಡಿಕೆ ಇದೆ ಎಂಬುದು ನನಗೆ ಗೊತ್ತಿರುವುದಿಲ್ಲ.

ಆದಾಗ್ಯೂ, ನಾವು ಇದನ್ನು ಅಂತಿಮ ಮಾಡಿರುವುದಿಲ್ಲ. **(ಗೊಂದಲ)** ನಾವು ಈ ವಿಷಯದಲ್ಲಿ ಆಕ್ಷೇಪಣೆಗಳನ್ನು ಕೋರಿರುತ್ತೇವೆ. ಈ ವಿಷಯದಲ್ಲಿ ಸಾರ್ವಜನಿಕವಾಗಿ ಏನು ಆಕ್ಷೇಪಣೆ ಬರುತ್ತದೆ ಎಂಬುದನ್ನು ಕೇಳುತ್ತಿದ್ದೇವೆ. ಏತಕ್ಕೆ ಎಂದರೆ, ಈ ಹಿಂದೆ 50 ಅಂಕಗಳಿಗೆ ಇಳಿಸಿದಾಗ we have been appreciated. ಸರ್ಕಾರಕ್ಕೆ ಬಹಳ ಪ್ರಶಂಸೆಗಳು ಬಂದಿರುವುದು ನಿಜ. "ಈ ಹಿಂದೆ 200 ಅಂಕಗಳನ್ನು ಇಟ್ಟು, ಒಳ್ಳೆಯ ಪ್ರತಿಭಾನ್ವಿತ ಅಭ್ಯರ್ಥಿಗಳ ತಲೆ ಬೋಳಿಸಿದ್ದೀರಿ. ಆದರೆ, ಈಗ ಆ ಅಂಕಗಳನ್ನು 50 ಕ್ಕೆ ಇಳಿಸಿ, ಈ ಸರ್ಕಾರ ಒಂದು ಒಳ್ಳೆಯ ಕೆಲಸ ಮಾಡಿದೆ" ಎಂದು ನಾವು ಸಾರ್ವಜನಿಕರಿಂದ ಅನ್ನಿಸಿಕೊಂಡಿರುತ್ತೇವೆ. ಇನ್ನು ಆಳವಾಗಿ ಹೋದರೆ, ಏನಾದರೂ ಒಳ್ಳೆಯ ಹೆಸರು ಬರುತ್ತದೋ ಅಥವಾ ಇಲ್ಲವೋ ಎಂದು ಭಾವಿಸಿ, ಆ ಅಂಕಗಳನ್ನು 25ಕ್ಕೆ ಇಳಿಸಿ ಕೇವಲ ನೋಟಿಫಿಕೇಷನ್ ಹೊರಡಿಸಿದ್ದು, ತೀರ್ಮಾನ ತೆಗೆದುಕೊಂಡಿರುವುದಿಲ್ಲ. If largescale objections comes, valid objections comes, government will take decision. We are there to receive calls. ಸಾರ್ವಜನಿಕ domain ನಾವು ಬಿಟ್ಟಿರುತ್ತೇವೆ. ಅದರಂತೆ, ಸಾರ್ವಜನಿಕರಿಂದ ತಕರಾರು ಬರಲಿ. ಅದನ್ನು ಜನ ಒಪ್ಪುತ್ತಾರೋ, ಬಿಡುತ್ತಾರೋ ನೋಡೋಣ ಅದನ್ನು ನೋಡಿ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. It is open to public ಇರುವಾಗ ಸರ್ಕಾರ ಇದರ ಮೇಲೆ ಆಟ ಆಡುವುದಕ್ಕೆ ಕುಳಿತಿರುವುದಿಲ್ಲ. ಎಲ್ಲಿಯೋ ಒಂದು ಕಡೆ ಈ ಹಿಂದೆ ಇದ್ದಂತಹ 200 ಅಂಕಗಳನ್ನು 50 ಅಂಕಗಳಿಗೆ ಇಳಿಸಿದ್ದಕ್ಕೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬಂತು ಎಂದು ಅನ್ನಿಸಿರುತ್ತದೆ. ಆ ಸಂದರ್ಭದಲ್ಲಿ ಬಹಳ ಪ್ರಶಂಸೆಗಳು ಬಂದಿರುತ್ತದೆ. ಅದು ತಮ್ಮೆಲ್ಲರಿಗೂ ಗೊತ್ತಿರುತ್ತದೆ. ಹಾಗಾಗಿ, ನಾವು ಆ ಅಂಕಗಳನ್ನು 50 ರಿಂದ 25 ಕ್ಕೆ ಇಳಿಸಿರುತ್ತೇವೆ.

ನಮ್ಮ ಸರ್ಕಾರಕ್ಕೆ ಮಾನ್ಯ ಸದಸ್ಯರ ಬಗ್ಗೆ ಅಥವಾ ಬೇರೆ ಯಾರ ಬಗ್ಗೆಯೂ ಸಹ ಅನುಮಾನ ಅಥವಾ ಅಗೌರವವನ್ನು ಇಟ್ಟುಕೊಂಡಿರುವುದಿಲ್ಲ. ನಮ್ಮ ಸರ್ಕಾರವೇ ಮಾನ್ಯ ಸದಸ್ಯರ ಬಗ್ಗೆ ಬಹಳ

ಗೌರವ ಇಟ್ಟುಕೊಂಡಿರುತ್ತದೆ. ಎಲ್ಲರೂ ಸಹ ಅವರವರ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡಿರುತ್ತಾರೆ. ಅದರಂತೆ, ಅವರು ಅಂಕಗಳನ್ನು ಕೊಟ್ಟಿರುತ್ತಾರೆ. ಆದರೆ, ನಾವು ಅಲ್ಲಿ ಹೋಗುವಂತಹ ಅಭ್ಯರ್ಥಿಗಳ ದೃಷ್ಟಿಯಿಂದ ಅಲ್ಲಿಗೆ ಸ್ವಲ್ಪ ಮಟ್ಟದ ಗ್ರಾಮೀಣ ಭಾಗದ ಮಕ್ಕಳು ಹೋಗಲಿ ಎಂದು ಹಾಗೂ ಅದಕ್ಕೆ ಬಹಳ ಸ್ಕೋಪ್ ಕೊಡಬಾರದು ಎನ್ನುವ ದೃಷ್ಟಿಯಿಂದ ಈ ರೀತಿ ಮಾಡಿರುತ್ತೇವೆ. ಆ ಅಭ್ಯರ್ಥಿ ಲಿಖಿತ ಪರೀಕ್ಷೆಯನ್ನು ಬಹಳ ಚೆನ್ನಾಗಿ ಮಾಡಿ ಬರುತ್ತಾನೆಂದರೆ, ಸಂದರ್ಶನದಲ್ಲಿ ಆತನ ಹಣೆಬರಹವನ್ನು ನಾವು ಬದಲಾಯಿಸುವುದು ಸರಿಯಲ್ಲ. ಆದರೆ, ಮಾನ್ಯ ಸದಸ್ಯರು "ಎರಡು ಬಹಳ ಪ್ರಮುಖವಾಗಿವೆ" ಎಂದು ಹೇಳಿದರು. You are rightly said tenders are manufactured. Examinations, interviews are manufactured. Promotions are manufactured. ನಾವು ಯಾರಿಗಾದರೂ ಮುಂಬಡ್ತಿ ಕೊಡಬೇಕಾದರೆ ಅರ್ಹತೆ ನಿಗದಿ ಮಾಡುವಾಗ ಅದನ್ನು ನಿಗದಿ ಮಾಡುವುದು. ಯಾರನ್ನಾದರೂ ಆಯ್ಕೆ ಮಾಡಬೇಕಾದರೆ ಆ ಸಂದರ್ಭದಲ್ಲಿ ಪ್ರಶ್ನೆಗಳನ್ನು ಕೇಳುವುದು. ಯಾವುದೋ ವ್ಯಕ್ತಿ ಟೆಂಡರ್ ಅನ್ನು ಒಪ್ಪಿಗೆ ನೀಡಬೇಕಾದರೆ pre-qualification, work done fix ಮಾಡುವುದು. ನಾವು ಆಡಳಿತದಲ್ಲಿ ಈ ಮಟ್ಟಕ್ಕೆ ಬಂದು ನಿಂತಿರುತ್ತೇವೆ. Which is transparent? Are we transparent? ಇದು ಪಾರದರ್ಶಕತೆ ಅಲ್ಲ. ಈ ಪ್ರಯೋಗ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕು. If it is a successful experiment, will go ahead. Otherwise, we will drop this.

ಎರಡನೆಯದಾಗಿ, ಇದಕ್ಕೂ ತಹಶೀಲ್ದಾರ್‌ರವರ ಹುದ್ದೆಗೆ ಸಂಬಂಧ ಇರುವುದಿಲ್ಲ ಅಥವಾ ಇದಕ್ಕೂ Tahsildar ಗೂ ಸಂಬಂಧ ಇರುವುದಿಲ್ಲ Gazetted Probationsಗ್ರೂಪ್ ಬಿ ಹುದ್ದೆಯಿಂದ ಗ್ರೂಪ್ ಸಿ ಹುದ್ದೆಗೆ ಪೂರ್ತಿಯಾಗಿ ಕ್ಲಬ್ ಮಾಡುತ್ತಿಲ್ಲ. "Gazetted Probationer will remain as there. Non-gazetted among Group-B will be taken as 'C' Category. ಗ್ರೂಪ್ ಸಿ ನಲ್ಲಿ ಏನು ಸಂದರ್ಶನ ಮಾಡಿರುತ್ತೇವೆ, ಆ ರೀತಿ ಮಾಡುತ್ತೇವೆಯೇ ಹೊರತು, Gazetted Probationers ಇದು ಅನ್ವಯಿಸುವುದಿಲ್ಲ. ಅವರು ತಾಲ್ಲೂಕು ಮ್ಯಾಜಿಸ್ಟ್ರೇಟ್, ಅವರು ಗೌರವವಾದ ಹುದ್ದೆಗೆ ಹೋಗುತ್ತಾರೆ ಅಥವಾ ಅವರಿಗೆ ಪುಣ್ಯ ಇದ್ದರೆ

ಐ.ಎ.ಎಸ್. ಶ್ರೇಣಿಗೆ ಹೋಗಬಹುದಾದಂತಹ ಅವಕಾಶ ಇರುತ್ತದೆ. ಅದನ್ನು ಹಾಗೆಯೇ ನಿರ್ವಹಣೆ ಮಾಡಿಕೊಂಡು Gazetted Probationers ಅಲ್ಲದವರಿಗೆ ಸಂದರ್ಶನ ಮಾಡಿದಾಗ ಏನಾದರೂ ಆಯ್ಕೆ ಮಾಡುವುದಕ್ಕಾಗುತ್ತದೆಯೇ ಎಂಬ ಪ್ರಯೋಗ ಮಾಡುವುದಕ್ಕೆ ಸರ್ಕಾರ ಹೊರಟಿದೆ. In our view, ನಾವು transparent ಆಗಿ ಇದ್ದೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಗ್ರೂಪ್ ಬಿ ಯಿಂದ ಗ್ರೂಪ್ ಸಿ ಗೆ merge ಮಾಡುವುದರಿಂದ ಆಡಳಿತ ವ್ಯವಸ್ಥೆಗೆ ತೊಂದರೆಯಾಗುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು);–** ಮಾನ್ಯ ಸಭಾಪತಿಯವರೇ, ನಾವು ಅದನ್ನು merge ಮಾಡುವುದಿಲ್ಲ. ಗ್ರೂಪ್ ಬಿ ಯಿಂದ ಗ್ರೂಪ್ ಸಿ ಗೆ ಪೂರ್ಣವಾಗಿ merge ಆಗುವುದಿಲ್ಲ. 'B' category remains.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಗೆಜೆಟೆಡ್ ಪ್ರೊಬೆಷನರಿ ಹುದ್ದೆ ಬಗ್ಗೆ ಮಾತನಾಡುತ್ತಿಲ್ಲ. ಆದರೆ, ಗ್ರೂಪ್ ಬಿ ನಲ್ಲಿರುವಂತಹ ಸೆಕ್ಷನ್ ಆಫೀಸರ್‌ಗಳು ವಿಧಾನಮಂಡಲದಲ್ಲಿರಬಹುದು, ಹೈಕೋರ್ಟ್‌ನಲ್ಲಿ ಇರಬಹುದು ಅಥವಾ ಬೇರೆ ಕಡೆಗಳಲ್ಲಿ ಇರುವಂತಹ ಹುದ್ದೆಗಳನ್ನು ಗ್ರೂಪ್ ಸಿ ಗೆ ಸೇರಿಸಿದರೆ ಆಡಳಿತ ವ್ಯವಸ್ಥೆ ಸರಿಯಾಗುವುದಿಲ್ಲ ಹಾಗೂ ಆ ಹುದ್ದೆಗಳು ನಿಯಂತ್ರಣಕ್ಕೆ ಬರುವುದಿಲ್ಲವೆನ್ನುವುದು ನನ್ನ ಅಭಿಪ್ರಾಯ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಗ್ರೂಪ್ ಬಿ ಯಿಂದ ಗ್ರೂಪ್ ಸಿ ಗೆ ಸೇರಿಸುತ್ತೇವೆ ಎನ್ನುವ ಉದ್ದೇಶ ಏನೆಂದರೆ, ಅವರಿಗೂ ಸಹ ಸಂದರ್ಶನ ಇಲ್ಲದೇ ಆಯ್ಕೆ ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆಯೇ ಹೊರತು, ಬೇರೆ ಯಾವುದೇ ಉದ್ದೇಶ ಇರುವುದಿಲ್ಲ. Gazetted and all officers who are supposed to take charge of some administration.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ ನೇಮಕಾತಿ ಹಂತದಲ್ಲಿ ಗ್ರೂಪ್ ಎ, ಬಿ, ಸಿ ಮತ್ತು ಡಿ ಎಂದು ಇದ್ದೇ ಇರುತ್ತದೆಯಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು ಅದನ್ನು ಹಾಗೆಯೇ ಇಡುತ್ತೇವೆ. Don't be apprehended by all these. ಸರ್ಕಾರ ಈಗ ಒಂದು ನೋಟಿಫಿಕೇಷನ್ ಮಾಡಿದ್ದೇವೆ. ಅದರಲ್ಲಿ ನಾವು ನೋಟಿಫೈಡ್ ಮಾಡುವ ಅಧಿಕಾರವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರು, ನಿಯಮ 320 ರ ಮೇರೆಗೆ ಏನು ವಿಷಯ ಹೇಳಿದ್ದಾರೆ, it is not mandatory. Consultative provision ಇದೆ. Consultative provision, government may make use or leave it to the discretion. ಈಗ ಒಂದು ನೋಟಿಫಿಕೇಷನ್ ಮಾಡಿ, ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿರುತ್ತೇವೆ. ಸದರಿ ನೋಟಿಫಿಕೇಷನ್ ಮೇರೆಗೆ ಏನಾದರೂ ಆಕ್ಷೇಪಣೆಗಳು ಬಂದ ನಂತರ, we will take final call. Thank you.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ನಮ್ಮ ಮನವೊಲಿಸುವ ಹಾದಿಗೆ ತೆಗೆದುಕೊಂಡು ಹೋಗಿದ್ದಾರೆ. ಆದರೆ, ನನ್ನ ಪ್ರಶ್ನೆ ಏನೆಂದರೆ, ಹೋಟಾ ಸಮಿತಿಯಲ್ಲಿ 12 ಅಥವಾ 15 ಸದಸ್ಯರು ಆ ಸಮಿತಿಯಲ್ಲಿರಲಿ. ಆದರೆ, ಹೋಟಾ ಸಮಿತಿಯು, "ಹೋಟಾ ಸಮಿತಿಯಲ್ಲಿ ತಜ್ಞರನ್ನು ಸಹ ಸದಸ್ಯರನ್ನಾಗಿ ಇಟ್ಟುಕೊಳ್ಳಬೇಕೆಂದು" ಹೇಳುತ್ತದೆ. ಅದರಲ್ಲಿ ನಮ್ಮ ಅಭ್ಯಂತರವೇನು ಇಲ್ಲ. ಆದರೆ, ಎಲ್ಲಾ ರಾಜ್ಯಗಳಲ್ಲಿ 275 ಅಂಕಗಳಿಂದ 150 ಅಂಕಗಳು ಇರುವಾಗ 25 ಅಂಕಗಳು ಬಹಳ ಕಡಿಮೆಯಾಗಬಹುದು. ಆದರೆ, ಈ ಹಿಂದೆ ಸರ್ಕಾರ 200 ಅಂಗಳಿಂದ 50 ಅಂಕಗಳಿಗೆ ನಿಗದಿಗೊಳಿಸಿರುವುದು ಸರಿಯಿರಬಹುದು. That is ideal marks. ಆದರೆ, ಆ ಅಂಕಗಳಿಗಿಂತಲೂ ಕಡಿಮೆ ಅಂಕಗಳಿಗೆ ಹೋದರೆ, ಆ ಸಂದರ್ಶನದ ಗೌರವ ಹೋಗಬಹುದೆನ್ನುವುದು ನನ್ನ ಅಭಿಪ್ರಾಯ. ಏಕೆಂದರೆ, ಈ ಹಿಂದೆ 200 ಅಂಕಗಳನ್ನು ನಿಗದಿಗೊಳಿಸಿದ್ದು, ಈಗ ಅದನ್ನು 50 ಅಂಕಗಳಿಗೆ ನಿಗದಿಗೊಳಿಸಿದೆ. ಆದರೆ, ಈಗ 25 ಅಂಕಗಳಿಗೆ ಹೋಗುವುದಾದರೆ, ಈ ಸಂದರ್ಶನ ಏತಕ್ಕೆ ಬೇಕು ಎಂದು ಜನ ಅನ್ನಬಾರದಲ್ಲ ಎನ್ನುವ ಕಳಕಳಿ ಇರುತ್ತದೆ. ಆ ಸಂದರ್ಶನಕ್ಕೆ ಅಭ್ಯರ್ಥಿಯು ಸ್ವಲ್ಪವಾದರೂ ತಯಾರಿ ಮಾಡಿಕೊಂಡು ಬರಬೇಕಲ್ಲವೇ,

ಸಿದ್ಧತೆ ಮಾಡಿಕೊಳ್ಳಬೇಕಲ್ಲವೋ, ಆ ಎಚ್ಚರಿಕೆಯನ್ನು ಕೊಡುವುದಕ್ಕಾದರೂ ಕನಿಷ್ಠ ಪ್ರಮಾಣದ ಅಂಕಗಳು ಬೇಕಲ್ಲವೇ? ಹಾಗಾಗಿ, 200 ಅಂಕಗಳಿಂದ 50 ಅಂಕಗಳಿಗೆ ನಿಗದಿಗೊಳಿಸಿರುವುದು ಸರಿಯಿದೆ. ಆ ಅಂಕವನ್ನು ಅಷ್ಟಕ್ಕೆ ಸೀಮಿತಗೊಳಿಸಬೇಕು. ಬದಲಾಗಿ, 25 ಅಂಕಗಳಿಗೆ ನಿಗದಿಗೊಳಿಸಿದರೆ ಮೌಖಿಕ ಸಂದರ್ಶನದ ಗೌರವ ಹೋಗಬಹುದೆಂಬ ಆತಂಕ ನಮ್ಮದಾಗಿರುತ್ತದೆ. ಆದಾಗ್ಯೂ, ಸರ್ಕಾರ ಈ ವಿಷಯದಲ್ಲಿ ಆಕ್ಷೇಪಣೆ ಕೋರಿದ್ದು, ಅದರ ಮೇರೆಗೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆಂದು ನೋಡೋಣ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯಿಂದ, ಗ್ರಾಮ ಲೆಕ್ಕಿಗರಿಂದ, ತಹಶೀಲ್ದಾರ್‌ರವರೆಗೆ ಬರುವ ಹುದ್ದೆಗಳಿಗೆ ಸಂದರ್ಶನ ಇಲ್ಲದೇ ನೇಮಕಾತಿ ಮಾಡಲಾಗುತ್ತದೆ. ಅದರಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆ ಹಾಗೂ ಕೆ.ಎಸ್.ಆರ್.ಟಿ.ಸಿ. ಸಿಬ್ಬಂದಿಗಳ ಹುದ್ದೆಗಳ ಸಹ ಸೇರ್ಪಡೆಗೊಂಡಿರುತ್ತವೆ. ಕಳೆದ 8–10 ವರ್ಷಗಳಿಂದ ಇವೊತ್ತಿನವರೆಗೂ ಯಾವುದೇ ಸಮಸ್ಯೆ ಇರುವುದಿಲ್ಲ. ಏಕೆಂದರೆ, ಅಲ್ಲಿ ಸಂದರ್ಶನ ನಡೆದಿರುವುದಿಲ್ಲ. ಬದಲಾಗಿ, purely on driving test and written test. ಅದೇ ರೀತಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ಇವೊತ್ತಿನವರೆಗೂ ಒಂದು ಪ್ರಕರಣ ಮಾನ್ಯ ನ್ಯಾಯಾಲಯದ ಮುಂದೆ ಹೋಗುವುದಕ್ಕೆ ಏತಕ್ಕೆ ಆಗಿರುವುದಿಲ್ಲವೆಂದರೆ, purely on written test. ಯಾವ ಹುದ್ದೆಗಳ ನೇಮಕಾತಿಯಲ್ಲಿ ಸಂದರ್ಶನ ನಡೆಸಲಾಗಿದೆ, ಆ ಎಲ್ಲಾ ಹುದ್ದೆಗಳ ನೇಮಕಾತಿಯಲ್ಲಿಯೂ ಸಹ ತಕರಾರು ಇದ್ದು, ಆ ಎಲ್ಲಾ ನೇಮಕಾತಿಗೆ ಸಂಬಂಧಪಟ್ಟಂತೆ ನ್ಯಾಯಾಲಯದ ಮೆಟ್ಟಿಲು ಹತ್ತಿರುತ್ತವೆ ಹಾಗೂ ಎಲ್ಲಾ ಕಡೆ ಗೊಂದಲ ಸೃಷ್ಟಿಯಾಗಿರುತ್ತವೆ. **(ಗೊಂದಲ)** ಎಲ್ಲಿಯೋ ಒಂದು ಕಡೆ ನೇಮಕಾತಿಯಲ್ಲಿ ಪಾರದರ್ಶಕತೆ ಬರಲಿ ಎಂದು ನಾವು ಈ ಅಂಕಗಳನ್ನು ಕಡಿಮೆ ಮಾಡಿದ್ದೇವೆ. ಇದರ ಜೊತೆಗೆ, ಆ ಅಭ್ಯರ್ಥಿಗಳ ಸಾಮರ್ಥ್ಯ ಪರೀಕ್ಷಿಸಲು ಅಂದರೆ, ನಾನು ಈ ರೀತಿ ಪರೀಕ್ಷೆ ಬರೆದಿದ್ದೇನೆ, ನನಗೆ ಇಷ್ಟು ಅಂಕಗಳು ಬಂದಿದೆ ಎಂದು ತಿಳಿದುಕೊಳ್ಳುವುದಕ್ಕೆ ಇದು ಸಹಾಯವಾಗುತ್ತದೆ. ಉದಾಹರಣೆಗೆ, ನೀಟ್ ಪರೀಕ್ಷೆ ಮಾಡುತ್ತಾರೆ, nothing doing. ಮತ್ತೊಂದು ಪರೀಕ್ಷೆ ಮಾಡುತ್ತಾರೆ ಅದರಲ್ಲಿಯೂ ಸಹ nothing doing. ಹಾಗಾಗಿ, ನಾವು ಒಂದು ವ್ಯವಸ್ಥೆಯನ್ನು

ಜಾರಿಗೆ ತರುತ್ತಿದ್ದೇವೆ. ಅದು ಏನಾಗುತ್ತದೆ ಎಂಬುದನ್ನು ನೋಡೋಣ. ನಾವು ಈಗ ಕೇವಲ ಪಬ್ಲಿಕ್ ನೋಟಿಫಿಕೇಷನ್ ಹೊರಡಿಸಿ, ಆಕ್ಷೇಪಣೆ ಕೋರಿರುತ್ತೇವೆ. ಅದಕ್ಕೆ ಸಾರ್ವಜನಿಕರಿಂದ ಏನು ಆಕ್ಷೇಪಣೆಗಳು ನೀಡುತ್ತಾರೆ, ಅದರ ಮೇರೆಗೆ ಸರ್ಕಾರ ಮುಂದುವರೆಯುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಲಿ ಎಂದು ನನ್ನ ಸಮಯವನ್ನು ಬಿಟ್ಟುಕೊಟ್ಟಿರುತ್ತೇನೆ.

**ವೈಸ್ ಛೇರ್ಮನ್:–** ಮಾನ್ಯ ಸಚಿವರು ಉತ್ತರ ನೀಡಿ ಆಯಿತು.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಹೌದು ಉತ್ತರ ಕೊಟ್ಟಿದ್ದಾರೆ. ಆದರೆ, ಈ ಸದನದಲ್ಲಿ ಮಾನ್ಯ ಕಾನೂನು ಸಚಿವರು ಇರುವುದರಿಂದ ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ನೇಮಕಾತಿ ವಿಷಯದ ಬಗ್ಗೆ ಮಾನ್ಯ ಕಾನೂನು ಸಚಿವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಕೆಳಹಂತದ ನ್ಯಾಯಾಲಯಗಳಲ್ಲಿ ಮಾನ್ಯ ನ್ಯಾಯಾಧೀಶರ ನೇಮಕಾತಿಯಲ್ಲಿ ಮೊದಲು ೩ ರಿಂದ ೫ ವರ್ಷ ವಕೀಲರಾಗಿ ಅನುಭವ ಹೊಂದಬೇಕಾಗಿತ್ತು. ಅಂದರೆ, ೩ ರಿಂದ ೫ ವರ್ಷಗಳ ಕಾಲ ವಕೀಲಿ ವೃತ್ತಿಯಲ್ಲಿ ಅನುಭವ ಹೊಂದಿದಂತಹ ವಕೀಲರು ಮಾನ್ಯ ನ್ಯಾಯಾಧೀಶರ ನೇಮಕಾತಿ ಪರೀಕ್ಷೆ ಬರೆಯಬೇಕಾಗಿತ್ತು.

ಇವೊತ್ತಿನ ದಿವಸ ಪರಿಸ್ಥಿತಿ ಏನಾಗಿದೆಯೆಂದರೆ, ನೇರವಾಗಿ Symbiosis ಯೂನಿವರ್ಸಿಟಿಯಲ್ಲಿ ಓದಿ ಬಂದಂತಹವರು ಅಥವಾ Amity ಯೂನಿವರ್ಸಿಟಿ, ಕೇಂಬ್ರಿಡ್ಜ್ ಯೂನಿವರ್ಸಿಟಿ, ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ಓದಿ ಬಂದಂತಹವರು ಇವೊತ್ತಿನ ದಿವಸ ನ್ಯಾಯಾಧೀಶರಾಗಿ ನೇಮಕವಾಗುತ್ತಿದ್ದಾರೆ. ನಾನು ಯಾವುದೇ ನ್ಯಾಯಾಧೀಶರನ್ನು blame ಮಾಡುತ್ತಿಲ್ಲ. Because ನಾನು practically ನೋಡಿದ್ದೇನೆ. ೩ ರಿಂದ ೫ ವರ್ಷಗಳ ಕಾಲ ವಕೀಲರಾಗಿ ಪ್ರಾಕ್ಟೀಸ್ ಮಾಡಿದಂತಹ ವಕೀಲರಿಗೆ ನ್ಯಾಯಾಧೀಶರಾಗಿ ಪೀಠದಲ್ಲಿ ಕುಳಿತುಕೊಳ್ಳುವ ಮೊದಲು ಪೀಠದ ಕೆಳಗಡೆ ಕುಳಿತು ಅಲ್ಲಿ ಏನು ಕಷ್ಟ ಇರುತ್ತದೆ ಎಂಬುದು ಆತನಿಗೆ ಪ್ರಾಕ್ಟಿಕಲ್ ಆಗಿ ಅನುಭವ ಆಗಿರುತ್ತದೆ. ಇದರಿಂದಾಗಿ, ಆತ ನ್ಯಾಯಾಧೀಶರಾಗಿ ಪೀಠದಲ್ಲಿ ಕುಳಿತಾಗ ಸುಲಲಿತವಾಗಿ

ಕಾರ್ಯನಿರ್ವಹಿಸಿರುವುದನ್ನು ನಾವು ನೋಡಿರುತ್ತೇವೆ. ಆದರೆ, ಈಗ ನೇಮಕಾತಿಯಾಗಿ ಬಂದಿರುವಂತಹ ನ್ಯಾಯಾಧೀಶರು ತಾವು ಆಕಾಶದಿಂದ ಈಗತಾನೇ ಇಳಿದು ಬಂದು ನ್ಯಾಯಾಧೀಶರಾಗಿ ಕುಳಿತಿದ್ದೇವೆ ಎನ್ನುವ ರೀತಿಯಲ್ಲಿ Bar and Bench relationship ಸಂಪೂರ್ಣವಾಗಿ ಹಾಳಾಗಿರುತ್ತದೆ. Almost fifty percent Bar and Bench relationship ಇರುವುದಿಲ್ಲ. Bar and Bench relationship ಇಲ್ಲದೇ ಇರುವುದರಿಂದ ನ್ಯಾಯಾಂಗ ವ್ಯವಸ್ಥೆ ಹಾಳಾಗಿ ಹೋಗಿರುತ್ತದೆ. ಹಾಗಾಗಿ, ನೇಮಕಾತಿ ಸಂದರ್ಭದಲ್ಲಿ ಅಂಕಗಳನ್ನು ಹಾಕಿ ಕೊಡುವುದರಿಂದ ಗ್ರಾಮೀಣ ಭಾಗದ ಮಕ್ಕಳಿಗೆ ಅನುಕೂಲವಾಗುತ್ತದೆ ಎಂದು ಮಾನ್ಯ ಸಚಿವರು ಬೇರೆ ಬೇರೆ ವಿಚಾರವನ್ನು ಹೇಳಿದರು. ಆದರೆ, ಆ ಮಕ್ಕಳಿಗೆ practical knowledge ಕೂಡ ಬೇಕಾಗುತ್ತದೆ. ಅಲ್ಲದೇ, ಆ ಮಕ್ಕಳು ಜನರಲ್ ಆಗಿ ವಸ್ತುಸ್ಥಿತಿ ಹಾಗೂ ಸಮಾಜವನ್ನು ಅರಿತಿರಬೇಕು. ಜ್ಞಾನ ಬೇರೆ. ಅವರ ಜ್ಞಾನದ ಬಗ್ಗೆ ನಾನು ಮಾತನಾಡುವುದಿಲ್ಲ. ಏಕೆಂದರೆ, ಅವರು Symbiosis ನಲ್ಲಿ ಓದಿ, ಉನ್ನತ ಶ್ರೇಣಿಯಲ್ಲಿ ಪಾಸ್ ಆಗಿ ನ್ಯಾಯಾಧೀಶರಾಗಿ ನೇಮಕವಾಗಿ ಬಂದು ಕುಳಿತರೆ ಸಂತೋಷ. ಅದೇ ರೀತಿ, ಹಳ್ಳಿಯ ವಿದ್ಯಾರ್ಥಿ ಚೆನ್ನಾಗಿ ಓದಿ ಕಾನೂನು ಪ್ರಾಕ್ಟೀಸ್ ಮಾಡಿ ನ್ಯಾಯಾಧೀಶರಾಗಿ ನೇಮಕವಾಗುತ್ತಾರೆ. ಉದಾಹರಣೆಗೆ, ಶ್ರೀ ಮೋಹನ್ ಶಾಂತನಗೌಡರ್‌ರವರಿಂದ, ಶ್ರೀ ಗೋಪಾಲ್‌ಗೌಡರವರಿಂದ ಅನೇಕ ನ್ಯಾಯಾಧೀಶರು highest Apex Court ಅಂದರೆ, ನ್ಯಾಯಾಂಗ ವ್ಯವಸ್ಥೆಯ ಶೃಂಗಗಿರಿಗೆ ಹೋಗಿ ಕುಳಿತು, ಒಳ್ಳೆಯ ತೀರ್ಪುಗಳನ್ನು ಕೊಟ್ಟಿರುತ್ತಾರೆ. ಅದೇ ರೀತಿ, ನ್ಯಾಷನಲ್ ಲಾ ಸ್ಕೂಲ್, Symbiosis ಯೂನಿವರ್ಸಿಟಿ, ಕೇಂಬ್ರಿಡ್ಜ್ ಯೂನಿವರ್ಸಿಟಿ, ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಓದಿ ಬಂದಂತಹ ವಿದ್ಯಾರ್ಥಿಗಳಿಂದೆ ನಾವು ಅದನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಾಗಿರುವುದಿಲ್ಲ ಎನ್ನುವುದನ್ನು ನಾನು ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**(ಮುಂದು)**

**(670) 28.03.2022 5.00 ವೈಎಲ್-ವಿಕೆ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು, ಸಂಸದೀಯ ಮತ್ತು ವ್ಯವಹಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಸಹ ಬಾರ್ ಕೌನ್ಸಿಲಿಂಗ್‌ನ ಸದಸ್ಯರಾಗಿ ಮತ್ತು ವಕೀಲರಾಗಿ ಸೇವೆ ಸಲ್ಲಿಸಿರುವಂಥರಾಗಿದ್ದಾರೆ. ನ್ಯಾಯಾಧೀಶರನ್ನು ನೇಮಕ ಮಾಡುವುದಾಗಲಿ, ಪ್ರಮೋಟ್ ಮಾಡುವುದಾಗಲಿ, elevate ಮಾಡುವುದಾಗಲಿ ಸರ್ಕಾರಕ್ಕೆ ಸಂಬಂಧಿಸಿರುವುದಿಲ್ಲ. ಜೊತೆಗೆ ಆ ವಿಷಯದ ಮೇಲೆ ಕಾಮೆಂಟ್ ಮಾಡುವುದಕ್ಕೂ ಅಸಕ್ತರು ಎನ್ನುವಂಥ ಉತ್ತರವನ್ನು ನೀಡಬಯಸುತ್ತೇನೆ.

**<u>೦೮. ಖಾಸಗಿ ಸದಸ್ಯರ ನಿರ್ಣಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ</u>**

**ವಿಷಯ:- ದೇಸೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಕುರಿತು.**

****

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಸುಮಾರು 18 ತಿಂಗಳುಗಳಿಂದ ಈ ಖಾಸಗಿ ನಿರ್ಣಯ ಸರ್ಕಾರದ ಮುಂದೆ ಇದ್ದು, ಸರ್ಕಾರವು ಉತ್ತರ ನೀಡಿದ ಮೇಲೆ ನಾನು ಮಾತನಾಡುತ್ತೇನೆ. ಒಂದು ವೇಳೆ ಸರ್ಕಾರವು ದೇಶೀಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ನೀಡಿದರೆ ನಾನು ಏನು ಮಾತನಾಡುವುದಕ್ಕೆ ಹೋಗುವುದಿಲ್ಲ.

**ಡಾ॥ ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದೇಶೀಯ ಪರಂಪರೆಯ ಆಯುರ್ವೇದ

ವೈದ್ಯ ಪದ್ಧತಿಗೆ ಮನ್ನಣೆ ದೊರೆಕಿಸಿಕೊಡಬೇಕು ಎನ್ನುವುದರ ಸಲುವಾಗಿ ಸರ್ಕಾರ ನೀತಿಯನ್ನು ರೂಪಿಸಬೇಕೆಂದು ಖಾಸಗಿ ನಿರ್ಣಯವನ್ನು ಮಂಡಿಸಿದ್ದಾರೆ. ಈಗಾಗಲೇ ಭಾರತ ಸರ್ಕಾರವು ರಾಷ್ಟ್ರೀಯ ಆರೋಗ್ಯ ನೀತಿಯನ್ನು 2017 ರಲ್ಲಿ ಹೊರತಂದಿದೆ. ಅದೇ ರೀತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಹ ಸಮಗ್ರವಾಗಿರುವಂಥ ಆರೋಗ್ಯ ನೀತಿಯಲ್ಲಿ ಆಯುಷ್‌ಗೆ ವಿಶೇಷವಾದಂಥ ಮನ್ನಣೆ ನೀಡುವಂಥದಾಗಿದೆ. ಮತ್ತು ಈ ಹಿಂದೆ ರಾಷ್ಟ್ರ ಮಟ್ಟದಲ್ಲಿ ಆಯುಷ್ ಮಂತ್ರಾಲಯ ಇರಲಿಲ್ಲ. ಆದರೆ, ಕೇಂದ್ರ ಸರ್ಕಾರವು ರಾಷ್ಟ್ರ ಮಟ್ಟದಲ್ಲಿಯೇ ವಿಶೇಷವಾದಂಥ, ಪ್ರತ್ಯೇಕವಾಗಿರುವಂಥ ಆಯುಷ್ ಮಂತ್ರಾಲಯವನ್ನು ರಚನೆ ಮಾಡಿದೆ. ಹಾಗೆಯೇ ಯಾವ ರೀತಿ ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ (ನ್ಯಾಷನಲ್ ಹೆಲ್ತ್ ಮಿಷನ್) ಇತ್ತು, ಅದೇ ರೀತಿ ನ್ಯಾಷನಲ್ ಆಯುಷ್ ಮಿಷನ್ (ರಾಷ್ಟ್ರೀಯ ಆಯುಷ್ ಅಭಿಯಾನ) ಎಂದು ಸಹ ಮಾಡಲಾಗಿದೆ. ಅಂದರೆ ಅಷ್ಟರ ಮಟ್ಟಿಗೆ ಆಯುಷ್‌ಗೆ ಹೆಚ್ಚಿನ ಒತ್ತು ನೀಡುವಂಥದು ಕೇಂದ್ರ ಸರ್ಕಾರದಿಂದ ಆಗುತ್ತಿದೆ. ಕೇವಲ ಕಾರ್ಯಕ್ರಮದ ಮೂಲಕ ಮಾತ್ರವಾಗಿಲ್ಲ. ಇಲಾಖೆಯಲ್ಲಿಯೇ ರೂಪಿಸಿ ಮಂತ್ರಾಲಯವನ್ನು ರಚನೆ ಮಾಡಿದ್ದಾರೆ ಮತ್ತು ನೀತಿಯನ್ನು ಸಹ ರೂಪಿಸಿದ್ದಾರೆ. ಅದರ ಜೊತೆಗೆ ನಮ್ಮ ರಾಜ್ಯದಲ್ಲಿ ಹೊಸ ಆಯುಷ್ ಆಸ್ಪತ್ರೆಗಳಿಗೆ ಈಗಾಗಲೇ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಆಯುಷ್ ಆಸ್ಪತ್ರೆಗಳು ಏನಿವೆ, ಅದರ ಜೊತೆಗೆ ಅನೇಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ ಹಾಗೂ ಸರ್ಕಾರಿ ಆಯುಷ್ ಶಿಕ್ಷಣ ಸಂಸ್ಥೆಗಳು ಏನಿವೆ, ಅದನ್ನು ಸಹ ಸ್ಥಾಪಿಸಲು 'Centre of Excellence' ರೀತಿಯಲ್ಲಿ ಹೊಸ ಸಂಸ್ಥೆಗಳನ್ನು ರೂಪಿಸುವಂಥ ಕೆಲಸ ಮಾಡುತ್ತಿದ್ದೇವೆ.

ಕಳೆದ ಅಧಿವೇಶನದಲ್ಲಿ ಶಿವಮೊಗ್ಗ, ಬೀದರ್‌ಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ್ದು, ನಶಿಸಿ ಹೋಗುತ್ತಿರುವ ಔಷಧಿ ಸಸ್ಯಗಳನ್ನು ಸಂರಕ್ಷಿಸಲು ಹಾಗೂ ಔಷಧಿ ತಯಾರಿಕಾ ಪರವಾನಗಿ ವಿಭಾಗಗಳನ್ನು ಸಕ್ಷಮಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ರಾಷ್ಟ್ರೀಯ ಆಯುರ್ವೇದ ವಿದ್ಯಾಪೀಠದ ಮೂಲಕ ಬೋಧಕರನ್ನು, ವೈದ್ಯರುಗಳನ್ನು ಹಾಗೂ ಅರೆ ವೈದ್ಯಕೀಯ ಸಿಬ್ಬಂದಿಗಳಿಗೆ ಕೌಶಲ್ಯಾಭಿವೃದ್ಧಿಗೆ ತರಬೇತಿ ಕಾರ್ಯಕ್ರಮವನ್ನು ಸಹ ನೀಡಲಾಗುತ್ತಿದೆ ಹಾಗೂ ಅದಕ್ಕಾಗಿ ಒಂದು ನೀತಿಯನ್ನು ಸಹ ರೂಪಿಸಲಾಗಿದೆ.

ಮೊನ್ನೆ ದಿವಸ ಸದನದ ಅವಧಿಯಲ್ಲಿ 2020-21ನೇಯ ಆಯವ್ಯಯದಲ್ಲಿ ಶಿವಮೊಗ್ಗದಲ್ಲಿ ಆಯುಷ್ ವಿಶ್ವವಿದ್ಯಾಲಯವನ್ನು ಸಹ ಸ್ಥಾಪನೆ ಮಾಡುವ ಬಗ್ಗೆ ಘೋಷಿಸಲಾಗಿದೆ. ಅಷ್ಟರ ಮಟ್ಟಿಗೆ ಕರ್ನಾಟಕ ರಾಜ್ಯದಲ್ಲಿ ಆಯುಷ್‌ಗೆ ಒಂದು ಸಂಶೋಧನೆ ಅಥವಾ ಚಿಕಿತ್ಸೆಯನ್ನು ಪಾರಂಪರಿಕವಾಗಿ ಸಾವಿರಾರು ವರ್ಷಗಳಿಂದ ಬಂದಿರುವಂಥ ಆಯುರ್ವೇದ, ಯುನಾನಿ, ಹೋಮಿಯೋಪಥಿ, ಸಿದ್ಧಾ, ಯೋಗ ಈ ಎಲ್ಲಾ ಕ್ರಮಗಳಲ್ಲಿ ಒಳ್ಳೆಯ ರೀತಿಯಲ್ಲಿ ಜನರಿಗೆ ಉತ್ತಮವಾಗಿರುವಂಥ ಆರೋಗ್ಯವನ್ನು ನೀಡಬೇಕೆನ್ನುವ ನಿಟ್ಟಿನಲ್ಲಿ ವಿಶೇಷ ಒತ್ತನ್ನು ನೀಡಲಾಗಿದೆ.

ಸಂಶೋಧನೆಗೆ ಒತ್ತು ನೀಡುವಂಥ ವಿಚಾರದಲ್ಲಿ ಪಶು ವೈದ್ಯಕೀಯಕ್ಕೂ ಸಹ ಆಯುಷ್ ಔಷಧಿಯನ್ನು ಬಳಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ್ ಬೊಮ್ಮಾಯಿಯವರು ಈ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಿದ್ದಾರೆ ಮತ್ತು ಮಕ್ಕಳಲ್ಲಿ ಅಪೌಷ್ಠಿಕತೆಯನ್ನು ಏನು ನೋಡುತ್ತಿದ್ದೇವೆ, ಅದಕ್ಕೂ ಸಹ ಆಯುಷ್ ಪದ್ಧತಿಗಳಿಂದ ಕೆಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಈಗಾಗಲೇ ಜೂನ್ ತಿಂಗಳಿನಲ್ಲಿ **"ಅಂತರರಾಷ್ಟ್ರೀಯ ಯೋಗ ದಿನಾಚರಣೆ"** ಯನ್ನು ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಯು.ಎನ್. ನಲ್ಲಿ ಘೋಷಣೆ ಮಾಡಿದ್ದು, ಸುಮಾರು 150 ಕ್ಕೂ ಹೆಚ್ಚು ದೇಶಗಳಲ್ಲಿ "ಅಂತರರಾಷ್ಟ್ರೀಯ ಯೋಗ ದಿನಾಚರಣೆ" ಯನ್ನು ನಡೆಸಲಾಗುತ್ತಿದೆ. ಇಡೀ ವಿಶ್ವದಲ್ಲಿಯೇ ಯೋಗವು ಎಷ್ಟು ಮುಖ್ಯವಾಗಿದೆ ಎಂದರೆ, ಎಲ್ಲಾ ದೇಶಗಳಲ್ಲಿ ಸಹ **"ಅಂತರರಾಷ್ಟ್ರೀಯ ಯೋಗ ದಿನಾಚರಣೆ"** ಬಗ್ಗೆ ಕ್ರಮವಹಿಸಲಾಗುತ್ತಿದೆ. ಅದೇ ರೀತಿ ರಾಷ್ಟ್ರೀಯ ಆಯುರ್ವೇದ, ಯುನಾನಿ, ಸಿದ್ಧಾ, ಪ್ರಕೃತಿ ಚಿಕಿತ್ಸೆಗಳು ಎಲ್ಲದರ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ನಡೆಸಲಾಗುತ್ತಿದೆ.

ಆಪ್ತಮಿತ್ರ ಸಹಾಯವಾಣಿಯ 108 ಸೇವೆಗಳು ಮತ್ತು ಕೋವಿಡ್-19 ನಿಂದಾಗಿ ಹೋಮ್ ಕ್ವಾರಂಟೈನ್ ಪರಿವೀಕ್ಷಣೆ ಸಂದರ್ಭ ಇರಬಹುದು. ಅದೆಲ್ಲದಕ್ಕೂ ಸಹ ಆಯುಷ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು, ವಿದ್ಯಾರ್ಥಿಗಳು, ವೈದ್ಯರುಗಳನ್ನು ಬಳಕೆ ಮಾಡಿಕೊಂಡಿದ್ದೇವೆ. ಅವರೆಲ್ಲರ ಕಾರ್ಯಕ್ರಮವು ಏನಾಗಿತ್ತು ಎಂದರೆ, ರಾಜ್ಯದಾದ್ಯಂತ ಆಯುಷ್ ಪದ್ಧತಿಯನ್ನು ಬಳಕೆ ಮಾಡಿ, ಅದರ ಅರಿವು ಮೂಡಿಸುವಂಥ ಕೆಲಸ ಮಾಡಿದ್ದಾರೆ. ಮತ್ತು ಅದನ್ನು ನಿಯಂತ್ರಣ ಮಾಡಲು ನಿಗ್ರಹಣ ಮಾಡಲು ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ಆಯುಷ್ ಔಷಧಿ ಕಿಟ್‌ಗಳನ್ನು ಸಹ ವಿತರಣೆ ಮಾಡಿದ್ದೇವೆ.

ಹಾಗಾಗಿ 2017ರನ್ನೊಳಗೊಂಡ ಉಪ ನಿಯಮ (35), (36), (37) ರಲ್ಲಿ *Karnataka Ayurvedic, Naturopathy, Sidda, Unani and Yoga Practitioners Registration and Medical Practitioners Miscellaneous Provisions Act, 1961 and Rules, 1964* ರಲ್ಲಿ ನಿಯಮ ತಿದ್ದುಪಡಿ ಆಗಿದೆ. ಅದರ ಪ್ರಕಾರ;

> *"35. Medical Practitioner not registered under this Act ets., not to sign birth or death certificate, etc–Notwithstanding anything contained in any law for the time being in force no person other than a practitioner registered under Chapter II of this Act or a practitioner registered under the 1 (Karnataka) 1 Medical Registration Act, 1961, or the 1 (Karnataka) 1Homoeopathic Practitioners Act, 1961, or a practitioner whose name is for the time being borne on the Indian Medical Register maintained under the Indian Medical Council Act, 1956.*

*(a)Shall sign or authenticate a birth or death certificate required by any law or rules to be signed or authenticated by a duly qualified medical practitioner;*

*(b)Shal sign or authenticate a medical or physical fitness certificate required by any law or rule to be signed or authenticated by a duly qualified medical practitioner; or*

(c)*Shall be qualified to give evidence at any inquest or in any court of law as an expert under section 45 of the Indian Evidence Act, 1872, on any matter relating to medicine surgery or midwifery.*

**(ಮುಂದು)**

**(671) 28.03.2022/5.10/ಎಸ್‌ಕೆ-ವಿಕೆ**

**ಡಾ. ಕೆ. ಸುಧಾಕರ್ (ಮುಂದು):-**

ಇವತ್ತು ಕಾನೂನು ಮತ್ತು ನಿಯಮಗಳು ಬಹಳ ಸ್ಪಷ್ಟವಾಗಿದ್ದೂ, ರಾಷ್ಟ್ರೀಯ ನೀತಿಯಾಗಿರುವುದರಿಂದ, ಇವತ್ತು guidelines ಅನ್ನು ಸಹ ರಾಷ್ಟ್ರ ಮಟ್ಟದಲ್ಲಿ ಈಗಾಗಲೇ ಮಾಡಿದ್ದಾರೆ. ಇವತ್ತು ರಾಜ್ಯ ಸರ್ಕಾರದ ಮಟ್ಟದಲ್ಲಿ ಇದಕ್ಕೆ ವಿಶೇಷವಾದ ನೀತಿಯನ್ನು ರೂಪಿಸುವುದಕ್ಕೆ ಬರುವುದಿಲ್ಲ. ಹಾಗಾಗಿ ಆಯುಷ್ ಪದ್ಧತಿಗಳನ್ನು ಖಂಡಿತವಾಗಿಯೂ ಮೇಲ್ದರ್ಜೆಗೇರಿಸಬೇಕು. ಇದು ಕರ್ನಾಟಕದಲ್ಲಿ ಇನ್ನಷ್ಟು ಬಳಕೆಯಾಗಬೇಕು. ಈ ಪದ್ಧತಿಯಿಂದ ಜನಸಾಮಾನ್ಯರಿಗೆ ಒಳ್ಳೆಯ ಗುಣಮಟ್ಟದ ಆರೋಗ್ಯ ಸಿಗಬೇಕು ಎನ್ನುವ ನಿಟ್ಟಿನಲ್ಲಿ ಸುಧಾರಣಾ ಕ್ರಮಗಳನ್ನು ನಾವು ಕೈಗೊಂಡಿದ್ದೇವೆ. ಗೌರವಾನ್ವಿತ ಸದಸ್ಯರು ಇನ್ನಷ್ಟು ಸಲಹೆಗಳನ್ನು ಕೊಟ್ಟರೆ, ಅದನ್ನು ಸಹ ಕಾರ್ಯಕ್ರಮಗಳಲ್ಲಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ. ಆದರೆ ಈ ರೀತಿಯ ಖಾಸಗೀ ನಿರ್ಣಯಕ್ಕೆ ವಿಶೇಷವಾಗಿರುವಂತಹ ನೀತಿಯಾಗಲೀ, ತಿದ್ದುಪಡಿ ಮಾಡುವಂತಹ ಅವಶ್ಯಕತೆಯಾಗಲಿ ಇಲ್ಲ ಎಂದು ಸರ್ಕಾರ ಭಾವಿಸುತ್ತದೆ.

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಚಿವರು ಇದಕ್ಕೆ ಒಂದು ವರ್ಷ ತೆಗೆದುಕೊಂಡಿದ್ದು ನೋಡಿದರೆ, ಅವರು ಇದರ ಬಗ್ಗೆ ಎಲ್ಲಾ ಕಡೆಗಳಲ್ಲಿ ಸಂಶೋಧನೆ ಮಾಡಿ, ಸವಿಸ್ತಾರವಾದ ಮಾಹಿತಿಯನ್ನು ನೀಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೆ. ಆದರೆ ನಾವು ಕೇಳುವುದೊಂದಾದರೆ, ಅವರು ಹೇಳುವುದೇ ಬೇರೆಯಾಗಿರುತ್ತದೆ. ಆಯುಷ್ ಮತ್ತು ಆಯವರ್ೇದ ಇವೆರಡು ಒಂದೇ ಎನ್ನುವುದರ ಬಗ್ಗೆ ಮಾನ್ಯ ಸಚಿವರೇ ಹೇಳಬೇಕು. ಅನಂತರ ನಾನು ಮಾತನಾಡುತ್ತೇನೆ. ಇಲ್ಲಿಯತನಕ ಆಯುಷ್ ಬಗ್ಗೆ ಹೇಳಿದ್ದಾರೆ. ನಾನು ಆಯವರ್ೇದದ ಬಗ್ಗೆ ಕೇಳಿರುವಂತಹದ್ದು. ಇವೆರಡು ಒಂದೇ ಎನ್ನುವುದಾದರೆ, ನಾನು ಅನಂತರ ಮಾತನಾಡುತ್ತೇನೆ.

**ಡಾ. ಕೆ. ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವರು):–** ಆಯುಷ್‌ನಲ್ಲಿ ಆಯವರ್ೇದ ಕೂಡ ಈಗ ಬಹಳ ಮುಖ್ಯವಾಗಿರುವಂತಹ ಒಂದು ಕ್ರಮ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಯೇ ಬೇರೆ.

**ಡಾ. ಕೆ. ಸುಧಾಕರ್:–** ಆಯುವರ್ೇದಕ್ಕೆ ಪ್ರತ್ಯೇಕವಾದ ಒಂದು ಇಲಾಖೆ ಮಾಡಿಲ್ಲ. ಆಯುವರ್ೇದವನ್ನು ಒಳಗೊಂಡಂತೆ ಆಯುಷ್ ಇಲಾಖೆ ಎಂದು ಮಾಡಿದ್ದೇವೆ. Alternative therapies ಎಂದು, alternative therapies ನಲ್ಲಿ apart from allopathy ayurveda is also one discipline. ಅದನ್ನು ಒಪ್ಪಿಕೊಳ್ಳುತ್ತೇನೆ. ಆಯುಷ್ ಇಲಾಖೆಯಲ್ಲಿಯೇ ಆಯುವರ್ೇದವೂ ಸೇರುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:–** ನಾನು ಇದೇ ಪ್ರಶ್ನೆಯನ್ನು ಒಂದೂವರೆ ವರ್ಷದಿಂದ ಕೇಳುತ್ತಿದ್ದೇನೆ. ಆಯುವರ್ೇದಕ್ಕೆ ಮನ್ನಣೆ ಕೊಡಿ. ಇದಕ್ಕೆ ಮನ್ನಣೆ ಏತಕ್ಕೆ ಕೊಡಿ ಎಂದು ಕೇಳುತ್ತಿದ್ದೇನೆಂದರೆ, ಈ ರಾಜ್ಯದಲ್ಲಿ ಸುಮಾರು 55 ಕಾಲೇಜುಗಳಿವೆ. ಒಂದು ವರ್ಷಕ್ಕೆ ಸುಮಾರು ಐದು ಸಾವಿರದಿಂದ ಆರೂವರೆ ಸಾವಿರ ವಿದ್ಯಾರ್ಥಿಗಳು ಓದುವುದಕ್ಕೆ ಬರುತ್ತಾರೆ. ಮೂರು ಸರ್ಕಾರಿ ಕಾಲೇಜುಗಳಿವೆ. ಅದರಲ್ಲಿ PG, MD, MS ಕೂಡ ಮಾಡುತ್ತೀರಿ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಪೀಠವನ್ನು ಅಲಂಕರಿಸಿದರು)**

ಆ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿಸಿಕೊಂಡು ಹೊರಗಡೆ ಬಂದ ಮೇಲೆ, ಅವರಿಗೆ ಮನ್ನಣೆ ಇಲ್ಲವೆಂದರೆ, ಹೇಗೆ ಸ್ವಾಮಿ? ನಾವು ಕೇಳುವಂತಹದ್ದು ತಮಗೆ ಕಷ್ಟವಿದೆಯಾ? ನಾವು ಮನ್ನಣೆ ನೀಡಬೇಕೆಂದು ಕೇಳಿದ್ದು, ತಮಗೆ ಅಷ್ಟೊಂದು ಕಷ್ಟವಿದೆಯೇ? ಅಲೋಪತಿಯಿಂದ ಮಾತ್ರೆಗಳನ್ನು ನೀಡಿ ಮನುಷ್ಯರನ್ನು ಸಾಯಿಸಿಬಿಡಬೇಕೆಂದಿದ್ದೀರಾ ಹೇಗೆ? ಅಲೋಪತಿ ಬರುವುದಕ್ಕಿಂತ ಮೊದಲಿನಿಂದಲೂ ಆಯುರ್ವೇದ ನಾಟಿ ಚಿಕಿತ್ಸೆ ಇದ್ದು, ಅದು ಈಗ ಹೊಸದಾಗಿ ಬಂದಿರುವುದೇನಲ್ಲ. ಮೊನ್ನೆ ಕೋವಿಡ್ ಸಾಂಕ್ರಾಮಿಕ ರೋಗ ಬಂದಾಗ, ಚಿಕಿತ್ಸೆ ಏನು ಕೊಟ್ಟಿರಿ? ಆ ಸಂದರ್ಭದಲ್ಲಿ ಚಿಕಿತ್ಸೆ ಕೊಡುವಾಗ ಯಾವ ಮಾತ್ರೆಗಳು ಕೊಡಬೇಕೆಂದು ನಿಮಗೆ ಗೊತ್ತಿತ್ತಾ? ಕೋವಿಡ್ ಇದೊಂದು ಹೊಸ ರೋಗ. ಆದರೆ ಕೋವಿಡ್‌ಗೆ ಮಾತ್ರೆಯನ್ನೇ ಕೊಟ್ಟಿರಿ. ಆದರೆ ಡಾ: ಗಿರಿಧರ ಕಜೆ, ಆಂಧ್ರದ ಆನಂದಯ್ಯನವರ ಹತ್ತಿರ ಹೋಗಿ ಚಿಕಿತ್ಸೆ ತೆಗೆದುಕೊಂಡರು. ಕೇರಳಕ್ಕೆ ಹೋಗಿ ಚಿಕಿತ್ಸೆ ತೆಗೆದುಕೊಂಡರು. ಅವರು ಹಣವನ್ನು ತೆಗೆದುಕೊಳ್ಳದೇ ಲಕ್ಷಾಂತರ ಜನರ ರೋಗವನ್ನು ಗುಣಪಡಿಸಿದರು. ಅವರಿಗೆ ಮನ್ನಣೆ ಕೊಡುವುದಕ್ಕಾಗಲಿಲ್ಲ. ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆ ಸಚಿವರು ಸಹ ಇಲ್ಲಿ ಇದ್ದಾರೆ. ಸತ್ತು ಹೋದವರಿಗೆ ಮರಣ ಪ್ರಮಾಣಪತ್ರ ಕೊಡುವುದಕ್ಕೆ ಯೋಗ್ಯತೆ ಇಲ್ಲವೆಂದರೆ, ವೈದ್ಯರಾಗುವುದಕ್ಕೆ ಏತಕ್ಕೆ ಓದಬೇಕು? ಸುಮರು 55 ಕಾಲೇಜುಗಳಿವೆ. ಇದರ ಬಗ್ಗೆ ಈಗಷ್ಟೇ ಮಾನ್ಯ ರುದ್ರೇಗೌಡರ ಹತ್ತಿರ ಮಾತನಾಡುತ್ತಿದ್ದೆ. ಉಡುಪಿ ಮತ್ತು ಧರ್ಮಸ್ಥಳದಲ್ಲಿ ಕಾಲೇಜುಗಳಿವೆ. ಪ್ರತಿ ದಿನ ಸುಮಾರು ಹತ್ತು ಸಾವಿರ ಹೊರ ರೋಗಿಗಳು ಇರುತ್ತಾರೆ. ಅವರಿಗೆ ಚಿಕಿತ್ಸೆ ನೀಡುವವರು ಯಾರು? ಧರ್ಮಸ್ಥಳ ಕಾಲೇಜುಗಳು ಎಲ್ಲಾ ಕಡೆಗಳಲ್ಲಿ ಇವೆ. ನಾವು ಕೇಳಿರುವಂತಹದ್ದು ಅಷ್ಟೊಂದು ಕಷ್ಟವಾದುದಲ್ಲ. ತುಂಬಾ ಜನ ವಿದ್ಯಾಭ್ಯಾಸ ಮುಗಿಸಿಕೊಂಡು ಹೊರಗಡೆ ಬರುತ್ತಿದ್ದಾರೆ. ಅವರ ಬದುಕು ಏನಾಗಬೇಕು? ಅವರು ವಿದ್ಯಾಭ್ಯಾಸ ಮುಗಿಸಿದ ಮೇಲೆ ಸರ್ಕಾರದಿಂದ ಅವರಿಗೆ stay fund ಕೊಡುತ್ತೀರಾ? ಅವರಿಗೆ ಹತ್ತು ಸಾವಿರ ರೂಪಾಯಿ ಅಥವಾ ಇಪ್ಪತ್ತು ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಕೊಡುತ್ತೇವೆಂದು ಹೇಳಿಬಿಡಿ.

ಅವರು ಜೀವನ ಮಾಡಿ, ಬದುಕುವುದು ಹೇಗೆ? ಅವರಿಗೆ ಎಂ.ಬಿ.ಬಿ.ಎಸ್., ಓದುವುದಕ್ಕಾಗುವುದಿಲ್ಲ, ಅವರ ಹತ್ತಿರ ಹಣ ಇರುವುದಿಲ್ಲ. ಉಡುಪಿಯ ಜನರಿಗೆ ಆಹಾರ ತೆಗೆದುಕೊಂಡು ತಿನ್ನುವುದಕ್ಕೆ, ಅವರ ಹತ್ತಿರ ಹಣ ಇರುವುದಿಲ್ಲ. ಅವರು ಕಷ್ಟಪಟ್ಟು ಆಯುರ್ವೇದಿಕ್ ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಆಯರ್ವೇದದ ಬಗ್ಗೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೂ ಗೊತ್ತಿದೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿಸಿಕೊಂಡು ಹೊರಗಡೆ ಬಂದ ಮೇಲೆ ಸಹಿ ಹಾಕುವುದಕ್ಕೆ ಯೋಗ್ಯತೆ ಇಲ್ಲವೆಂದರೆ, ಅಂತಹ ವಿದ್ಯಾಭ್ಯಾಸ ಏತಕ್ಕೆ ಬೇಕು? ಅದನ್ನು ಮುಚ್ಚಿಬಿಡಿ. ನಮ್ಮ ಕಡೆಯಿಂದ ಯಾವುದೇ ತೊಂದರೆ ಇಲ್ಲ. ಸರ್ಕಾರ ನಾಳೆಯಿಂದ ಆಯುರ್ವೇದಿಕ್‌ನ ಪ್ರತಿಯೊಂದು ವಿಭಾಗವನ್ನು ಮುಚ್ಚುತ್ತೇವೆಂದು ಹೇಳಿ. ಆಗ ನಾವು ಸುಮ್ಮನೆ ಆಗುತ್ತೇವೆ. ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಬೆಳಗಾವಿ ಅಧಿವೇಶನ ಅಥವಾ ಇಲ್ಲಿ ಅಧಿವೇಶನದಲ್ಲಿ ಸುಮಾರು ಅರ್ಧ ಗಂಟೆ ಅಥವಾ ನಲವತ್ತು ನಿಮಿಷ ಮಾತನಾಡಿರುವ ಬಗ್ಗೆ ನನಗೆ ಜ್ಞಾಪಕವಿದೆ. ಒಬ್ಬನಿಗೆ ಬ್ಲ್ಯಾಕ್ ಫಂಗಸ್ ಬಂದಿತ್ತು. ಮುಂಡರಗಿಯ ಆಸ್ಪತ್ರೆಯ ವೈದ್ಯರು ಡಾಕ್ಟರ್ ಟೇಕಲ್ ಎನ್ನುವವರು ನೀನು ಮನೆಗೆ ಹೋಗಪ್ಪಾ, ಇಲ್ಲವಾದರೆ, ಸತ್ತು ಹೋಗುತ್ತೀಯಾ ಎಂದು ಹೇಳಿದರು. ಅವನು ಸತ್ತು ಹೋಗುತ್ತಾನೆಂದು ಅವರ ಮನೆಯವರಿಗೆ ತಿಳಿದು, ಮೂರು ದಿನ ಚೆನ್ನಾಗಿ ನೋಡಿಕೊಂಡರು. ಅವನಿಗೆ ಬ್ಲ್ಯಾಕ್ ಫಂಗಸ್‌ನಿಂದಾಗಿ, ಅವನ ಕಣ್ಣು ಹೋಯಿತು. ಅವರು ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯ ಹತ್ತಿರ ಹೋಗಿ, ನನಗೊಂದು ಕೆಲಸ ಕೊಡಿಸಿ ಸಹಾಯ ಮಾಡಿ ಎಂದು ಕೇಳಿದ. ಅವರು ಹೋಗಯ್ಯಾ, ನನ್ನದೊಂದು ಕೇಸ್ ಇದೆ ಎಂದು ಹೇಳಿದರು. ನಾನು ಏತಕ್ಕೆ ಹೇಳಿದೇನೆಂದರೆ, ಅವನು ಮೂರು ದಿವಸದೊಳಗೆ ಹೇಗಾದರೂ ಸಾಯುತ್ತಾನೆ, ಅವನ ಔಷಧಿಗಳನ್ನು ಏಕೆ ನೋಡೋಣ ಎಂದು ಕಳುಹಿಸಿದೆ. ಅವರು ಮಾತನಾಡುವಾಗ ಇದನ್ನು ಹೇಳಿದರು. ನಾನು ಈಗ ಇದನ್ನು ಹೇಳುತ್ತಿರಬೇಕಾದರೆ, ಮಾನ್ಯ ಸದಸ್ಯರು ಈ ಸದನದಲ್ಲಿ ಇಲ್ಲ. ಅವನಿಗೆ ಪೂರ್ತಿಯಾಗಿ ಗುಣವಾಗಿದ್ದು, ಅವನು ಆರಾಮ ಆಗಿ ಇವತ್ತು ಓಡಾಡಿಕೊಂಡಿದ್ದಾನೆ, ಆದರೆ ಒಂದು ಕಣ್ಣು ಹೋಗಿದೆ. ರಾಜ ಪರಂಪರೆಗಳಿಂದ ಈ ವೈದ್ಯ ಪದ್ಧತಿ ಬಂದಿರುವಂತಹದ್ದು. ರಾಮಯಣದಲ್ಲಿ ಲಕ್ಷ್ಮಣ ಹೇಗೆ ಸಾವನ್ನಪ್ಪಿ ಮತ್ತೆ ಹೇಗೆ ಬದುಕಿದ

ಎನ್ನುವ ಬಗ್ಗೆ ಮಕ್ಕಳಿಗೆ ತಿಳಿಸಿದ್ದೇವೆ. ಆ ಕಾಲದಲ್ಲಿ ಹೇಗೆ ಬಂತು ಸಾರ್? ಅವೊತ್ತಿನ ದಿವಸ ಇಂಜೆಕ್ಷನ್ ಮತ್ತು ಮಾತ್ರೆಗಳು ಇದ್ದವೇನು?

**ಶ್ರೀಮತಿ ಭಾರತಿ ಶೆಟ್ಟಿ:–** ಆಗ ಇಂಜೆಕ್ಷನ್ ಇರಲಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:–** ತಾವು ನನ್ನ ನೆರವಿಗೆ ಬರಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಅವರು ಉತ್ತರ ಕೊಡುತ್ತಾರೆ. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. We cannot take Medical Jurisprudence to our Act. ನಾವು ಎಲ್ಲಾ ಡಾಕ್ಟರ್‌ಗೂ cause of death certificate, postmortem report ಕೊಡು ಅಂತಾ ಹೇಳಿ, ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಎಂ.ಡಿ., ಮಾಡಿಕೊಂಡು ಬಂದರೂ ನಿರ್ದಿಷ್ಟವಿರುವ ಜಾಗಗಳಲ್ಲಿ ಯಾರು ಇರುತ್ತಾರೋ, ಅವರೇ postmortem ಮಾಡಿ certificate ಕೊಡಬಹುದು. ನನ್ನದು ವಿದ್ಯಾರ್ಹತೆ ಆಗಿದೆ, ನಾನು ಏತಕ್ಕೆ postmortem report ಕೊಡಬಾರದು ಎನ್ನುವುದಕ್ಕಾಗುವುದಿಲ್ಲ. All educated graduates are not guaranteed with jobs. ಅರೇ, ನಾನು ಓದುತ್ತೇನೆ. ಕೋರ್ಸ್ open ಮಾಡುವುದಕ್ಕೆ ಅನುಮತಿ ಕೊಡಿ ಎಂದರೆ, ಸರ್ಕಾರ ಇಲ್ಲ ಎಂದು ಹೇಗೆ ಹೇಳುವುದಕ್ಕಾಗುತ್ತದೆ? ಓದು ಮುಗಿಸಿ ಕೆಲಸ ಕೊಡಿ ಎಂದು ಎಲ್ಲಾ ಸಂಸ್ಥೆಯವರೇ ಕೇಳಿದರೆ, ಹಾಗಾದರೆ, ಸಂಸ್ಥೆಗಳನ್ನೇ ಮುಚ್ಚಬೇಕಾಗುತ್ತದೆ. We have not opened the schools and colleges for the sake of jobs. ಓದುತ್ತೇವೆ. ನಮ್ಮ ಹಣೆಬರಹ, ನಾನು private ನಲ್ಲಿ ಬದುಕುತ್ತೇನೆ ಎನ್ನುವವರು ಇರುತ್ತಾರಲ್ಲಾ, ಹಾಗಾಗಿ ಕಾಲೇಜುಗಳಲ್ಲಿ ಕೋರ್ಸ್ open ಮಾಡಿರುತ್ತಾರೆ, ಹಾಗಾಗಿ, ಅನುಮತಿ ಕೊಡುತ್ತಾರೆ. ಓದಿದ ಮೇಲೆ, ನಮಗೆ ಕೆಲಸವಿಲ್ಲ ಕೆಲಸ ಕೊಡಿ ಎಂದು ಪರಿಷತ್ತಿನಲ್ಲಿ ನಿರುದ್ಯೋಗದ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿಬಿಟ್ಟರೆ, Institutions ಎಷ್ಟು ಬೇಕು? ಅದೇನು IAS, number of posts ಅನ್ನು ನೋಡಿ, ಸಂದರ್ಶನ ಮಾಡುವುದಕ್ಕೆ. We are giving education; he can survive on his own. He can go outside, he can live. ಹಾಗಾಗಿ, ಇವರಿಗೆ surgery ಮತ್ತು

postmortem ಮಾಡುವ power ಇವೆಲ್ಲಾ ಕೊಡುವುದಕ್ಕೆ built–up education ನಲ್ಲಿ scope ಇಲ್ಲ. They cannot. Medical Jurisprudence, ಅವನು ಮಾನ್ಯ ನ್ಯಾಯಾಲಯದ ಮುಂದೆ ಬರಬೇಕಲ್ಲ. ಅವನು ಹೇಗೆ ಬರುತ್ತಾನೆ? Forensic matters ಹೇಗೆ ಗೊತ್ತಿರುತ್ತದೆ? Jurisprudence ಹೇಗೆ ಗೊತ್ತಿರುತ್ತದೆ? Medical legal cases ಎಲ್ಲಿಂದ register maintain ಮಾಡುತ್ತೀರಾ? ಇವೆಲ್ಲವೂ ಮಾನ್ಯ ನ್ಯಾಯಾಲಯದ ಮುಂದೆ ತರಬೇಕಲ್ಲವೆ. ಹಾಗಾಗಿ, it is not possible. Government Institutions, Recognized Institutions ಮಾತ್ರ cause of death and postmortem certificate ಕೊಡುವಂತಹದ್ದಕ್ಕೆ powers ಕೊಟ್ಟಿದ್ದು.

**ಶ್ರೀ ಯು.ಬಿ. ವೆಂಕಟೇಶ್:–** ನಾನು ಮಾತನಾಡುತ್ತೇನೆ.

**ಡಾ॥ ಕೆ. ಸುಧಾಕರ್:–** ಮಾನ್ಯ ಸದಸ್ಯರೇ, ಒಂದು ನಿಮಿಷ. Registered Ayurveda practitioners ಈಗ death certificate ನಲ್ಲಿ ಸಹಿ ಮಾಡುವುದಕ್ಕೆ ಅವಕಾಶವಿದೆ. ಮಾನ್ಯ ಸದಸ್ಯರು ಕೇಳುತ್ತಿರುವುದೇನೆಂದರೆ, registered ayurveda practitioners ಅಲ್ಲದೇ ಇರುವ ತಲತಲಾಂತರಗಳಿಂದ ನಾಟಿ ಔಷಧಿ ಕೊಡುವ ಬಗ್ಗೆ ಅವರು ಏನು ಕಲಿತಿರುತ್ತಾರೆ, ಅಂತಹವರಿಗೂ ಕೂಡ ಅವಕಾಶ ಕೊಡಿ ಎನ್ನುವಂತಹದ್ದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ. ಅದಕ್ಕೆ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಅವಕಾಶ ಕೊಟ್ಟಿಲ್ಲ. ಕೇರಳ ಸರ್ಕಾರವೇ ಇತ್ತೀಚೆಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿತ್ತು. ಅಲ್ಲಿ ನಮಗಿಂತ ಹೆಚ್ಚಿನ ಜನರು ಈ ರೀತಿಯಲ್ಲಿ ಪಾರಂಪರಿಕವಾಗಿ ಅವರ ಪೂರ್ವಿಕರಿಂದ ಅಭ್ಯಾಸ ಮಾಡಿಕೊಂಡು, ವಿಷಯದ ಬಗ್ಗೆ ಅರ್ಥ ಮಾಡಿಕೊಂಡಿರುತ್ತಾರೆ. ಅವರು practice ಮಾಡುತ್ತಿದ್ದಾರೆ. ಅಂತಹವರಿಗೆ ಅವಕಾಶ ಮಾಡಿಕೊಡಿ ಎಂದು 2018 ರಲ್ಲಿ ಕೇರಳ ಸರ್ಕಾರ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿತ್ತು. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತಾರೆ. "Unless he is a qualified medical practitioner he cannot sign." ಹಾಗಾಗಿ Karnataka Registration Board ಇದೆ. ಅದರಲ್ಲಿ ಅವರು register ಆಗಬೇಕು. ಅದರಲ್ಲಿ register ಆಗಬೇಕೆಂದರೆ, ಅವರು ಕನಿಷ್ಠ

ಆಯುರ್ವೇದದಲ್ಲಿ ಬಿ.ಎ.ಎಂ.ಎಸ್. ಆಗಲೀ, ಯುನಾನಿಯಲ್ಲಿ ಬಿ.ಯು.ಎಂ.ಎಸ್ ಆಗಲೀ, ಸಿದ್ಧದಲ್ಲಿ ಆಗಲೀ, ಕನಿಷ್ಠ ಪಕ್ಷ ಪದವಿಯನ್ನು ತೆಗೆದುಕೊಂಡಿರಬೇಕು. ಇಲ್ಲ, ಅವರು ಬಹಳ ಬಡವರಿದ್ದಾರೆ ಮತ್ತು ಪಾರಂಪರಿಕವಾಗಿ ಕಲಿತಿದ್ದಾರೆ ಎಂದರೆ, ಅವರಿಗೆ ಅಧ್ಯಯನ ಮಾಡುವಂತಹ ಆಸಕ್ತಿ ಇದ್ದರೆ, ಅದಕ್ಕೆ ಕೂಡ ನಮ್ಮ ಇಲಾಖೆಯಲ್ಲಿ free seats ಅನ್ನು ಬಳ್ಳಾರಿ ಕಾಲೇಜಿನಲ್ಲಿ ಕೊಡುತ್ತೇವೆ ಮತ್ತು ಆಯುರ್ವೇದ ಕಾಲೇಜು, ಬೆಂಗಳೂರಿನಲ್ಲಿಯೂ ಸಹ ಅಂತಹವರಿಗೆ ಉಚಿತವಾಗಿ ಶಿಕ್ಷಣವನ್ನು ಕೊಡುತ್ತೇವೆ. ಅವರಿಗೆ seats ಮೀಸಲಾತಿಯನ್ನು ಕೂಡ ಮಾಡಿದ್ದೇವೆ. ಸರ್ಕಾರ ಖಂಡಿತವಾಗಿಯೂ ಕೂಡ ಆ ರೀತಿಯ ಪಾರಂಪರಿಕ ಅಭ್ಯಾಸ ಮಾಡಿ ಕಲಿತಿರುವಂತಹವರಿಗೆ, ಯಾವುದೇ ರೀತಿಯಲ್ಲಿ ತೊಡಕು ಆಗಬಾರದು ಎನ್ನುವ ದೃಷ್ಟಿಯಿಂದ ಕಾನೂನಿನಲ್ಲಿ ನಿಯಮಗಳನ್ನು ಮಾಡಲಿಲ್ಲ.

**(ಮುಂದು)**

**(672) 28-03-2022 5.20 ಟಿಸಿಹೆಚ್-ಬಿಎನ್ಎಸ್**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ ನಂತರ ನಾವು ಮಾತನಾಡುವುದು ಕಷ್ಟ. ಏಕೆಂದರೆ ಅವರು ಎಲ್ಲಾ ಹೇಳಿಬಿಟ್ಟಿರುತ್ತಾರೆ. ಈಗ 2018ಕ್ಕಿಂತ ಮೊದಲು ಮಲ್ಟಿ ಸಿಸ್ಟಂ ಇತ್ತು. ಅಂದರೆ ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ಸಿದ್ಧ ಔಷಧ ಇವೆಲ್ಲವೂ ಒಂದೇ ಕಡೆ ಮಾಡುವುದು ಇತ್ತು. 2018ರಲ್ಲಿ ನೀವು ಬಂದು ಅದನ್ನು ತೆಗೆದುಹಾಕಿದ್ದೀರಿ. ಮತ್ತೆ 2020ರಲ್ಲಿ ಆ law repeal ಆದರೂ ಕೂಡ ಅವರು ಅದನ್ನು implement ಮಾಡಬೇಕೆಂದರೆ ಆ portal open ಆಗುತ್ತಿಲ್ಲ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇಲ್ಲೇ ಇದ್ದೀರಿ, ಇದರ ಬಗ್ಗೆ ತಾವೇ ಹೇಳಬೇಕು. ನಂತರ ನಾನು ಮಾತನಾಡುತ್ತೇನೆ. ಈ ಮೊದಲು ಯಾವ ಕಾನೂನು ಇತ್ತೋ ಅದನ್ನೂ ಸಹ ಅವರು ಅನುಷ್ಠಾನ ಮಾಡಲು ಈಗ ಆಗುತ್ತಿಲ್ಲ. Under one roof ಯೋಗ, ಯುನಾನಿ, ಸಿದ್ಧ ಔಷಧ ಇವುಗಳನ್ನು ಒಂದೇ ಕಡೆ ಮಾಡಲು ಆಗುತ್ತಿಲ್ಲ.

**ಡಾ.ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್ ಆದೇಶ ಮಾಡಿರುವುದು. . .

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಸುಪ್ರೀಂ ಕೋರ್ಟ್ ಹೇಳಿರುವುದು ಬೇರೆ, ನಾನು ಹೇಳುತ್ತಿರುವುದೇ ಬೇರೆ. ಈಗ ಆಸ್ಪತ್ರೆಗಳಲ್ಲಿ 2018 ರವರೆಗೆ ಮಲ್ಟಿ ಸಿಸ್ಟಂ ಅಂದರೆ ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ಸಿದ್ಧ ಔಷಧ ಇತರ ಪದ್ಧತಿಯ ಚಿಕಿತ್ಸೆಗಳನ್ನು ನೀಡುವ ಸೌಲಭ್ಯ ಜಾರಿಯಲ್ಲಿತ್ತು. ಆದರೆ 2020ನೇ ಸಾಲಿನಲ್ಲಿ 2018ರಲ್ಲಿ ಮಲ್ಟಿ ಸಿಸ್ಟಂ ಚಿಕಿತ್ಸೆ ನೀಡುವುದನ್ನು ರದ್ದುಗೊಳಿಸಿದ ಆದೇಶವನ್ನೇ ರದ್ದುಪಡಿಸಲಾಯಿತು. ಹೀಗಾಗಿ, KPME (Karnataka Private Medical Establishment) Act 2009 ರ ಪ್ರಕಾರ ಆಸ್ಪತ್ರೆಗಳಲ್ಲಿ ಮಲ್ಟಿ ಸಿಸ್ಟಂ ಚಿಕಿತ್ಸೆಯನ್ನು ನೀಡಲು ಅನುಮತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಬೇಕು ಹಾಗೂ KPME registration portal ನಲ್ಲಿ upload ಮಾಡಲು ಆಗುತ್ತಿಲ್ಲ. ಹಾಗಾಗಿ ಸರ್ಕಾರ ರಿಪೀಲ್ ಆಗಿದ್ದನ್ನೂ ಕೂಡ implement ಮಾಡಲು ಕೊಡುತ್ತಿಲ್ಲವಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, integrated medicine ಬಗ್ಗೆ ಈಗಾಗಲೇ ಚರ್ಚೆ ಆರಂಭವಾಗಿದೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಹೇಳುವಂತೆ, multi system registration in a single establishment as per KPME Act ನಾವು ಜಾರಿಗೆ ತಂದಿದ್ದೆವು. ಇವತ್ತಿನ ದಿವಸ ನಾವು ಅದನ್ನು ಯಾವ ರೀತಿ integrate ಮಾಡಿ uniform treatment ನ್ನು ಕೊಡಬೇಕು ಎನ್ನುವ ವಿಚಾರದಲ್ಲಿ, ಅಂದರೆ multi disciplinary establishment ಏನಿದೆ, ಅದರ ಪ್ರಕಾರ ನಾವು ಯಾವ ರೀತಿ ಕೊಡಬೇಕೆಂದು ಈಗಾಗಲೇ ಚರ್ಚೆ ಮಾಡುತ್ತಿದ್ದೇವೆ. ಆದರೆ ದಿನಾಂಕ 13.04.2018 ರಂದು ಸುಪ್ರೀಂ ಕೋರ್ಟ್ ಬಹಳ ಕ್ಲಿಯರ್ ಆಗಿ ಆದೇಶವನ್ನು ಕೊಟ್ಟಿದೆ. ಅದರಲ್ಲಿ ಅವರು;

*In our country, the numbers of qualified medical practitioners have been much less than the required number of such persons. The scarcity of qualified medical practitioner was previously quite large since there were very few institutions imparting teaching and training to Doctors, Vaidyas, Hakims etc. The position has now changed and there are quite a good number of medical colleges imparting education in various streams of medicine. No doubt, now there are a good numbers of such institutions training qualified medical practitioners at number of places. The persons having no recognized and approved qualifications, having little knowledge about the indigenous medicines, are becoming medical practitioners and playing with the lives of thousands and millions of people. …….*"

ಎಂದು ಹೇಳಿದ್ದಾರೆ. ಇದನ್ನು ತಮ್ಮ ಮಾಹಿತಿಗಾಗಿ ಹೇಳುತ್ತಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಚಿವರೇ, ತಾವು ಸುಪ್ರೀಂ ಕೋರ್ಟ್ ಆದೇಶವನ್ನು cite ಮಾಡುತ್ತಿದ್ದೀರಿ. ಆದರೆ ನಾನು ಅದರ ಬಗ್ಗೆ ಹೇಳುತ್ತಿಲ್ಲ. ಸರ್ಕಾರದಲ್ಲಿ ಮಾಡುವಂಥದ್ದನ್ನು ಹೇಳುತ್ತಿದ್ದೇನೆ.

**ಡಾ॥ ಕೆ.ಸುಧಾಕರ್:–** ಮಾನ್ಯ ಯು.ಬಿ.ವೆಂಕಟೇಶ್ ರವರೇ citation ಎಂದು ಅಲ್ಲ. ಇದು ವಸ್ತುಸ್ಥಿತಿಯಲ್ಲಿ ಆಗುತ್ತಿದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಚಿವರೇ, ತಾವು ಎಲ್ಲಿಯವರೆಗೆ ಅಲೋಪತಿಗೆ ಹೆಚ್ಚಿನ ಮಹತ್ವ ಕೊಡುತ್ತೀರೋ ಅಲ್ಲಿಯವರೆಗೆ ಇದಕ್ಕೆ ಮಾನ್ಯತೆ ಸಿಗುವುದಿಲ್ಲ. ಅಲೋಪತಿನಲ್ಲಿ ಅವರು ಬರೀ ಮಾತ್ರೆಗಳನ್ನು ಮಾರಾಟ ಮಾಡಬೇಕು ಅಷ್ಟೆ . . .

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಒಬ್ಬ ವ್ಯಕ್ತಿಯ ಆರೋಗ್ಯದ ವಿಚಾರದಲ್ಲಿ ಅವನ ಜೀವದ ಜೊತೆ ಆಟವಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಅದಕ್ಕೆ ಕಾನೂನಿನಲ್ಲೂ ಕೂಡ ಅವಕಾಶವಿಲ್ಲ. ಇದು ಬಹಳ ಮುಖ್ಯ. ಮಾನ್ಯ ಸಭಾಪತಿಯವರೇ, ಅವರು "the persons having no recognised and approved qualification" ಎಂದು ಹೇಳಿದ್ದಾರೆ. This is medical education. ಅದು ಯಾವುದೇ discipline ಇರಲಿ, ಆಯುರ್ವೇದ ಮಾಡಿಕೊಂಡಿರತಕ್ಕಂಥವರಿಗೆ ರಿಜಿಸ್ಟ್ರೇಷನ್ ಇರಬೇಕೆಂದು ನಾವು ಹೇಳುತ್ತೇವೆ ಅಷ್ಟೆ. ಅವರು registration ಮಾಡಿಕೊಳ್ಳದೇ ಬರೀ practice ಮಾಡುತ್ತೇವೆಂದರೆ ಕಷ್ಟ. ಏಕೆಂದರೆ ಒಬ್ಬರ ಜೀವಕ್ಕೆ ಏನಾದರೂ ಆಪತ್ತು ಸಂಭವಿಸಿದರೆ who will be held responsible? ಇವತ್ತಿನ ದಿವಸ ಒಬ್ಬರು ಸರ್ಜನ್ ಒಂದು surgical error ಮಾಡಿದಲ್ಲಿ, consumer court ಗೆ ಹೋಗಿ ಅವರ ವಿರುದ್ಧ ದಾವೆ ಹೂಡುತ್ತಾರೆ. That is where we have reached. ಇವತ್ತಿನ ದಿವಸ medical science ಮತ್ತು ಆವಿಷ್ಕಾರಗಳು ಬಹಳಷ್ಟು ಬದಲಾಗಿದೆ. ಇವತ್ತಿನ ದಿವಸ ಒಬ್ಬ ವ್ಯಕ್ತಿಯ ಪ್ರಾಣ ಬಹಳ ಮುಖ್ಯ ಎನ್ನುವುದನ್ನು ನಾವೆಲ್ಲರೂ ಅರ್ಥಮಾಡಿಕೊಂಡಿದ್ದೇವೆ. ಅದರ ಜಾಗ್ರತೆ ಕೂಡ ಹೆಚ್ಚಾಗಿದೆ. Today, there is no scope for medical negligence. ಇವತ್ತಿನ ದಿವಸ ಅಲೋಪತಿ ವಿಶೇಷವೆಂದು ನಾನು ಹೇಳುವುದಿಲ್ಲ. ಆದರೆ ಯಾವ ಒಂದು discipline ನಲ್ಲಿ standardisation of drug ಇರಬೇಕು, ಗುಣಾತ್ಮಕವಾದ ಕ್ವಾಲಿಟಿ ಇದೆಲ್ಲವನ್ನೂ ಅಧ್ಯಯನ ಮಾಡಿ ಅದರ ಒಂದು ವರದಿ ಇರಬೇಕು. ಆ ರೀತಿಯಲ್ಲಿ ಯಾವುದನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಮಾಡಿರುತ್ತಾರೋ ಅಂತಹ ಒಂದು discipline ಗೆ ಮಾನ್ಯತೆ ಸಿಗುತ್ತದೆ. ಇವತ್ತಿನ ದಿವಸ ಆಯುರ್ವೇದದಲ್ಲಿ ಅನೇಕ ವಿಷಯಗಳಲ್ಲೂ ಕೂಡ ಅಧ್ಯಯನ ಮಾಡಿ ಆ ಪೇಪರ್ಸ್‌ನ್ನು ಕೂಡ ಹೊರಗಡೆ ತಂದಿದ್ದಾರೆ. ಅಂತಹದ್ದಕ್ಕೆ ಇಡೀ ವಿಶ್ವವ್ಯಾಪಿ ಬೇಡಿಕೆ ಇದೆ. ಅದಕ್ಕೆ ನಮ್ಮ ನಿಯಮದಲ್ಲಾಗಲೀ ಅಥವಾ ಸರ್ಕಾರದಲ್ಲಿ ವಿರೋಧ ಇಲ್ಲವೇ ಇಲ್ಲ. We welcome all registered medical practitioners. ಹಾಗಾಗಿ, ಇಲ್ಲಿಂದ ಜನಗಳಿಗೆ ತಪ್ಪು ಸಂದೇಶ ಹೋಗುವುದು ಬೇಡ. It is only thing that we limit to only those who are

registered medical practitioners and we will not allow those who are not registered. ಹಾಗಾಗಿ, ಯಾವುದೇ ಒಂದು ಸಂಸ್ಥೆಯಲ್ಲಿ ವ್ಯಾಸಂಗ ಮಾಡಿರತಕ್ಕಂಥವರಿಗೆ ಆ ಡಿಗ್ರಿ ಸರ್ಟಿಫಿಕೇಟ್ ಬರುತ್ತದೆ. ಆ ಗ್ರಾಜುಯೇಷನ್ ಮೇಲೆ ಅವರ ಹೆಸರಿನಲ್ಲಿ ನಾವು registration ಮಾಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಾನು ಕೇಳುತ್ತಿರತಕ್ಕಂಥ ಪ್ರಶ್ನೆ ಏನೆಂದರೆ, 2018ರಲ್ಲಿ ಅದು ಕ್ಯಾನ್ಸಲ್ ಆಗಿತ್ತು. ಮತ್ತೆ ಅದು 2020 ರಲ್ಲಿ repeal ಆಯಿತು. ಆದರೆ ಇವತ್ತಿನವರೆಗೆ ಅವರಿಗೆ ಪರ್ಮಿಷನ್ ಕೊಟ್ಟಿಲ್ಲ. ಅವರಿಗೆ ಪರ್ಮಿಷನ್ ಕೊಡುತ್ತೀರೋ ಅಥವಾ ಇಲ್ಲವೋ?

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ,  ನಾನು ಈಗಾಗಲೇ ಹೇಳಿದಂತೆ, multi system registration ನ್ನು ಮಾಡುತ್ತಿರುವಂಥ establishment KPME, Multi disciplinary approach ಏನಿದೆ ಅದರ ಕುರಿತು ನಾವು ಈಗಾಗಲೇ ಚರ್ಚೆ ಮಾಡಿ ಅದನ್ನು ಯಾವ ರೀತಿ integrate . . .

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಚಿವರೇ, ಇದಕ್ಕೆ ಉತ್ತರ ಕೊಡುವುದಕ್ಕೆ ಒಂದೂವರೆ ವರ್ಷ ಆಯಿತು. ಇನ್ನು ಅದರಲ್ಲಿ ಚರ್ಚೆ ಮಾಡಿ ಹೇಳುವುದಕ್ಕೆ ಇನ್ನೂ ಸುಮಾರು 5 ವರ್ಷಗಳು ಆಗುತ್ತದೆಯೇ? ನೀವು ಮಾಡಿರತಕ್ಕಂಥ ಕಾನೂನನ್ನೇ ನೀವು implement ಮಾಡುವುದಕ್ಕೆ ಆಗುವುದಿಲ್ಲವೆಂದರೆ ಏನು ಅರ್ಥ? ಮಾನ್ಯ ಸಚಿವರೇ, 2020ರಲ್ಲಿ ನೀವೇ repeal ಮಾಡಿರುವುದನ್ನು, from tomorrow I will allow  ಎಂದು ಹೇಳುವುದಕ್ಕೆ ನಿಮಗೆ ಏನು ತೊಂದರೆ ಇದೆ? ಅದು ನೀವು ಮಾಡಿರುವ ಕಾನೂನು ಅಲ್ಲವೇ?

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ನಾವು repeal ಎನ್ನತಕ್ಕಂಥದ್ದನ್ನು ಬಹಳ ಸುಲಭವಾಗಿ ಹೇಳಬಹುದು. . .

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನೀವು repeal ಮಾಡಿದ್ದೀರಿ. ಅದಕ್ಕೆ ನೀವು act ಗೆ ತರಬೇಕು ಅಷ್ಟೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಅದನ್ನು implement ಮಾಡಲು ಅದರ ಸಾಧಕ-ಬಾಧಕಗಳನ್ನು ನೋಡಬೇಕಾಗುತ್ತದೆ. ನಾನು ಈಗಾಗಲೇ ಹೇಳಿದಂತೆ, ನಾವು ಯಾವುದೋ ಒಂದು ರಸ್ತೆ ಹಾಕುವಂಥ ಕೆಲಸ ಅಲ್ಲ. ಜನರ ಆರೋಗ್ಯವನ್ನು ಅನೇಕ; . . . ಇವತ್ತಿನ ದಿವಸ ಎಷ್ಟು ಸಾಂಕ್ರಮಿಕ ರೋಗಗಳಿವೆ, ಎಷ್ಟು ಅಸಾಂಕ್ರಮಿಕ ರೋಗಗಳಿವೆ? ಯಾವ್ಯಾವ discipline ಯಾವ ಒಂದು ರೋಗಗಕ್ಕೆ ಉತ್ತಮವಾಗಿ ಚಿಕಿತ್ಸೆ ಕೊಡಬಹುದು ಇದೆಲ್ಲವನ್ನೂ ಕೂಡ ವೈಜ್ಞಾನಿಕವಾಗಿ... this is a very elaborate subject. ಇದನ್ನು ಅಷ್ಟು ಸಲೀಸಾಗಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಖಂಡಿತವಾಗಿಯೂ ಸರ್ಕಾರ ಇದನ್ನು ಬಹಳಷ್ಟು ವಿಶೇಷವಾಗಿ ಪರಿಗಣಿಸಿದೆ. ಆಯುಷ್ ಇಲಾಖೆಗಳ ಮೂಲಕ ಅಲೋಪತಿಯಂತೆ ಇವುಗಳನ್ನೂ ಜೋಡಣೆ ಮಾಡಲು ಇವತ್ತಿನ ದಿವಸ ಅದಕ್ಕೆ ಚಿಕಿತ್ಸೆ ಕೊಡುವುದಕ್ಕೆ ಸಾಧ್ಯವಿದೆ. ಅದನ್ನು ನಾವು ವೈಜ್ಞಾನಿಕವಾದ ಹಿನ್ನೆಲೆಯಲ್ಲಿ ಒಂದು ತಾಂತ್ರಿಕ ಸಲಹಾ ಸಮಿತಿಯನ್ನು ರಚನೆ ಮಾಡಿದ್ದೇವೆ. ಈಗಾಗಲೇ ಅದರಲ್ಲಿ ಚರ್ಚೆ ಪ್ರಾರಂಭವಾಗಿದೆ. ಹಾಗಾಗಿ, ಅದರಿಂದ ಅಂತಿಮ ವರದಿ ಬಂದ ನಂತರ ಖಂಡಿತವಾಗಿಯೂ ಅದನ್ನು ಅನುಷ್ಠಾನಕ್ಕೆ ತರುವಂಥ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತದೆ. ಅದರಲ್ಲೇನು ಅನುಮಾನ ಬೇಡ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಲೋಪತಿ MBBS ಡಾಕ್ಟರ್ಸ್‌ಗೆ ಏನು ಒಂದು status ಕೊಡುತ್ತಿದ್ದಾರೋ ಆ status ನ್ನು ಆಯುರ್ವೇದದಲ್ಲಿ ಬಿಎಎಂಎಸ್ ಯಾರು ಪಾಸ್ ಆಗಿರುತ್ತಾರೋ, ಎಂ.ಎಸ್., ಆದ ನಂತರ ಎಂ.ಡಿ., ಆಗುತ್ತಾರೆ. ಅವರನ್ನು ಆ ರೀತಿ parallel ಆಗಿ treat ಮಾಡುತ್ತಿಲ್ಲ ಎನ್ನುವುದು ಅವರೆಲ್ಲರ ನೋವು. ಅವರು ಪಿಯುಸಿ ಪಾಸ್ ಆದ ನಂತರ ಬಿಎಎಂಎಸ್‌ಗೆ ಹೋಗುತ್ತಾರೆ. ಇವರು ಪಿಯುಸಿ ಸೈನ್ಸ್ ಪಾಸ್ ಆದ ನಂತರ ಎಂಬಿಬಿಎಸ್‌ಗೆ ಹೋಗುತ್ತಾರೆ. ನೀವು ಅವರನ್ನೇಕೆ ಪ್ಯಾರಲಲ್ ಆಗಿ ಟ್ರೀಟ್ ಮಾಡುವುದಿಲ್ಲ. ವೇತನ ಶ್ರೇಣಿಯಲ್ಲೂ ಕೂಡ ಆಯುರ್ವೇದ ವೈದ್ಯರನ್ನು 'second grade' ಎಂದು ಟ್ರೀಟ್ ಮಾಡುತ್ತಾರೆ. ಆಯುರ್ವೇದ ನಮ್ಮ ದೇಶದ ಪದ್ಧತಿ. ಅವರನ್ನು ನಮ್ಮ ದೇಶದಲ್ಲಿ encourage

ಮಾಡದಿದ್ದರೆ, ಬೇರೆ ಇನ್ಯಾವ ದೇಶದವರು encourage ಮಾಡುತ್ತಾರೆ? ಇವತ್ತಿನ ದಿವಸ ಬೇರೆ ಬೇರೆ ದೇಶಗಳಲ್ಲಿ ಆಯುರ್ವೇದ ಪದ್ಧತಿಗೆ ಬಹಳ importance ಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿ ನಾವೇ ಅದಕ್ಕೆ importance ಕೊಡದಿದ್ದರೆ, ಇನ್ಯಾರು ಕೊಡುತ್ತಾರೆ? ಮಾನ್ಯ ಸಚಿವರೇ, ಅವರಿಗೆ equal status ಕೊಡಿ. ಅವರನ್ನೂ ಕೂಡ equally treat ಮಾಡಿ. ಇವತ್ತಿನ ದಿವಸ ಸರ್ಕಾರ ಆಯುರ್ವೇದ ಸಂಶೋಧನಾ ಕ್ಷೇತ್ರಕ್ಕೆ ಎಷ್ಟು ಬಜೆಟ್ ಕೊಟ್ಟಿದೆ? ಆಯುರ್ವೇದದಲ್ಲಿ ಸಂಶೋಧನೆ ಮಾಡಬಾರದೇ? ಸರ್ಕಾರ ಅದಕ್ಕೆ ಬಜೆಟ್‌ನಲ್ಲಿ provision ಮಾಡದಿದ್ದರೆ ಮತ್ತೆ ಇನ್ಯಾರು ಮಾಡುತ್ತಾರೆ? ಇನ್ಯಾರೂ ಕೂಡ ಮಾಡುವುದಿಲ್ಲ. ಅಲೋಪತಿಗೆ research ಗೆ ಬಜೆಟ್‌ನಲ್ಲಿ maximum provision ಮಾಡುತ್ತಿದ್ದೀರಿ. ಅದರಂತೆ ನಮ್ಮ ದೇಶದಲ್ಲಿ ಆಯುರ್ವೇದ ಸಂಶೋಧನೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಅದಕ್ಕೆ ಬಜೆಟ್‌ನಲ್ಲಿ provision ಕೂಡ ಮಾಡಬೇಕು. ಆಗ ಮಾತ್ರ ಅದು ಅಭಿವೃದ್ಧಿ ಹೊಂದುತ್ತದೆ. ಇಲ್ಲದಿದ್ದರೆ ಅದು ಅಭಿವೃದ್ಧಿ ಹೊಂದುವುದಿಲ್ಲ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಒಂದೇ ಒಂದು interference. ಈಗ same pay scale ಬಗ್ಗೆ ಹೇಳಿದ್ದಾರೆ. Same pay scale for MBBS and BAMS degree holders. There is no disparity. ನಮ್ಮ ರಾಜ್ಯದಲ್ಲಿ ಅವರಿಬ್ಬರಿಗೂ ಕೂಡ same pay scale ಇದೆ. ತಪ್ಪು ಸಂದೇಶ ಹೋಗುವುದು ಬೇಡ. BAMS degree holdersಗೆ ಮತ್ತು MBBS degree holders ಗೆ same scale of pay ಇದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಈಗ ಸರ್ಕಾರ stipend ಕೊಡುತ್ತದೆ. ನೀವು BAMS degree holdersಗೆ stipend ಕೊಡುತ್ತಿದ್ದೀರಾ? ತಾವು ಹೇಳಿದಿರಿ. ನಾನು ಅದನ್ನು verify ಮಾಡಿ ಹೇಳುತ್ತೇನೆ. MBBS ನವರಿಗೆ ಏನು pay scale ಕೊಡುತ್ತಿದ್ದೀರಿ, ಆ equivalent pay scale ನ್ನು BAMS graduates ಗೆ ಕೊಡುತ್ತಿಲ್ಲ. ನಾನು ಇದನ್ನು verify ಮಾಡಿ ಆಮೇಲೆ ಹೇಳುತ್ತೇನೆ. ಈಗ MBBS ಡಾಕ್ಟರ್ಸ್‌ಗೆ ಏನು importance ಕೊಡತ್ತಿದ್ದೀರೋ, ಅದೇ ರೀತಿ parallel ಆಗಿ BAMS doctorsಗೂ ಕೊಡಿ. ನಮ್ಮ ದೇಶದಲ್ಲಿಯೇ

importance ಕೊಡದಿದ್ದರೆ, ಬೇರೆ ಇನ್ನಾವ ದೇಶದವರು ಕೊಡುತ್ತಾರೆ? ಹಾಗಾಗಿ, ನಾನು ಬಹಳ ಒತ್ತಾಯ ಮಾಡುವುದೇನೆಂದರೆ, ಆಯುರ್ವೇದ ಸಂಶೋಧನೆಯಲ್ಲಿ ನಾವು ಬಹಳ ಹಿಂದುಳಿದಿದ್ದೇವೆ. ಅದಕ್ಕೂ ಕೂಡ maximum scope ಕೊಡಿ. ಯಾರ್ಯಾರು ಆಯುರ್ವೇದದಲ್ಲಿ research ಮಾಡುತ್ತಾರೋ ಅಂತಹವರಿಗೆ ಈ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಡಿ. ಅವರಿಗೆ scholarship ಕೊಡಿ. ನಮ್ಮ ದೇಶದಲ್ಲಿ ಆಯುರ್ವೇದದಲ್ಲಿ ಸಂಶೋಧನೆಗಳು ಆಗುತ್ತಿಲ್ಲ. ಅದರಲ್ಲಿ ನಾವು ಬಹಳ ಹಿಂದುಳಿದಿದ್ದೇವೆ. ದಯವಿಟ್ಟು ಈ ಕೆಲಸ ಸರ್ಕಾರದಿಂದ ಆಗಬೇಕು.

**(ಮುಂದು)**

**(673)28.3.2022/5.30/ಎಂ.ಎಂ-ಬಿ.ಎನ್.ಎಸ್**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಯವರೇ, ಒಬ್ಬ ಅಲೋಪತಿ ಡಾಕ್ಟರಾಗಿ ಆಯುರ್ವೇದಕ್ಕೆ ಒತ್ತು ಕೊಟ್ಟು ಮೊನ್ನೆ ಕೂಡ ಬಹಳ ಚೆನ್ನಾಗಿ ಮಾತನಾಡಿದರು. ನಮಗೆ ಆಶ್ಚರ್ಯವಾಯಿತು. ಆದರೆ ಇವತ್ತು ಅವರ ಉತ್ತರವನ್ನು ನೋಡಿದಾಗ ಆಯುಷ್ ಮತ್ತು ಆಯುರ್ವೇದಿಕ್ ಬೇಡವೆಂದು ಹೇಳಿದರೂ, ಆಯುಷ್ ಒಳಗಡೆಯೇ ಆಯುರ್ವೇದಿಕ್ ಬರುತ್ತದೆ ಎಂದು ಹೇಳಿದರೂ ಸರಿ ನಾನು ಒಪ್ಪುತ್ತೇನೆ. ಬಹಳ ಒಳ್ಳೆಯ ಯೋಜನೆಗಳನ್ನು ಹಾಕಿದ್ದಾರೆ ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು, ಬೋಧಕವರ್ಗ, ವೈದ್ಯರುಗಳ ನೇಮಕ, ನಶಿಸಿ ಹೋಗುವ ಔಷಧಿ ಸಸ್ಯಗಳ, ಮಕ್ಕಳ ಪೌಷ್ಠಿಕ ಆಹಾರ, ಯೋಗ ಇವೆಲ್ಲಾ ವಿಚಾರಗಳು ಬಂತು. ಇದು ಹೇಗಿದೆ ಎಂದರೆ ಒಂದು ದೊಡ್ಡ ಬಂಗಲೆ ಕಟ್ಟಿದಂತೆ. ಆ ಬಂಗಲೆಯಲ್ಲಿ ರೂಮ್‌ಗಳು, ಅಡಿಗೆಮನೆ, ಎಲ್ಲಾ ಪೀಠೋಪಕರಣ, ದಿನಸಿ ಆಹಾರ ಪದಾರ್ಥಗಳನ್ನಿಟ್ಟುಕೊಂಡು ಆಹಾರವನ್ನು ತಯಾರು ಮಾಡು ಎಂದು ವೈದ್ಯರನ್ನು ಅಡಿಗೆಯವರನ್ನು ಕಳುಹಿಸಿ ಕೂರುತ್ತಾರೆ. ಆಹಾರವನ್ನು ತಯಾರು ಮಾಡಿ ಬರುತ್ತಾನೆ, ಊಟ ಮಾಡುತ್ತಾನೆ ಊಟ ಮಾಡಿದ ಮೇಲೆ ರುಚಿ ಹೇಗಿದೆ ಎಂದು ಅವನು ಕೇಳಬಾರದು. ಅದಕ್ಕೆ hotel management ನಲ್ಲಿ ಕಲಿತವನೇ ಬರಬೇಕು. ಎಂ.ಬಿ.ಬಿ.ಎಸ್., ವೈದ್ಯರುಗಳೇ ಆಗಬೇಕು. ಇಲ್ಲಿ

ಕಲಿತವರು ಆಗುವುದಿಲ್ಲ. ಆದ್ದರಿಂದ ಈ ರೀತಿ ಇದೆ. ಇದು ನ್ಯಾಯವಲ್ಲ. ನಮಗೆ ಆಯುರ್ವೇದಿಕ್‌ನಲ್ಲಿ ಆಪರೇಷನ್ ಇಲ್ಲದೇ ಚಿಕಿತ್ಸೆ ಸಿಗುತ್ತದೆ. ನನಗೆ ಹಾಗೆ ಸಿಕ್ಕಿದೆ. ನನ್ನ ಕೈಗೆ ಆಪರೇಷನ್ ಆಗಬೇಕೆಂದು ಡಾಕ್ಟರ್ ಹೇಳಿದರು, ಆಪರೇಷನ್ ಇಲ್ಲದೇ ನನಗೆ ಚಿಕಿತ್ಸೆ ಆಗಿದೆ. ಈಗ ನನ್ನ ಕೈಗೆ ಆಪರೇಷನ್ ಆಗಿಲ್ಲ ಸರಿಯಾಗಿದೆ. ಅದಕ್ಕೋಸ್ಕರ ಇವತ್ತು ಅವರಿಗೆ ಮಾನ್ಯತೆ ಸಿಗದೇ ಹೋದರೆ ಮಲತಾಯಿ ಧೋರಣೆ ಮಾಡಿದಂತಾಗುತ್ತದೆ. ಒಂದು ಕೆಲಸ ಮಾಡಿ. ಆಯುರ್ವೇದಿಕ್ ಬೇಡವೇ ಬೇಡ. ಎಲ್ಲವನ್ನೂ ಮುಚ್ಚಿಬಿಡಿ. ದೊಡ್ಡ ದೊಡ್ಡ ವಿಶ್ವವಿದ್ಯಾಲಯವೆಲ್ಲಾ ಏತಕ್ಕೆ ಬೇಕು? ಬಂದ್ ಮಾಡಿ.

**ಶ್ರೀ ಎಸ್. ರುದ್ರೇಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಆಯುರ್ವೇದದ ಬಗ್ಗೆ ಜನಸಾಮಾನ್ಯರಲ್ಲಿ ಬಹಳಷ್ಟು ನಂಬಿಕೆ ಬರುತ್ತಿದೆ. ಇವತ್ತು ಪ್ರತಿಯೊಂದು tier-2 city ನಲ್ಲಿ ಕೂಡ ನೀವು ಎರಡು ಕಾರಣಕ್ಕೆ ಒಳ್ಳೊಳ್ಳೆಯ ಆಸ್ಪತ್ರೆಗಳನ್ನು ನೋಡಬಹುದು. ಕೆಲ ವರ್ಗದ ಜನರಿಗೆ ಅಲೋಪತಿ ಚಿಕಿತ್ಸೆಯನ್ನೇ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆ ರೀತಿಯಾದ ಒಂದು ಸ್ಥಿತಿ ಇದೆ. ಅದು ತುಂಬಾ ದುಬಾರಿಯಾಗಿದೆ. ಎರಡನೆಯದಾಗಿ ಆಗಲೇ ಮಾನ್ಯ ಸಚಿವರು ಉತ್ತರ ಕೊಡುತ್ತಾ integrated treatment ಎಂದು ಹೇಳಿದರು. ಅಂದರೆ ಅಲೋಪತಿ ಮತ್ತು ಆಯುರ್ವೇದ ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಂಬಾ ಯಶಸ್ವಿಯಾಗಿ ನಡೆಯುತ್ತಿದೆ. ಅದೆಲ್ಲಕ್ಕಿಂತ ಸಾಕಷ್ಟು ಒಳ್ಳೆಯ ಸಂಸ್ಥೆಗಳು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದಿಕ್ ಕಾಲೇಜು ಇರಬಹುದು ಮತ್ತು ಶಿವಮೊಗ್ಗದಲ್ಲಿರುವ ಆಯುರ್ವೇದಿಕ್ ಸಂಸ್ಥೆ ಇರಬಹುದು ಇವೆಲ್ಲವೂ ಕೂಡ ವ್ಯವಸ್ಥಿತವಾದ ಆಯುರ್ವೇದ ಚಿಕಿತ್ಸೆಯನ್ನು ಕೊಡುತ್ತಿವೆ. ಬಹಳ ದೊಡ್ಡ ಸಂಖ್ಯೆಯಲ್ಲಿ ಜನರು ಸ್ವತಃ ಆಯುರ್ವೇದದ ಕಡೆಗೆ ಹೋಗುತ್ತಿದ್ದಾರೆ. ವಿಶೇಷವಾಗಿ ಕೋವಿಡ್-19 ಸಮಯದಲ್ಲಿ immunity booster ಎಂದು ಇಡೀ ರಾಜ್ಯದಲ್ಲಿ ಬಹಳ ದೊಡ್ಡ ಬೆಂಬಲವನ್ನು ಆಯುರ್ವೇದ ಕೊಟ್ಟಿದೆ. ಹಾಗಾಗಿ ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರು ಏನು ಅದನ್ನು ಪ್ರಸ್ತಾವ ಮಾಡಿದ್ದಾರೆ ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಯುರ್ವೇದವು ನಮ್ಮ ದೇಶದಲ್ಲಿ ಆದಿಕಾಲದಿಂದ, ಋಷಿಮುನಿಗಳಿಂದ ಬಂದಿರುವ ವಿಚಾರವಿದು. ನಿನ್ನೆ ಮೊನ್ನೆಯ ವಿಚಾರವಲ್ಲ. ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮೊನ್ನೆ ಕೋವಿಡ್-19 ಬಂದಂತಹ ಸಂದರ್ಭದಲ್ಲಿ ಸ್ವಲ್ಪ ನಮ್ಮ ಅಧಿಕಾರಿಗಳು ಕಣ್ತೆರೆದು ನೋಡಲಿ. ಎಷ್ಟು ಜನ ಕೋವಿಡ್-19 ಪೀಡಿತರು ಕೋವಿಡ್-19ಗೆ precautionary measures ತೆಗೆದುಕೊಳ್ಳುವುದಕ್ಕೋಸ್ಕರ ಆಯುರ್ವೇದಕ್ಕೆ ಮಾರು ಹೋಗಿದ್ದರು. ಅಮೃತಬಳ್ಳಿಯಿಂದ ಹಿಡಿದು; ಅಮೃತಬಳ್ಳಿಯು ಕಾಡಿನ ಬೇಲಿಯಲ್ಲಿ ಬೆಳೆಯುತ್ತಿತ್ತು. ಅಮೃತಬಳ್ಳಿಯ ವಿಚಾರವೇ ಯಾರಿಗೂ ಗೊತ್ತಿರಲಿಲ್ಲ. ಈಗ ಎಲ್ಲರ ಮನೆ ಮನೆಯ ಪಾಟ್‌ನಲ್ಲಿ ಅದರ ಗೆಡ್ಡೆಯನ್ನು ಹಾಕಿ ಅಮೃತಬಳ್ಳಿ ಗಿಡವನ್ನು ಬೆಳೆಸುತ್ತಿದ್ದಾರೆ. ಅಮೃತಬಳ್ಳಿಗೆ ಸಾವಿಲ್ಲ. ಬೇಸಿಗೆ ಕಾಲ ಬಂದಾಗ ಆ ಗೆಡ್ಡೆ ಮಣ್ಣಿನೊಳಗೆ ಇರುತ್ತದೆ. ಮಳೆ ಬಂದ ತಕ್ಷಣವೇ ತನ್ನಂತಾನೇ ಚಿಗುರುವುದಕ್ಕೆ ಪ್ರಾರಂಭವಾಗುತ್ತದೆ. ಅಮೃತಬಳ್ಳಿಗೆ ಎಂತಹ ಆಯುರ್ವೇದದ ಶಕ್ತಿ ಇದೆಯೆಂದರೆ ಅಷ್ಟು ಒಳ್ಳೆಯ ಶಕ್ತಿ ಇದೆ ಅದಕ್ಕೆ. ಬೇಲಿಯಲ್ಲಿ ಬೆಳೆಯುವ ಔಷಧಿ ಗಿಡಗಳೆಲ್ಲವೂ ಕೂಡ; ತುಳಸಿ ಗಿಡದ ಔಷಧೀಯ ಗುಣಗಳ ಬಗ್ಗೆ ನಮಗೆಲ್ಲರಿಗೂ ಮೊದಲಿನಿಂದಲೂ ಗೊತ್ತು. ಅಂತಹ ನೂರಾರು ಔಷಧಿ ಗಿಡಗಳು ಬರುವುದು ಆಯುರ್ವೇದದಲ್ಲಿ ಆಗಿದೆ. ನಾವು ನಮ್ಮ ಆಯುರ್ವೇದದ ವಿಚಾರಗಳನ್ನು ವಿದೇಶಿಗರು ತಿಳಿದುಕೊಂಡ ಮೇಲೆ ಇವತ್ತು ಅವರು ಅದನ್ನು ಫಾಲೋ ಮಾಡುತ್ತಿದ್ದಾರೆ. ಯೋಗವನ್ನು ಯಾರು ಕಲಿಸಿಕೊಟ್ಟರು? ಯೋಗವು ನಮ್ಮಿಂದ ಇಡೀ ಪ್ರಪಂಚಕ್ಕೆ ಹೋಗಿರುವಂತಹದ್ದು. ಬೇಕಾದರೆ ನೀವು ಶ್ರೀ ಧರ್ಮಸ್ಥಳ ಆಯುರ್ವೇದ ಕಾಲೇಜಿಗೆ ಹೋಗಿ ನೋಡಿ. ಅಲ್ಲಿ ಶೇ.20 ಕ್ಕಿಂತಲೂ ಹೆಚ್ಚು ವಿದೇಶಿಯರು ಅಲ್ಲಿದ್ದಾರೆ. ಉಡುಪಿ, ಮಲ್ಪೆಯ ಬೀಚ್ ರೆಸಾರ್ಟ್‌ಗಳಲ್ಲಿ ಸಂಪೂರ್ಣ ಆಯುರ್ವೇದ ಚಿಕಿತ್ಸೆ ಕೊಡುವ ಹತ್ತಾರು ಆಸ್ಪತ್ರೆಗಳಿವೆ. ಅವರೆಲ್ಲರೂ ಆಯುರ್ವೇದ ಪದವೀಧರರಾಗಿ ಕೆಲಸ ಸಿಗದೇ ಅಲ್ಲಿ ವೈದ್ಯರಾಗಿ ಈ ಚಿಕಿತ್ಸೆಗಳನ್ನು ಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ಇಷ್ಟರಮಟ್ಟಿಗೆ ಶ್ರೀ ಧರ್ಮಸ್ಥಳ ಆಯುರ್ವೇದ ಆರೋಗ್ಯ ಸಂಸ್ಥೆ ಸಾವಿರಾರು ಜನರಿಗೆ ಆರೋಗ್ಯ ಕೊಡುತ್ತಿರುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರು ಏನು ಕೇಳಿದ್ದಾರೆ ಅದನ್ನು ದಯಮಾಡಿ ಇದರಲ್ಲೇನೂ ಆಪರೇಷನ್ ಮಾಡುವ

ವಿಚಾರವಿಲ್ಲ. ಅವರಿಗೇನು ಮಾನ್ಯತೆ ಕೊಡಬೇಕೋ ಅದನ್ನು ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ. ಆಯುಷ್ ಇಲಾಖೆಯವರ ಬಗ್ಗೆ ನಮಗೇನೂ ಬೇಜಾರಿಲ್ಲ. ಅಧಿಕಾರಿ ವರ್ಗದವರು ಇಲ್ಲಿ ಕೇಳಿಸಿಕೊಳ್ಳುತ್ತಿದ್ದಾರೆ. ಆಯುಷ್ ಇಲಾಖೆಗೆ ಏನು ಮಾನ್ಯತೆ ಕೊಡುತ್ತೀರೋ; ಆಯುರ್ವೇದ ಮೊದಲು ಈ ದೇಶದಲ್ಲಿ ಹುಟ್ಟಿದೆ. ಇದಕ್ಕೆ ಪುರಾತನ ಇತಿಹಾಸವಿದೆ, ಋಷಿ ಮುನಿಗಳ ಇತಿಹಾಸವಿದೆ. ಈ ಆಯುರ್ವೇದ ಹಿಮಾಲಯ ಪರ್ವತದಿಂದ ಬಂದಿದೆ ಬೇರೆ ಎಲ್ಲಿಂದಲೋ ಬಂದಿಲ್ಲ. ಅದಕ್ಕೆ ಅದರದ್ದೇ ಆದ ಇತಿಹಾಸವಿದೆ. ಆಯುರ್ವೇದಕ್ಕೆ ಸಾವಿಲ್ಲ. ಬೇರೆ ಯಾವುದಾದರೂ ಬಂದು ಹೋಗಬಹುದು. ಈ ಆಯುರ್ವೇದಕ್ಕೆ ಯಾವತ್ತೂ ಸಾವಿಲ್ಲ. ಇವತ್ತು ಬೇಕಾದಷ್ಟು ಜನರು ಆಯುರ್ವೇದಕ್ಕೆ 70–80 ವರ್ಷದವರು ಇದರಲ್ಲಿ ಏನೂ ಅಡ್ಡ ಪರಿಣಾಮಗಳಿರುವುದಿಲ್ಲ ಎಂದು ಆಯುರ್ವೇದ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದಾರೆ. ನಿಮ್ಮ ಮೆಡಿಸಿನ್ ಕಡೆಗೆ ಬರುತ್ತಿಲ್ಲ. ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಹುಟ್ಟಿ, ನಮ್ಮ ದೇಶದಲ್ಲಿ ಪ್ರತೀತಿ ಪಡೆದು ಅದನ್ನು ಇವತ್ತು ಹೊರದೇಶದವರೆಲ್ಲಾ ಫಾಲೋ ಮಾಡಬೇಕಾದರೆ ನಾವು ಅದಕ್ಕೊಂದು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ದಯಮಾಡಿ ಸರ್ಕಾರ ಈ ಕಡೆ ಗಮನಹರಿಸಬೇಕೆಂದು ಕೋರುತ್ತೇನೆ.

**ಡಾ॥ ಕೆ. ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಎಲ್ಲಾ ಮಾನ್ಯ ಸದಸ್ಯರೂ ಆಯುಷ್‌ನ ಪ್ರಾಮುಖ್ಯತೆ ಬಗ್ಗೆ, ವಿಶೇಷವಾಗಿ ಆಯುರ್ವೇದ ಚಿಕಿತ್ಸೆ ವಿಧಾನದ ಬಗ್ಗೆ ವ್ಯಕ್ತಪಡಿಸಿರುವಂತಹ ಆಶಾಭಾವನೆ, ನಂಬಿಕೆ, ವಿಶ್ವಾಸ ಇವೆಲ್ಲವನ್ನೂ ನೋಡಿ ನನಗೆ ಬಹಳ ಸಂತೋಷವಾಗಿದೆ. ಇನ್ನೊಂದು ಕಡೆ ಆಶ್ಚರ್ಯವಾಗುತ್ತದೆ. ಏಕೆಂದರೆ ಇವತ್ತು ನಮ್ಮ ಸರ್ಕಾರ ಇದನ್ನು ಮನಗಂಡೇ ಇದಕ್ಕೆ ಒಂದು ವಿಶೇಷವಾದ ಮಂತ್ರಾಲಯವನ್ನೇ ರಚನೆ ಮಾಡಿದೆ. ಇದನ್ನು ಯಾರೂ ಮಾಡಿರಲಿಲ್ಲ. ಆಯುಷ್‌ಗೆನೇ ಒಂದು ಇಲಾಖೆ ಇರಬೇಕು, ಇದಕ್ಕೆಂದೇ ಕೇಂದ್ರದಲ್ಲಿ ಒಬ್ಬ ಮಂತ್ರಿ ಇರಬೇಕು ಎಂದು ವಿಚಾರ ಮಾಡಿದ್ದು ನಮ್ಮ ಸರ್ಕಾರವೇ. ರಾಷ್ಟ್ರೀಯ ಆಯುಷ್ ಅಭಿಯಾನದ ಮಿಷನ್ ಪ್ರೋಗ್ರಾಂ ತೆಗೆದುಕೊಂಡಿರುವುದು ಕೇಂದ್ರ ಸರ್ಕಾರ. National AYUSH Mission ಇದನ್ನು ನಮ್ಮ ಸರ್ಕಾರವೇ ತೆಗೆದುಕೊಂಡಿರುವುದು. ಒಂದು mission mode ನಲ್ಲಿ ಆಯುರ್ವೇದದ principles ಜನಸಾಮಾನ್ಯರಿಗೆ ಮುಟ್ಟಬೇಕೆಂಬ ಆಲೋಚನೆ

ಬಂದಿದ್ದೇ ನಮಗೆ. ಹಾಗಾಗಿ ಅದನ್ನು ಒಂದು mission mode ನಲ್ಲಿ ಒಂದು ಅಭಿಯಾನದ ರೀತಿಯಲ್ಲಿ ನಾವು ಮಾಡುತ್ತಿರುವಾಗ ಮತ್ತು ಈ ರಾಜ್ಯದಲ್ಲಿ ಸಂಶೋಧನೆ ಕೂಡ ಈ ಪ್ರಕಾರಗಳಲ್ಲಿ ಆಗಬೇಕೆಂದು ಆಯುಷ್‌ಗೆ ಒಂದು ವಿಶೇಷವಾದ ವಿಶ್ವವಿದ್ಯಾಲಯವನ್ನು ತರುವ ಬಿಲ್ಲನ್ನು ಇದೇ ಗೌರವಾನ್ವಿತ ಸದಸ್ಯರೆಲ್ಲರೂ ಪಾಸ್ ಮಾಡಿ ಕೊಟ್ಟಿದ್ದಾರೆ. ಯಾವುದೇ ಒಂದು ಪೇಪರ್ ಆದಮೇಲೆ ಅದು document ಆಗಬೇಕು. ಇದು ವ್ಯಕ್ತಿಯ ಆರೋಗ್ಯದ ವಿಚಾರವಾಗಿರುವುದರಿಂದ ಇವತ್ತು ಇದನ್ನೆ ಸುಪ್ರೀಂಕೋರ್ಟ್ ಕೂಡ ಉಲ್ಲೇಖ ಮಾಡುತ್ತದೆ. ತಾವು ಏನು ಹೆಸರುಗಳನ್ನೆಲ್ಲಾ ಕೊಟ್ಟಿದ್ದೀರಿ ಅದರ ಹಿಂದಗಡೆ ಯಾವುದೇ ರಿಜಿಸ್ಟ್ರೇಷನ್ ಇಲ್ಲ, ಅವರು ಇದರ ಅಧ್ಯಯನ ಮಾಡಿದ್ದಾರೆ ಎಂಬ ಯಾವುದೇ ಪುರಾವೆ ಇಲ್ಲ, ಇಂತಹವರಿಗೆ ಹೇಗೆ ನಾನು ಅವಕಾಶ ಮಾಡಿಕೊಡಲಿ ಎಂದು ಸುಪ್ರೀಂ ಕೋರ್ಟ್ ಕೇಳುತ್ತದೆ. ಇವತ್ತು registered ಆಗಿದ್ದರೆ ಅವರು ಆಯುರ್ವೇದ ಮಾಡಿರಲಿ, ಯುನಾನಿ ಮಾಡಿರಲಿ ಇವರೆಲ್ಲರಿಗೂ ಕೂಡ ಸಮಾನ ಅವಕಾಶಗಳನ್ನು ಅಲೋಪತಿ ಮಾಡಿರುವವರಿಗೆ ಏನು ಅವಕಾಶ ಇದೆ ಅಷ್ಟೂ ಅವಕಾಶಗಳು ಈ disciplines ನಲ್ಲಿ ವ್ಯಾಸಂಗ ಮಾಡಿರುವವರಿಗೂ ಕೂಡ ಇದೆ. ಹಾಗಾಗಿ ನಾವಿದನ್ನು ಬೆಳೆಸುತ್ತೇವೆ ಹೊರತು ಒಕ್ಕೊರಲಿನಿಂದ ಆಯುಷ್ ಇಲಾಖೆಗೆ, ಆಯುರ್ವೇದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು, ಹೆಚ್ಚಿನ ಒತ್ತನ್ನು ಕೊಡಬೇಕೆಂದು ತಾವು ಏನನ್ನು ಬಯಸಿದ್ದೀರಿ ಅದನ್ನು ಕೊಡುವುದಕ್ಕೆ ಸರ್ಕಾರ ೧೦೦ಕ್ಕೆ ೧೦೦ರಷ್ಟು ಬದ್ಧವಾಗಿದೆಯೆಂದು ಹೇಳಬಯಸುತ್ತೇನೆ.

**ವೈಸ್ ಚೇರ್ಮನ್:–** ಈಗ ಮಾನ್ಯ ಪಿ.ಆರ್. ರಮೇಶ್‌ರವರು.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ನನ್ನ ಮಾತು ಮುಗಿದೇ ಹೋಗುತ್ತದೆ. ಏನಿಲ್ಲ, ಈಗ ನಾನು ಒಂದೂವರೆ ವರ್ಷದಿಂದ ಕಾದಿದ್ದಕ್ಕೆ ನನಗೆ ಇವತ್ತು ಉತ್ತರ ಬಂತು. ಬರಲಿ, ಸಂತೋಷವಾಗಿದೆ. Multi system allow ಮಾಡುವುದಕ್ಕೆ ನಿಮ್ಮ law ಏನು repeal ಮಾಡಿದ್ದೀರಿ ಅದನ್ನು allow ಮಾಡುತ್ತೀರಾ ಇಲ್ಲವೇ ಎಂಬುದನ್ನು ತಿಳಿಸಿ.

**ಡಾ॥ ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ವೆಂಕಟೇಶ್‌ರವರೇ, ಮಾನ್ಯ ಸಚಿವರು (**ಗೊಂದಲ**)

**ಶ್ರೀ ಯು.ಬಿ. ವೆಂಕಟೇಶ್:-** ಅದನ್ನು ಅವರ ಬಾಯಿಂದ ಬರಲಿ ಎಂದು ಕೇಳುತ್ತಿದ್ದೇನೆ, ಇಲ್ಲದಿದ್ದರೆ ನಿಮ್ಮ ಬಾಯಿಂದ ಬಂದರೆ ಸಾಕು.

**ಡಾ॥ ಕೆ. ಸುಧಾಕರ್:-** ಇದನ್ನು repeal ಮಾಡುವುದಕ್ಕೆ;

**ಶ್ರೀ ಯು.ಬಿ. ವೆಂಕಟೇಶ್:-** ಇದು repeal ಆಗಿ ಹೋಗಿದೆ.

**(ಮುಂದು)**

**(674) 28-03-2022 KH/KS 5-40**

**ಡಾ॥ ಕೆ.ಸುಧಾಕರ್ (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, multiple disciplines ಅನ್ನು ಯಾವ ರೀತಿ ಅನುಷ್ಠಾನಕ್ಕೆ ತರಬೇಕೆನ್ನುವುದರ ಬಗ್ಗೆ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚನೆ ಮಾಡಿ, ಇನ್ನು ಒಂದು ತಿಂಗಳೊಳಗೆ ಇದನ್ನು ಯಾವ ರೀತಿಯಲ್ಲಿ ಮಾಡಬಹುದೆನ್ನುವ ಬಗ್ಗೆ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ಮಾತು.

**ವೈಸ್ ಛೇರ್‌ಮನ್:-** ಮಾನ್ಯ ಸಚಿವರು ಈಗಾಗಲೇ ಖಚಿತವಾಗಿ ಉತ್ತರ ಕೊಟ್ಟಿದ್ದಾರೆಯಲ್ಲವೇ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು. ಇದಕ್ಕೆ ಈಗಾಗಲೇ repeal ಆಗಿ ಹೋಗಿದೆ. ಇದನ್ನು allow ಮತ್ತು implement ಮಾಡಬೇಕು ಅಷ್ಟೇ.

**VICE CHAIRMAN: –** Hon'ble Minister has agreed.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಈಗ Private Members' resolution ಅನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆಯಲ್ಲವೇ?

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಖಾಸಗಿ ನಿರ್ಣಯವನ್ನು ಏನು ಮಂಡನೆ ಮಾಡಿದ್ದಾರೆ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರು ಹೇಳಿದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಮ್ಮ ಅಧ್ಯಕ್ಷರನ್ನು ಕೇಳಿ ತೆಗೆದುಕೊಳ್ಳುತ್ತೇನೆ.

**(ಗೊಂದಲ)**

**ವೈಸ್ ಛೇರ್‌ಮನ್:-** ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರ ಕೊಟ್ಟಿರುವುದರಿಂದ . . .

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಮಾನ್ಯ ಸಚಿವರು ಭರವಸೆ ಕೊಟ್ಟಿದ್ದಾರೆಯಲ್ಲವೇ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಅಧ್ಯಕ್ಷರಾದ ಆಯನೂರು ಮಂಜುನಾಥ್‌ರವರೇ, ನಾನು ವಾಪಸ್ಸು ತೆಗೆದುಕೊಳ್ಳಲೇ?

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು equal status ಕೊಡುತ್ತೇವೆ ಎಂದು ಹೇಳಿದ್ದಾರೆ. ಇನ್ನೇನು ಬೇಕು?

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರ ಮಾನ್ಯ ಯು.ಬಿ.ವೆಂಕಟೇಶ್‌ರವರ ಅಭಿಪ್ರಾಯಕ್ಕೆ ಮಾನ್ಯತೆ ಕೊಟ್ಟಿರುವುದರಿಂದ, ತಾವು ಸರ್ಕಾರಕ್ಕೆ ಅಭಿನಂದನೆಯನ್ನು ತಿಳಿಸಿ, ವಾಪಸ್ಸು ತೆಗೆದುಕೊಳ್ಳಬೇಕು.

**ವೈಸ್ ಛೇರ್‌ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಹಿಂಪಡೆದಿದ್ದಾರೆ ಬಿಡಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಒಂದು ತಿಂಗಳಿನಲ್ಲಿ ಏನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ನಂಬಿ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಇದನ್ನು ಎಲ್ಲರೂ ಒಟ್ಟಾಗಿ . .

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಸದನದ 75 ಜನರ ಪರವಾಗಿ unanimously ಇದನ್ನು ಹಿಂಪಡೆದಿದ್ದೇನೆ.

**ವೈಸ್ ಛೇರ್‌ಮನ್:–** ಸರ್ಕಾರ ನೀಡಿದ ಉತ್ತರದಿಂದ ಮಾನ್ಯ ಯು.ಬಿ.ವೆಂಕಟೇಶ್‌ರವರು ಮಂಡಿಸಿದಂತಹ ಖಾಸಗಿ ನಿರ್ಣಯವನ್ನು ಸಮಧಾನದಿಂದ ಹಿಂಪಡೆದಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ನನ್ನ ಈ ಕೆಳಕಂಡ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ:

**“ದೇಸಿಯ ಪರಂಪರೆಯ ಆಯುರ್ವೇದ ವೈದ್ಯ ಪದ್ಧತಿಗೆ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನೀತಿಯೊಂದನ್ನು ರೂಪಿಸುವ ಕುರಿತು”**

**ವೈಸ್ ಛೇರ್‌ಮನ್:–** ಮಾನ್ಯ ಸದಸ್ಯರಿಗೆ ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಈ ಸಭೆಯು ಅನುಮತಿಸುತ್ತದೆಯೇ?

**ಮಾನ್ಯ ಸದಸ್ಯರು:–** ಆಗಬಹುದು.

**ನಿರ್ಣಯವನ್ನು ವಾಪಸ್ಸು ಪಡೆಯಲು ಅನುಮತಿ ನೀಡಲಾಯಿತು.**

**೦೯. ಗಮನ ಸೆಳೆಯುವ ಸೂಚನೆ**

**ಅ) ವಿಷಯ: ಬೆಂಗಳೂರು ದೇವರಚಿಕ್ಕನಹಳ್ಳಿಯ ವಾರ್ಡ್ ನಂ.೧೮೮ ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ಗೆ ಹಂಚಿಕೆಯಾಗಿದ್ದ ಸಿ.ಎ., ನಿವೇಶನವನ್ನು ಭೂಗಳ್ಳರು ಅತಿಕ್ರಮಿಸಿರುವ ಕುರಿತು.**

* * *

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ದೇವರಚಿಕ್ಕನಹಳ್ಳಿಯ ವಾರ್ಡ್ ನಂ.೧೮೮ ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ M/s. Indian Oil Corporation Limited (IOCL) ಗೆ ಹಂಚಿಕೆಯಾಗಿದ್ದ ಸಿ.ಎ., ನಿವೇಶನವನ್ನು ಭೂಗಳ್ಳರು ಅತಿಕ್ರಮಿಸಿರುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿಯನ್ನು ಲಗತ್ತಿಸಿದೆ)**

ಮಾನ್ಯ ಸಭಾಪತಿಯವರೇ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೇ ನಂ.44 ರಲ್ಲಿ ಒಟ್ಟು 3 ಎಕರೆ 27 ಗುಂಟೆ ಜಮೀನು ಬಿಟಿಎಂ ಲೇಔಟ್‌ನ 4ನೇ ಹಂತವನ್ನು ರಚಿಸುವ ಉದ್ದೇಶದಿಂದ ಬಿಡಿಎ ಯವರು ಈ ಜಮೀನನ್ನು ವಶಪಡಿಸಿಕೊಂಡು ಲೇಔಟ್ ಮಾಡಿದ್ದಾರೆ. ಅದರಲ್ಲಿ ಸಿ.ಎ. ನಿವೇಶನ ಸಂಖ್ಯೆ: 12/1 ಅನ್ನು ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಗೆ ಹಂಚಿಕೆ ಮಾಡಿದ್ದಾರೆ. ಈ ನಡುವೆ 0-37 ಗುಂಟೆ ಜಮೀನಿನ ಬಗ್ಗೆ ಮೂಲ ಜಮೀನುದಾರರಾದ ದಿವಂಗತ ಕೃಷ್ಣಪ್ಪನವರ ಪತ್ನಿ ಶ್ರೀಮತಿ ರುಕ್ಕಮ್ಮ ಎನ್ನುವವರು ತಕರಾರು ತೆಗೆದಿದ್ದಾರೆ. ಇದು ನ್ಯಾಯಾಲಯದಲ್ಲಿ ಇದೆ. ಹಾಗೆಯೇ, ಅವರ ಮಗ ಸಿ.ಎ. ನಿವೇಶನದಲ್ಲಿ ನಿರ್ಮಾಣ ಮಾಡಿರುವಂತಹ ಪೆಟ್ರೋಲ್ ಬಂಕ್‌ನ ಮೇಲೆ ಅತಿಕ್ರಮ ಪ್ರವೇಶ ಮಾಡಿರುವ ಬಗ್ಗೆ ಈಗಾಗಲೇ 3 ಪ್ರಕರಣಗಳು ನೋಂದಣಿಯಾಗಿವೆ. ಈ ಪ್ರಕರಣದ ತನಿಖಾ ಕಾಲದಲ್ಲಿ ಆರೋಪಿತ ಮೂಲ ಜಮೀನಿನ ಮಂಜೂರಾತಿ ಪಡೆದ ಕೃಷ್ಣಪ್ಪನವರ ಮೊಮ್ಮಗನಾದ ಸುನೀಲ್‌ಕುಮಾರ್ ರವರು ಅವರ ಕಾರ್ಮಿಕರೊಡನೆ ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯವರು ಉಸ್ತುವಾರಿಯಲ್ಲಿದ್ದ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ಶೀಟ್‌ಗಳನ್ನು ಕಿತ್ತುಹಾಕಿ ಹಾನಿಪಡಿಸಿರುವುದು ಪ್ರತ್ಯಕ್ಷ ಸಾಕ್ಷಿದಾರರಾದ ಮಹಾ ಕನ್‌ಸ್ಟ್ರಕ್ಷನ್ ಮಾಲೀಕರಾದ ಮಹಾ ರುದ್ರಮೂರ್ತಿ ರವರ ಹೇಳಿಕೆ ಮತ್ತು ತನಿಖೆಯಿಂದ ಕಂಡುಬಂದ ಮೇರೆಗೆ ಆರೋಪಿ ಸುನೀಲ್‌ಕುಮಾರ್ ಬಿನ್ ಕೃಷ್ಣಪ್ಪ, 34 ವರ್ಷ, ವಾಸ:197, ದೊಡ್ಡ ಮನೆ ಕೃಷ್ಣಪ್ಪ ಲೇಔಟ್, ಅರಕೆರೆ, ಬಿ.ಜಿ.ರಸ್ತೆ, ಬೆಂಗಳೂರು ಈತನನ್ನು ದಿನಾಂಕ:03-12-2020 ರಂದು ದಸ್ತಗಿರಿಪಡಿಸಿ ತನಿಖೆಯನ್ನು ಕೈಗೊಂಡು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ಆತನ ವಿರುದ್ಧ ದಿನಾಂಕ:26-07-2021 ರಂದು ಘನ 5ನೇ ಎಸಿಎಂಎಂ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿಯನ್ನು ನಿವೇದಿಸಿಕೊಂಡಿದ್ದು, ಹಾಲಿ ಈ ಪ್ರಕರಣವು ಘನ ನ್ಯಾಯಾಲಯದಲ್ಲಿ ಸಿಸಿ ನಂ:17053/2021 ರಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಸದರಿ ಜಾಗದಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳು ಪರಿಶೀಲಿಸಿದಾಗ ಪ್ರಸ್ತುತ ಡಿಸೇಲ್ ಹಾಕುವ ಯಾವುದೇ ಚಟುವಟಿಕೆಗಳು ಕಂಡುಬಂದಿರುವುದಿಲ್ಲ. ಈ ಸ್ವತ್ತಿನ ವಿಚಾರವಾಗಿ ಈಗಾಗಲೇ ಐಓಸಿಎಲ್ ರವರಿಗೆ ಸೈಟ್ ಅನ್ನು ಮಂಜೂರು ಮಾಡಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು

ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ನಂ: 6496/2021 ದಾವೆಯಲ್ಲಿ ಸಲ್ಲಿಸಿದ್ದು, ಆ ಮೇರೆಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ: 01-07-2021 ರಂದು "Status quo as of today shall be maintained by the parties with regard to the suit property" ಎಂದು ಆದೇಶ ನೀಡಿ ಮುಂದಿನ ವಿಚಾರಣೆ ದಿನಾಂಕ: 06-04-2022 ರಂದು ನಿಗದಿಪಡಿಸಿರುತ್ತಾರೆ. ಈಗ status quo ಇದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರದಲ್ಲಿ ಬಿಡಿಎ ರವರು ಸುಮಾರು 45 ವರ್ಷಗಳ ಹಿಂದೆ ಒಟ್ಟು 3 ಎಕರೆ 27 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಸಿದ ನಂತರ ಅದನ್ನು ಸಂಪೂರ್ಣವಾಗಿ ಹಂಚಿಕೆ ಮಾಡಿದ್ದಾರೆ. ಇದರಲ್ಲಿ ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರು ಪೆಟ್ರೋಲ್ ಬಂಕ್‌ನ ವಿಚಾರವಾಗಿ ಬಿಡಿಎ ಗೆ ಅರ್ಜಿ ಸಲ್ಲಿಸಿದ್ದಾರೆ. ಇವರು ಖಾಸಗಿಯವರು ಅಲ್ಲ. ಇವರಿಗೆ ಬಿಡಿಎ ರವರು ಸಿ.ಎ. ನಿವೇಶನವನ್ನು ಕೊಟ್ಟಿದ್ದಾರೆ. ಇದು ಕೇಂದ್ರ ಸರ್ಕಾರದ ಅಧೀನದಲ್ಲಿರುವಂತಹ ಸಾರ್ವಜನಿಕ ಉದ್ದಿಮೆ. ಅವರಿಗೆ 2019 ರಲ್ಲಿ ಸಿ.ಎ.ನಿವೇಶನವನ್ನು ಕೊಟ್ಟ ಮೇಲೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಪೋಲೀಸ್ ಇಲಾಖೆ ಮತ್ತು ಎಲ್ಲಾ ಇಲಾಖೆಗಳಲ್ಲಿಯೂ NOC (No Objection Certificate) ಅನ್ನು ಹಾಗೂ ಲೈಸೆನ್ಸ್ ಪಡೆದು, ಇವರು ಅಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಿದ್ದಾರೆ. ಆ ಸಂದರ್ಭದಲ್ಲಿ 45 ವರ್ಷಗಳಿಂದ ಪ್ರಶ್ನೆ ಮಾಡದೇ ಇದ್ದಂತಹವರು land grabbers ಬಂದು, ಅವರ ಕಾಮಗಾರಿಯನ್ನು ತಡೆಹಿಡಿದಿದ್ದಾರೆ. ಇದನ್ನು ತಡೆಹಿಡಿಯುವಂತಹ ಸಂದರ್ಭದಲ್ಲಿ ಹೈಕೋರ್ಟ್‌ನ ಒಂದು ಆದೇಶವನ್ನು ಅವರಿಗೆ ತೋರಿಸಿದ್ದಾರೆ. ಆ ಹೈಕೋರ್ಟ್ ಆದೇಶದ ಸಂಬಂಧ ಬಿಡಿಎ ರವರ ಮೇಲೆ ಹೈಕೋರ್ಟ್‌ನಲ್ಲಿ ದಾವೆ ಹೂಡಿ, ಹೈಕೋರ್ಟ್ ನಿರ್ದೇಶನದಂತೆ, ಮೆ॥ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ರವರಿಗೆ ಕೊಟ್ಟಿರುವಂತಹ 0-37 ಗುಂಟೆ ಜಮೀನು ಇವರಿಗೆ ಬರಬೇಕೆಂದು ಏನು ಹೇಳುತ್ತಿದ್ದಾರೆ, ಅದು ಇವರಿಗೆ ಸೇರಿದೆಯೇ, ಇಲ್ಲವೇ ಎನ್ನುವುದನ್ನು ಜಂಟಿ ಸರ್ವೇ ಮಾಡಿಸಿ, ತಾವು ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿದ್ದರು. ಸಿವಿಲ್ ನ್ಯಾಯಾಲಯದಲ್ಲಿ ಇದರ ಬಗ್ಗೆ ಜಂಟಿ ಸರ್ವೇ ಮಾಡಿ,

IOCL ರವರಿಗೆ ಕೊಟ್ಟಿರುವ 12 ಗುಂಟೆ ಜಮೀನನ್ನು ಇಲ್ಲಿ ಇವರು ನಮಗೆ 0-37 ಗುಂಟೆ ಬರಬೇಕೆಂದು ಏನು ಕೇಳುತ್ತಿದ್ದಾರೆ, ಇಲ್ಲಿ ಈ ಜಮೀನು trace out ಆಗುತ್ತಿಲ್ಲ ಎಂದು ಕೋರ್ಟ್ ತೀರ್ಪು ಕೊಟ್ಟಿದೆ. ಬಿಡಿಎ ಮತ್ತು land grabbers ನಡುವೆ ಈ dispute ಇದೆ. ಇವರು ಮೂಲತಃ landowners ಅಲ್ಲ. ಇವರು land grabbers. ಬಿಡಿಎ ಸ್ವತ್ತಿನ ಮೇಲೆ ಹಾಕಿಕೊಂಡಿದ್ದಾರೆ. ಸಿವಿಲ್ ನ್ಯಾಯಾಲಯದಲ್ಲಿ ಬಿಡಿಎ ಮತ್ತು ಇವರಿಗೂ ಇದ್ದಂತಹ ಪ್ರಕರಣದಲ್ಲಿ ಇಲ್ಲಿ ತಮ್ಮ ಜಾಗ trace out ಆಗುತ್ತಿಲ್ಲ ಎಂದ ಮೇಲೆ ಮುಗಿಯಿತು. ಆ ಸಂದರ್ಭದಲ್ಲಿ ದಿನಾಂಕ:03-02-2021 ರಲ್ಲಿ ಬಿಡಿಎ ಅಧಿಕಾರಿಗಳು, ಪೋಲೀಸ್ ಕಮೀಷನರ್‌ರವರಿಗೆ ತಾವು IOCL ರವರಿಗೆ ಪೋಲೀಸ್ ರಕ್ಷಣೆ ಕೊಡಬೇಕು ಎಂದು ಪತ್ರ ಬರೆಯುತ್ತಾರೆ.

**(ಮುಂದು)**

**(675)/28-3-2022/5-50/ಎಲ್‌ಎಂ/ಕೆಎಸ್**

**ಶ್ರೀ ಮರಿತಿಬ್ಬೇಗೌಡ(ಮುಂದು):-**

03-02-2021ರಲ್ಲಿ ಬಿಡಿಎ ದವರು ಪೋಲೀಸ್ ಕಮೀಶನರ್‌ರವರಿಗೆ ಒಂದು ಪತ್ರ ಬರೆದು, M/s. INDIAN OIL CORPORATION LIMITED (IOCL) ದವರು ತಮ್ಮ ಸ್ಥಳದಲ್ಲಿ ಚಟುವಟಿಕೆಯನ್ನು ಪ್ರಾರಂಭ ಮಾಡಲು ಪೋಲೀಸ್ ರಕ್ಷಣೆಯನ್ನು ಕೊಡಬೇಕು ಎಂದು ಹೇಳಿದ್ದಾರೆ. ಆದರೂ ಕೂಡಾ ಪೋಲೀಸ್‌ನವರು ರಕ್ಷಣೆಯನ್ನು ಕೊಡುವುದಿಲ್ಲ. IOCL ನವರು ಸುಮಾರು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ fence ನಿರ್ಮಾಣ ಮಾಡಿರುತ್ತಾರೆ. ಆ fencing ನ್ನು 30 ಜನ ರೌಡಿಗಳು ಬಂದು ಹಾಡು ಹಗಲೆ ಕಿತ್ತು ಹಾಕುತ್ತಾರೆ. ಈ ಘಟನೆಯಾದ ಮೇಲೆ ಮತ್ತೊಮ್ಮೆ ಬಿಡಿಎ ದವರು ಪೋಲೀಸ್ ಕಮೀಶನರ್‌ರವರಿಗೆ ಪತ್ರ ಬರೆದು IOCL ನವರು ಹಾಕಿರುವ fencing ನ್ನು ರೌಡಿಗಳು ಬಂದು ಹಾಳು ಮಾಡಿದ್ದಾರೆ, IOCL ನವರ ಸುಮಾರು 25 ಲಕ್ಷ ರೂಪಾಯಿಗಳ ನಷ್ಟವಾಗಿದೆ ಇವರಿಗೆ ರಕ್ಷಣೆ ಕೊಡಿ ಎಂದು ತಿಳಿಸಿದ್ದಾರೆ. ಮತ್ತೆ IOCL ನವರು 30 ಜನ ರೌಡಿಗಳು ಬಂದು ನಮ್ಮ ಆಸ್ತಿಯನ್ನು ಹಾಳು ಮಾಡಿದ್ದಾರೆ ಎಂದು ಪೋಲೀಸ್ ಕಮೀಶನರ್‌ವರಿಗೆ ಮತ್ತು ಡಿಸಿಪಿ

ಯವರಿಗೆ ಪತ್ರ ಬರೆದಿದ್ದಾರೆ. ಆಗ ಸ್ಥಳಿಯ ಡಿಸಿಪಿ ಯವರು ಒಂದು ಕೇಸನ್ನು ರಿಜಿಸ್ಟರ್ ಮಾಡುತ್ತಾರೆ. ಆ ಕೇಸ್‌ನಲ್ಲಿ 30 ಜನ ರೌಡಿಗಳು ಬಂದು ಇಷ್ಟೊಂದು ಆಸ್ತಿಯನ್ನು ಹಾಳು ಮಾಡಿದ್ದಾರೆ ಎಂದು ತಿಳಿಸದೆ, ಒಬ್ಬನ್ನೇ ಒಬ್ಬನ ಮೇಲೆ chargesheet ನ್ನು ಹಾಕುತ್ತಾರೆ. ಕಮೀಶನರ್ ಆದೇಶದಂತೆ ಎರಡು ಬಾರಿ IOCL ನವರಿಗೆ ಪೋಲೀಸರು ರಕ್ಷಣೆ ಕೊಡುತ್ತಾರೆ. ಆದರೆ ತಮ್ಮ ಉತ್ತರದಲ್ಲಿ ಸುಪ್ರಿಮ್ ಕೋರ್ಟ್‌ನಲ್ಲಿ ಕೇಸ್ ಇದೆ ಎಂದು ಹೇಳುತ್ತೀರಿ. ಸುಪ್ರಿಮ್ ಕೋರ್ಟ್‌ನಲ್ಲಿ ಕೇಸ್ ಇರುವುದು, ಬಿಡಿಎ ದವರು ಸ್ಟೇ ತೆಗೆದುಕೊಂಡಿರುವುದು, ಆದರೆ IOCL ನವರ ಕೇಸ್ ಅಲ್ಲ ಅದು. IOCL ನವರು ಎಲ್ಲಿಯು ಪಾರ್ಟಿಯಾಗಿರುವುದಿಲ್ಲ. IOCL ನವರಿಗೆ ಬಿಡಿಎಯವರು ಕೊಟ್ಟಿರುವ ಸ್ವತ್ತಿನ ಮೇಲೆ land grabbers ಗೆ ಯಾವುದೇ ಹಕ್ಕು ಇಲ್ಲ ಎಂದು ಜಂಟಿ ಸರ್ವೇ ಮಾಡಿರುವುದರಲ್ಲಿ ದೃಢಿಕರಣ ಇದೆ. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹಿಂದಿನ ಅಧಿವೇಶನದಲ್ಲಿ ನಿಯಮ 72ರಲ್ಲಿ ಪ್ರಸ್ತಾಪಿಸಿರುವ ವಿಚಾರಕ್ಕೆ IOCL ನವರ ಮೇಲೆ ವ್ಯಾಜ್ಯ ಇದೆ ಎಂದು ಪೋಲೀಸ್ ಅಧಿಕಾರಿಗಳು ಸದನಕ್ಕೆ ತಪ್ಪು ಉತ್ತರವನ್ನು ಕೊಟ್ಟಿದ್ದರು. ಅದರ ಮೇಲೆ ನಾನು ಹಕ್ಕುಚ್ಯುತಿ ಮಂಡನೆ ಮಾಡಿದೆ. ನಮ್ಮ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಿಂದ ಮೂರು ಬಾರಿ ನಿಮ್ಮ ಪೋಲೀಸ್ ಇಲಾಖೆಗೆ reminder ಹೋಗಿದೆ, ಆದರೆ ಇವತ್ತಿನವರೆಗೂ ಕೂಡಾ ಗೃಹ ಇಲಾಖೆಯಿಂದ ಉತ್ತರವನ್ನು ಕೊಟ್ಟಿರುವುದಿಲ್ಲ. ಕಳ್ಳರ ರೀತಿ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ. 45 ವರ್ಷಗಳ ಹಿಂದೆ ಬಿಡಿಎ ಯಿಂದ ಎಲ್ಲ ಆಸ್ತಿಯನ್ನು ಮಾರಾಟವಾದ ಮೇಲೆ ಉಳಿದ 12 ಗುಂಟೆ ಜಾಗಕ್ಕೆ ಒಂದು ಕೋಟಿ ಎಂಬತ್ತಾರು ಲಕ್ಷ ರೂಪಾಯಿಗಳನ್ನು IOCL ನವರಿಂದ ಕಟ್ಟಿಸಿಕೊಂಡು ಅವರಿಗೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ. ಇದು ಆದ ಮೇಲೆ ನಮ್ಮದು 36 ಗುಂಟೆ ಎಂದು ಹೇಳಿ ಯಾರೋ ಮೂರನೇ ವ್ಯಕ್ತಿ ಬಂದು ವ್ಯಾಜ್ಯ ಮಾಡುತ್ತಾರೆ. ಬೊಮ್ಮನ್ನಹಳ್ಳಿಯನ್ನು republic ಎಂದು ಕರೆಯುತ್ತಾರೆ. ಅಲ್ಲಿ ಪೋಲೀಸ್‌ನವರದೇ ದರ್ಬಾರು ನಡೆಯುತ್ತಿದೆ. ಎಲ್ಲಿ ಬಿಡಿಎಗೆ ಸೇರಿದಂತಹ ಖಾಲಿ ಸೈಟ್‌ಗಳು ಇರುತ್ತವೆ. ಅದಕ್ಕೆಲಾ ಭೂಗಳ್ಳರಿಂದ fencing ಹಾಕಿಸುತ್ತಾರೆ. ಈ ಕೆಲಸವನ್ನು ಪೋಲೀಸ್‌ನವರೆ support ಕೊಟ್ಟು ಮಾಡಿಸುತ್ತಾರೆ. ಆ ಏರಿಯಾದಲ್ಲಿ ಇಂತಹ 10 ಕೇಸ್‌ಗಳ ಬಗ್ಗೆ ನಾನು ಮಾಹಿತಿಯನ್ನು ಕೊಡುತ್ತೇನೆ. ಪೋಲೀಸ್ ಕಮೀಶನರ್‌ರವರು IOCL ನವರಿಗೆ ರಕ್ಷಣೆ ಕೊಡಿ ಎಂದು ಸ್ಥಳೀಯ ಪೋಲೀಸ್‌ರಿಗೆ

ಆದೇಶ ಮಾಡಿದರೂ ರಕ್ಷಣೆ ಕೊಡುವುದಿಲ್ಲ. ಅಲ್ಲಿ ಪೆಟ್ರೋಲ್ ಹಾಕುತ್ತಿಲ್ಲ ಎಂದು ಉತ್ತರದಲ್ಲಿ ಹೇಳಿದ್ದೀರಿ, ಆ ಸ್ಥಳಕ್ಕೆ ಹೋಗಿ ನೋಡಿ, 15 ಲಕ್ಷ ರೂಪಾಯಿಗಳ ಡಿಸೆಲ್‌ನ್ನು ಪಂಪ್‌ಗೆ ಭರ್ತಿ ಮಾಡಿ 6 ತಿಂಗಳಾಗಿದೆ. ಆದರೆ ಅಲ್ಲಿಯ ಪೋಲೀಸ್‌ನವರು ಭೂಗಳ್ಳರ ಜೊತೆಯಲ್ಲಿ ಶಾಮೀಲಾಗಿ ಅವರಿಗೆ ಚಟುವಟಿಕೆ ನಡೆಸಲು ಅವಕಾಶ ಕೊಟ್ಟಿರುವುದಿಲ್ಲ. IOCL ನವರು ಎಲ್ಲಿಯು ಪಾರ್ಟಿಯಾಗಿರುವುದಿಲ್ಲ, ಎಲ್ಲಿಯು ಇವರ ಮೇಲೆ ವ್ಯಾಜ್ಯ ಇರುವುದಿಲ್ಲ. ವ್ಯಾಜ್ಯ ಇರುವುದು ಬಿಡಿಎ ಮತ್ತು ಭೂಗಳ್ಳರ ಮಧ್ಯೆ. ಈ 12 ಗುಂಟೆ ಜಮೀನು ಭೂಗಳ್ಳರದು ಅಲ್ಲ ಎನ್ನುವುದು ಜಂಟಿ ಸರ್ವೇಯಲ್ಲಿ ಸಾಬೀತಾಗಿ ಕೋರ್ಟ್‌ನಿಂದ ಆದೇಶವಾಗಿದೆ. ಹುಳಿಮಾವು ಪೋಲೀಸ್ ಠಾಣೆಯಲ್ಲಿ ಮಹೇಶ್ ಕನಕಗಿರಿ ಎನ್ನುವ ಇನ್ಸ್‌ಪೆಕ್ಟರ್ ಇದ್ದರು, ಈಗ ಅವರು ಅಲ್ಲಿ ಇಲ್ಲ. ಡಿಸಿಪಿ ಶ್ರೀನಾಥ್ ಜೋಶಿ ಎನ್ನುವವರು ಮೂರು ವರ್ಷದಿಂದ ಆ ಭಾಗದಲ್ಲಿದ್ದಾರೆ. ಇನ್ನೊಬ್ಬರು ಎಸಿಪಿ ಪವನ ಎಂದು ಇದ್ದಾರೆ, ಈ ಮೂರು ಜನ ಪೋಲೀಸ್ ಅಧಿಕಾರಿಗಳು ಪೋಲೀಸ್ ಕಮೀಶನರ್‌ರವರ ಆದೇಶವನ್ನೆ ಧಿಕ್ಕರಿಸಿ ನಡೆದುಕೊಂಡಿದ್ದಾರೆ. 30 ಜನ ರೌಡಿಗಳು ಬಂದು ಆಸ್ತಿ ಹಾನಿ ಮಾಡಿದ್ದಾರೆ ಎಂದು ದೂರು ಕೊಟ್ಟರು. ಒಬ್ಬನ ಮೇಲೆಯೇ chargesheet ಹಾಕುತ್ತಾರೆ. ಎರಡು ಬಾರಿ IOCL ನವರು ದೂರು ಕೊಟ್ಟಿದ್ದಾರೆ. ಒಂದು ಸಾರಿ ಬಿಡಿಯ ದವರು ಪೋಲೀಸ್ ಕಮೀಶನರ್‌ರವರಿಗೆ ಪತ್ರ ಬರೆದು IOCL ನವರಿಗೆ ರಕ್ಷಣೆ ಕೊಡಿ ಎಂದು ಹೇಳಿದ್ದಾರೆ. ಗೃಹ ಕಾರ್ಯದರ್ಶಿಯವರು ಈ ವಿಚಾರದಲ್ಲಿ ಪೋಲೀಸ್ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಟ್ಟಿದ್ದಾರೆ. ಮಹೇಶ್ ಕನಕಗಿರಿಯವರನ್ನು ಈಗ ಟ್ರಾಫಿಕ್‌ಗೆ ವರ್ಗಾವಣೆ ಮಾಡಿದ್ದೀರಿ. ಆದರೆ ಅವರಿಗೆ ಟ್ರಾಫಿಕ್ ಬೇಡವಂತೆ ಆಯಾಕಟ್ಟಿನ ಜಾಗ ಬೇಕು ಎಂದು ಕೇಳುತ್ತಿದ್ದಾರೆ. ಬಿಡಿಎ ಆಸ್ತಿಗೆ ಈ ಪೋಲೀಸ್ ಅಧಿಕಾರಿಗಳೇ ನಿಂತುಕೊಂಡು ಬೇಲಿ ಹಾಕಿಸುವುದೇ? ಅಧಿವೇಶನ ಮುಗಿದ ಮೇಲೆ ದಯಮಾಡಿ ನಾವು–ನೀವು ಸೇರಿ ಆ ಸ್ಥಳಕ್ಕೆ ಭೇಟಿ ಕೊಡೋಣ. ಅಲ್ಲಿ ಡಿಸೆಲ್ ತುಂಬಿದ್ದಾರೆಯೇ ಇಲ್ಲವೆ, ಅಲ್ಲಿಯ ವಸ್ತು ಸ್ಥಿತಿ ಏನು ಎನ್ನುವುದನ್ನು ನೋಡೋಣ. ನಿಮ್ಮ ಅಧಿಕಾರಿಗಳನ್ನು, ಬಿಡಿಎ ಅಧಿಕಾರಿಗಳನ್ನು ಮತ್ತು ಕಾನೂನು ಪಂಡಿತರು ಬರಲಿ, ಎಲ್ಲರೂ ಸೇರಿ ಭೇಟಿ ಕೊಟ್ಟು ವಸ್ತು ಸ್ಥಿತಿ ಪರಿಶೀಲನೆ ಮಾಡೋಣ. ಬೆಂಗಳೂರು ನಗರದಲ್ಲಿ ಇಂತಹ ಹಗರಣದ ಬಗ್ಗೆ ಪರಿಶೀಲನೆ ಮಾಡಿದರೆ ನಿಮಗೆ ಸತ್ಯತೆ ಗೊತ್ತಾಗುತ್ತದೆ. ಇದು ಒಂದೇ ಅಲ್ಲ ಅದೇ ಏರಿಯಾದಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ 10 ಹಗರಣಗಳನ್ನು ತೋರಿಸುತ್ತೇನೆ. ಇದೇ ಪೊಲೀಸ್ ಅಧಿಕಾರಿಗಳು ಅವರಿಗೆ ರಕ್ಷಣೆ ಕೊಡುತ್ತಿರುವುದು, ಇವರೆಲ್ಲರೂ ಭೂಗಳ್ಳರು ಎನ್ನುವುದನ್ನು ನಾನು ಸಾಬೀತು ಮಾಡುತ್ತೇನೆ. ಬಿಡಿಎ ನಿವೇಶನಗಳನ್ನು, ಸರ್ಕಾರಿ ಭೂಮಿಯನ್ನು ಹೇಗೆ ಅಕ್ರಮವಾಗಿ ಬೇರೆಯವರಿಗೆ ಹಂಚಿದ್ದಾರೆ ಎನ್ನುವುದನ್ನು ಪೊಲೀಸ್ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ಮಾತನಾಡುವಾಗ ಹೇಳುತ್ತೇನೆ. ಈಗ ಈ ವಿಷಯಕ್ಕೆ ಸಿಮೀತವಾಗಿ ನಾನು ಮಾತನಾಡುತ್ತೇನೆ. ದಯಮಾಡಿ ಒಂದು ಬಾರಿ visit ಮಾಡೋಣ, ಆಗ ಬೆಂಗಳೂರು ನಗರದಲ್ಲಿ ಈ ಪೊಲೀಸ್‌ನವರು ಹೇಗೆ ಕೆಲಸ ಮಾಡುತ್ತಾರೆ ಎನ್ನುವ ಸತ್ಯತೆ ತಿಳಿಯುತ್ತದೆ. ತಾವು ಕೊಟ್ಟಿರುವ ಉತ್ತರದಲ್ಲಿರುವುದೆಲ್ಲವು ಸುಳ್ಳು. ನಿಮಗೆ ವಾಸ್ತವಿಕತೆ ಗೊತ್ತಾಗಬೇಕು ಎಂದರೆ, ನಾನು ಕಳುಹಿಸಿ ಕೊಡುವ ದಾಖಲೆಗಳನ್ನು ಪರಿಶೀಲನೆ ಮಾಡಿ. IOCL ನವರು ನಿಮ್ಮ ಎಲ್ಲಾ ಪೊಲೀಸ್ ಅಧಿಕಾರಿಗಳನ್ನು ಪಾರ್ಟಿ ಮಾಡಿ ಹೈಕೋರ್ಟ್‌ನಲ್ಲಿ ಒಂದು ಆದೇಶವನ್ನು ತೆಗೆದುಕೊಂಡಿದ್ದಾರೆ. ಕೋರ್ಟ್‌ನಲ್ಲಿ ನ್ಯಾಯಾಧೀಶರ ಮುಂದೆ ಎಜಿ ಯವರೇ IOCL ನವರಿಗೆ ಅನ್ಯಾಯವಾಗುತ್ತದೆ ರಕ್ಷಣೆ ಕೊಡಬೇಕು, ಇದನ್ನು ಸೂಕ್ತವಾಗಿ ಪರಿಶೀಲನೆ ಮಾಡಿ ರಕ್ಷಣೆ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ 08-02-2022 ರಂದು ಹೈಕೋರ್ಟ್ ಆದೇಶ ಕೊಟ್ಟಿದೆ. IOCL ನವರು ಎಲ್ಲಾ ಪೊಲೀಸ್ ಅಧಿಕಾರಿಗಳನ್ನು ಮತ್ತು The State of Karnataka ವನ್ನು ಮಾತ್ರ ಪಾರ್ಟಿ ಮಾಡಿರುವುದು. ನಿಮ್ಮ ಇಲಾಖೆಯ ಕೆಲವು ಅಧಿಕಾರಿಗಳು ಬೆಂಗಳೂರು ನಗರದಲ್ಲಿ ಲೂಟಿ ಮಾಡುತ್ತಿದ್ದಾರೆ. ಹೀಗಾದರೆ ಜನರಿಗೆ ಎಲ್ಲಿಂದ ರಕ್ಷಣ ಕೊಡಲು ಸಾಧ್ಯ? ಎಲ್ಲ ಪೊಲೀಸ್ ಅಧಿಕಾರಿಗಳು ಅಲ್ಲ, ಕೆಲವು ಅಧಿಕಾರಿಗಳ ಹೇಳುತ್ತಿದ್ದೇನೆ.

**(ಮುಂದು)**

**(676)28-03-2022(06-00)bsd-gr**

**ಶ್ರೀ ಮರಿತಿಬ್ಬೇಗೌಡ (ಮುಂದು)**

ಶ್ರೀನಾಥ್ ದಾಸ್, ಮಹೇಶ್ ಕಲ್ಕಗಿರಿ, ಇವರುಗಳ ಇತಿಹಾಸವನ್ನು 3 ಗಂಟೆಗಳ ಕಾಲ ಹೇಳುತ್ತೇನೆ, ಅವರು ಕ್ರಮ ಕೈಗೊಳ್ಳುವುದಕ್ಕೆ ಆಗುವುದಿಲ್ಲ, ಅವರು ಯಾರು, ಏನು ಮತ್ತು ಅವರ ಹಿನ್ನಲೆ ಏನು

ಹಾಗೂ ಅವರುಗಳ area ದಲ್ಲಿರುವ ಪ್ರಕರಣಗಳನ್ನು ತನಿಖೆ ಮಾಡಿಬಿಟ್ಟರೆ ಅವರು ಖಾಯಂ ಆಗಿ ಜೈಲಿನಲ್ಲಿರುತ್ತಾರೆ. ಅವರನ್ನು ಖಾಯಂ ಆಗಿ ಜೈಲಿಗೆ ಕಳುಹಿಸಬೇಕು. ಅಂತಹ ಕೆಲಸಗಳನ್ನು ಮಾಡಿದ್ದಾರೆ, ಅವರಿಗೆ 3 ಕಾಸಿನ ಗೌರವ ಇಲ್ಲ, ಭೂಗಳ್ಳರ ಜೊತೆ ಸೇರಿಕೊಂಡು ಮಾಡಿದ್ದಾರೆ. ಈ ಮಾಹಿತಿಗಳೆಲ್ಲವನ್ನು ನಾನು ಕೊಡುತ್ತೇನೆ. ದಯವಿಟ್ಟು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಇವತ್ತು ಇದೊಂದು ರೀತಿ ಹಗರಣ ಎಂದು ಹೇಳಬಹುದು ಹಾಗೂ B.D.A., ನಲ್ಲಿ ಹಗರಣಗಳು ಹೇಗಾಗುತ್ತವೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. 1990 ರಲ್ಲಿ acquisition ಆಗುತ್ತದೆ. ಅವರ ಜಮೀನು Sy.No. 44 ರಲ್ಲಿ ಒಟ್ಟು 3 ಎಕರೆ 27 ಗುಂಟೆಗಳ ಪೈಕಿ 37 ಗುಂಟೆಗಳು ಅವರದ್ದು ಎಂದು ಹೇಳುತ್ತಿದ್ದಾರೆ. ಅಂದರೆ ಪೋಡಿ ಆಗಿಲ್ಲ, ಆದರೆ ಒಟ್ಟಾರೆ B.D.A., ಗೆ acquisition ಆಗಿ ಹೋಗಿದೆ. 1990 ರಲ್ಲಿ B.D.A., ಗೆ ಆದ acquisition ಜಮೀನಿನಲ್ಲಿ layout ಮಾಡುವಾಗ ಏನು ಮಾಡುತ್ತಿದ್ದರು? ಅಲ್ಲಿಯವರೆಗೂ ಯಾವುದೇ ದಾವೆಗಳನ್ನು ಹಾಕಿಲ್ಲ. ಸಂಪೂರ್ಣವಾಗಿ 37 ಗುಂಟೆಗಳಲ್ಲಿ layout ಆಗಿ ಬಿದ್ದುಹೋಯಿತು. Layout ಮಾಡುವಾಗ ರಸ್ತೆ, siteಗಳು, C.A., Site ಗಳು, Park ಗಳನ್ನು ವಿಂಗಡಣೆ ಮಾಡಿ ಹೇಗೆ ಬೇಕೋ ಹಾಗೆ ಮಾಡುತ್ತಾರೆ. ಇಲ್ಲಿ C.A., Site ಅನ್ನು ಏನೆಂದು mark ಮಾಡಿ ಇಟ್ಟಿದ್ದರು, ಅಂದರೆ civic amenities ನಾಗರಿಕ ಸೌಲಭ್ಯಗಳಿಗೆ ಎಂದು ಇಟ್ಟಿದ್ದರು. ಈ ಜಾಗ ಬಹಳ ವರ್ಷಗಳು vacant ಆಗಿಯೇ ಇತ್ತು. ಯಾರಾದರೂ ಸಹ ಒಟ್ಟು ಜಮೀನಿನ ಈ 37 ಗುಂಟೆಗಳು ನನ್ನದಾಗಿದ್ದು, ಇದನ್ನು B.D.A., ತೆಗೆದುಕೊಂಡು ಬಿಟ್ಟರು, ಈ 37 ಗುಂಟೆಗಳಲ್ಲಿ ಇದೊಂದು ಸಿಕ್ಕದೆ ಅಥವಾ ನಿಂತಿದೆ, ಆ 37 ಗುಂಟೆಗಳು Sy.No. 44 ರಲ್ಲಿ ಬರುತ್ತದೋ ಅಥವಾ ಇನ್ನೆಲ್ಲಿ ಬರುತ್ತದೋ ಗೊತ್ತಿಲ್ಲ. ಯಾವುದೋ survey ಪ್ರಕಾರ ಇದು Sy.No. 44 ನಲ್ಲಿ ಬರುವುದಿಲ್ಲ ಎಂದು ಹೇಳುತ್ತಿದೆ. ಅದನ್ನು claim ಮಾಡುತ್ತಿವುದಾಗಿದೆ. ಈಗ ಪ್ರಶ್ನೆ ಏನೆಂದರೆ, 2019 ರಲ್ಲಿ B.D.A., ವಿರುದ್ಧ ದಾವೆ ಹೂಡುತ್ತಾರೆ. ಆದರೆ B.D.A., ನವರು ಈ ವಿಚಾರವನ್ನು court ಮುಂದೆ ಹೇಗೆ ಸೋತಿದೆ ಎನ್ನುವುದೇ ಆಶ್ಚರ್ಯವಾಗಿದೆ. ಇದು ಯಾವರೀತಿ ಆಗಿರಬಹುದು. ಇದರ ಬಗ್ಗೆ ಸ್ವಲ್ಪ examine ಮಾಡಬೇಕಾಗಿದೆ. ಇದೊಂದು ದೊಡ್ಡ ಹಗರಣವಾಗಿದೆ.

Law ಅನ್ನು ಇಟ್ಟುಕೊಂಡು ದೊಡ್ಡ ಹಗರಣ ಮಾಡುವುದು ಹೇಗೆ ಎನ್ನುವುದಕ್ಕೆ ಇದೊಂದು example ಆಗಿದೆ. 2019 ರಲ್ಲಿ land acquisition ಆಗಿ, possession ಕೊಟ್ಟು, B.D.A., possession ತೆಗೆದುಕೊಂಡಿದ್ದಾರೆ. 1990 ರಲ್ಲಿ Preliminary Notification ಆಗಿದೆ. ತದನಂತರ ಕೆಲವು ವರ್ಷಗಳು ಆದ ನಂತರ ಪೂರ್ತಿ layout formation ಆಗಿದೆ. ನಂತರ allotment ಸಹ ಆಗಿದೆ. ಇಲ್ಲಿ usual ಆಗಿ park, C.A., site, ರಸ್ತೆಗಳೆಲ್ಲವನ್ನು ಇಟ್ಟುಕೊಂಡಿರುತ್ತಾರೆ. ಇಂತಹ layout ನಲ್ಲಿ Government of India ದ Indian Oil Corporation ನವರು ಒಂದು application ಹಾಕಿದರು, ಅವರಿಗೆ ಒಂದು site ಬೇಕಿದೆ, petroleum product ಮಾರಾಟ ಮಾಡುವುದಕ್ಕೆ ಎಂದು ಹಾಕಿದರು. ಈ ಜಾಗವನ್ನು ತೆಗೆದುಕೊಂಡ ಮೇಲೆ 2019 ರಲ್ಲಿ ಈ case ನಲ್ಲಿ .... ಅನುಕೂಲವಾಗುವ ರೀತಿ ಕಾನೂನು ಪಂಡಿತರು ಮತ್ತು ಕಾನೂನು ಸಚಿವರು ಇದ್ದಾರೆ. ಅವರು ಇದನ್ನು examine ಮಾಡದೇ B.D.A., ನಿಂದ ಹೇಗೆ ಹೋಯಿತು? Supreme Court ನಲ್ಲಿ ಇವತ್ತು status quo order ಕೊಟ್ಟಿದ್ದಾರೆಂದರೆ how it can? ಅರೇ possession ತೆಗೆದುಕೊಂಡಿರುವುದಾಗಿದೆ, Land Acquisition Act ನಲ್ಲಿ ಪೂರ್ತಿ process start ಆಗಿ ಮುಗಿದುಹೋಗಿದೆ. ಇಷ್ಟೆಲ್ಲಾ ಆದರೂ ಮತ್ತೆ questionable ಆಗಿದೆ, last ನಲ್ಲಿ ಏನು ಹೇಳಿದ್ದಾರೆ ಎಂದರೆ ದಿನಾಂಕ 8-3-2022 ರಲ್ಲಿ ವಿಚಾರಣೆಗೆ ಇದೆ ಎಂದು ಹೇಳಿದ್ದು, ಆ ದಿನಾಂಕವೂ ಆಗಿ ಹೋಗಿದೆ. ಈ ದಿನಾಂಕವನ್ನು ಉತ್ತರದಲ್ಲಿ ನಿಗದಿಪಡಿಸಿರುತ್ತಾರೆ ಎಂದು ಹೇಳಿದ್ದಾರೆ. ದಯವಿಟ್ಟು ಇದರ ಬಗ್ಗೆ Advocate General ರವರನ್ನು ಕರೆಸಿಕೊಂಡು how it has creped up against the B.D.A., ? ಈ ಕೇಸ್ B.D.A., ವಿರುದ್ಧ..... ಎಲ್ಲವೂ ಆಗಿ ಹೋಗಿ ಮುಗಿದುಹೋಗಿರುವ case ಅನ್ನು ಹೇಗೆ ಅವರಿಗೆ order ಸಿಗುತ್ತಿದೆ ಎನ್ನುವುದು ಅರ್ಥವಾಗುತ್ತಿಲ್ಲ. This is very very serious. ದಯವಿಟ್ಟು B.D.A., ಸ್ವತ್ತುಗಳಾಗಲೀ, B.B.M.P., ಸ್ವತ್ತುಗಳಾಗಲೀ, ಹೇಗೆ ಕಳೆದುಕೊಳ್ಳುತ್ತಿದ್ದೇವೆ ಎನ್ನುವುದಕ್ಕೆ ಇದೊಂದು ನಿದರ್ಶನ. ಅದರಲ್ಲೂ 2019 ರಲ್ಲಿ start ಆಗಿದೆ, 2019ನೇ ಇಸ್ವಿಯಲ್ಲಿ ಎಂದರೆ ಸುಮಾರು 29 ವರ್ಷ ಕಳೆದ ಮೇಲೆ ಆಗಿದ್ದು, Sy.No. 44 ರಲ್ಲಿ ಬರುತ್ತದೋ, ಇಲ್ಲವೋ ಎನ್ನುವುದು ಒಂದು

ಪ್ರಶ್ನೆಯಾಗಿದೆ. ಎರಡನೆಯದಾಗಿ ಬಂದರೆ ಆ land ಅನ್ನು 1990 ರಲ್ಲಿ ತೆಗೆದುಕೊಂಡು ಹೋಗಿಬಿಟ್ಟಿದ್ದಾನೆ. ಆದರೆ ಇವತ್ತು ಮತ್ತೆ claim ಮಾಡುವುದಕ್ಕೆ ಯಾವ grounds ಮೇಲೆ ಯಾವ ಒಂದು question of law ಮೇಲೆ Supreme Court, High Court ಗಳಿಗೆ ಹೋಗಿದ್ದಾರೋ, ಗೊತ್ತಿಲ್ಲ. ನನಗೆ ಇದನ್ನು ಓದಿದರೆ ಆಶ್ಚರ್ಯಕರವಾಗುತ್ತದೆ. ದಯವಿಟ್ಟು ಇದನ್ನು examine ಮಾಡಬೇಕು. ಇವತ್ತು ಪ್ರಶ್ನೆ ಏನೆಂದರೆ, 2020-21 ರಲ್ಲಿ fencing ಹಾಕಿರುವುದನ್ನು ತೆಗೆದು ಹಾಕಿದ್ದಾರೆ. It will attract criminal proceedings. Criminal activity ಆಗಿದೆ. ಸುಮಾರು ರೂ.20 ಲಕ್ಷಗಳನ್ನು ಕಳೆದುಕೊಂಡಿದ್ದಾರೆ. ಇದು I.P.C., ನಲ್ಲಿ ಬರುತ್ತದೆ, ಇದನ್ನು investigation ಮಾಡಿ, ಯಾರು ತೊಂದರೆ ಕೊಟ್ಟಿದ್ದಾರೋ, ಅವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಕ್ತವಾದ ಆದೇಶವನ್ನು ಕೊಡಬೇಕು.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ,

ಈ ನಡುವೆ High Court ನಲ್ಲಿ ಒಂದು decision ಆಗಿದ್ದು, ಅದು ರುಕ್ಕಮ್ಮನ ಪರವಾಗಿ ಆಗಿದೆ. ಮೂಲ land owner ಕೃಷ್ಣಪ್ಪನವರ ಪತ್ನಿ ಪರವಾಗಿ ಆಗಿದ್ದು, ಅವರೇ Appeal ಹೋಗಿ ಅವರ ಪರವಾಗಿ ಒಂದು Judgment ಆಗಿದೆ. ಅದನ್ನು ಹಿಡಿದುಕೊಂಡಿ ಈ ಸ್ವತ್ತಿನ ಮೇಲೆ ಬರುತ್ತಿದ್ದಾರೆ ಎಂದು ನನಗನಿಸುತ್ತಿದೆ. ಇಲ್ಲಿ B.D.A., ಹೊರತು ಗೃಹ ಇಲಾಖೆಯ interference ಬಹಳ ಕಡಿಮೆ ಇದೆ. ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ಅನವಶ್ಯಕವಾಗಿ Police ಅಧಿಕಾರಿಗಳು ಮೂಗು ಹಾಕಿದ್ದರೆ, ಕಾನೂನು ಕೈಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದಾದರೆ ಖಂಡಿತವಾಗಿ enquiry ಮಾಡಿ, ಪರಿಶೀಲನೆ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಗೃಹ ಸಚಿವರು ಇದರ ಬಗ್ಗೆ enquiry ಮಾಡಿ ಪರಿಶೀಲನೆ ಮಾಡಬೇಕು. ಆದರೆ as a Home Minister ಆಗಿ ಬೆಂಗಳೂರು ನಗರದಲ್ಲಿ ಇಂತಹದೊಂದು

ಪ್ರಕರಣ ಅಂದರೆ ಇದು I.O.C., ಮೇಲೆ ಆಗಿದೆ. ಅದು ಸಾರ್ವಜನಿಕ ಸಂಸ್ಥೆಯಾಗಿದೆ. ದಯವಿಟ್ಟು ಇದನ್ನು enquiry ಮಾಡುವುದರ ಜೊತೆಗೆ ಸ್ಥಳಕ್ಕೆ visit ಮಾಡಬೇಕು. ಜೊತೆಗೆ ನಾವು ಬರುತ್ತೇವೆ.

**ಶ್ರೀ ಅರಗ ಜ್ಞಾನೇಂದ್ರ:–** ಮಾಡೋಣ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)ವಿಷಯ: ವಿಜಯಪುರ ಜಿಲ್ಲೆಯಲ್ಲಿ ನೀರಿನ ಅಭಾವವು ಹೆಚ್ಚಾಗಿದ್ದು ಕೃಷ್ಣಾ ನದಿಯಿಂದ ನೀರು ಸರಬರಾಜು ಮಾಡುವ ಮುಖಾಂತರ ಜನರ ಕುಡಿಯುವ ನೀರಿನ ಬವಣೆಯನ್ನು ನಿವಾರಿಸುವ ಕುರಿತು**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯಲ್ಲಿ ನೀರಿನ ಅಭಾವವು ಹೆಚ್ಚಾಗಿದ್ದು ಕೃಷ್ಣಾ ನದಿಯಿಂದ ನೀರು ಸರಬರಾಜು ಮಾಡುವ ಮುಖಾಂತರ ಜನರ ಕುಡಿಯುವ ನೀರಿನ ಬವಣೆಯನ್ನು ನಿವಾರಿಸುವ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ವೈಸ್ ಚೇರ್ಮನ್:-** ಉತ್ತರ ನೀಡಲಾಗಿದ್ದು, ಮಾನ್ಯ ಸದಸ್ಯರು clarification ಕೇಳಿದರೆ ಸಾಕು.

**ಶ್ರೀ ಬಿ.ಎ ಬಸವರಾಜು (ಬೈರತಿ) (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸದಸ್ಯರು ಬಿಜಾಪುರ ಸಮಗ್ರ ಜಿಲ್ಲೆಗೆ ಎನ್ನುವ ಮಾತನ್ನು ಹೇಳಿದ್ದು, ಈ ವಿಷಯ R.D.P.R., ಗೆ ಬರುವುದರಿಂದ ಅವರೂ ಕೂಡ ಇದರಲ್ಲಿ ಸೇರಿಕೊಳ್ಳುತ್ತಾರೆ. ನಗರಸಭೆ ವ್ಯಾಪ್ತಿಯಲ್ಲಿ ಪುರಸಭೆ, Municipalities ಗಳು ಬರುವ ಕಡೆ ಮಾಹಿತಿ ಒದಗಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಏಕೆಂದರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೀಮಿತವಾಗಿ ನಾನು ಉತ್ತರ ಕೊಟ್ಟಿದ್ದೇನೆ.

**(ಮುಂದು)**

**(677) 28.03.2022 6.10 hv.gr**

**ಶ್ರೀ ಬಿ.ಎ.ಬಸವರಾಜು(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಸುಮಾರು 350 ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದಂತೆ ವಿಜಯಪುರ ಜಿಲ್ಲೆಯಲ್ಲಿ ಬೇಸಿಗೆಗಾಲದಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ನಡೆಯುತ್ತಿದೆ. ವಿಜಯಪುರ ಜಿಲ್ಲೆ ಬರಗಾಲ ಪೀಡಿತ ಜಿಲ್ಲೆಯಾಗಿದೆ. ವಿಜಯಪುರ ನಗರಕ್ಕೆ ಹದಿನೈದು ದಿವಸಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಕುಡಿಯುವ ನೀರನ್ನು ಒದಗಿಸಲಾಗುತ್ತಿತ್ತು. ಇದಕ್ಕಾಗಿ ಇವತ್ತಿನ ದಿನ ಹಲವಾರು ಯೋಜನೆಗಳನ್ನು ಪ್ರಾರಂಭಿಸಲಾಗಿದೆ. 2010ರಲ್ಲಿ ನಾನು ಮೊದಲನೆಯ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಂಡಂತಹ ಸಂದರ್ಭದಲ್ಲಿ ವಿಜಯಪುರ ನಗರಕ್ಕೆ ನೀರು ಸರಬರಾಜು ಮಾಡುವಂತಹ ವ್ಯವಸ್ಥೆಗೆ ವಿಶೇಷವಾಗಿ ಒಂದು ನೂರು ಕೋಟಿ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಲಾಗಿತ್ತು. ಅಂದಿನಿಂದ ಇಂದಿನವರೆಗೂ ವಿಜಯಪುರ ನಗರದ

35 ವಾರ್ಡ್‌ಗಳಿಗೆ ನೀರು ಪೂರೈಕೆ ಮಾಡುವಂತಹ ಕಾರ್ಯಕ್ರಮ ಹಂತಹಂತವಾಗಿ ಅನುಷ್ಠಾನಗೊಳ್ಳುತ್ತಿದೆ. ಇದಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದರೂ ಸಹ ವಿಜಯಪುರ ನಗರಕ್ಕೆ ಇಲ್ಲಿಯವರೆಗೆ ಪ್ರತಿದಿನ ಕುಡಿಯುವ ನೀರನ್ನು ಒದಗಿಸುವಂತಹ ಕೆಲಸವೇ ಆಗಿಲ್ಲ. ಮಾನ್ಯ ಸಚಿವರು ಕೊಟ್ಟಿರುವ ಲಿಖಿತ ರೂಪದ ಉತ್ತರದಲ್ಲಿ;

"........2010ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀರು ಸರಬರಾಜು ವ್ಯವಸ್ಥೆ ನಿರ್ವಹಿಸಲಾಗುತ್ತಿದೆ. ಹಾಲಿ 63 ಎಮ್.ಎಲ್.ಡಿ ನೀರನ್ನು ಕೃಷ್ಣಾ ನದಿಯಿಂದ ಪಂಪ್ ಮಾಡಲಾಗುತ್ತಿದೆ. ಮಾರ್ಗಮಧ್ಯದ 7 ಹಳ್ಳಿಗಳಿಗೆ ನೀರು ಸರಬರಾಜು ಮಾಡುತ್ತಿರುವುದರಿಂದ ಮತ್ತು ಕೊಳವೆ ಮಾರ್ಗದ ಸೋರಿಕೆಯಿಂದ ಪ್ರಸ್ತುತ ವಿಜಯಪುರ ನಗರಕ್ಕೆ ನಿವ್ವಳ 51 ಎಂ.ಎಲ್.ಡಿ. ನೀರು ತಲುಪುತ್ತಿದೆ. ಇದರ ನಂತರದ ಬೆಳವಣಿಗೆಯಲ್ಲಿ ಹಲವಾರು ವಾರ್ಡುಗಳು ಸೇರ್ಪಡೆಯಾಗಿವೆ ಮತ್ತು ನಗರದ ಸುತ್ತಮುತ್ತ ಇರುವಂತಹ ಗ್ರಾಮಗಳು ಅಂದರೆ, ತೊರವಿ ಗ್ರಾಮ, ಹಂಚಿನಾಳ ಎಲ್.ಟಿ.-1, ಎಲ್.ಟಿ-2 ಸೇವಾಲಾಲ ತಾಂಡಾ, ಮಹಲ ತಾಂಡಾ, ಮಹಲ ಗ್ರಾಮ ಹಾಗೂ ಬಾರಾ ಕೋಟಿ ತಾಂಡಾಗಳಿಗೆ ನಗರದ ಹಾಲಿ ನೀರು ಸರಬರಾಜು ವ್ಯವಸ್ಥೆಯಿಂದ ಪ್ರತ್ಯೇಕ ಪಿ.ವ್ಹಿ.ಸಿ. ಕೊಳವೆ ಮಾರ್ಗಗಳಿಂದ ನೀರು ಪೂರೈಕೆ ಮಾಡಲಾಗುತ್ತಿದೆ."

ಎಂದು ಹೇಳಿದ್ದಾರೆ. ನನಗಿರುವ ಮಾಹಿತಿಯ ಪ್ರಕಾರ ವಿಜಯಪುರ ಜಿಲ್ಲೆಗೆ ಇವತ್ತಿನವರೆವಿಗೂ ಪ್ರತಿದಿನ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಲ್ಲ. ಹದಿನೈದು ದಿನಕ್ಕೊಮ್ಮೆ ಕುಡಿಯುವ ನೀರು ಬರುತ್ತಿದೆ. ಅಲ್ಲಿನ ಜಿಲ್ಲಾಧಿಕಾರಿಗಳು ಇತ್ತೀಚೆಗೆ ಒಂದು ಹೇಳಿಕೆಯನ್ನು ಕೊಟ್ಟು " ಅಮೃತ ಯೋಜನೆಯಡಿಯಲ್ಲಿ ಮಾರ್ಚ್ 31ರೊಳಗಾಗಿ ಎಲ್ಲರಿಗೂ ಕುಡಿಯುವ ನೀರನ್ನು ಒದಗಿಸುವಂತಹ ವ್ಯವಸ್ಥೆ ಮಾಡಲಾಗುತ್ತದೆ" ಎನ್ನುವ ಮಾತನ್ನು ಹೇಳಿದ್ದರು. ಇದು ಸಾಧ್ಯವಾಗಿಲ್ಲ. ಈಗಾಗಲೇ ಹಲವಾರು ವಾರ್ಡ್‌ಗಳಲ್ಲಿ ಜನರು ಕುಡಿಯುವ ನೀರಿಗಾಗಿ ಧರಣಿ ಮಾಡುತ್ತಿದ್ದಾರೆ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ನಾನು ಖುದ್ದು ವಿಜಯಪುರ ಜಿಲ್ಲೆಗೆ 5 ಬಾರಿ ಭೇಟಿ ನೀಡಿ, ರಿವ್ಯೂ ಮಾಡಿದ್ದೇನೆ. ಆ ಸಂದರ್ಭದಲ್ಲಿ ಅನೇಕ ಜನ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಸ್ಥಳೀಯ ಶಾಸಕರು ಸಹ ನನ್ನ ಜೊತೆಗಿದ್ದರು. ಆಗ ಅಲ್ಲಿ ಏನಾದರೂ ಕುಡಿಯುವ ನೀರಿನ ಸಮಸ್ಯೆಯಿದ್ದಿದ್ದರೆ ನನ್ನ ಗಮನವನ್ನು ಸೆಳೆಯುತ್ತಿದರು. ಯಾರೂ ಸಹ ಕುಡಿಯುವ ನೀರಿನ ಬಗ್ಗೆ ಚಕಾರವನ್ನು ಎತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಕುಡಿಯುವುದಕ್ಕೆ ನೀರು ಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ವರ್ಷ ವಿಜಯಪುರ ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಲು ಸುಮಾರು 54 ಕೋಟಿ ರೂಪಾಯಿಗಳ ಅಂದಾಜು ವೆಚ್ಚವನ್ನು ತಯಾರು ಮಾಡಲಾಗಿದೆ. ವಿಜಯಪುರ ನಗರದ ಜನತೆಗೆ ನೀರು ಕೊಡುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ನಾನು ಈ ಸದನದ ಮೂಲಕ ಯಾವ ಭರವಸೆಯನ್ನು ನೀಡಿದ್ದೇನೆ, ಆ ಭರವಸೆಗಳನ್ನು ಈಡೇರಿಸುವುದಕ್ಕೆ ನಾನು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ ಎನ್ನುವ ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ನಾನು ಪುನಃ ವಿಜಯಪುರ ಜಿಲ್ಲೆಗೆ ಭೇಟಿ ನೀಡುತ್ತಿದೇನೆ. ಆಗ ಮಾನ್ಯ ಸದಸ್ಯರನ್ನು ಸಹ ಕರೆಯುತ್ತೇನೆ.

**ವೈಸ್ ಛೇರ್ಮನ್:–** ಮಾನ್ಯ ಅರುಣ್ ಶಹಾಪುರ್‌ರವರು ಸಹ ಅದೇ ಜಿಲ್ಲೆಯವರೇ, ಅವರನ್ನು ಸಹ ಕರೆದುಕೊಂಡು ಹೋಗಿ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ್ ಶಹಾಪುರ್‌ರವರು ಅನೇಕ ಸಭೆಗಳಲ್ಲಿ ನನ್ನ ಜೊತೆಗಿದ್ದರು. ಮಾನ್ಯ ಪ್ರಕಾಶ್ ರಾಥೋಡ್‌ರವರು ಮೊನ್ನೇ ತಾನೇ ಹೊಸದಾಗಿ ಸದಸ್ಯರಾಗಿದ್ದಾರೆ. ನಾನು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರನ್ನು ಸಹ ಜೊತೆಗೆ ಕರೆದುಕೊಂಡು ಹೋಗಿ, ಆ ರೀತಿಯಾಗಿರುವ ಸಮಸ್ಯೆಗಳೇನಾದರು ಕಂಡು ಬಂದರೆ, ಅವುಗಳನ್ನು ಸರಿಪಡಿಸುವಂತಹ ಕೆಲಸವನ್ನು ಮಾಡಲಾಗುತ್ತದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ,……..

**ವೈಸ್ ಛೇರ್ಮನ್:–** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ತಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗಿ ನೀರು ಕುಡಿಸುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆವಿಗೂ ನಾವು ನೀರು ಕುಡಿದಿಲ್ಲ. ಮಾನ್ಯ ಸಚಿವರು ಬಹಳಷ್ಟು ಬಾರಿ ವಿಜಯಪುರಕ್ಕೆ ಭೇಟಿಯನ್ನು ನೀಡಿ, ಮೀಟಿಂಗ್ ಸಹ ಮಾಡಿದ್ದಾರೆ. ಆದರೆ, ಬೇಸಿಗೆಗಾಲದಲ್ಲಿ ಅವರು ಅಲ್ಲಿಗೆ ಭೇಟಿ ನೀಡಿಲ್ಲ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ನಾನು ಬೇಸಿಗೆಗಾಲದಲ್ಲಿ ಅಲ್ಲಿಗೆ ಭೇಟಿ ನೀಡಿಲ್ಲವೆಂದು ಮಾನ್ಯ ಪ್ರಕಾಶ್ ರಾಥೋಡ್‌ರವರು ಹೇಳುತ್ತಿದ್ದಾರೆ. ಇಲ್ಲಿಯೇ ವಿಜಯಪುರಕ್ಕೆ ಸಂಬಂಧಪಟ್ಟ ಮತ್ತೊಬ್ಬ ಸದಸ್ಯರು ಇದ್ದಾರೆ. ಅವರನ್ನು ಕೇಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಲವಾರು ಬಾರಿ ವಿಜಯಪುರಕ್ಕೆ ಬಂದಿದ್ದಾರೆ. ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ. ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ವಿಜಯಪುರದಲ್ಲಿ ನೀರಿನ ಹಾಹಾಕಾರ ಉಂಟಾಗಲು ಕಾರಣವೇನೆಂದರೆ, ಕೆಲವು ವಾರ್ಡ್‌ಗಳಲ್ಲಿ ಹಾಕಿರುವ ನೀರಿನ ಪೈಪ್ ಒಡೆದು ಹೋಗಿವೆ. ಅರ್ಧ ವಿಜಯಪುರಕ್ಕೆ ನೀರು ಸರಬರಾಜು ಆಗುತ್ತಿಲ್ಲ. ಈ ರೀತಿಯಾಗಿ ಹದಿನೈದು ದಿನಗಳು ಕಳೆದು ಹೋಗಿವೆ. ಇಲ್ಲಿಯವರೆಗೆ ಒಡೆದು ಹೋಗಿರುವ ಪೈಪ್‌ಗಳನ್ನು ದುರಸ್ತಿ ಮಾಡಿಸಿಲ್ಲ. ಈ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ ಎನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಬಿ.ಎ.ಬಸವರಾಜ:–** ಸನ್ಮಾನ್ಯ ಸಭಾಪತಿಯವರೇ, ಆ ರೀತಿಯ ತೊಂದರೆಯೇನಾದರು ಆಗಿದ್ದರೇ, ಆಯುಕ್ತರ ಜೊತೆಗೆ ಮಾತನಾಡಿ ಸೂಕ್ತ ನಿರ್ದೇಶನವನ್ನು ನೀಡುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ……….

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್ ಛೇರ್ಮನ್:-** ಮಾನ್ಯ ರಾಥೋಡ್‌ರವರೇ, ಮಾನ್ಯ ಸಚಿವರು ತಮ್ಮನ್ನು ಜೊತೆಗೆ ಕರೆದುಕೊಂಡು ಹೋಗುವುದಾಗಿ ಹೇಳುತ್ತಿದ್ದಾರೆ.

**ಶ್ರೀ ಬಿ.ಎ.ಬಸವರಾಜ:-** ಸನ್ಮಾನ್ಯ ಸಭಾಪತಿಯವರೇ, ಈಗಲೇ ನಾನು ದೂರವಾಣಿಯ ಮೂಲಕ ಅಲ್ಲಿನ ಆಯುಕ್ತರ ಜೊತೆಗೆ ಮಾತನಾಡಿ, ಒಡೆದು ಹೋಗಿರುವ ಪೈಪ್ ಲೈನ್‌ಗಳನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ. ಇವತ್ತು ಬೆಳಗ್ಗೆ ಅಲ್ಲಿನ ಸ್ಥಳೀಯ ಶಾಸಕರಾದ ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್‌ರವರ ಜೊತೆಗೆ ಮಾತನಾಡುತ್ತಿದ್ದೆ. ಅವರು ಸಹ ಎಲ್ಲಿಯೂ ಈ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ. ಅವರೊಂದಿಗೆ, "ಮಾನ್ಯ ಪ್ರಕಾಶ್ ರಾಥೋಡ್‌ರವರು ಇಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ನೀರಿನ ಸಮಸ್ಯೆ ಉಂಟಾಗಿದೆಯೇ?" ಎನ್ನುವ ಮಾತನ್ನು ಕೇಳಿದ್ದೆ. ಅದಕ್ಕೆ ಅವರು ಏನೂ ಮಾತನಾಡಲಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ಅರುಣ್ ಶಹಾಪುರ್‌ರವರು ಸಹ ಅಲ್ಲಿನವರೇ, ಅವರು ಸಹ ಈ ಬಗ್ಗೆ ತಮ್ಮ ವಿಚಾರಗಳನ್ನು ಹಂಚಿಕೊಳ್ಳಬೇಕು.

**ಶ್ರೀ ಅರುಣ್ ಶಹಾಪುರ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ವಿಜಯಪುರ ನಗರಕ್ಕೆ ಸಂಬಂಧಪಟ್ಟಂತೆ ಕುಡಿಯುವ ನೀರಿನ ಬಗ್ಗೆ ಚರ್ಚೆ ನಡೆಯುತ್ತಿದೆ. ವಿಜಯಪುರ ಭಾಗದಲ್ಲಿ ಎರಡೇ ಕಾಲ ಇರುವುದು ಒಂದು ಬೇಸಿಗೆಕಾಲ ಮತ್ತೊಂದು ಕಡು ಬೇಸಿಗೆಕಾಲ. ನಿರಂತರವಾಗಿ ಬರಗಾಲವನ್ನು ಅನುಭವಿಸುತ್ತಿರುವವರು ಮತ್ತು ಸಂತ್ರಸ್ತರಾಗಿರುವವರು ವಿಜಯಪುರ ಜಿಲ್ಲೆಯವರು. ಬಹುತೇಕ ಈಗಲೂ ಸಹ ಗುಳೆ ಹೋಗುವುದು ನಿಂತಿಲ್ಲ. ಪ್ರತಿ ಬೇಸಿಗೆಕಾಲದಲ್ಲಿಯೂ ಟ್ಯಾಂಕರ್‌ಗಳ ಮೂಲಕ ನೀರನ್ನು ಒದಗಿಸಿ ಕೊಡಬೇಕಾಗಿರುವ ಜಿಲ್ಲೆಗಳ ಪೈಕಿ ವಿಜಯಪುರ ಜಿಲ್ಲೆಯೂ ಒಂದಾಗಿದೆ. "ಕನ್ನಡ ಗಂಗಾ" ಎನ್ನುವ ಒಂದು ಪೈಲೆಟ್ ಯೋಜನೆಯನ್ನು ಚಿತ್ರದುರ್ಗ ಮತ್ತು ವಿಜಯಪುರ ಜಿಲ್ಲೆಗಳಿಗೆ ಘೋಷಣೆ ಮಾಡಲಾಗಿತ್ತು. ಈ ಯೋಜನೆಯಲ್ಲಿ 960 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕುಡಿಯುವ ನೀರನ್ನು ಒದಗಿಸುವ ಉದ್ದೇಶವಾಗಿತ್ತು. ಪಕ್ಕದಲ್ಲಿಯೇ ಆಲಮಟ್ಟಿ ಜಲಾಶಯವನ್ನು ಇಟ್ಟುಕೊಂಡು ನಮ್ಮ ಜಿಲ್ಲೆಯವರು ಕುಡಿಯುವ ನೀರಿಗಾಗಿ ಪರದಾಡುವಂತಹ ಸ್ಥಿತಿ

ನಿರ್ಮಾಣವಾಗಿದೆ. ಆಲಮಟ್ಟಿಯಲ್ಲಿ 123 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡುವಂತಹ ಸಾಮರ್ಥ್ಯವನ್ನು ಹೊಂದಿದೆ. ಆದರೆ, ಇದರ ಮೂಲಕ ನೆಟ್‌ವರ್ಕ್ ಕೊಟ್ಟಿಲ್ಲ. ನಾರಾಯಣಪುರ ಡ್ಯಾಂನಲ್ಲಿ 28 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡಲಾಗುತ್ತದೆ. ಅದರ ಮೂಲಕ ವಿಜಯಪುರಕ್ಕೆ ಕುಡಿಯುವ ನೀರು ಬರುತ್ತದೆ. ಇಡೀ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ ಎನ್ನುವ ಹಿನ್ನೆಲೆಯಲ್ಲಿ 960 ಕೋಟಿ ರೂಪಾಯಿಗಳ ಯೋಜನೆಯನ್ನು ರೂಪಿಸಲಾಗಿತ್ತು. ದುರ್ದೈವದ ಸಂಗತಿಯೆಂದರೆ, "ಬಹು ಗ್ರಾಮ ಕುಡಿಯುವ ನೀರಿನ ಯೋಜನೆ" ಅಡಿಯಲ್ಲಿ ವಿಜಯಪುರ ಜಿಲ್ಲೆಯನ್ನು ತರುತ್ತಿರುವುದರಿಂದ "ಕನ್ನಡ ಗಂಗಾ" ಯೋಜನೆ ಬೇಡವೆಂದು ಆ ಯೋಜನೆಯನ್ನು ನೆನೆಗುದಿಗೆ ತಳ್ಳಲಾಯಿತು. "ಬಹು ಗ್ರಾಮ ಕುಡಿಯುವ ನೀರಿನ ಯೋಜನೆ" ಅಡಿಯಲ್ಲಿ ಈ ಜಿಲ್ಲೆಗೆ ಕುಡಿಯುವ ನೀರನ್ನು ಒದಗಿಸುವುದರಲ್ಲಿ ವಿಫಲರಾಗಿದ್ದೇವೆ ಎನ್ನುವುದು ಕಡುವಾಸ್ತವದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಮಾನಯ ಸದಸ್ಯರಾದ ಶ್ರೀ ಪ್ರಕಾಶ್ ರಾಥೋಡ್‌ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಜಯಪುರ ಜಿಲ್ಲೆಯ ಬಗ್ಗೆ ಅಪಾರವಾದ ಪ್ರೀತಿಯನ್ನು ಇಟ್ಟುಕೊಂಡು ಹಲವಾರು ಬಾರಿ ಅಲ್ಲಿಗೆ ಭೇಟಿ ನೀಡಿ, ಅಭಿವೃದ್ಧಿ ಪ್ರಾಧಿಕಾರದ ಆವರಣದಲ್ಲಿ ಇರಬಹುದು ಅಥವಾ ಮುನಿಸಿಪಾಲ್ ಕಾರ್ಪೋರೇಶನ್‌ನಲ್ಲಿ ಮೀಟಿಂಗ್‌ಗಳನ್ನು ಮಾಡಿ, ಈ ಜಿಲ್ಲೆಗೆ ಆದ್ಯತೆಯನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸಂಬಂಧಪಟ್ಟ ಇಲಾಖೆಯ ಆಯುಕ್ತರು ಸಹ ಉತ್ತಮವಾಗಿ ಕಾರ್ಯವನ್ನು ಸಲ್ಲಿಸುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮೊದಲು ವಿಜಯಪುರ ನಗರಕ್ಕೆ ಹದಿನೈದು ದಿನಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ನೀರನ್ನು ಕೊಡುವಂತಹ ಪರಿಸ್ಥಿತಿ ಇತ್ತು. ಮದುವೆ ನಿಶ್ಚಯ ಮಾಡಬೇಕಾದರೆ, ನೀರು ಬರದೇ ಇರುವಂತಹ ದಿನಾಂಕವನ್ನು ನೋಡಿ ಮದುವೆ ದಿನವನ್ನು ನಿಶ್ಚಯ ಮಾಡುವಂತಹ ಪರಿಸ್ಥಿತಿ ಇತ್ತು. ಈಗ ಮಾನ್ಯ ಸಚಿವರೇ ಒಪ್ಪಿಕೊಂಡಿರುವಂತೆ ಒಂದು ಕಡೆ ಹಳೆಯದಾಗಿರುವ ಪೈಪ್‌ಲೈನ್, ಪೈಪ್ ಲೈನ್ ಒಡೆದು ಹೋಗಿ ಅದರಿಂದ ಸೋರಿಕೆಯುಂಟಾಗಿದೆ. ಮತ್ತೊಂದು ಕಡೆ

ಹಳೆಯ ಪಂಪ್‌ಸೆಟ್; ಇದರ ಜೊತೆಗೆ ಬೆಳೆಯುತ್ತಿರುವ ಜನಸಂಖ್ಯೆ ಇವೆಲ್ಲವುಗಳನ್ನು ನೋಡಿದಾಗ, ಮಾನ್ಯ ಸಚಿವರು, "ಪರಿಶೀಲಿಸಲಾಗುವುದು, ಕ್ರಮ ಕೈಗೊಳ್ಳಲಾಗುವುದು" ಎಂದು ಉತ್ತರವನ್ನು ಕೊಡುವುದಕ್ಕೆ ಬದಲಾಗಿ ಆದಷ್ಟು ಬೇಗನೇ ಯಾವ ಸಮಯದ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತದೆ ಎನ್ನುವುದನ್ನು ಹೇಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ ಅಮೃತ ಯೋಜನೆ 2014ರಲ್ಲಿಯೇ ಪ್ರಾರಂಭಗೊಂಡಿದ್ದರೂ ಸಹ ಅದರ ಪ್ರಗತಿ ಅಂದುಕೊಂಡಷ್ಟು ವೇಗವನ್ನು ಪಡೆದುಕೊಂಡಿಲ್ಲ. ಮಾನ್ಯ ಸಚಿವರು ಈ ಇಲಾಖೆಯ ಕಾರ್ಯಭಾರವನ್ನು ವಹಿಸಿಕೊಂಡ ನಂತರ ಫಾಲೋಅಪ್ ಮಾಡಿದ ಹಿನ್ನೆಲೆಯಲ್ಲಿ ವೇಗ ಪಡೆದುಕೊಂಡಿದೆ. ಅದರ ಬಗ್ಗೆ ನಮಗೆ ತೃಪ್ತಿ ಇದೆ. 2014ನೇ ಇಸವಿಯಲ್ಲಿ "ಅಮೃತ ಯೋಜನೆ" ಪ್ರಾರಂಭವಾಗಿದೆ. ಇವತ್ತು ನಾವು 2022ನೇ ಇಸವಿಯಲ್ಲಿದ್ದೇವೆ. ಇಲ್ಲಿಗೆ 8 ವರ್ಷಗಳು ಕಳೆದರೂ ಸಹ 24/7 ನೀರು ಕೊಡುವುದಕ್ಕೆ ಸಾಧ್ಯವಾಗದೇ ಇರುವ ಹಿನ್ನೆಲೆಯಲ್ಲಿ, ಆದಷ್ಟು ಬೇಗ ಇದಕ್ಕೆ ಅಗತ್ಯವಾಗಿರುವ ಅನುದಾನವನ್ನು ಒದಗಿಸಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ.

**(ಮುಂದು)**

**(678) 28.3.2022 6.20 ಪಿಕೆ:ಎಂಡಿ**

**ಶ್ರೀ ಸುನೀಲ್ ವಲ್ಯಾಪುರ್(ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಮಂತ್ರಿಗಳು ಚೆನ್ನಾಗಿ, ನಿಷ್ಠೆಯಿಂದ ಸಾಕಷ್ಟು ಬಾರಿ ಅಧಿಕಾರಿಗಳಿಗೆ ಚುರುಕು ಮುಟ್ಟಿಸಿ, ಬಿಜಾಪುರ ನೀರಿನ ಸಮಸ್ಯೆ ಮುಗಿಸಿಕೊಂಡು, ಕಲ್ಬುರ್ಗಿ ಸಮಸ್ಯೆಗೆ, ಯುಜಿಡಿ ಸಮಸ್ಯೆಗಳ ಬಗ್ಗೆ ಗಮನ ಹರಿಸುತ್ತಿದ್ದಾರೆ. ಬಿಜಾಪುರದಿಂದ ಕಲ್ಬುರ್ಗಿಗೆ 160 ಕಿ.ಮೀ ಆಗುತ್ತದೆ. ಆದರೆ ಅಲ್ಲಿ ಏನಾಗುತ್ತಿದೆ ಎಂದರೆ, ಮಂತ್ರಿಗಳಿಗೆ ಆಸಕ್ತಿ ಇದೆ; ಅಧಿಕಾರಿಗಳಿಗೆ ಆಸಕ್ತಿ ಇಲ್ಲ. "ಅಮೃತ್" ಯೋಜನೆಯ ಬಗ್ಗೆ ಮಾನ್ಯ ಅರುಣ ಶಹಾಪುರ ಅವರು, ಈ ಯೋಜನೆ ತಂದು 10 ವರ್ಷ ಕಳೆದಿದ್ದರೂ ಇನ್ನೂ ಮುಗಿದಿಲ್ಲ ಎನ್ನುವ ಮಾತನ್ನು ಹೇಳಿದರು. ಉದಾಹರಣೆಗೆ

ಮಾನ್ಯ ಪ್ರಕಾಶ್ ರಾಥೋಡ್ ಮನೆಯ ಮುಂದೆ ಮತ್ತು ನಮ್ಮ ಮನೆಯ ಮುಂದೆಯೇ ನೀರಿನ ಪೈಪ್ ಲೈನ್ ಹಾಕಿಲ್ಲ. ಅವರ ತಾಯಿ ಮತ್ತು ನಮ್ಮ ಸಹೋದರರು ನಮ್ಮನ್ನು ಬೈಯುತ್ತಾರೆ. ಈ ಗಲ್ಲಿಯಿಂದ ಇಬ್ಬಿಬ್ಬರು ವಿಧಾನ ಪರಿಷತ್ತಿನ ಶಾಸಕರಾಗಿದ್ದೀರಿ; ಏನು ನಿಮ್ಮ ಪರಿಸ್ಥಿತಿ ಎಂದು ನಮ್ಮ ಹಿರಿಯರು ಮತ್ತು ಸ್ನೇಹಿತರು ಬೈಯುತ್ತಾರೆ. ಆದ್ದರಿಂದ ನಾನು ಮಂತ್ರಿಗಳ ಹತ್ತಿರ ಕಾಳಜಿಪೂರ್ವಕವಾಗಿ ಹೇಳುವುದೇನೆಂದರೆ, "ಅಮೃತ್" ಯೋಜನೆ ಅಥವಾ ಕೆಡಬ್ಲ್ಯೂಎಸ್ ಅಥವಾ ಮುನಿಸಿಪಾಲಿಟಿಯ ಹಣ ಇರಬಹುದು, ಅದನ್ನು ಬಳಸಿಕೊಂಡು ಸಣ್ಣ ಸಣ್ಣ ಗಲ್ಲಿಗಳಲ್ಲಿ ಪೈಪ್‌ಲೈನ್‌ಗಳನ್ನು ಅಳವಡಿಸುವ ಕಾರ್ಯವನ್ನು ಮಾಡಬೇಕು. ಈಗೇನು ವಾರಕ್ಕೊಂದು ಸಲ ನೀರು ಕೊಡುತ್ತಿದ್ದೀರೋ ಅದರ ಬದಲಿಗೆ ಎರಡು ದಿನಕ್ಕೊಮ್ಮೆಯಾದರೂ ನೀರು ಕೊಡುವ ಕೆಲಸ ಮಾಡಬೇಕು. ಈ ಕುರಿತು ಮಾತನಾಡಿದರೆ ಅದಕ್ಕೇ ಏನೇನೋ ನೆಪ ಹೇಳುತ್ತಾರೆ. ಕನಿಷ್ಠ ಎರಡು ದಿನಕ್ಕೊಂದು ಸಲವಾದರೂ ನೀರು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಗಳೆ, ಸರ್ಕಾರ, ರೂ. 52 ಕೋಟಿಯ ಪರಿಷ್ಕೃತ ಯೋಜನೆಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದನ್ನು ಪರಿಶೀಲಿಸಿ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದೆ. ಈ ಕೆಲಸವನ್ನು ಯಾವಾಗ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ರೂ. 350 ಕೋಟಿ ಅಂದಾಜು ಮಾಡಿ ಅಲ್ಲೊಂದು ಡಿಪಿಆರ್ ತಯಾರು ಮಾಡಿ, ಆ ನಿಟ್ಟಿನಲ್ಲೂ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದೀರಿ. ದಯವಿಟ್ಟು ಈ ಕುರಿತು ಕೂಡ ಸ್ಪಷ್ಟನೆ ಕೊಡಬೇಕು. ಮಾನ್ಯ ಸಭಾಪತಿಗಳೆ, ಕೋಲಾರಕ್ಕೆ ಸಂಬಂಧಪಟ್ಟಂತೆ 2004ನೇ ಸಾಲಿಗಿಂತ ಮುಂಚೆಯೇ ನೀರು ತರಬೇಕೆಂದು ಯೋಜನೆಯಾಯಿತು. ಪಂಪ್ ಸೆಟ್ಟು 25 ವರ್ಷ ಚೆನ್ನಾಗಿ ಕೆಲಸ ಮಾಡಬೇಕು. ಆದರೆ 15 ವರ್ಷ ಆದಮೇಲೆ ಅವು ರಿಪೇರಿಗೆ ಬಂದಿವೆ. ಅವುಗಳನ್ನು ರಿಪೇರಿಯಾದರೂ ಮಾಡಿಸಬೇಕು ಇಲ್ಲವೇ ಬದಲಾವಣೆಯನ್ನಾದರೂ ಮಾಡಬೇಕು. ಹಿಂದೆಯೂ ಈ ಕುರಿತು ಪ್ರಶ್ನೆ ಕೇಳಿದ್ದೇನೆ. ಇಲ್ಲಿಯವರೆಗೂ ಅದಕ್ಕೆ ಏನೂ ಕ್ರಮವಾಗಿಲ್ಲ. ರೂ. 350 ಕೋಟಿ ಅಂದಾಜಿನಲ್ಲಿ ಏನು ಯೋಜನೆಯನ್ನು ರೂಪಿಸಿದ್ದೀರೋ ಇದು ಬಹಳ ಒಳ್ಳೆಯ ಯೋಜನೆಯಾಗಿದೆ. ಈ ಕುರಿತು

ಕೂಡಲೇ ಮುಖ್ಯಮಂತ್ರಿಗಳ ಹತ್ತಿರ ಹೇಳಿ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಿ. ಈ ಯೋಜನೆ ಜಾರಿಗೆ ತಂದರೆ, ಬಿಜಾಪುರದ ಜನತೆ ಯಾವತ್ತೂ ನಿಮ್ಮನ್ನು ಮರೆಯುವುದಿಲ್ಲ. 2055ರವರೆಗೆ ನಮಗೆ ಕುಡಿಯುವ ನೀರಿನ ಯೋಜನೆ ಬಗ್ಗೆ ತಾವು ಯೋಚನೆ ಮಾಡಿದ್ದೀರಿ. ಇದನ್ನು ತಾವು ಲಾಗು ಮಾಡಬೇಕು; ಬೇಗ ಲಾಗು ಮಾಡಿದರೆ ನಮಗೆ ಬಹಳ ಅನುಕೂಲವಾಗುತ್ತದೆ.

**ಶ್ರೀ ಬಿ.ಎ.ಬಸವರಾಜ್(ಬೈರತಿ)( ನಗರಾಭಿವೃದ್ಧಿ ಇಲಾಖೆ, ಕೆಯುಐಡಿಎಫ್‌ಸಿ, ಕೆಯುಡಬ್ಲ್ಯೂಎಸ್‌ಡಿಬಿ ಒಳಗೊಂಡು (ಬೆಂಗಳೂರು ಅಭಿವೃದ್ಧಿ ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಡಿ, ಬಿಎಂಆರ್‌ಸಿಎಲ್ ಮತ್ತು ನಗರ ಯೋಜನೆ ಹೊರತು**):- ಮಾನ್ಯ ಸಭಾಪತಿಗಳೆ, ಸುಮಾರು 63 ಎಂಎಲ್‌ಡಿ ನೀರನ್ನು ಕೃಷ್ಣಾ ನದಿಯಿಂದ ತೆಗೆದುಕೊಂಡು 51 ಎಂಎಲ್‌ಡಿ ನೀರನ್ನು ಬಿಜಾಪುರಕ್ಕೆ ಕೊಡುತ್ತಿದ್ದೇವೆ. ಮಾರ್ಗ ಮಧ್ಯದಲ್ಲಿ 7 ಹಳ್ಳಿಗಳೇನು ಬರುತ್ತದೆಯೋ ಅವುಗಳಗೂ ನೀರು ನೀಡಲಾಗುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಬೇಸಿಗೆಯ ಹಿನ್ನೆಲೆಯಲ್ಲಿ ನೀರಿಗೆ ತೊಂದರೆಯಾಗಿದೆ ಎನ್ನುವುದನ್ನು ಒಪ್ಪುತ್ತೇನೆ. ಆದರೆ, ನೀರನ್ನು ನಿಲ್ಲಿಸುವ ಕೆಲಸ ಏನು ಮಾಡುತ್ತಿದ್ದಾರೋ ಆ ನಿಟ್ಟಿನಲ್ಲಿ ಸಂಬಂಧಪಟ್ಟ ಉನ್ನತ ಅಧಿಕಾರಿ ಜೊತೆ ಮಾತನಾಡಿ ಪರಿಹಾರ ಕಂಡುಕೊಳ್ಳುವ ವ್ಯವಸ್ಥೆ ಮಾಡುತ್ತೇನೆ. ಏಪ್ರಿಲ್ 3ನೇ ವಾರದಲ್ಲಿ ಮಾನ್ಯ ಸದಸ್ಯರುಗಳಿಗೆ ಮಾಹಿತಿ ಕೊಟ್ಟು, ಖುದ್ದಾಗಿ ನಾನೇ ಅಲ್ಲಿಗೆ ಹೋಗಿ ಅಲ್ಲಿನ ಆಗು-ಹೋಗುಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವಂತಹ ಕೆಲಸವನ್ನು ಮಾಡುತ್ತೇನೆ.

**ವೈಸ್ ಚೇರ್ಮನ್:-** ಈಗ ಸದನವನ್ನು ನಾಳೆ ಬೆಳಗ್ಗೆ 10.30 ಗಂಟೆಗೆ ಮುಂದೂಡಲಾಗುತ್ತದೆ.

**(ಸದನವು ಸಂಜೆ 6 ಗಂಟೆಗೆ 24 ನಿಮಿಷಕ್ಕೆ ಮುಕ್ತಾಯಗೊಂಡು**
**ಪುನಃ 29ನೇ ಮಾರ್ಚ್ ಮಾಹೆ 2022ರ ಮಂಗಳವಾರದಂದು ಬೆಳಗ್ಗೆ 10.30 ಗಂಟೆಗೆ**
**ಸೇರಲು ನಿಶ್ಚಯಿಸಿತು)**

<><><>